# ತಿರುಮಲ ತಿರುಪತಿ ಕ್ಷೇತ್ರ ಮಹಾತ್ಮೆ


**ಕನ್ನಡ ಅನುವಾದಕರು**

**ಡಾ. ಎಂ.ಜಿ. ದೇಶಪಾಂಡೆ**

ಬಿ.ಎಸ್ಸಿ; ಎಂ.ಬಿ.ಬಿ.ಎಸ್; ಎಂ.ಎ (ಕನ್ನಡ); ಪಿಎಚ್.ಡಿ. (ದಾಸಸಾಹಿತ್ಯ)

**ಮೂಲ ರಚನೆ (ತೆಲುಗು)**

**ಶ್ರೀ ಜಿ.ಟಿ. ಸೂರಿ**



**ತಿರುಮಲ ತಿರುಪತಿ ದೇವಸ್ಥಾನಗಳು, ತಿರುಪತಿ.**

**2024**

**TIRUMALA TIRUPATI KSHETRA MAHATHME**

*Kannada Translation by*
**Dr. M.G. Deshpande**

*Telugu Original*
**Sri G.T. Suri**

*Editor*
**Dr. Akella Vibhishana Sarma**
Special Officer
Publications Division

T.T.D. Religious Publications Series No.1485

© All Rights Reserved

First Edition : 2024

Copies : 500

*Published by*
**Sri J. Syamala Rao, I.A.S.,**
Executive Officer
Tirumala Tirupati Devasthanams
Tirupati.

***DTP***
Publications Division
T.T.D, Tirupati.

*Printed at*
Tirumala Tirupati Devasthanams Press
Tirupati - 517 507.





## FOREWORD

The book aims to bring the highest glory of this shrine within the easy reach of common men. Shaastras ordain that Narasimha in Kruta Yuga, Sri Ramachandra in Treta Yuga, Sri Krishna in Dwapara Yuga, and Venkateswara in Kali Yuga are the Paripurna Avataras

***Krutetu Narasimhabhut, tretayam raghunandanah,***
***Dwapare Vasudevascha kalou venkatanayakah!!***

In this kaliyuga Lord Sri Maha Vishnu left vaikunta and is said to reside in the Ananda Nilayam of Tirumala to protect His devotees. That is why Tirumala is regarded as the Vaikunta of the Kaliyuga upon the earth.

This book narrates in a systematic order the episodes like the cause of manifestation of Lord of Venkatadri, the wedding of Padmavati, construction of Ananda Nilayam, etc. on the basis of Vedic scriptures and epics.

Mr. G.T. Soori has browsed different epics and has visited the shrine. He has collected a lot of data and has written the book in Telugu entitled, "Tirumala Tirupati Kshetra Mahatmyamu" deserves

congratulations. The book was published in the year 2000 by the TTD, Tirupati subsequently has been reprinted Several times.

Keeping in view the demand for the book, it is felt that this book needs to be published English, Hindi & Kannada also to reach a wider audience. Dr. M.G. Deshpande, Sedam, Kalaburagi District, Karnataka has translated the book into Kannada in a simple, lucid style so that the readers can easily understand the subject. I congratulate him for his excellent work. We hope the critics and readers will receive the book with due regard as ever.

I appreciate Dr. Akella Vibhishana Sarma, Special Officer, Publications Division, for taking a keen interest in all respects in publishing this book.

*In the Service of Lord Venkateswara*

**Executive Officer**
Tirumala Tirupati Devasthanams
Tirupati.

# ಅವತರಣಿಕೆ

ಆಂಧ್ರಪ್ರದೇಶ ಸರಕಾರದ ಎಂಡೋಮೆಂಟ ಕಮಿಷನರ್‌ರವರ ಅನುಮತಿಯಂತೆ ಶ್ರೀಕಾಳಹಸ್ತೇಶ್ವರ ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿಗಳಿಂದ ಮುದ್ರಣಗೊಂಡ, ನಾನು ರಚಿಸಿದ 'ಶ್ರೀ ಕಾಳಹಸ್ತಿ ಕ್ಷೇತ್ರಮು – ಮಹಾತ್ಮ್ಯಮು' ಎಂಬ ಗ್ರಂಥವು ಎಲ್ಲ ಯಾತ್ರಿಕರಿಗೆ ಬಹಳಷ್ಟು ಉಪಯೋಗವಾಗಿರುವದು ಕಂಡು, ಸಕಲ ಯಾತ್ರಿಕರು ಮಾತ್ರವಲ್ಲ ಎಲ್ಲ ಸಹೃದಯರು ಸ್ನೇಹಿತರೊಡನೆ ವಿಚಾರ ಮಾಡಿ ಅದರಂತೆ – ತಿರುಮಲ ಕ್ಷೇತ್ರ ಮತ್ತು ಮಹಾತ್ಮೆ – ರಚಿಸಲು ತಿರುಮಲ ಕ್ಷೇತ್ರದ ಮತ್ತು ಶ್ರೀ ವೆಂಕಟಾಚಲಪತಿಯ ವೃತ್ತಾಂತವನ್ನು ಮುಂಚಿನ ವಿಷಯಗಳನ್ನು ಪೂರ್ತಿಯಾಗಿ ತಿಳಿಯಲು ಅನುಕೂಲವಾಗುವುದು ಎಂದು ನನ್ನ ಈ ಕಾರ್ಯಕ್ಕೆ ಪ್ರೋತ್ಸಾಹಿಸಿದರು.

ಈ ಕಾರಣಕ್ಕಾಗಿ ನಾನು ತಿರುಮಲ ಮತ್ತು ತಿರುಪತಿಯಲ್ಲಿ ಕೆಲವು ದಿನಗಳಿದ್ದು ಯಾತ್ರಿಕರ ಜೊತೆ ಕಲೆತು ಮೆಲೆತು ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿದೆ. ತಿರುಮಲದಲ್ಲಿ ಇರುವ ಎಲ್ಲಾ ಮುಖ್ಯ ತೀರ್ಥಗಳನ್ನು ದರ್ಶಿಸಿದೆ. ಅಲ್ಲಿನ ಛತ್ರದಲ್ಲಿ ನೆಲೆಸಿರುವ ಯಾತ್ರಿಕರನ್ನು ಭೇಟಿ ಮಾಡಿ ಅವರ ಯಾತ್ರಾವಿಷಯಗಳು, ಅನುಭವಗಳು, ಅವರ ಅವಶ್ಯಕತೆಗಳನ್ನು ಕೇಳಿ ತಿಳಿದುಕೊಂಡೆ.

ವೆಂಕಟಾಚಲ ಬೆಟ್ಟದ ಮಹಾತ್ಮೆ, ಅದರಲ್ಲಿಯ ಮುಖ್ಯ ತೀರ್ಥಗಳು, ಭೂಮಿಯ ಮೇಲೆ ಶ್ರೀವೆಂಕಟಾಚಲಪತಿ ಅವತಾರ ಮಾಡುವುದು, ಆಕಾಶರಾಜನ ಚರಿತ್ರೆ, ಶ್ರೀ ವೆಂಕಟಾಚಲಪತಿ ಪದ್ಮಾವತಿಯ ವಿವಾಹ ಜರುಗುವುದು, ಪದ್ಮಾವತಿಯು ತಿರುಚಾನೂರಲ್ಲಿ ಒಬ್ಬಳೇ ಇರುವಿಕೆ ಈ ಎಲ್ಲ ವಿಷಯಗಳು ಕ್ರಮಬದ್ಧವಾಗಿ ತಮಗೆ ತಿಳಿಯದೆಂದು, ಹಾಗೆಯೇ

ಆನಂದನಿಲಯದ ನಿರ್ಮಾಣವು ಸಿದ್ಧವಾದ ವಿಧಾನಗಳನ್ನು ಬರೆದಿಡುವುದು ಒಳ್ಳೆಯದು ಎಂದು ಆ ಯಾತ್ರಿಕರು ಹೇಳಿದರು. ಆ ದೇವಸ್ಥಾನದ ಪ್ರಕಟಣೆಯಾದ **'ಶ್ರೀ ವೆಂಕಟಾಚಲ ಮಹಾತ್ಮ್ಯಮು'** ಮತ್ತು ಸ್ವಾಮಿ ಚಿನ್ಮಯಾನಂದ ವಿರಚಿತ ಕಥಾಸಾಗರದಲ್ಲಿನ **'ವೆಂಕಟೇಶ್ವರ ಸ್ವಾಮಿ ಬೊಮ್ಮಲ ಚರಿತ್ರ'** ದಿಂದ ತಾವು ಒಂದಿಷ್ಟು ಕ್ಷೇತ್ರ ವೃತ್ತಾಂತವನ್ನು ಹಾಗೂ ಅದರ ಮಹಿಮೆಯನ್ನು ಓದಿ ಮಾಹಿತಿ ಪಡೆಯಿರೆಂದು ಕೂಡ ಹೇಳಿದರು. ಅದಕ್ಕಾಗಿಯೇ ವರಾಹ ಪುರಾಣ, ಭವಿಷ್ಯೋತ್ತರ ಪುರಾಣ, ಸ್ಕಾಂದ ಪುರಾಣಗಳಲ್ಲಿನ ವೈಷ್ಣವ ಭಾಗಗಳನ್ನು ಓದಿ ಆ ಎಲ್ಲ ಮುಖ್ಯ ವಿಷಯಗಳನ್ನು ಸಂಗ್ರಹಿಸಿದೆನು. ಕ್ರಮಪ್ರಕಾರವಾಗಿ ಬರುವ ಆ ಕಥನದ ಪ್ರಕಾರ ಮತ್ತು ಯಾತ್ರಿಕರ ಅಭಿರುಚಿಯನ್ನು ಗಮನದಲ್ಲಿ ಇಟ್ಟುಕೊಂಡು ನಾನು ಈ ಗ್ರಂಥವನ್ನು ರಚಿಸಿದೆನು. ಈ ಕೆಲಸದಲ್ಲಿ ನಾನೆಷ್ಟು ಕೃತಾರ್ಥನಾದೆನೋ ಓದುಗರೇ ನಿರ್ಣಯಿಸಬಲ್ಲರು. ಯಾವುದೇ ದೊಡ್ಡ ಸಣ್ಣ ವಿಷಯಗಳನ್ನು ಬಿಡದೆ 'ಸಂಗ್ರಹ' ರೂಪದಲ್ಲಿ ಕಥನ ಮಾಡಿದ್ದೇನೆ.

ಕ್ಷೇತ್ರ ಮತ್ತು ತೀರ್ಥ ಮಹಾತ್ಮೆ ತಿಳಿಯಲು ನಾನು ತಿರುಪತಿ ದೇವಸ್ಥಾನದವರ **'ಶ್ರೀ ವೆಂಕಟಾಚಲ ಮಹಾತ್ಮೆಮು'** ಮತ್ತು ಶ್ರೀ ಚಿನ್ಮಯಾನಂದ ಸ್ವಾಮಿಗಳ **'ಶ್ರೀ ವೆಂಕಟೇಶ್ವರ ಸ್ವಾಮಿವಾರಿ ಬೊಮ್ಮಲ ಕಥ'** ಈ ಎರಡೂ ಪುಸ್ತಕಗಳನ್ನು ಓದಿದೆ. ಆ ಎರಡೂ ಗ್ರಂಥಗಳ ಲೇಖಕರಿಗೂ ಮತ್ತು ಪ್ರಕಾಶಕರಿಗೂ ನನ್ನ ಅನಂತ ಕೃತಜ್ಞತೆಗಳು.

ಆನಂದನಿಲಯದಲ್ಲಿ ಶ್ರೀ ವೆಂಕಟೇಶ್ವರಸ್ವಾಮಿಯು ಲಕ್ಷ್ಮೀ ಮತ್ತು ಪದ್ಮಾವತಿಯವರನ್ನು ತನ್ನ ವಕ್ಷಸ್ಥಳದಲ್ಲಿ ಇಟ್ಟುಕೊಂಡು ಪೂಜೆಯನ್ನು ಸ್ವೀಕರಿಸುತ್ತ ಅರ್ಚಾಮೂರ್ತಿಯಾಗಿ ಶೋಭಿಸುತ್ತಿದ್ದಾನೆ. ಯಾತ್ರಿಕರು ತಿರುಪತಿಯಲ್ಲಿ ಮೊದಲು

ಕಪಿಲತೀರ್ಥದಲ್ಲಿ ಸ್ನಾನಮಾಡಿ, ಕಪಿಲೇಶ್ವರನ ದರ್ಶನ ಪಡೆದು, ವೆಂಕಟಾಚಲ ಪರ್ವತವನ್ನು ಏರಿ, ಸ್ವಾಮಿ ಪುಷ್ಕರಣಿಯಲ್ಲಿ ಸ್ನಾನ ಮಾಡಿ, ವರಾಹಸ್ವಾಮಿಯ ದರ್ಶನ ಮಾಡಿಕೊಂಡು ನಂತರ ಶ್ರೀ ವೆಂಕಟಾಚಲಪತಿಯ ದರ್ಶನ ಪಡೆಯುವುದು ಈ ಎಲ್ಲ ವಿಷಯಗಳನ್ನು ಅನುಕ್ರಮವಾಗಿ ಬರೆದಿರುವದಲ್ಲದೇ ತತ್ಸಂಬಂಧದ ಪುರಾಣ ವಿಷಯಗಳನ್ನು ಸರಿಯಾಗಿ ಪರಿಶೀಲಿಸಿ, ಜನರಿಂದ ಕೇಳಿದ ವಿಷಯಗಳನ್ನು ಕಲೆಹಾಕಿ, ಭಕ್ತರ ಆಕಾಂಕ್ಷೆಗಳನ್ನು ತಿಳಿದುಕೊಂಡು ಅವರಿಗೆ ಸಮಾಧಾನವಾಗುವಂತೆ ನಾನು ಈ ಪುಸ್ತಕದಲ್ಲಿ ಸಂಗ್ರಹರೂಪವಾಗಿ ವೆಂಕಟಾಚಲ ಪರ್ವತ ಮತ್ತು ಸ್ವಾಮಿ ವೆಂಕಟೇಶ್ವರನ ವೃತ್ತಾಂತಗಳನ್ನು ಹೇಳಿದ್ದೇನೆ.

ಸಂಸ್ಕೃತಾಂಧ್ರಾಂಗ್ಲ ಭಾಷೆಗಳಲ್ಲಿ ಅಲ್ಲದೇ ನ್ಯಾಯಶಾಸ್ತ್ರದಲ್ಲಿ ಪ್ರವೀಣರಾಗಿರುವ ನನ್ನ ಸ್ನೇಹಿತರಾದ ಶ್ರೀ ಜಿ ವಿ ನರಸಿಂಹರಾವ ಅವರು ಋಗ್ವೇದದಲ್ಲಿನ ಸನಾತನ ವೈದಿಕ ಧರ್ಮಗಳನ್ನು, ಇತರ ವೇದೋಕ್ತ ವಿಧಿಗಳನ್ನು ಉಪನ್ಯಾಸಗಳಿಂದ ವಿವರಿಸುವ ಮಹಾಮಹಿಮರು. ಆಂಧ್ರ ವಿಶ್ವವಿದ್ಯಾಲಯದಿಂದ **'ರಾಜಾ ಐಯ್ಯರ್ ಬಂಗಾರ ಪದಕ'** ವನ್ನು ಪಡೆದವರು. ಅಂಥವರು ನನಗೆ ಈ ಗ್ರಂಥ ರಚನೆಗೆ ಪ್ರೋತ್ಸಾಹಿಸಿ ಸ್ಕಾಂದಪುರಾಣದ ವೈಷ್ಣವ ಭಾಗಗಳನ್ನು ಕೊಟ್ಟು ನನಗೆ ಕೆಲವು ವಿಶೇಷ ಪ್ರಸಂಗಗಳನ್ನು ತಿಳಿಸಿ ಬೆನ್ನ ಹಿಂದೆ ಇರುವುದಲ್ಲದೇ ಈ ಗ್ರಂಥಕ್ಕೆ ನಾಂದಿ ಹಾಡಿದ್ದಾರೆ. ಅಂಥವರಿಗೆ ನಮ್ಮ ಶ್ರೀ ವೆಂಕಟಾಚಲಪತಿಯು ದೀರ್ಘಾಯುರಾರೋಗ್ಯ ಐಶ್ವರ್ಯಗಳನ್ನುದಯಪಾಲಿಸಿ ರಕ್ಷಿಸಬೇಕೆಂದು ಬೇಡಿಕೊಳ್ಳುತ್ತಿದ್ದೇನೆ.

ಇತಿ

ಸುವಿಧೇಯ

**ಜಿ.ಟಿ. ಸೂರಿ**

# ಅನುವಾದ ಕುರಿತು...

ಕೆಲವು ದಿನಗಳ ಹಿಂದೆ ಟಿಟಿಡಿ ಪ್ರಕಾಶನದಿಂದ ಕಳಿಸಿದ ಪಂಡಿತರಾದ ಜಿ.ಟಿ.ಸೂರಿ ಯವರ ಒಂದು ಪುಸ್ತಕ 'ತಿರುಮಲ ತಿರುಪತಿ ಕ್ಷೇತ್ರಮು–ಮಹಾತ್ಮ್ಯಮು' ಕೈಸೇರಿತು. ಅದನ್ನು ತೆಲುಗು ಭಾಷೆಯಿಂದ ಕನ್ನಡಕ್ಕೆ ಅನುವಾದ ಮಾಡಿಕೊಡಲು ಕೇಳಲಾಗಿತ್ತು. ಈ ಪುಸ್ತಕವು ಹಲವು ಪುರಾಣಗಳ, ಐತಿಹಾಸಿಕ ಘಟನೆಗಳ ಜೊತೆಯಲ್ಲಿ ಈಚಿನ ಹಲವು ವಿಷಯಗಳನ್ನು ತನ್ನ ಉದರದಲ್ಲಿ ತುಂಬಿಕೊಂಡ ಉತ್ಕೃಷ್ಟ ಗ್ರಂಥ.

ಅನುವಾದದ ಕೆಲಸ ಪ್ರಾರಂಭಿಸಿದಾಗ ಸರಳವಾಗಿ ನಡೆಯಿತು. ಕೆಲವು ಕಡೆ ಅಪ್ಪಟ ತೆಲುಗು ಸಾಹಿತ್ಯಿಕ ಶಬ್ದಗಳ ಅರ್ಥದ ಅನುಮಾನ ಬಂದಾಗ ನನ್ನ ತೆಲುಗು ಸ್ನೇಹಿತ ಪಂಡಿತರನ್ನು ಸಂಪರ್ಕಿಸಿದ್ದೇನೆ. ತೆಲುಗು ಮತ್ತು ಕನ್ನಡ ಸಾಹಿತ್ಯಗಳು ತಮ್ಮದೇ ಆದ ಭಾವಾಭಿವ್ಯಕ್ತಿ ಇರುವುದರಿಂದ ಕೆಲವು ಕಡೆ ನಾನು ಶಬ್ದಾರ್ಥಕ್ಕಿಂತ ಭಾವಾರ್ಥದ ಮೊರೆ ಹೋಗಿದ್ದೇನೆ. ನನ್ನ ಶಕ್ತಿಮೀರಿ ತೆಲುಗು ಮೂಲದ ವಸ್ತುವಿಗೆ ಮತ್ತು ಶೈಲಿಗೆ ಅಂಟಿಕೊಂಡೇ ಅನುವಾದಿಸಿದ್ದೇನೆ. ತೆಲುಗು ಅಸ್ಮಿತೆಗೆ ಲೋಪ ಬರದಂತೆ ಮತ್ತು ಕಥೆಗೆ ಅಪಚಾರವಾಗದಂತೆ ಎಚ್ಚರ ವಹಿಸಿದ್ದೇನೆ. ನನ್ನದೆಂದು ಹೊಸದು ಏನನ್ನೂ ಸೇರಿಸಿಲ್ಲ.

ನನ್ನ ಮೇಲೆ ಭರವಸೆಯಿಂದ ಈ 'ಅನುವಾದ' ಕಾರ್ಯ ನನಗೆ ಒಪ್ಪಿಸಿದ್ದರಿಂದ ನಾನು ಪ್ರಕಾಶನದ ಎಲ್ಲ ಅಧಿಕಾರಿಗಳಿಗೆ ಕೃತಜ್ಞನಾಗಿದ್ದೇನೆ. ಕಲಿಯುಗ ಪರಮದೈವವಾದ ವೆಂಕಟಾಚಲಪತಿಯ, ಜಗತ್ತಿನ ಸರ್ವಜನರ ಅತಿದೊಡ್ಡ ಉಪಾಸ್ಯಮೂರ್ತಿಯಾದ ಶ್ರೀನಿವಾಸನ ನೆನೆಯುವುದೇ ಒಂದು ಪುಣ್ಯದ ಕಾರ್ಯ. ಆತನ ಬಗ್ಗೆ

ಇರುವ ಸಾಹಿತ್ಯವನ್ನು ಓದುವುದು ಹೆಚ್ಚಿನ ಪುಣ್ಯದ ಮಾತು. ಅದರಲ್ಲಿಯೂ ಗ್ರಂಥ ಓದಿ ಅದನ್ನು ಬೇರೆ ಭಾಷೆಗೆ ಅನುವಾದ ಮಾಡುವಾಗ ಬುದ್ಧಿಪೂರ್ವಕವಾಗಿ ಓದಿ, ಇನ್ನಷ್ಟು ಆಳವಾಗಿ ಗ್ರಹಿಸಿ, ಅರ್ಥವು ಕೆಡದಂತೆ ಬರೆಯುವಾಗ ಬಹಳಷ್ಟು ಎಚ್ಚರಿಕೆ ವಹಿಸಬೇಕಾಗುತ್ತದೆ. ಇಂತಹ ಗುರತರ ಕಾರ್ಯ ನನಗೆ ದೊರೆತದ್ದು ಆ ಶ್ರೀನಿವಾಸನ ಅಪಾರ ಕೃಪೆಯೇ ಎಂದು ಭಾವಿಸಿದ್ದೇನೆ. ಅದು ನನ್ನ ಇಡೀ ಜನ್ಮದಲ್ಲಿನ ಶ್ರೇಷ್ಠ ಕಾರ್ಯವೆಂದೂ ಶ್ರೀನಿವಾಸನ ದಯೆಯೆಂದೂ ತೃಪ್ತಿ ಹೊಂದಿದ್ದೇನೆ.

ಇಂತಹ ಒಂದು ಪವಿತ್ರಕಾರ್ಯ ನನಗೆ ಕೊಟ್ಟದ್ದಕ್ಕಾಗಿ ನಾನು ಇಡೀ ಪ್ರಕಾಶನದ ಅಧಿಕಾರಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಇಂಥ ಕೆಲಸ ದಯಪಾಲಿಸಿದ ಆ ಸಪ್ತಗಿರಿಯ ಒಡೆಯನಾದ ಶ್ರೀನಿವಾಸನಿಗೆ ಶತಸಹಸ್ರ ನಮನಗಳು. ಸದಾ ಆ ವೆಂಕಟೇಶ್ವರನ ಸೇವೆಯ ನಿರೀಕ್ಷೆಯಲ್ಲಿ...

**– ಡಾ. ಎಂ.ಜಿ. ದೇಶಪಾಂಡೆ**

ಓಂ

ಶ್ರೀ ಶ್ರೀನಿವಾಸಾಯ ನಮಃ

# ತಿರುಮಲ ತಿರುಪತಿ ಕ್ಷೇತ್ರ – ಮಹಾತ್ಮೆ

## ಪ್ರಥಮಾಶ್ವಾಸ

### 1. ಪ್ರಸ್ತುತಿ – ಉಪಕಾರ್ಯ

ಶರಣಂ ಭವ ಮೇ ನಿತ್ಯಂ ಶ್ರೀನಿವಾಸ ಜಗತ್ಪತೇ

ಶ್ರೀಮತ್ಕೋಮಲ ಪಾಣಿ ಪಲ್ಲವಮುಲನ್ ಜೆನ್ನಾರ ಮೈ ಪುಲ್ಕಲನ್
ಪ್ರೇಮೋಮಾದಮು ಸಂಘಟಿಂಚುಚು ಅಲರ್ಮೆಲ್ಮಂಗ ಯೋತ್ತುಂಗ ಸು
ಸ್ಥೇಮಾರೋಗ್ಯಕರಂಬುಗಾ ಭವಭಯೋದ್ರೇಕಂಬುಲನ್ ಬಾಪುಮಾ!
ಸ್ವಾಮೀ! ಮೀ ಚರಣಂಬುಲೇ ಶರಣಮೀಶಾ! ವೆಂಕಟೇಶಪ್ರಭು!
– (ಶಾರ್ದೂಲವಿಕ್ರೀಡಿತ)

ಒಕಚೇತನ್ ಪದ್ಮಯುಗಮೇ ಗತಿಗ ಮಮ್ಮೋದಾರ್ಪ ನೇರಾಕ್ಕಟನ್
ಸಕಲಾಹ್ಲಾದಕರಾಭಯಂ ಬೋಸಗುಚುನ್ ಸಂತೋಷಮೇವಾರ ನೇ
ರೊಕ ಯುಗ್ಮಂಬುನ ಶಂಖಚಕ್ರಮುಲತೋ ನೋಪ್ಪಾರಿ ಯುಪ್ಪಾಂಗು ಮಾ
ಮಕ ಚಿತ್ತಂಬುನ ನಿಲ್ಚಿ ಪ್ರೋವಗದವೇ! ಮಾ ವೆಂಕಟೇಶಪ್ರಭು!
– (ಮತ್ತೇಭವಿಕ್ರೀಡಿತ)

ಶ್ರೀ ವೆಂಕಟೇಶ್ವರಾ! ಶ್ರಿತಜನಮಂದಾರ!
ಮನುಜುಡೈ ಮೀ ಸೇವ ಮಾನುಸೇವಡು
ಮತಭೇದುಲು ಲೇಕ ಸತತಮೆಲ್ಲರು ನಿನ್ನು
ಜಾಲಗ ಗೋಲುವರೇ ಮೇಲುಗನರೇ?
ದೇವತಲೇಗಾಕ ದೇಶದೇಶಂಬುಲ
ಮರ್ತ್ಯರೆಲ್ಲರು ನೀದು ಮರುಗು ಜೋರರೇ?

ಅರ್ಚಲೆನ್ನಿಯು ಧಾತ್ರಿನ ಮರಿಯುಂಡುನು ಗಾನಿ
ಘನಮೈನ ಮೀ ಶಕ್ತಿ ಗಾನಮೆಂದು – (ಸೀಸ ಪದ್ಯ)

ನಾಸ್ತಿಕುಡುಂಡುನು ನೀ ಭೀತಿಕಾಸ್ತಿಕುಂಡೆ
ತಿಟ್ಟುಬೋತುನು ನೀಯೆಡ ತೀರ್ಥವಾಸಿ ವೆಂಕಟಾದ್ರೀಶ
ವರದ! ಪರಮೇಶ! ನೀದು ಸರ್ವಜ್ಞತಾದಿ
ಸುಗುಣಬೋಲುಂಬು ನಿಟಗದಾ ಚೂಡವಲಯು – (ಗೀತಿಕ)

ಶ್ರೀರಮಣೀಯ ಮಿಗುಲ ಚಿತ್ತಮು ರಂಜಿಲ ಸೃಷ್ಟಿಚೇಯುಂಚು
ಗೋರೆಡುವಾರಿಕಿಂದನನು ಗೋರಿಕಿಂದಿ ರಂಗಜೋಡುಚೇಯುಮನ್
ಲೇರನುವಾರಲುಂ ಗನುಕ ಲೇಡನುನ್ನಟ್ಲು ನಟಿಂಚುಚುನ್ ಪದಾ
ವಾರಿಕಿ ವಾರಿಕಿಂ ದಗು ಸವಾರಿತಮೈನ ಫಲಂಬುಲಂ ದಗಂ
ಗೂರಿಚಿ ಉಸ್ಸೇನೋಯನಗ ಗುಂಭಿನಿ ನೀಡ್ಕೊನಿ ಪಾಲಸಂದ್ರಮುನ್
ಜೇರಿ ರಮಾಲಲಾಮ ತನ ಸೆಜ್ಜ ಸುಗಂಧಮುಲೆಲ್ಲಂ ಜಲ್ಲುಮಂ
ಗೋರಿಕಿ ದೀರ ಭಾಗಮುಲಗೂಡಚು ಬಾಧಲತಲಂಬುಲೊತ್ತುಚುನ್
ಸಾರಪುದಮ್ಮುಲಂಬು ಮನಸಾರಂಗ ಮೋನಿಕಿ ನಿಚ್ಚುಚುಂಡಗಾ
ಗೋರುಕು ಬಟ್ಟಿ ನೀಚಿಕಲ ಕುಂಡಲಿಶಯ್ಯನು ನೋಲಲಾಡು ಓ
ನೀರಜನಾಭ! ನಿನ್ನಪಮು ನೀಕಿದೆ! ಲೋಕಮು ಭೂಮಿ ವಿತ್ತಮುಲ್
ದಾರಲು ಪುತ್ರಪೌತ್ರುಲು ನಿಶಾಂತಸುಖಂಬುಲ ಶಾಶ್ವತಂಬುಲೀ
ಸಾರವಿಹೀನಸೌಖ್ಯಮುಲ ಸಂದಡಿ ನಾಮದಿ ಬೊಂದಕುಂಡ ಸಂ
ಸಾರ ಪಯೋಧಿ ನೀದುಪದ ಸಾರಸಪೋತಮು ಬಟ್ಟಿ ದಾಟಗಾ
ಗೂರಿಮಿ ಬ್ರೋವಗೋರಿತಿ; ನೀ ಗೂಢಪು ಮಾಯನದೆಟ್ಲು ಕೋರಿಕಲೇ
ಸೇರಕುಯುಂಡು ಚಿತ್ತಮುನ! ಚಿನ್ಮಯ ಈ ಕಲಿಕಾಲಮುಂದು ನೇ
ಗೋರೆದ ಪಾದ ಸೇವಯನು ಗೋರೆದ ಮೋಕ್ಷಮು ನೀ ಭವಂಬುನನ್
ಸಾರಪು ಗೀರ್ತಿಯನ್, ದಮಮು, ಪಾದುಲ ಪೂಜೆಯು, ತೀರ್ಥಸೇವಯಿಂ
ಪಾರಗನಿದು ಕೀರ್ತನಮು ಭಾವಿ ಭವಕ್ಷಯಮೀಶಃ ಸೇಯ, ನಿನ್

ಚೇರನಿ ವಿತ್ತಮತ್ತುಲನು ಚಿಲ್ಲರ ವೇಲ್ಪುಲ ಗೋಲ್ವನಿಂಕ ನಾ
ನೇರಮುಲೆನ್ನಿಯುನ್ನನನಿ ನೀ ಮಹಿಮಂಬುನ ನಮ್ಮಲೈ ಚನುನ್
ಸಾರೆಕು ಸಾರೆಕುಂದಲತು ಸಾರಪು ದೈವಮು ನೀವಂಟಚು ನಾ
ವಾರಿನಿ ಗೋರನಯ್ಯ! ಇಂಕ ವಾರಿನಿ ಮೀರಿನ ನೀವ ನೀನಿಕಿಂ
ದೀರನಿ ಬಾಧವುಂಡವುರ ದೀನದಯಾಳು! ಅಮಾಯಕುಂಡ ನೇ
ನೇರ ಭಜಿಂಪ ನಿನ್ನು ನಿಕ ನಿಕ್ಕಮು ನಿಕ್ಕಮು ನಿನ್ನು ನಮ್ಮಿತೆ
ತೀರುನಗಾತುನೋ ತೆಲಿಯ ದೇವ! ಮುಕುಂದ! ಧರಾಪತಿ! ನನುನ್
ಭಾರತದೇಶಮಂತಟಿಕಿ ಭಾಗ್ಯಪುರಾಶಿ ತೆಲುಂಗುನಾಡು ನೀ
ಕಾರಯಂ ಬ್ರೀತಿಪಾತ್ರಮು ಮಹಾಮಹಿಮಾಂಚಿತ ವೆಂಕಟೇಶ್ವರಾ!
ಆರಸಿ ವ್ರೋವುಮಯ್ಯ! ಮಮುನಾದರಣಂಬುನ, ಸರ್ವಸೌಖ್ಯ ಸಂ
ಭಾರಮು ಗೂರ್ಚಿ ದೇಶಪರಿಪಾಲನ ಧರ್ಮಮು ನೀತಿಮಂತಮ್ಮೈ
ಭಾರತ ಮಿತ್ರದೇಶಮುಲು ವಾಯನಿ ಮೈತ್ರಿನಿ ಅಂಡದಂಡಗಾ
ಜೇರಿ ಸಹಾಯಮೀಯ ಅರಿಜಿಬುಟರಣ್ಯಮುಲೇಂಡಿ ಮಂಡಗಾ
ಭಾರಮು ತಗ್ಗಿ ಭೂಮಿ ಕಡುಪಾವನಮ್ಮೈ ಚೆಲಗಂಗ ಚೇಯುಮಾ!
ಓ ರಘುರಾಮ! ರಾಮ! ಸುಗುಣೋಜ್ಜ್ವಲಧಾಮ! ರಮಾಭಿರಾಮ!
– (ಉತ್ಪಲ ಮಾಲಿಕ)

ವೆಂಕಟಾದ್ರೀಶ! ಶ್ರೀಶ! ಸರ್ವೇಶ! ಆಶ
ತೋ ನಿನು ಭಜಿಯಿಂತು ನನಿ ಶಮೇನು ಆಶ
ದೀರ್ಚುನು ಪರಮೇಶ! ಶ್ರೀತಸುಧಿ ನಿವೇಶ ।
ಉರ್ವಿ 'ಸರ್ವೇಜನಾಃ ಸುಖಿನೋ ಭವಂತು!' – (ಗೀತಿಕ)

ಸದ್ಗತಿ ಪರಮುನ ಜೇಕೋನ
ನುದ್ಗಾಢಯಶಮ್ಮು ಧಾತ್ರಿ ನೋನಗೂಡುಟಕುನ್
ಹೃದ್ಗತ ದೋಷಮು ವಾಯಂಗ
ಮದ್ಗುರು ಕೊಂಡೂರು ಕೃಷ್ಣಮಾರ್ಯುನ್ ಗೋಲುತುನ್ – (ಕಂದ)

ಪರಮಾರ್ಥ ಮುಂದನೆಲ್ಲರು
ವರಸಂಶಯ ಗುಣಮು ವಾಯನಾಸಿಗ ಗೀತಾ
ಭರಿತಾರ್ಥಸಾರ ತಮುಮಗು
ಚರಮಾರ್ಥಮುಂ ದೆಲುಪು ಕೃಷ್ಣ ಸದ್ಗುರು ದಲತುನ್ – (ಕಂದ)

ನನ್ನಯಾದಿ ಕವಿವರುಲನತು ಲೋನರ್ಚಿ
ಪೋತನಾಮಾತ್ಯು ಭಕ್ತಿನಿ ಪಾರಲಿ ಪಾರಲಿ
ಪೆದ್ದನಾದುಲ ಕಾವ್ಯಾಲ ಸುದ್ದು ಲೇರಿಂಗಿ
ತೃಪ್ತಿಗಾ ಕವುಲ ಋಣಮುಮಂ ದೀರ್ಚುಕೊಂಟಿ – (ಗೀತಿಕ)

ಕಾಳಿದಾಸುನಿ ಕಾವ್ಯಾಲು ಕಲವರಿಂಚಿ
ಕಣ್ವ ಮುನಿ ಪಾತ್ರ ಪೋಷಣ ಕಲನುಗಾಂಚಿ
ಮೇಘಸಂದೇಶಮಂದಲಿ ಮೇಲು ದೆಲಿಸಿ
ಪ್ರಣತುಲೋನರಿಂಚು ಕವಿನಿ ನಾ ಪ್ರಭುವಟಂಚು – (ಗೀತಿಕ)

ನೇಟಿನವ್ಯ ಸಾಹಿತ್ಯಾನ ನೇರ್ಪುಂದೆಲಿಪಿ
ಆಂಧ್ರಭಾಷಾಭಿವೃದ್ಧಿಕಿ ಅದನು ಗಲುಗ
ಕಲಮು ಸಾಗಿಂಚು ನವ್ಯಾಂಧ್ರ ಕವುಲಕೆಪುಡು
ಆಯುರಾರೋಗ್ಯ ಭಾಗ್ಯಂಬುಲಲರುನಟ್ಲು
ದೇವದೇವನಿ ಪ್ರಾರ್ಥಿಂತು ದಿನದಿನಂಬು – (ಗೀತಿಕ)

ಪೆಕ್ಕು ಪ್ರಕ್ರಿಯಲ ತೆಲುಂಗು ಪೆಂಪುನೋಂದ
ರಚನ ಗಾವಿಂಚು ಯುವಕನಿ ರತ್ನಮುಲಕು
ವಾಣಿ ವಾಕ್ಕುನ ನಿಲ್ಚಿ ಅವಾರಿತಮುಗ
ತೆಲುಗುಭಾಷನು ದೇಶಾಲ ವೇಲುಗುನಟ್ಲು
ಚೇಯುಗಾವುತಮನಿ ನೇನು ಚೇತುಲೆತ್ತಿ
ಮ್ರೊಕ್ಕುಚುನ್ನಾಡ ಓ ಆಂಧ್ರ ಪೂಜ್ಯಲಾರ! – (ಗೀತಿಕ)

ತಿರುಮಲ ತಿರುಪತಿ ದಿವ್ಯ ಭೂಲೋಕಾನ
ವೈಕುಂಠಮನುಚುಂಡು ವೈಷ್ಣವುಂಡು
ವೈಷ್ಣವ ಮಾಯಯೆ ವರ್ಧಿಲ್ಲೆ ಸರ್ವತ್ರ
ತಪ್ಪಿಂಚುಕೊನಲೇರು ತಪಸುಲೈನ
ಪಾಪಮುಲ್ ಪಾದ್ರೋಲಿ ಪತಿತುಲ ರಕ್ಷಿಂಪ
ಪರಮಾತ್ಮುಡೊಕ್ಕಡೆ ಸ್ಥಿರಮಟಂಚು
ವೇದಾದುಲೆಪ್ಪುಡೋ ವೇಲಯಿಂಚಿ ನೀ ಸುದ್ದಿ
ಗಮನಿಂಪನದನಿದೇ ಗಲಿಗೆನಿಪುಡು – (ಸೀಸ ಪದ್ಯ)

ಹಿಂದು ಧರ್ಮೋದ್ಧರಣಮಂದು ಹೀನುಡೈನ
ಮನುಜಡೆವ್ವಡು ಲೇಡಂಟ ಮನಕು ಮುನುಪು
ರಂತಿದೇವುಡು ವಿವರಿಂಚಿ ಶಾಂತಿ ಪಥಮು
ಚೂಪೆ ಅದಿಗದಾ ಮನ ಬಾಟ ಸೂರುಲಾರ – (ಗೀತಿಕ)

ಸ್ಥಿರಮು ತಿರುಮಲ ತಿರುಪತಿ ಕ್ಷೇತ್ರ ಮಹಿಮ
ಜಾಣು ತೆಲುಗುನ ರಚಿಯಿಂಚಿ ಸರಸುಲೆಲ್ಲ
ಮುದಮು ಜೆಂದಗ ಚೇಯುಟ ಮೋಕ್ಷಮಂಚು
ವೇದ ವೇದಾಂತ ವೇದ್ಯಶ್ರೀ ವೆಂಕಟೇಶು
ಪಾದ ಸನ್ನಿಧಾನಂಬುನ ಪರಮ ಭಕ್ತಿ
ಅಂಕಿತಂ ಬಿಡುದೀ ಕೃತಿ ಆಂಧ್ರುಲಾರ – (ಗೀತಿಕ)

## 2. ಪ್ರಸ್ತಾವನೆ

ಶ್ರೀಕರವಾದ ತಿರುಮಲ ತಿರುಪತಿ ಕ್ಷೇತ್ರವು ಭಾರತ ದೇಶಕ್ಕೆ ಶೋಭಾಯಮಾನವಾದ ರತ್ನವಾಗಿದೆ. ಕೋಟಿ ಸೂರ್ಯನ ಪ್ರಕಾಶವನ್ನು ಹೊಂದಿರುವ ಶಮಂತಕ ಮಣಿಯಂತೆ ಸಪ್ತಗಿರಿಗಳು ಜ್ಞಾನ ಪ್ರಕಾಶದಿಂದ ಬೆಳಗುತ್ತಿವೆ. ಆ ದಿವ್ಯ ಜ್ಞಾನದ ಪ್ರಕಾಶವೇ ಪ್ರಪಂಚದ ಸಕಲ ಪ್ರಜೆಗಳನ್ನು ಆಕರ್ಷಿಸಿ, ಅವರವರ ಅಭೀಷ್ಟೆಗಳನ್ನು ಪೂರೈಸುತ್ತ ಈ ಕ್ಷೇತ್ರವು ದಿವ್ಯಕ್ಷೇತ್ರವಾಗಿ

ರಾರಾಜಿಸುತ್ತಿದೆ. 'ತಿರು' ಅಂದರೆ ಶ್ರೀಪದವು, ಶ್ರೀಕರವು, ಶ್ರೀಯುತವು ಹೀಗೆ ನಾನಾ ಅರ್ಥಗಳಿವೆ. ಮತ್ತು 'ಶ್ರೀ' ಯು ಲಕ್ಷ್ಮೀ, ಐಶ್ವರ್ಯಗಳಲ್ಲದೇ ಬುದ್ಧಿ, ವೃದ್ಧಿ ಹಾಗೂ ಶೋಭೆ ಎಂಬ ಅರ್ಥಗಳನ್ನು ಹೊಂದಿದೆ. ಈ ಶಬ್ದ 'ತಿರುಮಲ' ಒಂದು ತಮಿಳು ಪದವಾಗಿದ್ದರೂ ಸಂಸ್ಕೃತವನ್ನು ಅನುಸರಿಸಿ 'ಶ್ರೀಕರ' ಎಂಬ ಅರ್ಥದಲ್ಲಿ ಶ್ರೀಕರನಾದ 'ವೆಂಕಟಾಚಲ' ಎಂದು ಬಹಳ ಕಾಲದಿಂದ ಎನ್ನಿಸಿಕೊಂಡಿದೆ.

ವೇಂ+ಕಟ ಎಂಬಲ್ಲಿ ವೇಂ ಎಂದರೆ ಪಾಪಗಳು, ಕಟ ಎಂದರೆ ಕಳೆಯುವದು ಎಂಬ ಮಹತ್ತರವಾದ ಪ್ರಸಿದ್ದ ಅರ್ಥಕ್ಕೆ ನಿದರ್ಶನ ಈ ವೆಂಕಟಾಚಲ. ತಿರುಪತಿ ಇದು ಶ್ರೀಪತಿಯಾದ ವೆಂಕಟಾಚಲಪತಿಯ ನಿವಾಸ ಎಂದು ಹೇಳದೆಯೂ ಹೇಳುತ್ತಿದೆ. ತಿರುಪತಿಯು ಒಂದು ಪ್ರಸಿದ್ಧ ವೈಷ್ಣವಕ್ಷೇತ್ರ. ತಿರುಪತಿಯಲ್ಲಿ ಶ್ರೀ ಗೋವಿಂದರಾಜಸ್ವಾಮಿಯ ದೇವಾಲಯ ಮತ್ತು ಶ್ರೀ ಕೋದಂಡರಾಮ ದೇವಾಲಯಗಳು ಮುಖ್ಯವಾದುವುಗಳು. ತಿರುಪತಿ ಹತ್ತಿರದಲ್ಲಿಯೇ ತಿರುಚಾನೂರಿನಲ್ಲಿ ಶ್ರೀ ಪದ್ಮಾವತಿಯ ದೇವಾಲಯ ಇರುವುದು. ಹೀಗೆ ಮಹಿಮೋಪೇತ ತಿರುಪತಿಗಳು 108 ವೈಷ್ಣವ ದೇವಾಲಯಗಳು ಇರುವುವು ಎಂದು ಹಿರಿಯರು ಹೇಳಿದ್ದಾರೆ. ಆದರೂ ಅವೆಲ್ಲ ದಿವ್ಯ ಸ್ಥಳಗಳಿಗಿಂತ ಭಾರತದೇಶದಲ್ಲಿ ಈ ತಿರುಪತಿಯೇ ಬಹಳ ಪ್ರಸಿದ್ಧವಾದ ವೈಷ್ಣವಕ್ಷೇತ್ರವು. ಅದಕ್ಕಾಗಿಯೇ ದೇಶದ ಮೂಲೆ ಮೂಲೆಗಳಿಂದ ಪ್ರತಿದಿನ ಬಹಳಷ್ಟು ಯಾತ್ರಿಕರು ಬಂದು ಹೋಗುತ್ತಾರೆ, ಅವರು ತಿರುಮಲ ಕ್ಷೇತ್ರದ ಶ್ರೀ ವೆಂಕಟೇಶ್ವರನ ದರ್ಶನ ಪಡೆದು ಧನ್ಯರಾಗುತ್ತಿದ್ದಾರೆ.

ಸಪ್ತಗಿರಿಗಳ ಮಧ್ಯೆ 'ಆನಂದನಿಲಯ'ದಲ್ಲಿ ನಿವಾಸಿಸಿರುವ ವೆಂಕಟಾಚಲಪತಿಯಾದ ಶ್ರೀ ಶ್ರೀನಿವಾಸನನ್ನು ಹಿಂದಿನಿಂದಲೂ

ಅಸಂಖ್ಯಾತ ಭಕ್ತರು ಸೇವೆಮಾಡಿ ಆತನ ಅನುಗ್ರಹ ಪಡೆದು ಧನ್ಯರಾಗಿ ಹೋಗಿದ್ದಾರೆ.

ವೆಂಕಟಾಚಲದಲ್ಲಿನ ದೇವಾಲಯದ ಕಲ್ಲಿನ ಕಟ್ಟಡದ ಗೋಡೆಗಳ ಮೇಲೆ ಕೆತ್ತಲ್ಪಟ್ಟ ಶಾಸನಗಳಲ್ಲಿ ದೇವಾಲಯದ ನಿರ್ಮಾಣದ ವಿಷಯಗಳು ಹೇಳಲ್ಪಟ್ಟಿವೆ. ಮೊಟ್ಟ ಮೊದಲು ನಾರಾಯಣಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಕಾಶರಾಜನು ಮತ್ತು ಆತನ ತಮ್ಮನಾದ ತೋಂಡಮಾನ ಚಕ್ರವರ್ತಿ, ಆಮೇಲೆ ಚೋಳರಾಜರು, ನಂತರ ವಿಜಯನಗರದ ರಾಜರುಗಳು, ಅವರ ನಂತರದಲ್ಲಿ ಚಂದ್ರಗಿರಿಯನ್ನು ಆಳಿದ ವೀರವೆಂಕಟಪತಿರಾಯನು, ಮುಂದೆ ವೆಂಕಟಾಚಲಪತಿಯ ಭಕ್ತರಾದ ಮಹಾಂತರುಗಳು ಇವರೆಲ್ಲರು ದೇವಾಲಯ ನಿರ್ಮಾಣ ಕಾರ್ಯಗಳನ್ನು, ನಿತ್ಯಸೇವಾ ಕೈಂಕರ್ಯಗಳನ್ನು ಮತ್ತು ದೇವರ ಉತ್ಸವಗಳನ್ನು ನಿರ್ವಹಿಸುತ್ತ ಭಕ್ತರಿಗೆ ತಂಗಲಿಕ್ಕೆ ನಿಲಯಗಳು ಮತ್ತು ಇನ್ನಿತರ ಸೌಕರ್ಯಗಳನ್ನು ಒದಗಿಸುತ್ತಾ ಬಂದರು.

ಆ ಮಹಾಂತರುಗಳಲ್ಲಿ ಹಾಥಿರಾಂ ಭಾವಾಜಿ ಇವನು ಶ್ರೀನಿವಾಸನಿಗೆ ಪರಮಭಕ್ತನಾಗಿ, ಆತನ ಪ್ರೀತಿಪಾತ್ರನಾಗಿ ಶ್ರೀನಿವಾಸನನ್ನು ಪ್ರತ್ಯಕ್ಷವಾಗಿ ಕಂಡು, ಆತನೊಡನೆ ಮಾತನಾಡುತ್ತ ಸ್ವಾಮಿಯ ಜೊತೆಗೆ ಪಗಡೆಕಾಯಿ ಆಡುತ್ತಿರುವದನ್ನು ಜನರು ಕಂಡಿದ್ದಾರೆ, ಕೇಳಿದ್ದಾರೆ. ಹಿಂದೆ ಬ್ರಿಟೀಷರು ಮದ್ರಾಸ ಪ್ರಾಂತವನ್ನು ಆಳುತ್ತಿರುವಾಗ ಅವರು ಮಹಾಂತ ಹಾಥಿರಾಂನ ಭಕ್ತಿಯನ್ನು ಪರೀಕ್ಷಿಸಬೇಕೆಂದು ಒಂದು ದಿನ ಒಂದು ಸಣ್ಣ ಕೋಣೆಯಲ್ಲಿ ಕಬ್ಬಿನ ಮೂಟೆಯನ್ನು ಹಾಕಿ, ಅಂದು ಆ ಮಹಾಂತನನ್ನು ಬಂಧಿಸಿ, ಆ ಆಂಗ್ಲರು ಮರುದಿನ ಬೆಳಗಾಗುವದರೊಳಗಾಗಿ ಆ ಎಲ್ಲ ಕಬ್ಬನ್ನು ತಿಂದು ಮುಗಿಸಬೇಕೆಂದು ಅವನಿಗೆ ನಿಯಮಾಜ್ಞೆ ಮಾಡಿದಾಗ ಆ

ಸಮಯದಲ್ಲಿ ವೆಂಕಟಾಚಲಪತಿಯೇ ಆ ಕೋಣೆಯಲ್ಲಿ ಪ್ರವೇಶಿಸಿ ಆ ಭಕ್ತನನ್ನು ಪರಾಮರ್ಶಿಸಿ ತಾನೊಂದು ಆನೆಯಂತೆ ಬಂದು ಆ ಎಲ್ಲ ಕಬ್ಬನ್ನು ತಿಂದು ಆ ಭಕ್ತನನ್ನು ಅಧಿಕಾರಿಗಳ ಪರೀಕ್ಷೆಯಲ್ಲಿ ವಿಜಯವಂತನಾಗಿ ಮಾಡಿದನು. ಮುಂದೆ ಎಲ್ಲ ಹಿರಿಯ ಕಿರಿಯ ಅಧಿಕಾರಿಗಳು ಆ ಶ್ರೀನಿವಾಸನ ಮಹಿಮೆಯನ್ನು ಕಂಡುಕೊಂಡು ಭಕ್ತ ಹಾಥೀರಾಂನಲ್ಲಿ ಕ್ಷಮಾಪಣೆ ಕೋರಿ ಆ ಭಕ್ತನಿಗೆ ತಿರುಮಲ ತಿರುಪತಿಯ ಎಲ್ಲಾ ನಿರ್ವಹಣಾ ಜವಾಬ್ದಾರಿಯನ್ನು ಕೊಟ್ಟು, ಈ ಪರೀಕ್ಷೆಯ ವಿಷಯವನ್ನು ಮನಸ್ಸಿಗೆ ಹಚ್ಚಿಕೊಳ್ಳದೇ ಇರಬೇಕೆಂದು ಹಾಥಿರಾಂನಲ್ಲಿ ಕೇಳಿಕೊಂಡರು.

ಆದರೆ ಮುಂದೆ ಮದ್ರಾಸು ಸರಕಾರವು 1933 ರಲ್ಲಿ ಆಮೇಲೆ 1951 ರಲ್ಲಿ ಧರ್ಮಾಧಿಕಾರಿಗಳ ಸಂಘ ರಚನೆ ಮಾಡಿ ತಿರುಪತಿಯ ಕಾರ್ಯನಿರ್ವಹಣಾಧಿಕಾರಿಯನ್ನು ನೇಮಿಸಿತು. ಮುಂದೆ ಮದ್ರಾಸು ಸರಕಾರವು ತಿರುಮಲ ತಿರುಪತಿಯ ಆದಾಯವು ವೃದ್ಧಿಯಾಗುತ್ತಿರುವದನ್ನು ನೋಡಿ ಆ ಧನವು ಪದ್ಧತಿಪ್ರಕಾರ ಸದ್ವಿನಿಯೋಗದ ಮಾಡುವದರ ಸಲುವಾಗಿ ಮಹಾಂತರ ಸರ್ವಾಧಿಕಾರವನ್ನು ಮೊಟಕುಗೊಳಿಸಿ 1933 ರಲ್ಲಿ ಕಾರ್ಯಕಾರಿ ಸಂಘವನ್ನು ಕಟ್ಟಿ ಅದನ್ನು ಧರ್ಮಾದಾಯ ಶಾಖೆಗೆ ಸೇರಿಸಿ, ಕಮಿಷ್ನರುಗಳನ್ನು ನಂತರದಲ್ಲಿ 1951 ರಲ್ಲಿ ಕಾರ್ಯ ನಿರ್ವಹಣಾಧಿಕಾರಿಯನ್ನು ನೇಮಿಸಿ ತಿರುಮಲ ತಿರುಪತಿ ಬಂದು ಹೋಗುವ ಭಕ್ತರ ಉಪಯೋಗಕ್ಕಾಗಿ ಛತ್ರಗಳ ನಿರ್ಮಾಣ ಮತ್ತು ಸಾರಿಗೆ ಸೌಕರ್ಯಗಳನ್ನು ಒದಗಿಸುತ್ತಾ ಸಾಗಿದರು.

1956 ರಲ್ಲಿ ಆಂಧ್ರ ಪ್ರದೇಶ ರಚನೆಯಾದ ನಂತರ ಆ ಸರಕಾರವು 'ದೇವಾದಾಯ ಧರ್ಮಾದಾಯ ಶಾಖೆ'ಯನ್ನು ಪ್ರತಿಸ್ಥಾಪಿಸಿ ಅದರಿಂದ ಇನ್ನಷ್ಟು ಹೆಚ್ಚಿನ ಸೌಕರ್ಯಗಳನ್ನು

ಒದಗಿಸತೊಡಗಿದರು. ಹಾಗೆಯೇ ಮುಂದೆ ದೇವಾಲಯದ ಆದಾಯವು ಹೆಚ್ಚಾಗುತ್ತಿದ್ದಂತೆ ಸಮರ್ಥ ಕಾರ್ಯನಿರ್ವಹಣಾಧಿಕಾರಿಗಳ ನೇಮಕದಿಂದ ಸಾಕಷ್ಟು ಅಭಿವೃದ್ಧಿ ಸಾಧಿಸುತ್ತಿದ್ದಾರೆ. ಹಾಗಾಗಿ ಇಂದು ತಿರುಮಲ ತಿರುಪತಿ ಕ್ಷೇತ್ರದ ಪ್ರವಾಸವು ಬಹಳ ಸುಖಕರವಾಗಿದೆ.

ಮೊದಲು 1933 ರಲ್ಲಿ ಕೀ॥ ಶೇ॥ ರಂಗನಾಥ ಮೊದಲಿಯವರು ಕೆಲವು ಕಾಲ ಕಮಿಷನರ್ ಆಗಿದ್ದರು. ಅನಂತರದಲ್ಲಿ ಶ್ರೀ ಸಿ ಅನ್ನಾರಾವು ಮುಂತಾದವರು ಕಾರ್ಯನಿರ್ವಹಣಾಧಿಕಾರಿಗಳಲ್ಲಿ ಹೆಚ್ಚಿನವರು. ದೈವಭಕ್ತಿಯಿಂದ, ಜನಸೇವೆ ನಿರತರಾಗಿ ದೇವಾಲಯದ ಮಹಿಮೆ ಮರ್ಯಾದೆಗಳನ್ನು ಯಾತ್ರಿಗಳ ಸೌಕರ್ಯಗಳನ್ನು ದಿನಂಪ್ರತಿ ವೃದ್ಧಿ ಹೊಂದುತ್ತಿರುವದರಿಂದ ಭಾರತೀಯರಲ್ಲದೇ ವಿದೇಶಿ ಪ್ರವಾಸಿಗಳು ಕೂಡ ಈ ಕ್ಷೇತ್ರವನ್ನು ದರ್ಶಿಸಲು ಬರುತ್ತಿದ್ದಾರೆ. ಪ್ರತಿದಿನವು ಸಾವಿರಾರು ಜನಭಕ್ತರು ಶ್ರೀನಿವಾಸನ ದರ್ಶನ ಪಡೆಯುತ್ತಿದ್ದಾರೆ.

ತಿರುಮಲ ತಿರುಪತಿ ದೇವಸ್ಥಾನಗಳ ಕಾರ್ಯನಿರ್ವಹಣಾಧಿಕಾರಿಯಾಗಿ ಶ್ರೀಯುತರಾದ ಪತ್ರಿ ವೆಂಕಟರಾಮಕೃಷ್ಣ ಪ್ರಸಾದ ಐಪಿಎಸ್ ಇವರು 30–11–1978 ರಿಂದ 9–7–1982 ರ ವರೆಗೆ ಕಾರ್ಯ ನಿರ್ವಹಿಸಿದರು,

**ಸೀ. – ಶ್ರೀ ವೆಂಕಟೇಶುನಿ ಸೇವಂ ಚೇರಿನದಾದಿ**
**ಭಕ್ತಿ ಪ್ರಪತ್ತುಲು ಪ್ರಬಲುಚುಂಡ**
**ನಿತ್ಯ ಕೈಂಕರ್ಯಮುಲ್ ನಿತ್ಯೋತ್ಸವಮುಲಟ್ಲು**
**ಪಲುವಿಧಂಬುಲ ಶೋಭ ಪ್ರಬಲುಚುಂಡ**
**ಅಂತಕಂತಕುಮಿಂಚು ಸತ್ಯಂತ ಭಕ್ತಿತೋ**

ಭಕ್ತಜನುಲ ಯಾತ್ರ ಪ್ರಬಲುಚುಂಡ
ವೇಲು ಲಕ್ಷಲು ಕೋಟ್ಲು ಆಲಯ ಆದಾಯ
ಫಲಿತಮ್ಮುಲೇಟೇಟ ಪ್ರಬಲುಚುಂಡ

ಗೀ – ದೇವದರ್ಶನಪದ್ಧತಿ ದಿನಮು ಸುಲಭ
ಮುಗ ಲಭಿಂಚುಚುಂಡ ಪ್ರಜಲು ಮುದಮುಚೇಂದ
ವಲಯು ಸೌಕರ್ಯಮುಲನೆನ್ನೋ ಕಲುಗಚೇಸಿ
ಪ್ರಥಮ ಭಕ್ತುಡು ಶ್ರೀ ಪ್ರಸಾದ ಪ್ರಥಿತುಡಿಪುಡು

ಗೀ – ಪೂರ್ವ ಜನ್ಮ ಫಲಮದೇಮು! ಮುದಮುತೋಡ
ವೆಂಕಟೇಶಡು ತನಸೇವ ವೆಲಯನಿಟ್ಲು
ತಾನೇ ನಿಯಮಿಂಚುಕೋನೆ ನೇಮು! ಧನ್ಯುಡಯ್ಯೇ
ಪತ್ರಿಕುಲ ವಾರ್ಧಿ ಕುವಲಯ ಬಾಂಧವುಡು

ಗೀ – ಎಂದರೋ ಕಾರ್ಯಕರ್ತುಲು ಇಂತವರಕು
ನಿರ್ವಹಂಚಿರಿ ಕಾರ್ಯಮುಲೋ ನೇರ್ಪುತೋಡ
ಕಾನಿ ಅತ್ಯಂತಮಭಿವೃದ್ಧಿ ಕಲುಗಲೇದು
ಇನ್ನಿ ವಿಧಿಮುಲನಭಿವೃದ್ಧಿ ಸನ್ನುತಿಂಪ
ಗಲಿಗೇ ಮನ ಪ್ರಸಾದ ಪಾಲನ ಕಾಲಮಂದು

ಗೀ – ದಿವ್ಯ ತಿರುಮಲ ತಿರುಪತಿ ತೀರ್ಥಮೈನ
ಭೂಮಿಯನಿನಾರು ಪೂರ್ವುಲು ಮುನುಲು ಬುಧುಲು
ಅಟ್ಟಿನುಡುಲಿಪುಡಿಟ ನಿಜಮಾಯೆ ನನುಚು
ತೃಪ್ತಿಚೆಂದಿರಿ ಯಾತ್ರಿಕುಲೇ ತೃಷ್ಣದೀರ

ನಿತ್ಯಶೋಭಾಯಮಾನವಾದ ಶ್ರೀ ಶ್ರೀನಿವಾಸನ ಹಬ್ಬ ಉತ್ಸವಗಳು ಜರುಗುವದನ್ನು ಯಾತ್ರಿಕರು ಶ್ರಮವೆನ್ನದೆ, ಎಷ್ಟು ಹೊತ್ತಾದರೂ ಕಾಯುತ್ತ ಕ್ರಮ ಪದ್ಧತಿಯಿಂದ ಸ್ವಾಮಿಯ ದರ್ಶನ

ಪಡೆದು ಅನಂತಾನಂದವನ್ನು ಹೊಂದುತ್ತಿದ್ದಾರೆಂಬುದು ನಿತ್ಯಸತ್ಯವೇ.

ಈ ತಿರುಮಲವು ಭೂಲೋಕದ 'ವೈಕುಂಠ' ಎಂದು ಹೇಳುತ್ತಿರುವ ಹಿರಿಯರ ಮಾತುಗಳನ್ನು ಯಾತ್ರಿಕರು ಅದನ್ನು ಪ್ರತ್ಯಕ್ಷವಾಗಿ ನೋಡಿ ಅನುಭೂತಿ ಹೊಂದುತ್ತಿದ್ದಾರೆ. 'ಕಣ್ಣುಗಳ ಹಬ್ಬ'ದಂತೆ ಸ್ವಾಮಿಯ ಒಂದು ಕ್ಷಣದ ದರುಶನಕ್ಕಾಗಿ ದೂರದಿಂದ ಹಣವ್ಯಯ ಮತ್ತು ಪ್ರಯಾಸದಿಂದ ಬರುವ ಎಲ್ಲ ಯಾತ್ರಿಕರಿಗೆ ಅಲ್ಲಿನ ನಿರ್ವಹಣಾಧಿಕಾರಿ, ಅವರ ಸಹಾಯಕರು, ದೇವಾಲಯದ ಸಿಬ್ಬಂದಿ ವರ್ಗ ಎಲ್ಲರೂ ನಿರ್ವ್ಯಾಜ ಸೇವಾಭಾವದಿಂದ ತಮ್ಮ ತಮ್ಮ ಪಾಲಿನ ಕಾರ್ಯಗಳಲ್ಲಿ ಲೋಪಬರದಂತೆ ಆ ಜನರ ತಿರುಪತಿ ಯಾತ್ರೆಯನ್ನು ಸುಖಯಾತ್ರೆಯಾಗಿ ಮಾಡುತ್ತಿದ್ದಾರೆ. ಈ ತಿರುಮಲ ತಿರುಪತಿ ಪುಣ್ಯ ಕ್ಷೇತ್ರವನ್ನು ಪ್ರತಿದಿನ ಬಹಳಷ್ಟು ಆಬಾಲವೃದ್ಧರು ಸಂದರ್ಶಿಸಿ ಮಹದಾನಂದಭರಿತರಾಗಿ ಶ್ರೀ ವೆಂಕಟಾಚಲಪತಿಯ ಅನುಗ್ರಹವನ್ನು ಹೊಂದಿ ಇಹಪರ ಸೌಖ್ಯಗಳನ್ನು ಹೊಂದುತ್ತಿದ್ದಾರೆ.

9–7–1982 ರಂದು ಶ್ರೀಯುತ ಜಿ. ಕುಮಾರಸ್ವಾಮಿರೆಡ್ಡಿ ಐಪಿಎಸ್ ಇವರು ಶ್ರೀಯುತ ಪ್ರಸಾದ ಅವರಿಂದ ಅಧಿಕಾರವನ್ನು ವಹಿಸಿಕೊಂಡರು. ಶ್ರೀ ಕುಮಾರಸ್ವಾಮಿರೆಡ್ಡಿ ಇವರು ಅನಂತಪುರ ಜಿಲ್ಲೆಯವರಾದರೂ ಪೂರ್ವದ ಚಿತ್ತೂರ ಜಿಲ್ಲಾ ಬೋರ್ಡು ಅಧ್ಯಕ್ಷರಾಗಿದ್ದ ಹೆಸರಾಂತ ವಾರಣಾಸಿ ಸಿ. ರಘುನಾಥರೆಡ್ಡಿಯವರ ಅಳಿಯರಾಗಿದ್ದ ಪ್ರಯುಕ್ತ ಅವರಿಗೆ ತಿರುಪತಿ ಕ್ಷೇತ್ರವೇನು ಹೊಸದಲ್ಲ. ಅವರ ಮಾವಂದಿರು 1942–47 ರಲ್ಲಿ ತಿರುಮಲ ತಿರುಪತಿ ದೇವಸ್ಥಾನಗಳ ಪಾಲಕಸಂಘದ ಅಧ್ಯಕ್ಷರಾಗಿದ್ದು ಆಗಿನ ಕಾರ್ಯ ನಿರ್ವಹಣಾಧಿಕಾರಿ ಶ್ರೀ ಸಿ. ಅನ್ನಾರಾವು ಅವರ ಎಲ್ಲಾ

ಅಭಿವೃದ್ಧಿ ಕಾರ್ಯಕ್ರಮಗಳಿಗೆ ಪ್ರೋತ್ಸಾಹಿಸಿದ್ದದ್ದು ಶ್ರೀ ಕುಮಾರಸ್ವಾಮಿರೆಡ್ಡಿ ಅವರಿಗೆ ತಿಳಿದೇ ಇದೆ. ಹಾಗಾಗಿ ಆವರು ಭಕ್ತರಿಗೆ ಒಳ್ಳೆಯ ಸೌಕರ್ಯಗಳನ್ನು ಒದಗಿಸುವರು ಎಂಬ ನಂಬಿಕೆ ಇಟ್ಟದ್ದು ತಪ್ಪೇನಲ್ಲ. ಅಲ್ಲದೇ ಈ ಕೆಲಸ ರೆಡ್ಡಿಯವರ ಅಭಿರುಚಿಗೆ ತಕ್ಕಂತೆ ಇರುವುದರಿಂದ ಶ್ರೀ ಪ್ರಸಾದ ಅವರ ಉತ್ತರಾಧಿಕಾರಿಯಾಗಿ ಶ್ರೀ ವೆಂಕಟಾಚಲಪತಿಯ ಪ್ರೇರಣೆಯಿಂದ ಸರಕಾರವು ಶ್ರೀ ಕುಮಾರರೆಡ್ಡಿಯವರನ್ನು ನೇಮಿಸಿದ್ದದ್ದು ಉಚಿತವಾಗಿತ್ತು ಎಂಬುದರಲ್ಲಿ ಅತಿಶಯೋಕ್ತಿ ಏನಿಲ್ಲ. ಎಲ್ಲವೂ ಆ ಶ್ರೀನಿವಾಸನ ಅನುಗ್ರಹವೇ ಸರಿ.

ಸೀ – **ಅಧಿಕಾರಿಪದವಿನಿ ಅಂದಿನ ದಾದಿಗಾ**
**ಮುನುಪಟಿಯಭಿವೃದ್ಧಿ ಪನುಲಗಾಂಚಿ**
**ತನಪಾಲಿ ಕಾರ್ಯುಲೇ ತಡವುಕೊನಕ ಬುದ್ಧಿ**
**ಚಾತುರ್ಯ ಪದ್ಧತಿನೇ ಸತ್ವರಯುಗ**
**ಭಕ್ತಾಳಿಮುದಮೆಂದು ಪನುಲೆನ್ನೋ ತಲಪೆಟ್ಟಿ**
**ಸಾಗಿಂಚುಚುನ್ನಟ್ಟಿ ಸರಸುಡೌಟ**
**ಪ್ರಥಮಭಕ್ತುಂಡೌಟ ಪಾಲನಾಧರ್ಮಂಬು**
**ಪದ್ಧತುಲೆರೆಗಿನ ಪ್ರಥಿತುಡಗುಟ**

ಗೀ – **ಎಂಚಿ ನಿಯಮಿಂಚುಕೊನ್ನಾವು ಮಂಚಿವರುನಿ,**
**ಓಜಗಲ ಕುಮಾರಸ್ವಾಮಿ ತೇಜು ರೆಡ್ಡಿ**
**ದಗಿನ ಪ್ರತಿನಿಧಿ ನಿಯಮಿಂಚು ತರುಣ ಮಂದು**
**ಬಳಿರ ಶ್ರೀ ವೆಂಕಟೇಶ್ವರಾ! ಭಕ್ತಗೋಲುತು.**

ಶ್ರೀ ಕುಮಾರಸ್ವಾಮಿರೆಡ್ಡಿಯವರು ಅಧಿಕಾರಿ ಪದವಿಯನ್ನು ಸ್ವೀಕರಿಸಿದ ಮೇಲೆ ಭಕ್ತರ ಸೌಕರ್ಯಾರ್ಥವಾಗಿ ಸಪ್ತಗಿರಿ ಬೆಟ್ಟದ

ಮೇಲೆ ಹೋಗಲು 'ರೋಪ್‌ವೇ' ಮತ್ತು ಶ್ರಿನಿವಾಸನಿಗೆ ದಿವ್ಯ 'ವಜ್ರಕಿರೀಟ'ವನ್ನು ಮಾಡಿಸಲು ನಿರ್ಣಯ ಮಾಡಿ ಎಲ್ಲ ಸಂಘ ಸದಸ್ಯರಿಂದ ಅನುಮೋದನೆ ಪಡೆದು ಕಾರ್ಯ ಪ್ರಾರಂಭಿಸಿದರು. ಅವರ ಕಾರ್ಯಕಾಲದಲ್ಲಿ ಸರ್ವ ಭಕ್ತರಿಂದ ಪ್ರಶಂಸೆ ಪಡೆದವರಾಗಿದ್ದರು.

ಶ್ರೀ ಕುಮಾರಸ್ವಾಮಿರೆಡ್ಡಿಯವರ ನಂತರ 25–11–1983 ರ ದಿನ ಶ್ರೀ ಎಸ್ ಲಕ್ಷ್ಮೀನಾರಾಯಣ ಐಪಿಎಸ್ ಅವರು ಕಾರ್ಯನಿರ್ವಹಣಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡು ಶ್ರೀ ಕುಮಾರಸ್ವಾಮಿರೆಡ್ಡಿಯವರ ಪೂರ್ತಿಗೊಳ್ಳದೆ ಉಳಿದ ಕಾರ್ಯಕ್ರಮಗಳನ್ನು ಚುರುಕಿನಿಂದ ಪ್ರಾರಂಭಿಸಿದರು. ಆ ಸಮಯದಲ್ಲಿ ಪ್ರಧಾನವಾದ ಕೆಲಸ ಅಂದರೆ ಶ್ರೀನಿವಾಸ ದೇವರ 'ವಜ್ರಕಿರೀಟ' ದ ತಯಾರಿಕೆ. ಶ್ರೀ ಲಕ್ಷ್ಮೀನಾರಾಯಣ ಅವರು ಶ್ರೀನಿವಾಸನ ಬಗ್ಗೆ ಇರುವ ಭಕ್ತಿಶ್ರದ್ಧೆಗಳಿಂದ ವಜ್ರಕಿರೀಟವನ್ನು ಶ್ರೇಷ್ಠ ಮತ್ತು ಜಾಣ ಸ್ವರ್ಣಶಿಲ್ಪಿಗಳಿಂದ ತಯಾರಿಸಿ 1985 ಡಿಸೆಂಬರು 20 ರಂದು ಶ್ರೀನಿವಾಸ ದೇವರಿಗೆ ಅರ್ಪಿಸಿ ಉತ್ಸವರೂಪದಲ್ಲಿ ಕಾರ್ಯಕ್ರಮ ನಡೆಸಿದರು.

ಶ್ರೀ ಪಿ.ವಿ.ಆರ್.ಕೆ ಪ್ರಸಾದ ಅವರು ವೆಂಕಟೇಶ ಸ್ವಾಮಿಗಳ ಧ್ವಜಸ್ತಂಭವು ಭಿನ್ನವಾದುದ್ದನ್ನು ಗಮನಿಸಿ ಅದರ ಸ್ಥಾನದಲ್ಲಿ ಹೊಸ ಗಂಧದ ಧ್ವಜಸ್ಥಂಭವನ್ನು ಸ್ಥಾಪಿಸುವ ದೀಕ್ಷೆ ವಹಿಸಿ ಕರ್ನಾಟಕದಿಂದ ಒಳ್ಳೆಯ ಗುಣಮಟ್ಟದ ಸ್ತಂಭವನ್ನು ಬರಮಾಡಿಕೊಂಡು ಆಗಮ ಶಾಸ್ತ್ರದ ಪಂಡಿತರಿಂದ ಮತ್ತು ಶಿಲ್ಪಿಗಳಂದ ವಿಧಿವಿಧಾನದಂತೆ ಪುನಸ್ಥಾಪನೆ ಗೈಯುವ ಕಾರ್ಯವನ್ನು ಸಫಲವಾಗಿ ನೆರವೇರಿಸಿದರು.

ಅವರು ಯಾತ್ರಿಕರಿಗೆ ಎಷ್ಟೋ ರೀತಿಯಲ್ಲಿ ಸೌಕರ್ಯಗಳನ್ನು ಒದಗಿಸಿದರು. ಬೆಟ್ಟದ ಮೇಲೆ ಹೋಗಲು 'ಉಯ್ಯಾಲ ಬಾಟ' ಅಂದರೆ 'ರೋಪ್ ವೇ' ಸೌಕರ್ಯವನ್ನು ಶ್ರೀ ಅನ್ನಾರಾವು ಅವರ ಕಾಲದಿಂದಲೂ ಪ್ರಯತ್ನ ನಡೆದೇ ಇತ್ತು. ಮುಂದೆ ಶ್ರೀ ಕುಮಾರಸ್ವಾಮಿರೆಡ್ಡಿಯವರು ಆ ಉಯ್ಯಾಲ ಬಾಟ ಮತ್ತು ವಜ್ರಕಿರೀಟ ನಿರ್ಮಿತಿಗಾಗಿ ಕಮೀಟಿಯಿಂದ ಅನುಮೋದನೆ ಪಡೆದಿದ್ದರು. ಆದರೆ ಕಾರಣಾಂತರಗಳಿಂದ ಉಯ್ಯಾಲ ಬಾಟ ಕಾರ್ಯ ಸ್ಥಗಿತಗೊಂಡಿತು. ಆದರೂ ವಜ್ರ ಕಿರೀಟದ ಸಲುವಾಗಿ ಅವರು ವಿದೇಶಗಳಿಗೆ ಹೋಗಿ ಗುಣಮಟ್ಟದ ವಜ್ರಗಳನ್ನು ತಂದು ಕಾರ್ಯ ನೆರವೇರಿಸಿದರು. ದಿನ ನಿತ್ಯ ಬಂದು ಹೋಗುವ ಯಾತ್ರಿಕರಿಗೆ ದೇವಾಲಯದ ವತಿಯಿಂದ ಅನುಕೂಲಸ್ಥ ಉದಾರ ದಾನಿಗಳಿಂದ ಧನಸಂಗ್ರಹ ಪಡೆದು 'ಉಚಿತ ಪ್ರಸಾದ' ಯೋಜನೆಯನ್ನು ಪ್ರಾರಂಬಿಸಿದವರು ಈ ಶ್ರೀ ಕುಮಾರಸ್ವಾಮಿರೆಡ್ಡಿಯವರೇ. ಸದ್ಯದಲ್ಲಿಯೂ ಈ ಯೋಜನೆಯು ಯಶಸ್ವಿಯಾಗಿ, ತೃಪ್ತಿಕರವಾಗಿ ನಡೆಯುತ್ತಿದೆ. ಯಾತ್ರಿಕರು ಉಚಿತ ವಸತಿ ಮತ್ತು ಉಚಿತ ಭೋಜನಗಳು ನಿರಂತರವಾಗಿ ಜರುಗುತ್ತಿರಲಿ ಎಂದು ಆಶಿಸುತ್ತಿದ್ದಾರೆ. ಹೀಗೆ ಪ್ರಶಂಸೆಪಾತ್ರವಾದ ಈ ಮಹತ್ಕಾರ್ಯಗಳನ್ನು ರೆಡ್ಡಿಯವರು ಶ್ರೀ ಶ್ರೀನಿವಾಸನಿಗೆ ಅರ್ಪಿಸಿದರು. ತರುವಾಯದಲ್ಲಿ ಬಂದ ಶ್ರೀ ಲಕ್ಷ್ಮೀನಾರಾಯಣ ಅವರು ವಜ್ರಕಿರೀಟವನ್ನು ಹಿರಿಯರ ಆದೇಶದಂತೆ ಶಾಸ್ತ್ರೋಕ್ತವಾಗಿ ಶುಭ ಸಮಯದಲ್ಲಿ 20–12–1985 ರಂದು ಶ್ರೀನಿವಾಸನಿಗೆ ಅರ್ಪಿಸಿದರು. ಭಕ್ತರಿಗೆ ಶ್ರೀವಾರಿ ದರ್ಶನವನ್ನು ಸುಲಭವಾಗಿ ದೊರೆಯುವಂತೆ ಧರ್ಮದರ್ಶನವು ಮತ್ತು ರೂ 25 ಪಾವತಿಸಿದವರಿಗೆ ಹಾಗೂ ವಿ ಐ ಪಿ ಗಳಿಗೆ ಬಹಳ ಹೊತ್ತು ಸರದಿಯಲ್ಲಿ ನಿಲ್ಲದೇ ಸ್ವಲ್ಪವೇ ಸಮಯದಲ್ಲಿ ಶ್ರೀವಾರಿ ದರ್ಶನ ಪಡೆದುಕೊಳ್ಳುತ್ತಿದ್ದರು.

ಈ ಮೇಲೆ ಉಲ್ಲೇಖಿಸಿದ ಮೂರು ಜನ ಮಹನೀಯರು ಯೋಜಿಸಿದ ಕಾರ್ಯಗಳು ಮುಂದೆ ಬರುವ ಎಲ್ಲ ಐತಿಹಾಸಿಕ ಪರಿಶೋಧಕರಿಗೆ ಸಹಾಯವಾಗಬಲ್ಲವು ಎಂಬುದು ಸತ್ಯಸಮ್ಮತವು.

ಮುಂಬರುವ ಎಲ್ಲಾ ಕಾರ್ಯನಿರ್ವಹಣಾಧಿಕಾರಿಗಳು ಸತತವಾಗಿ ಭಕ್ತರ ಸಂಖ್ಯೆ ವೃದ್ಧಿಯಾಗುತ್ತಿರುವ ಯಾತ್ರಿಕರು ಶ್ರೀ ಶ್ರೀನಿವಾಸನನ್ನು ಸರ್ವಕಾಲ ಪ್ರಶಂಸಿಸುತ್ತಿರುವಂತೆ ಮಹೋನ್ನತ ಕಾರ್ಯಗಳನ್ನು ಮಾಡಬಹುದು. ಮುಂಬರುವವರೂ ಕೂಡ ಎಲ್ಲ ಅಧಿಕಾರಿಗಳ ಸೇವಾ ಕೈಂಕರ್ಯದಿಂದ ಪ್ರೋತ್ಸಾಹ ಪಡೆದು ಶ್ರೀನಿವಾಸನ ಅನುಗ್ರಹದಿಂದ ತಮ್ಮ ಪಾಲಿನ ಕಾರ್ಯವನ್ನು ಆಚರಿಸಿ ಶ್ರೀವೆಂಕಟಾಚಲಪತಿಯ ಅನುಗ್ರಹಕ್ಕೆ ಪಾತ್ರರಾಗಬೇಕು.

## 3. ಕ್ಷೇತ್ರ ತಲುಪಲು ಸೌಕರ್ಯಗಳು

ತಿರುಮಲ ಕ್ಷೇತ್ರವು ಆಂಧ್ರಪ್ರದೇಶದ ದಕ್ಷಿಣ ಸರಹದ್ದಿನಲ್ಲಿದ್ದು ಚಿತ್ತೂರ ಜಿಲ್ಲೆಗೆ ಸೇರಿದೆ. ಚಿತ್ತೂರ ಜಿಲ್ಲೆಯಲ್ಲಿ ತಿರುಮಲ, ತಿರುಪತಿ ಮತ್ತು ಶ್ರೀ ಕಾಳಹಸ್ತಿಯಂತಹ ಪುರಾಣ ಪ್ರಸಿದ್ಧ ದಿವ್ಯ ಕ್ಷೇತ್ರಗಳಿವೆ. ಈ ಪುಣ್ಯಕ್ಷೇತ್ರಗಳ ಕುರಿತು ನಮ್ಮ ಪೂರ್ವಜರು ತಮ್ಮ ಕಾವ್ಯಗಳಲ್ಲಿ ವಿವರವಾಗಿ ವರ್ಣಿಸಿದ್ದಾರೆ. ವೆಂಕಟಾಚಲ ಮಹಾತ್ಮೆಯನ್ನು ತರಿಗೊಂಡ ವೆಂಕಮಾಂಬ ಇವರು ಆಂಧ್ರದಲ್ಲಿ (ತೆಲುಗಿನಲ್ಲಿ) ರಚಿಸಿದ್ದಾರೆ. ವೆಂಕಟಾಚಲ ಮಹಾತ್ಮೆಗಿಂತ ಮುಂಚೆಯೇ ಸುವರ್ಣಮುಖಿ ನದಿಯ ಪವಿತ್ರತೆ ಬಗ್ಗೆ ತಿಳಿದಿತ್ತು. ಧೂರ್ಜಟಿ ಮಹಾಕವಿಯು ಶ್ರೀ ಕಾಳಹಸ್ತಿ ಮಹಾತ್ಮ್ಯಮು ಎಂಬ ಕಾವ್ಯವನ್ನು ಆಂಧ್ರಕಾವ್ಯವಾಗಿ ರಚಿಸಿದ್ದಾನೆ.

ತಿರುಪತಿ ತಿರುಮಲ ದರುಶನಕ್ಕಾಗಿ ಹಲವು ಪ್ರಯಾಣ ಸೌಕರ್ಯಗಳಿವೆ. ನಮ್ಮ ದೇಶದ ಮುಖ್ಯವಾದ ರೈಲು

ಮಾರ್ಗದ್ವಾರಾ ವಿಜಯವಾಡ, ಗೂಡೂರು, ರೇಣಿಗುಂಟ ಜಂಕ್ಷನ್‌ಗಳಿಂದ; ಧರ್ಮಾವರಂ, ಪಾಕಾಲ ಜಂಕ್ಷನ್‌ಗಳಿಂದ ಚೆನ್ನೈ (ಮದ್ರಾಸು), ಅರಕೋಣಂ ನಗರಗಳಿಂದ ರೇಣಿಗುಂಟ ದ್ವಾರಾ ತಿರುಪತಿಗೆ ಬರಬಹುದು. ಗೂಡೂರು, ರೇಣಿಗುಂಟ, ಪಾಕಾಲಗಳಿಂದ ದೇವಸ್ಥಾನದ ಬಸ್ಸುಗಳು ಯಾತ್ರಿಕರನ್ನು ನೇರವಾಗಿ ತಿರುಪತಿಗೆ ಕರೆದೊಯ್ಯುತ್ತವೆ. ಹೀಗೆ ಬಂದ ಯಾತ್ರಿಕರಿಗೆ ದೇವಸ್ಥಾನದ ಸಿಬ್ಬಂದಿಯವರು ಉಚಿತ ವಸತಿ ಸೌಕರ್ಯ ಒದಗಿಸುವರು. ಅಲ್ಲದೇ ದಿಲ್ಲಿ, ಮುಂಬಯಿ, ಕಲಕತ್ತಾ, ಹೈದರಾಬಾದ, ಬೆಂಗಳೂರು, ಚೆನ್ನೈಗಳಿಂದ ವಿಮಾನ ಸೌಕರ್ಯಗಳಿವೆ. ಬಿಹಾರ, ಪಶ್ಚಿಮ ಬಂಗಾಲ, ಕಾಶ್ಮೀರ, ಉತ್ತರಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ, ಪಂಜಾಬ, ಹರಿಯಾಣಾ, ಗುಜರಾತ, ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು, ಕೇರಳ ರಾಜ್ಯಗಳಿಂದಲೂ ತಿರುಮಲ ತಿರುಪತಿಗೆ ಬರುತ್ತಿರುವ ಬಹಳಷ್ಟು ಜನರನ್ನು ನಾವು ಕಾಣಬಹುದು.

ಈ ರೀತಿಯಲ್ಲಿ ತಿರುಮಲಕ್ಷೇತ್ರ ದರುಶನಕ್ಕೆ ಬರುವ ಭಕ್ತರಿಗೆ ರೇಲ್ವೇ ಸ್ಟೇಷನ್ ಹತ್ತಿರವೇ ಸಾರ್ವಜನಿಕರಿಗಾಗಿ ಸಕಲ ಸೌಕರ್ಯಗಳಿರುವ ದೊಡ್ಡ ದೊಡ್ಡ ಸತ್ರಗಳಿವೆ. ದೇವಸ್ಥಾನದ ಅಧಿಕಾರಿಗಳು ಯಾತ್ರಿಕರಿಗೆ ಅವಶ್ಯವೆನಿಸುವ ಎಲ್ಲ ರೀತಿಯ ಸಹಾಯ ನೀಡುತ್ತಾರೆ. ಈ ಸತ್ರಗಳಿಂದ ಬೆಟ್ಟದ ಮೇಲೆ ಹೋಗಲು ಬಸ್ಸಿನ ವ್ಯವಸ್ಥೆ ಇದೆ. ಬೆಟ್ಟದ ಮೇಲೆಯೂ ಯಾತ್ರಿಕರಿಗೆ ಹೆಚ್ಚಿನ ಸೌಕರ್ಯಗಳು ಇವೆ. ಉಚಿತ ವಸತಿಗೆ ಸತ್ರಗಳು, ಕೆಲದಿನ ವಸತಿ ಮಾಡುವವರಿಗೆ ಅತೀ ಕಡಿಮೆ ಬಾಡಿಗೆಯ ಮತ್ತು ಒಳ್ಳೆ ಸೌಕರ್ಯದ ಕಾಟೇಜುಗಳು ಮತ್ತು ಸತ್ರಗಳು ಯಾತ್ರಿಕರಿಗೆ ಅವರ ಅವಶ್ಯಕತೆಯಂತೆ ದೊರೆಯುವುವು.

ಬೆಟ್ಟದ ತಿರುಮಲವೇ ವೈಕುಂಠಪುರವು. ಆ ನಗರದಲ್ಲಿ ಮುಖ್ಯ ಸೌಧವೇ 'ಆನಂದನಿಲಯ'. ಆನಂದನಿಲಯದ ಗೋಪುರದ ಉತ್ತರ ದಿಕ್ಕಿನ ಎಡಗಡೆ ವಾಯುವ್ಯಭಾಗದಲ್ಲಿ ಹನುಮಂತ ದೇವರ ವಿಗ್ರಹವು, ಅದಕ್ಕೆ ಹತ್ತಿರವೇ ವಿಮಾನ ವೆಂಕಟೇಶ್ವರಸ್ವಾಮಿ ದರ್ಶನದ ಮನದಾಶಯ ಹೊಂದಿರುವ ಭಕ್ತಜನರ ಭಕ್ತಿಪ್ರಪತ್ತಿಯನ್ನು ವರ್ಣಿಸಲಾಗದು. ಆ ಭಕ್ತವೃಂದದಲ್ಲಿನ ಯಾವುದೇ ಭಕ್ತನು ಎಷ್ಟೇ ನಾಸ್ತಿಕನಾಗಿದ್ದರೂ ಸ್ಥಿರವಾಗಿ ನಿಂತು ಕೈಗಳನ್ನು ಕಟ್ಟಿಕೊಂಡು ವಿಮಾನ ವೆಂಕಟೇಶ್ವರನನ್ನು ನಮಸ್ಕಾರ ಮಾಡಿ ಆಸ್ತಿಕನಾಗಿ ಗರ್ಭಾಲಯದಲ್ಲಿ ಶ್ರೀ ಶ್ರೀನಿವಾಸ ದರ್ಶನ ಪಡೆದುಕೊಂಡು ತೀರ್ಥ ಪ್ರಸಾದಗಳನ್ನು ಪಾವನ ಭಕ್ತಿಯಿಂದ ಸ್ವೀಕರಿಸಿ 'ಪವಿತ್ರನಾದೆ' ಎಂಬ ಭಾವನೆ ಹೊಂದಿ ಧ್ವಜಸ್ತಂಭವನ್ನು ಹತ್ತಿರದಿಂದಲೇ ಸರದಿಯಲ್ಲಿ ನಿಂತು ನಮಸ್ಕರಿಸಿ ಕಣ್ಣಲ್ಲಿ ಆನಂದಬಾಷ್ಪ ಬರುತ್ತಿದ್ದಂತೆ ಆ ಧ್ವಜಸ್ತಂಭದ ಮೇಲಿನ ತುದಿಯನ್ನು ನೋಡಿ ಮನಸಾ ನಮಸ್ಕರಿಸಿ ಸಂತುಷ್ಟನಾಗಿ ಸಮಾಧಾನ ಹೊಂದಿ ಹೊರಗೆ ಹೋಗುತ್ತಿರುವವನು ಆ ಕ್ಷೇತ್ರದ ಮಹಿಮೆ ಎಷ್ಟಿದೆ ಎಂದು ಗ್ರಹಿಸಬಲ್ಲನು.

ದೇಶದ ನಾಲ್ಕೂ ದಿಕ್ಕಿನಿಂದ ರೈಲಿನ ಮೂಲಕ ಯಾತ್ರೆ ಮಾಡಿ ಗೂಡೂರು, ರೇಣಿಗುಂಟ, ಪಾಕಾಲ ಸೇರಿದರೆ ಯಾತ್ರಿಕರಿಗೆ ತಿರುಮಲಕ್ಕೆ ಹೋಗಲು ಪ್ರತಿಗಂಟೆಗೆ ಎಂಬಂತೆ ದೇವಸ್ಥಾನದ ಬಸ್ಸುಗಳು ಸಿದ್ಧವಾಗಿರುತ್ತವೆ. ಹಾಗಾಗಿ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ, ಪಶ್ಚಿಮಬಂಗಾಲದಿಂದ ಮಹಾರಾಷ್ಟ್ರ ಗುಜರಾತದವರೆಗೆ ಹೀಗೆ ವಿಶಾಲ ಭಾರತ ದೇಶದ ಮೂಲೆಮೂಲೆಗಳಿಂದ ಯಾತ್ರಿಕರು ತಿರುಮಲ ತಿರುಪತಿ ಸೇರಿ ಶ್ರೀನಿವಾಸನ ದರ್ಶನ ಪಡೆದು ಧನ್ಯರಾಗುತ್ತಾರೆ.

ಹೀಗೆ ತಿರುಮಲ ಸೇರುವ ಭಕ್ತರಿಗೆ ವಸತಿಗಾಗಿ ಛತ್ರಗಳಿವೆ. 'ತಲೆಕೂದಲು' ಅರ್ಪಿಸುವವರಿಗೆ ದೇವಸ್ಥಾನದವರು ಬೇರೆ ವಸತಿಗಳನ್ನು ಕಾದಿರಿಸಿದ್ದಾರೆ. ಕೂದಲು ಅರ್ಪಿಸಿದವರು ಸ್ವಾಮಿಪುಷ್ಕರಿಣಿಯಲ್ಲಿ ಅಥವಾ ದೇವಸ್ಥಾನದವರು ಏರ್ಪಾಟು ಮಾಡಿದ ಸ್ಥಳಗಳಲ್ಲಿ ಸ್ನಾನ ಮಾಡಿ ದೇವಾಲಯದ ಪ್ರಾಕಾರದ ಪ್ರದಕ್ಷಿಣೆ ಮಾಡಿ ಪುಷ್ಕರಿಣಿಯ ವಾಯುವ್ಯ ದಿಕ್ಕಿನಲ್ಲಿರುವ ವರಾಹಸ್ವಾಮಿ ದರ್ಶನ ಪಡೆದುಕೊಂಡು ಮುಂದೆ ಕ್ರಮದಂತೆ ಸಾಲು ಸೇರಿ ಸ್ವಾಮಿಯ ದರ್ಶನಕ್ಕೆ ಸರದಿ ನಿಲ್ಲುವುದು ಅನಾದಿಯಾಗಿ ಬಂದ ಸಂಪ್ರದಾಯ. (ಅಂದಂದಿನ ಚಿಕ್ಕಪುಟ್ಟ ಬದಲಾವಣೆಗಳಿರಲು ಸಾಧ್ಯವಿದೆ, ಅವುಗಳನ್ನು ಮುಂಚೆಯೇ ತಿಳಿದುಕೊಳ್ಳಬೇಕು) ಹಾಗೆಯೇ ದರ್ಶನಕ್ಕೆ ಬಂದವರು ಒಂದೆರಡು ದಿನವಿದ್ದು ಗೋಗರ್ಭ, ಆಕಾಶಗಂಗಾ, ಪಾಪನಾಶನ ಮುಂತಾದ ದಿವ್ಯ ತೀರ್ಥಗಳಲ್ಲಿ ಸ್ನಾನಮಾಡಿಕೊಂಡು ಸಂತೃಪ್ತರಾಗಿ ತಾವು ದಿವ್ಯ ಕ್ಷೇತ್ರ ಮತ್ತು ತೀರ್ಥಗಳ ಸಂದರ್ಶನದಿಂದ ಪಾಪಪರಿಹಾರ ಮಾಡಿಕೊಂಡು ಶ್ರೀ ಶ್ರೀನಿವಾಸನ ಕೃಪೆಗೆ ಪಾತ್ರರಾದೆವು ಎಂದು ಆನಂದ ಹೊಂದುವುದು ಮೊದಲಿನಿಂದಲೂ ಬಂದ ಒಂದು ಅನುಭೂತಿ.

ಭಾರತ ದೇಶವು ಒಂದು ದೊಡ್ಡ ಆಧ್ಯಾತ್ಮಿಕ ದೇಶವು. ಭಗವಂತನು ತನ್ನ ಎಲ್ಲಾ ಅವತಾರಗಳನ್ನು ಮಾಡಿದ ದಿವ್ಯ ಸ್ಥಳ. ವೇದವೇದಾಂಗಾದಿ ಬಹುಶಾಸ್ತ್ರಪುರಾಣಗಳನ್ನು ವಿಭಜಿಸಿದ ಮಹರ್ಷಿಗಳ ಜನ್ಮಭೂಮಿ. ಯಾಗಗಳಿಗೂ, ಯೋಗಿಗಳಿಗೂ ಮತ್ತು ಸಿದ್ಧ ಪುರುಷರಿಗೂ ಇದು ಜನ್ಮಸ್ಥಳ. ಶ್ರೇಷ್ಠ ಕಾವ್ಯ, ನಾಟಕಾದಿಗಳನ್ನು ರಚಿಸಿದ ಕವಿಗಳಿಗೂ, ಮಹನೀಯರುಗಳಿಗೂ ಜನ್ಮಭೂಮಿಯೇ. ಆರ್ಯನಾಗರಿಕತೆಗೆ ಮತ್ತು ಪವಿತ್ರಸಂಸ್ಕಾರಗಳಿಗೆ

ತವರೂರು. ಆಯಾ ಕಾಲಘಟ್ಟದಲ್ಲಿ ಜನರ ಮನೋಭಾವನೆಗೆ ಅನುಗುಣವಾಗಿ ತತ್ತ್ವಶಾಸ್ತ್ರಗಳನ್ನು ಉಪದೇಶ ಮಾಡಿ ಜನರನ್ನು ಸನ್ಮಾರ್ಗದಲ್ಲಿ ನಡೆಯುವಂತೆ ದೈವೀಚಿಂತನಯುಕ್ತರಾಗುವಂತೆ ಮಾಡಿ ಸರ್ವಜನ ಸಹೋದರತ್ವ, ಸರ್ವಜನರ ಸುಖಗಳನ್ನು ಆಶಿಸುವಂತೆ ವಿಶಾಲಹೃದಯರಾಗಲು ಹೇಳಿ, ತಿದ್ದಿದ ಶ್ರೀಯುತರುಗಳಾದ ಶಂಕರ, ರಾಮಾನುಜ ಮತ್ತು ಮಧ್ವಾಚಾರ್ಯರನ್ನು ಹಡೆದ ತಾಯಿ ಈ ಭಾರತಮಾತೆ. ಶಾಂತಿ ಮಹಾಸಾಗರದಂತೆ ವಿಶಾಲವಾದ, ಕೊನೆಯಿಲ್ಲದ ಅಗಾಧವಾದ ಹಿಂದು ಸನಾತನ ಧರ್ಮಗಳು ಸವೆಯದಂತೆ ನೋಡಿಕೊಂಡದ್ದು ಈ ಭಾರತ ದೇಶವು.

ಕುರುಪಾಂಡವರ ಕಥಾನಕ ಕಾರಣವಾಗಿ ಮಾನವಧರ್ಮವನ್ನು ಹೇಳುವ ಮಹಾಭಾರತವು ಮತ್ತು ಸರ್ವಮತಸಹನವನ್ನು ಕಲಿಸುವ 18 ಅಧ್ಯಾಯದ ಭಗವದ್ಗೀತೆಯು ಇವು ನಮ್ಮ ದೇಶದ ಕೊಡುಗೆಗಳು. ಭಗವದ್ಗೀತೆಯು ಪ್ರಪಂಚದ ಎಲ್ಲ ಭಾಷೆಗಳಿಗೆ ಬಾಷಾಂತರ ಹೊಂದಿ ಆ ಜನರಿಗೆ ಸಮಾಧಾನ ಹೇಳುತ್ತಿರುವುದರಿಂದ ನಮ್ಮ ಭಗವದ್ಗೀತೆಯ ಮೌಲ್ಯ ತಿಳಿಯುತ್ತದೆ. ಮಾನವರಿಗೆ ಅವಶ್ಯವಾಗಿರುವ ಆಧ್ಯಾತ್ಮಿಕ ಜ್ಞಾನವನ್ನು ಹೇಳಿಕೊಡುವ ಬಹಳಷ್ಟು ಪವಿತ್ರವಾದ ದಿವ್ಯ ಕ್ಷೇತ್ರಗಳು ಮತ್ತು ತೀರ್ಥಗಳೂ ಇವೆ. ಇವೆಲ್ಲವೂ ಅಗಾಧವಾದ ಸನಾತನ ಧರ್ಮೋನ್ನತಿಯನ್ನು ಸಾವಿರಾರು ವರುಷಗಳಿಂದ ನಾಲ್ಕೂ ಯುಗಗಳಿಂದ ಸಾರಿ ಸಾರಿ ಹೇಳುತ್ತಿವೆ. ಯುಗಧರ್ಮವು ಇತಿಹಾಸದಲ್ಲಿ ಹಲವು ರೀತಿಯ ಏರುಪೇರುಗಳಾದರೂ, ಕಬ್ಬಿನ ಸ್ವಾದದಲ್ಲಿ ಎಂದಿಗೂ ಕಡಿಮೆಯಾಗದು ಎಂದಂತೆ, ನಮ್ಮ ಹಿಂದೂ ಧರ್ಮತತ್ತ್ವಗಳು ಸರ್ವಜನಾಂಗದ ಶ್ರೇಯೋಭಿವೃದ್ಧಿಗಾಗಿ

ಇರುವಂತೆ, ಜಾತಿ ಮತ ಭೇದಗಳು ಇರದಂತೆ ಎಲ್ಲರೂ ಭೂಲೋಕ ವೈಕುಂಠವೆನಿಸಿಕೊಳ್ಳುವ ತಿರುಮಲ ತಿರುಪತಿ ಕ್ಷೇತ್ರದ ದರುಶನ ಪಡೆಯಬೇಕೆಂಬ ಕುತೂಹಲದ ಮನಸ್ಸಿನಿಂದ ಉತ್ಸಾಹಿತರಾಗಿ ದಿನವೂ ಬರುತ್ತಿದ್ದಾರೆ.

ತಿರುಮಲ ಕ್ಷೇತ್ರಗಳನ್ನು ಮತ್ತು ತೀರ್ಥಗಳನ್ನು ಸಂದರ್ಶಿಸಿದ ಭಕ್ತರು ತಿರುಪತಿಗೆ ಬಂದು ಛತ್ರಗಳಲ್ಲಿ ನಿಂತು ಶ್ರೀ ಗೋವಿಂದರಾಜಸ್ವಾಮಿ, ಕೋದಂಡರಾಮಸ್ವಾಮಿ, ತಿರುಚಾನೂರಲ್ಲಿ ಶ್ರೀ ಪದ್ಮಾವತಿ ಅಮ್ಮಾವರು, ಮಂಗಾಪುರಂ ಶ್ರೀ ಕಲ್ಯಾಣ ವೆಂಕಟೇಶ್ವರಸ್ವಾಮಿ, ನಾಗುಲಾಪುರಂ ಶ್ರೀ ವೇದನಾರಾಯಣಸ್ವಾಮಿ, ನಾರಾಯಣಪುರ (ವನ), ಮೊದಲು ಪದ್ಮಾವತಿದೇವಿಯನ್ನು ವಿವಾಹವಾದ ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿ ಈ ಎಲ್ಲ ಆಯಾ ಸ್ಥಳಗಳ ಮಹಿಮಾವಿಶೇಷಗಳನ್ನು ಕೇಳಿ ಕಂಡು ಕಣ್ಣುಹಬ್ಬದಂತೆ ನೋಡಿ ಆನಂದಿಸುತ್ತಾರೆ.

ಮಾನವನು ತನ್ನ ಕಷ್ಟಸುಖಗಳನ್ನು, ದಾರಿದ್ರ್ಯವನ್ನು, ಭೋಗಭಾಗ್ಯಗಳನ್ನು ಎಷ್ಟು ಆನುಭವಿಸಿದರೂ ಕೊನೆಗೆ ತಾನು ಸಂಪಾದಿಸಿದ ಧನಧಾನ್ಯಗಳನ್ನು ಪುತ್ರಪೌತ್ರಾದಿ ಎಲ್ಲ ಸಂಪತ್ತಿಗಿಂತ ಮತ್ತು ತನ್ನ ಹಿಂದೆ ಬರುವಂಥದ್ದು ಹಾಗೂ ಶ್ರೇಷ್ಠವಾದದ್ದು ಅಂದರೆ ಆಧ್ಯಾತ್ಮಿಕ ಜ್ಞಾನಸಂಪತ್ತು ಒಂದೇ. ಅಂಥ ಜ್ಞಾನಸಂಪತ್ತು ಸಂಪಾದಿಸಲು ತೀರ್ಥಕ್ಷೇತ್ರ ಸಂದರ್ಶನಗಳು, ಸಜ್ಜನರ ಸಂಗವು, ಪಾರಮಾರ್ಥಿಕ ಚಿಂತನಗಳೂ ಶಾಂತಿಯುತ ಮನೋನಿಗ್ರಹದ ಜೀವನಕ್ಕೆ ಇವೆಲ್ಲ ಸಾಧನಗಳು.

ಇಂಥ ಸಾಧನಸಂಪತ್ತು ದಯಪಾಲಿಸುವದರಲ್ಲಿ ತಿರುಮಲ ತಿರುಪತಿ ಕ್ಷೇತ್ರಾಧಿಪತಿ ಶ್ರೀ ವೆಂಕಟಾಚಲಪತಿಯು ಎತ್ತಿದ ಕೈ.

ಕಲಿಯುಗದ ಜನರ ಆರ್ತಭಾವವನ್ನು ಕಂಡು ಅವರಿಗೆ ಪಾರುಗಾಣಿಸಲು ವಿಷ್ಣುವು ವೈಕುಂಠವನ್ನು ಬಿಟ್ಟು ವೆಂಕಟಾಚಲ (ಕ್ರೀಡಾದ್ರಿ) ವನ್ನು ಸೇರಿ ಅಲ್ಲಿ ಆನಂದನಿಲಯದ ದಿವ್ಯ ವಿಮಾನದ ಕೆಳಗೆ ಬಂದು ಕುಳಿತಿದ್ದಾನೆ. ಅದಕ್ಕಾಗಿಯೇ ತಿರುಮಲ ಕ್ಷೇತ್ರವು ಭೂಲೋಕ ವೈಕುಂಠ ಎನಿಸಿದೆ.

***ಕೃತೇಽತು ನರಸಿಂಹೋಽಭೂ । ತ್ರೇತಾಯಾಂ ರಘುನಂದನಃ ॥***
***ದ್ವಾಪರೇ ವಾಸುದೇವಶ್ಚ । ಕಲೌ ವೆಂಕಟನಾಯಕಃ ॥***

ಎಂಬ ಶ್ಲೋಕವು ನಮ್ಮ ಭಾವನೆಗಳನ್ನು ಪೂರ್ತಿಯಾಗಿ ನಿರೂಪಿಸುತ್ತಿದೆ. ವೆಂಕಟಾಚಲ ಮಹಾತ್ಮೆಯು ಪುರಾಣಗಳಲ್ಲಿ ಬಹುಪ್ರಸಿದ್ಧವಾಗಿದೆ. ಆ ಭಗವಂತನು ಇಲ್ಲಿವರೆಗೆ ಎಲ್ಲ ಭಕ್ತರನ್ನು ಕರೆಯುತ್ತಿರುವುದು ಮತ್ತು ಸಂತೋಷ ಕೊಡುತ್ತಿರುವುದು ನಿತ್ಯಸತ್ಯವು.

ಕಲಿಯುಗದಲ್ಲಿ ಪಾಪಗಳು ಹೆಚ್ಚಾಗಿ 'ಧರ್ಮಧೇನು'ವು ಒಂದೇ ಪಾದದಿಂದ ನಡೆಯುತ್ತಿದೆ ಎಂಬುದು ಪ್ರಾಜ್ಞರ ವಾಕ್ಯ. ಪಾಪಸಂಚಯದ ಈ ಕಲಿಯುಗದಲ್ಲಿ ರೀತಿ–ನೀತಿಗಳು, ಧರ್ಮ–ಸತ್ಯಗಳು, ದಯಾ–ದಾಕ್ಷಿಣ್ಯಗಳು ಎಲ್ಲಾ ಕೈಗೆಟುಕದಂತಾಗಿ ಅವುಗಳ ವಿಪರೀತಗಳು ಪ್ರಬಲಗೊಂಡು ಜನರು ಕಾಮಕ್ರೋಧಾದಿಗಳಿಗೆ ಸಿಕ್ಕಿ, ಕಕ್ಕಾಬಿಕ್ಕಿಯಾದಾಗ ಭಕ್ತರಕ್ಷಕನಾಗಿರುವ ವೈಕುಂಠವಾಸಿ ಶ್ರೀನಿವಾಸ ಎಲ್ಲ ಪ್ರಜೆಗಳ ಕಲಿಬಾಧೆಗಳಿಂದ ರಕ್ಷಿಸುತ್ತ, ಕಾರ್ಯಕಾರಣಗಳನ್ನು ತಿಳಿಸುತ್ತ, ನಿರ್ವಹಿಸುತ್ತ 'ಹೀಗೆ ವೈಕುಂಠಪುರದ ನಗರದ ಮೂಲಭವನ' ದಲ್ಲಿ ಲಕ್ಷ್ಮೀದೇವಿಯ ಸಹಿತ ಏಕಾಂತದಲ್ಲಿ ಶೇಷತಲ್ಪದ ಉಯ್ಯಾಲೆಯಲ್ಲಿ ತೂಗಾಡುತ್ತ ಸುದೀರ್ಘವಾಗಿ ಯೋಚನೆಯ ಮಾಡುತ್ತ ಯೋಗನಿದ್ದೆಯಲ್ಲಿದ್ದ ಸಮಯದಲ್ಲಿ

ಭೃಗುಮಹರ್ಷಿಗಳು ನಾರದರ ಉಪದೇಶದ ಮೇರೆಗೆ ಮೂರು ಮೂರ್ತಿಗಳ ಮುಕ್ತಿಪ್ರದಾಯಕರ 'ಸತ್ತ್ವಗುಣಕ್ಕೆ ಪ್ರಧಾನ ಯಾರು' ಎಂದು ಪರೀಕ್ಷೆಯ ನಿಮಿತ್ತ ವೆಂಕಟಾಚಲ ಮಹಾತ್ಮೆಗೆ ಪ್ರಸ್ತಾವನೆ ಹಾಕುತ್ತಾರೆ.

## 4. ಶ್ರೀ ವೆಂಕಟಾಚಲ ಮಹಾತ್ಮೆ

*ಕೃತೇ ವೃಷಾದ್ರಿ ವಕ್ಷ್ಯಂತಿ । ತ್ರೇತಾಯಾ ಅಂಜನಾಚಲಮ್ ॥*
*ದ್ವಾಪರೇ ಶೇಷಶೈಲಂ ತು । ಕಲೌ ವೆಂಕಟಾಚಲಮ್ ॥*
*ನಾಮಾನಿ ಯುಗಭೇದೇನ । ಶೈಲಸ್ಯಾಸ್ಯ ಭವಂತಿ ಹಿ ॥*

ಈ ಪವಿತ್ರವಾದ ವೆಂಕಟಾಚಲ ವೃತ್ತಾಂತವು ವರಾಹ ಪುರಾಣದಲ್ಲಿ ಮತ್ತು ಭವಿಷ್ಯೋತ್ತರ ಪುರಾಣದಲ್ಲಿ ವಿವರವಾಗಿ ಹೇಳಲ್ಪಟ್ಟಿದೆ. ಆ ಪುರಾಣಗಳು ಮಾನವನ ಸುಖಮಯ ಜೀವನಕ್ಕಾಗಿಯೇ ರಚಿಸಲ್ಪಟ್ಟಿವೆ ಎಂದರೆ ಅತಿಶಯೋಕ್ತಿಯೇನಲ್ಲ. ಅವು ಮಾನವನ ಈ ಕಲಿಕಾಲದ ಭ್ರಮೆ ಅಥವಾ ಮೋಹದಿಂದ ತಪ್ಪಿಸುತ್ತವೆ. ಮನುವಿನಿಂದಲೂ ಆದಿಯಾಗಿ ಧರ್ಮವನ್ನು ಪಾಲಿಸಿಕೊಂಡು ಬರುವ ಈ ಪವಿತ್ರಭಾರತ ದೇಶವು 'ಪುಣ್ಯಸ್ಥಳ' ಎಂಬ ಪ್ರಸಿದ್ಧ ನಿಲುವಿಗೆ ಕಾರಣವಾಗುವ ಸಂಸ್ಕಾರಗಳ ಬಿಂಬಿಸುವ ಸ್ವಚ್ಛ ದರ್ಪಣಗಳೇ ಈ ಪುರಾಣಗಳು. ವೇದವೇದಾಂಗ ಎಲ್ಲ ಶಾಸ್ತ್ರಗಳ ಭಾವನೆಗಳನ್ನು ಬೋಧಿಸುವ ಮಹಾಮಹೋಪಾಧ್ಯಾಯರೇ ಸೂತಮಹರ್ಷಿಗಳು. ಇವರು ಮಾನವ ಕಲ್ಯಾಣಕ್ಕಾಗಿ ಮಹಾಮುನಿಗಳಾದ ಶೌನಕಾದಿ ಮಹಾತ್ಮರಿಗೆ ಪುರಾಣ ಕಥೆಗಳನ್ನು ಹೇಳುವ ನೆಪದಲ್ಲಿ ನಮಗೆ ಜ್ಞಾನೋದಯ ಆಗುವಂತೆ ಮಾಡಿದ್ದಾರೆ. ಅಂಥ ಮಹಾತ್ಮರಿಗೆ ಲೋಕವೇ ಒಂದು ಕುಟುಂಬವಲ್ಲವೇ! **ವಸುಧೈವ ಕುಟುಂಬಕಮ್.**

ಆ ಕುಟುಂಬ ರಕ್ಷಣೆಯೇ ಅವರ ಧ್ಯೇಯ. ಈ ಆಶಯ ಸಿದ್ಧಿಗಾಗಿ ಮಹಾತ್ಮರು ಪುರಾಣ ಶಾಸ್ತ್ರ, ಕಾವ್ಯ ಮತ್ತು ನಾಟಕಗಳನ್ನು ರಚಿಸಿದ್ದಾರೆ.

ಕೃತ, ತ್ರೇತಾ, ದ್ವಾಪರ, ಕಲಿ (ನಾಲ್ಕು) ಯುಗಗಳ 43,20,000 ವರುಷಗಳ ಪ್ರಮಾಣವು 'ಮಹಾಯುಗ' ಎಂದು ಹೇಳಲ್ಪಡುತ್ತದೆ. ಆಯಾ ಯುಗಗಳಲ್ಲಿ ವೈಕುಂಠದಿಂದ ಭೂಲೋಕಕ್ಕೆ ಗರುಡನು ತಂದ ಕ್ರೀಡಾದ್ರಿಗೆ ಪ್ರಸಿದ್ಧವಾದ ಸಾರ್ಥಕವಾದಂಥ ವೃಷಭಾದ್ರಿ, ಅಂಜನಾದ್ರಿ, ಶೇಷಾದ್ರಿ, ವೆಂಕಟಾದ್ರಿ ಅಲ್ಲದೇ ಗರುಡಾದ್ರಿ ಎಂಬ ಹೆಸರುಗಳು ಸಂದುವು.

ಕೃತಯುಗದ ವೃಷಭಾದ್ರಿಯೇ ಈಗ ವೃಷಭಾಚಲ ಎಂದು ಕರೆಯಲ್ಪಡುತ್ತದೆ.

## ವೃಷಭಾದ್ರಿ ವೃತ್ತಾಂತ

ಲೀಲಾವಿನೋದಿಯಾಗಿರುವ ಸೃಷ್ಟಿಕರ್ತನು ತನ್ನ ವಿಲಾಸ ಹೇತುವಿನಿಂದ ವೈಕುಂಠವನ್ನು ಬಿಟ್ಟು ಮಹಾಮೇರು ಪರ್ವತದ ಪುತ್ರನಾಗಿರುವ ಕ್ರೀಡಾದ್ರಿ ಬೆಟ್ಟವನ್ನು ಎಲ್ಲ ಮಹಿಮಾರೂಪಗಳಿಂದ, ಸಕಲ ಪುಷ್ಪ ಫಲ ಲತೆ ಗುಲ್ಮ ಮುಂತಾದ ವೃಕ್ಷಗಳಿಂದ, ಹಳ್ಳಗಳಿಂದ, ಕೆರೆಗಳಿಂದ ಒಪ್ಪವಾಗಿ ನಿರ್ಮಿಸಿಕೊಂಡನು. ಆ ಬೆಟ್ಟವು ವಿವಿಧ ಮೃಗಗಳ ಧ್ವನಿಗಳು, ಪಕ್ಷಿಗಳ ಮಧುರ ಕೂಗುಗಳು, ನವಿಲುಗಳ ನಾಟ್ಯಗಳು ಇವೆಲ್ಲವುಗಳನ್ನು ನೋಡುವುದು ಕೇಳುವುದು ಆನಂದದಾಯಕವಾಗಿತ್ತು. ಆಯಾ ಋತುಗಳಿಗೆ ಅನುಸಾರವಾಗಿ ಬೆಟ್ಟವು ಪುಷ್ಪಫಲಗಳಿಂದ ಮನೋಹರವಾಗಿ ಕಾಣುತ್ತಿತ್ತು. ವಿವಿಧ ಸುಗಂಧಯುಕ್ತವಾದ ತಣ್ಣನೆಯ ಗಾಳಿಗೆ

ಮೈವೊಡ್ಡಿ ಮಹಾವಿಷ್ಣುವು ಲಕ್ಷ್ಮೀದೇವಿಯೊಂದಿಗೆ ಸರಸ ಸಲ್ಲಾಪಗಳಿಂದ ವಿಹಾರ ಮಾಡುತ್ತಿದ್ದನು. ಆ ಶ್ರೇಷ್ಠ ದಂಪತಿಗಳ ಉಲ್ಲಾಸ ನೋಡಿ ಕ್ರೀಡಾದ್ರಿ ಬೆಟ್ಟವು ತನ್ನ ಹೆಸರು ಸಾರ್ಥಕವಾದ ನಾಮಧ್ಯೇಯವಾದ ಆನಂದಾದ್ರಿಯಾಗಿ ಒಪ್ಪಿತ್ತು.

ಲೋಕಕಲ್ಯಾಣವನ್ನು ಬಯಸಿದ ಆ ಪರಮಾತ್ಮನು ಭಕ್ತರ ರಕ್ಷಣಾರ್ಥವಾಗಿ ಭೂಲೋಕದಲ್ಲಿ ಅವತರಿಸಿ ವೈಕುಂಠಕ್ರೀಡಾದ್ರಿಯನ್ನು ಆನಂದಾದ್ರಿಯಾಗಿ, ಭೂಲೋಕದಲ್ಲಿ ಭರತದೇಶದಲ್ಲಿ ಪೂರ್ವ ಸಮುದ್ರ ತೀರಕ್ಕೆ ಪಶ್ಚಿಮದಲ್ಲಿ, ಸುವರ್ಣಮುಖಿನದಿಗೆ ಉತ್ತರದ ದಿಶೆಗೆ ಇರುವಂತೆ ನೆಲವನ್ನು ಸರಿಪಡಿಸಲು ಗರುಡನನ್ನು ನೇಮಿಸಿದನು. ಆಗ ಗರುಡನು ಸ್ವಾಮಿಯ ಆಜ್ಞೆಯ ಪ್ರಕಾರ ಆ ಕ್ಷಣದಲ್ಲಿಯೇ ತಯಾರಿಸಿದನು.

ಕೃತಯುಗದಲ್ಲಿ ವೃಷಭ ಎಂಬ ರಾಕ್ಷಸನು ಕ್ರೀಡಾದ್ರಿ ಬೆಟ್ಟ ಸೇರಿ ದಿನನಿತ್ಯ ಜಲಾಶಯಗಳಲ್ಲಿ ಸ್ನಾನ ಮಾಡಿ ತನ್ನ ಇಷ್ಟದೇವತೆಯಾದ ನರಸಿಂಹ ಸಾಲಿಗ್ರಾಮವನ್ನು ಪೂಜಿಸಿ ತಪಸ್ಸನ್ನು ಆಚರಿಸುತ್ತಿದ್ದನು. ಆದರೆ ಹುಟ್ಟುಗುಣದಿಂದ ಬಂದ ಅಸುರಗುಣವನ್ನು ಬಿಡದೇ ಆ ಪರ್ವತ ಪರಿಸರದಲ್ಲಿ ತಪಸ್ಸನ್ನು ಆಚರಿಸುತ್ತಿರುವ ಇತರ ಮುನಿಗಳಿಗೆ ಬಾಧೆ ಕೊಡುವುದನ್ನು ಬಿಡಲಿಲ್ಲ. ಆ ವೃಷಭನ ಬಾಧೆಗಳನ್ನು ತಾಳಲಾರದೆ ಮುನೀಶ್ವರೆಲ್ಲರೂ ವಿಷ್ಣುವನ್ನು ಕುರಿತು ತಪಸ್ಸು ಆಚರಿಸಿ, ಪ್ರತ್ಯಕ್ಷನಾದ ಆ ವಿಷ್ಣುವಿಗೆ ತಮ್ಮ ಕಷ್ಟಗಳ ಬಗ್ಗೆ ನಿವೇದಿಸಿಕೊಂಡರು. ಅದೆಲ್ಲ ಕೇಳಿ ವಿಷ್ಣುವು ವೃಷಭನಿಂದ ನಿತ್ಯ ಪೂಜೆಗೊಳ್ಳುತ್ತಿರುವ ನಾರಸಿಂಹ ಸಾಲಿಗ್ರಾಮದಲ್ಲಿ ತನ್ನ ದಿವ್ಯರೂಪವನ್ನು ತೋರಿಸಿದನು. ವೃಷಭನು ಆ ದಿವ್ಯರೂಪವನ್ನು ನೋಡಿ, ಸಂತೋಷಗೊಂಡು, ನಮಸ್ಕಾರಮಾಡಿ ಅತಿಶಯದ

ಸ್ತುತಿಮಾಡಿದನು. ಆತನ ಭಕ್ತಿ ಸ್ತುತಿಗಳಿಗೆ ಸಂತುಷ್ಟನಾಗಿ ವಿಷ್ಣುವು ವೃಷಭನಿಗೆ 'ವರಗಳ ಕೋರಿಕೊ' ಎಂದು ಹೇಳಿದನು. ಹಿಂದೆಯೇ ವೃಷಭನು ತನ್ನ ಜೊತೆಗೆ 'ಯುದ್ಧಕ್ಕೆ ಬಾ' ಎಂದು ಕೋರಿದನು. ವಿಷ್ಣುವು ಆತನ ಕೋರಿಕೆಯನ್ನು ನೆರವೇರಿಸುತ್ತ ವೃಷಭನ ಬಲಪರಾಕ್ರಮಗಳಿಗಿಂತ ಹೆಚ್ಚಿನ ಶಕ್ತಿಯನ್ನು ತೋರಿಸಿದನು. ವೃಷಭನು ಶ್ರೀಹರಿಯ ಬಲ ಮತ್ತು ಶೌರ್ಯಗಳಿಗೆ ಮೆಚ್ಚಿ ಸಂತೋಷಗೊಂಡು ತನ್ನ ಇನ್ನೊಂದು ವರವನ್ನು ಬೇಡಿಕೊಂಡನು. 'ಸ್ವಾಮಿ, ನನ್ನನ್ನು ತಮ್ಮ ದಿವ್ಯ ಚಕ್ರಾಯುಧದಿಂದ ಖಂಡತುಂಡುಮಾಡಿ, ಮೋಕ್ಷ ಕೊಟ್ಟು, ಈ ಪರ್ವತಕ್ಕೆ ಚಿರಸ್ಥಾಯಿಯಾಗಿ ನನ್ನ ಹೆಸರು ಇಟ್ಟು ಅನುಗ್ರಹಿಸಬೇಕು' ಎಂದು ಪ್ರಾರ್ಥಿಸಿದನು. ಅವನ ಕೋರಿಕೆಯಂತೆ ಮೊದಲಿನ ಆನಂದಾದ್ರಿಗೆ 'ವೃಷಭಾದ್ರಿ' ಎಂದು ಹೆಸರು ಪಡೆದದ್ದು ಇತಿಹಾಸ. ಈ ರೀತಿಯಾಗಿ ವೈಕುಂಠದ ಕ್ರೀಡಾದ್ರಿಯು ಭೂಲೋಕದಲ್ಲಿಯ ಆನಂದಾದ್ರಿಗೆ ವೃಷಭನ ಕಾರಣದಿಂದ ವೃಷಭಾದ್ರಿ (ವೃಷಭಾಚಲ) ಯಾಯಿತು.

ತ್ರೇತಾಯುಗದಲ್ಲಿ ಅಂಜನಾದೇವಿಯು ವಾಯುದೇವರ ಕುರಿತು ಆ ವೃಷಭಾದ್ರಿಯಲ್ಲಿ ತಪವನ್ನು ಆಚರಿಸಿ ದೇವರ ಪ್ರಸಾದದಿಂದ ಅಜೇಯನಾದ ಆಂಜನೇಯ ಎಂಬ ಪುತ್ರನನ್ನು ಪಡೆದಳು. ಹೀಗೆ ಅಂಜನಾದೇವಿಯು ತಪವನ್ನಾಚರಿಸಿ ಸಿದ್ಧಿಪಡೆದ ಆ ಪರ್ವತವು ಮುಂದೆ 'ಅಂಜನಾದ್ರಿ' (ಅಂಜನಾಚಲ) ಎಂಬ ಹೆಸರಿನಿಂದ ಪ್ರಖ್ಯಾತವಾಯಿತು.

ದ್ವಾಪರ ಯುಗದಲ್ಲಿ ಆನಂದಾದ್ರಿಗೆ (ಶೇಷಾದ್ರಿ) ಶೇಷಾಚಲ ಎಂಬ ಹೆಸರು ಬರಲು ಒಂದು ವಿಶೇಷ ಐತಿಹ್ಯವಿದೆ. ಶ್ರೀ ಮಹಾವಿಷ್ಣುವು ತನ್ನ 'ವೈಕುಂಠಪುರದ ಆ ಮೂಲ ಭವನ'ದಲ್ಲಿ

ರಮೆಯೊಡನೆ ವಿಲಾಸದಲ್ಲಿ ಇದ್ದ ಸಮಯದಲ್ಲಿ ಭವನದ ದ್ವಾರದಲ್ಲಿ ಆದಿಶೇಷನನ್ನು ಕಾವಲು ಇಟ್ಟನು. ಆಗ ಮಲಯಾಚಲಪತಿಯಾದ ವಾಯುದೇವನು ಶ್ರೀಪತಿಯ ದರ್ಶನಾರ್ಥವಾಗಿ ವೈಕುಂಠಕ್ಕೆ ಬಂದು, ನಗರದ ಅಂತಃಪುರದಲ್ಲಿನ ಮೂಲಸೌಧ ಭವನವನ್ನು ಪ್ರವೇಶಿಸುತ್ತಿರುವಾಗ ದ್ವಾರಪಾಲಕನಾದ ಶೇಷನು ವಾಯುದೇವನನ್ನು ಒಳಗೆ ಹೋಗಲು ತಡೆದನು. ಮಹಾಬಲವಂತನೆಂಬ ಅಹಂಕಾರದಿಂದ ವಾಯುದೇವನು ಶೇಷನ ಮಾತು ತಿರಸ್ಕರಿಸಿ ತನಗೆ ಮುಖ್ಯ ಕಾರ್ಯವಿದೆ ಎಂದು ಹೇಳಿ ಮುಖ್ಯ ದ್ವಾರದ ಹತ್ತಿರ ಹೋದನು. ಆಗ ಶೇಷನು ಶ್ರೀಹರಿಯ 'ಆಜ್ಞೆ'ಯನ್ನು ತನ್ನ ಕರ್ತವ್ಯವನ್ನು ಹೇಳುತ್ತ ಕೈಲಿದ್ದ ಧರ್ಮದಂಡದಿಂದ ಆತನನ್ನು ಸಿಂಹದ್ವಾರವನ್ನು ದಾಟದಂತೆ ಅಡ್ಡಿಯಾದನು. ಆಗ ವಾಯುದೇವನು ತೀವ್ರ ಕೋಪಗೊಂಡು 'ಮೊದಲು ಸನಕ ಸನಂದಾದಿಗಳನ್ನು ಅಡ್ಡಿಪಡಿಸಿ ಶಾಪಗ್ರಸ್ತರಾದ ಜಯವಿಜಯರ ಕಥೆ ಮರೆತೆಯಾ? ಈಗ ನನ್ನನ್ನು ಉದ್ರೇಕಿಸಬೇಡ' ಎಂದು ಹೂಂಕಾರ ಮಾಡುತ್ತ ಪ್ರವೇಶ ದ್ವಾರದ ಕಡೆಗೆ ಹೆಜ್ಜೆ ಹಾಕಿದನು. ಆದರೆ ಶೇಷನು ಸ್ವಾಮಿಯ ಆಜ್ಞೆಯನ್ನು ಪಾಲಿಸಲು ವಾಯುದೇವನ ಪ್ರಯತ್ನವನ್ನು ವಿಫಲವಾಗಿಸಿದರೂ ವಾಯುದೇವನು ತನ್ನ ಪಟ್ಟು ಬಿಡದೇ ಹೂಂಕರಿಸುತ್ತ ಮುಂದೆ ಮುಂದೆ ಸಾಗಿದನು. ಪ್ರಭುಗಳ ಆಜ್ಞೆಯನ್ನು ಶಿರಸಾ ವಹಿಸಿ ಪಾಲಿಸುವುದು ಸೇವಕನ ಧರ್ಮವು ಎಂದು ಎಷ್ಟು ಹೇಳಿದರೂ ವಾಯುದೇವನು ತನ್ನ ಬಲದ ಗರ್ವದಿಂದ ಶೇಷನ ಮಾತುಗಳನ್ನು ತಿರಸ್ಕರಿಸಿ ಬಲಪ್ರಯೋಗಕ್ಕೆ ಸಿದ್ಧನಾದನು.

ಮುಂದೆ ವಾಯುದೇವನು ಮತ್ತು ಶೇಷನು ಸಮಬಲದೊಂದಿಗೆ ಹೋರಾಟ ಮಾಡಿದರು. ಆ ಹೋರಾಟವನ್ನು

ಶ್ರೀದೇವಿಯು ನೋಡಿ ತನ್ನ ಪ್ರಿಯನಿಗೆ ಹೇಳಿದಳು. ಹಿಂದೆಯೇ ವಿಷ್ಣುಮೂರ್ತಿಯು ಎಲ್ಲವನ್ನು ತಿಳಿದುಕೊಂಡು ವಾಯುದೇವನ ಗರ್ವಭಂಗಕ್ಕೆ ಇದು ಉಚಿತ ಸಮಯ ಎಂದು ಭಾವಿಸಿ ಒಳಗಿಂದಲೇ 'ಶೇಷನೇ, ಈ ಗದ್ದಲ ಏನು?' ಎಂದು ಕೇಳಿದನು. ಅದಕ್ಕೆ ಉತ್ತರ ಕೊಡುತ್ತಿರುವಾಗ ಶ್ರೀಹರಿಯು ಮೆಲ್ಲಗೆ ದ್ವಾರದ ಸಮೀಪ ಬಂದನು. ವಾಯುದೇವನು ಭಗವಂತನನ್ನು ಕಂಡಕೂಡಲೆ ಹತ್ತಿರ ಹೋಗಿ ನಿಂತು ನಮಸ್ಕಾರ ಮಾಡಿ ಬಹಳಷ್ಟು ರೀತಿಯಲ್ಲಿ ಸ್ತುತಿಸುತ್ತ ಕೈಗಳನ್ನು ಕಟ್ಟಿಕೊಂಡು ವಿನಯದಿಂದ ತಲೆ ತಗ್ಗಿಸಿ ನಿಂತುಬಿಟ್ಟನು. ಆಗ ದೇವರು ವಾಯುದೇವನಿಗೆ 'ಬಲವಂತನೆಂದುಕೊಂಡ ಶೇಷನ ಜೊತೆಗೆ ನಿನ್ನ ಈ ಕಾದಾಟವೇಕೆ?' ಎಂದು ಹೇಳಿದಾಗ ಕೂಡಲೆ ಆದಿಶೇಷನು ನಾರಾಯಣನು ಹೇಳಿದ್ದನ್ನು ಕೇಳಿ ಗರ್ವದಿಂದ ಉದ್ರೇಕಗೊಂಡು 'ಜ್ಞಾನ ವೈರಾಗ್ಯ ಸಂಪದದಲ್ಲಿ ತನಗೆ ಈ ಏಳು ಲೋಕಗಳಲ್ಲಿ ಯಾರು ಸರಿಸಮರಿಲ್ಲ' ಎಂದನು. ಆಗ ವೈಕುಂಠವಾಸನು ಅವರಿಬ್ಬರ ಗರ್ವಶಮನಕ್ಕೆ ಇದು ಒಳ್ಳೆಯ ಸಮಯವೆಂದು ಭಾವಿಸಿ 'ಪೌರುಷವು ಕಾರ್ಯರೂಪಕ್ಕೆ ಬರುವವರೆಗೆ ವ್ಯಕ್ತವಾಗದು. ಅದಕ್ಕೆ ನಿಮ್ಮಿಬ್ಬರ ಬಲಗಳನ್ನು ತೋರಿಸುವದಕ್ಕಾಗಿ ಒಂದು ಮಾರ್ಗವಿದೆ. ಭೂಲೋಕದಲ್ಲಿ ನಮ್ಮ ಕ್ರೀಡಾದ್ರಿಯು ಆನಂದಾದ್ರಿ, ವೃಷಭಾದ್ರಿ, ಮತ್ತು ಅಂಜನಾದ್ರಿ ಎಂಬ ಹೆಸರುಗಳಿಂದ ವ್ಯವಹರಿಸಲ್ಪಡುತ್ತಿದೆ. ಶೇಷನೇ! ನೀನು ಆ ಬೆಟ್ಟವನ್ನು ಸುತ್ತುಗಟ್ಟಿ ಬಲವಾಗಿ ಹಿಡಿದುಕೊಳ್ಳಬೇಕು. ವಾಯುದೇವನು ನೀನು ಗಟ್ಟಿಯಾಗಿ ಹಿಡಿದ ಬೆಟ್ಟವನ್ನು ಅಲ್ಲಾಡಿಸಬೇಕು' ಎಂದು ಹೇಳಿದನು. ಇಷ್ಟು ಕೇಳಿಸಿಕೊಂಡ ಕೂಡಲೆ ಶೇಷನು ಭೂಲೋಕಕ್ಕೆ ಹೋಗಿ ಮೂರು ಯೋಜನ ಅಗಲ ಮೂವತ್ತು ಯೋಜನ ಉದ್ದವಾಗಿ ತನ್ನ ಶೇಷರೂಪವನ್ನು ಹೆಚ್ಚಿಸಿ ಆ ಬೆಟ್ಟಕ್ಕೆ ಸುತ್ತಿಕೊಂಡುಬಿಟ್ಟನು.

ವಾಯುದೇವನು ಕೂಡ ತನ್ನ ಪ್ರಭಂಜನ ರೂಪವನ್ನು ಹೆಚ್ಚಿಸಿಕೊಂಡು ಅಮಿತೋತ್ಸಾಹದಿಂದ ಆ ಬೆಟ್ಟವನ್ನು ಶೇಷನ ಸಹಿತ ಅಲ್ಲಾಡಿಸಲು ಪ್ರಯತ್ನಿಸಿ ವಿಫಲನಾದನು. ಬ್ರಹ್ಮಾದಿ ದೇವತೆಗಳು ಮಹರ್ಷಿಗಳು ಈ ವಿಚಿತ್ರ ಪಂದ್ಯದಲ್ಲಿ ಯಾರು ಜಯಗಳಿಸುತ್ತಾರೊ ಎಂದು ರೆಪ್ಪೆ ಬಡಿಯದೇ ಕಣ್ಣುತೆರೆದುಕೊಂಡು ನೋಡುತ್ತಿದ್ದರು.

ಹೀಗೆ ಶೇಷವಾಯುಗಳೀರ್ವರು ಬಲಪ್ರದರ್ಶನದಲ್ಲಿ ಪಟ್ಟುಬಿಡದೇ ರೋಷವು ಹೆಚ್ಚುಹೆಚ್ಚಾಗಿ ಹೂಂಕಾರ ಝೇಂಕಾರಗಳಿಂದ ಹೆಣಗಾಡುತ್ತಿದ್ದರು. ಯಾರು ಸೋಲುವಂತಿಲ್ಲ ಎಂದು ತಿಳಿದು ಬ್ರಹ್ಮದೇವರು ವಾಯುದೇವನಿಗೆ ತನ್ನ ಪ್ರಯತ್ನ ನಿಲ್ಲಿಸಬೇಕೆಂದು ಹೇಳಿದನು. ಆದರೂ ವಾಯುದೇವನು ತನ್ನ ಪಟ್ಟು ಬಿಡಲಿಲ್ಲ. ಆಗ ದೇವತೆಗಳು ಎಲ್ಲರೂ ಶೇಷನಿಗೆ ವಿರಾಮ ಮಾಡಲು ಹೇಳಿದಾಗ ಅವರ ಮನದಿಂಗಿತವನ್ನು ಗ್ರಹಿಸಿ ಸ್ವಲ್ಪ ಪಟ್ಟು ಸಡಲಿಸಿದ ಕೂಡಲೆ ವಾಯುದೇವನು ಆ ಪರ್ವತವನ್ನು ಗಟ್ಟಿಯಾಗಿ ಹಿಡಿದು ಎತ್ತಿ ಮೇಲಕ್ಕೆ ಎಸೆದನು. ಆಗ ಮಹಾಮೇರುವು ತನಗೆ ಪುತ್ರಭಿಕ್ಷೆ ಕೊಡಬೇಕೆಂದು ವಾಯುದೇವನಿಗೆ ಪ್ರಾರ್ಥಿಸಿದಾಗ ಆ ಪ್ರಾರ್ಥನೆಗೆ ಬೆಲೆಕೊಟ್ಟು ಅವರು ಶೇಷಯುಕ್ತ ಕ್ರೀಡಾದಿ ಬೆಟ್ಟವನ್ನು ಸ್ವರ್ಣಮುಖಿ ನದಿತೀರದ ಉತ್ತರ ದಿಕ್ಕಿಗೆ ಮೊದಲಿದ್ದ ಸ್ಥಳದಲ್ಲಿಯೇ ಇಟ್ಟುಬಿಟ್ಟನು. ಆಗ ಬ್ರಹ್ಮಾದಿದೇವತೆಗಳು ನಾರಾಯಣನ ಅಭಿಪ್ರಾಯದಂತೆ ಕ್ರೀಡಾದ್ರಿಯನ್ನು ಸ್ವರ್ಣಮುಖಿ ನದಿತೀರದ ಉತ್ತರ ಭಾಗದಲ್ಲಿ ಇಡುವದಕ್ಕೆ ಶೇಷವಾಯುಗಳಲ್ಲಿ ವಿವಾದ ಹುಟ್ಟಿದೆ ಎಂಬ ಕಾರಣ ನಾರಾಯಣನ ಭಾವಿಕಾರ್ಯಕ್ಕೆ ತಕ್ಕಂತೆ ಶೇಷಯುತ ಕ್ರೀಡಾದ್ರಿಯನ್ನು ಶೇಷಾಚಲ ಎಂದೇ ಪ್ರಸಿದ್ಧವಾಗಿ ನಂತರದಲ್ಲಿ

ಶೇಷ ವಾಯು ಈರ್ವರು ತಮ್ಮ ತಮ್ಮ ವಾದವಿವಾದಗಳನ್ನು ಮರೆತು, ಲೋಕ ಕಲ್ಯಾಣಕ್ಕಾಗಿ ತಮ್ಮ ಹಠವನ್ನು ಬಿಟ್ಟು, ಮಿತ್ರಭಾವದಿಂದ ಒಬ್ಬರನ್ನೊಬ್ಬರು ಸಮಾಧಾನ ಮಾಡಿಕೊಂಡರು. ಹಾಗಾಗಿ 'ಶೇಷಾಚಲ' (ಶೇಷಾದ್ರಿ) ಎಂಬ ಹೆಸರು ಸಾರ್ಥಕವಾದಂತೆ ಪರ್ವತಶ್ರೇಣಿಯು ನೆಲ್ಲೂರು ಜಿಲ್ಲೆಯ ರಾವೂರು ತಾಲೂಕಾದ ಪೆಂಚಲಕೋನದ ಮೇಲಿನ ಸ್ಥಳದಿಂದ ಮುಂದೆ ಸರ್ಪಾಕಾರದಲ್ಲಿ ತಿರುಮಲವರೆಗೆ ವ್ಯಾಪಿಸಿ ತಿರುಮಲದ ಮೊದಲ ಗಾಳಿಗೋಪುರಂ ಸಮೀಪದಲ್ಲಿ ಸರ್ಪದ ಹೆಡೆ ಮೇಲೆತ್ತಿ ನಿಂತಂತೆ ಇರುವುದು ಗಮನಾರ್ಹ ವಿಷಯವು.

ಭೂಭಾರವನ್ನು ತಗ್ಗಿಸುವದಕ್ಕಾಗಿ ದ್ವಾಪರಯುಗದಲ್ಲಿ ಭಗವಂತನು ಶ್ರೀಕೃಷ್ಣನಾಗಿ ಆವತಾರ ಮಾಡಿದ. ಭಗವಂತನ ಆ ಅವತಾರದ ಸಮಾಪ್ತಿಯಿಂದಲೇ ಕಲಿಯುಗ ಪ್ರಾರಂಭವಾಯಿತು. ಕಲುಷವಾದ ಕಲಿಯುಗದಲ್ಲಿ ಭಕ್ತರಕ್ಷಣ ಮಾಡುವ ಮನಸ್ಸಿನಿಂದ ವೈಕುಂಠವಾಸಿಯಾದ ಶ್ರೀಹರಿಯು ವೆಂಕಟಾಚಲಪತಿ ಎಂಬ ದಿವ್ಯನಾಮದಿಂದ ಕ್ರೀಡಾದ್ರಿಗೆ ಹೋಗಿ, ಪೂರ್ವದಲ್ಲಿ ವೇದವತಿ ಪ್ರಾರ್ಥನೆಯನ್ನು ನೆರವೇರಿಸಲು ಪದ್ಮಾವತಿಯಾಗಿ ಜನ್ಮಪಡೆದ ಅವಳನ್ನು ವಿವಾಹ ಮಾಡಿಕೊಂಡು ತಿರುಮಲವನ್ನು ಭೂಲೋಕ ವೈಕುಂಠವನ್ನಾಗಿಸುವ ಪುರಾಣ ವಾಕ್ಯಗಳು ನಿತ್ಯಸತ್ಯಗಳಾಗಿ ಈಚಿನ ಭಕ್ತರು ತಿಳಿದಿರುವುದು ಅತಿಶಯೋಕ್ತಿಯೇನಲ್ಲ.

ಆ ಕ್ರೀಡಾದ್ರಿಯೇ ಶ್ರೀ ವೆಂಕಟೇಶ್ವರನ ಆನಂದನಿಲಯವಾಗಿ ಮುಂದೆ ಕಲಿಯುಗದಲ್ಲಿ ವೆಂಕಟಾಚಲ ಎಂಬ ಹೆಸರಿನಿಂದ ಕರೆಯಲ್ಪಡುತ್ತಿದೆ. ಅಲ್ಲಿ ವೆಂಕಟೇಶ್ವರನು ವೆಂಕಟಾಚಲಪತಿಯಾಗಿ ನಿಂತಿದ್ದು ಎಲ್ಲರಿಗೂ ತಿಳಿದ ವಿಷಯವೇ!

ವೇಂ+ಕಟ+ಆದ್ರಿ ಅಂದರೆ ಪಾಪಗಳನ್ನು ಪರಿಹರಿಸುವ ಪರ್ವತವೆಂಬ ಅರ್ಥ ಹೊಂದಿದೆ. 'ವೇಂ' ಶಬ್ದವು ಒಂದು ಅಮೃತ ಬೀಜಾಕ್ಷರ, ಕಟವು ಎಂದರೆ ಬಂಗಾರ ಎಂಬ ಅರ್ಥದಲ್ಲಿ ಅಮೃತ ಐಶ್ವರ್ಯಗಳಿಂದ ಕೂಡಿದ ಈ ವೆಂಕಟಾಚಲವು ಅಂದರೆ ತಿರುಪತಿ ಬೆಟ್ಟ ಎಂಬುದು ಹಿರಿಯರ ಅಭಿಪ್ರಾಯವು. ಮಾನವರಲ್ಲಿ ವೆಂಕಟಾಚಲ ದರ್ಶನ ಮಾತ್ರದಿಂದ ತಮ್ಮ ಎಲ್ಲ ಪಾಪಗಳು ನಶಿಸಿ ಹೋಗಿ ಇಹಪರ ಸುಖಗಳನ್ನು ಹೊಂದುತ್ತಾರೆ ಎಂಬುದು ನಮ್ಮ ಪೂರ್ವಿಕರ ಬಲವಾದ ನಂಬಿಕೆ. ಆ ನಂಬಿಕೆಯು ಇಲ್ಲಿಯವರೆಗೂ ಭಾರತೀಯರಲ್ಲಿ ಅಷ್ಟೇ ಅಲ್ಲ ವಿದೇಶದವರಲ್ಲಿಯೂ ಸ್ಥಿರವಾಗಿದ್ದ ಕಾರಣ ಎಲ್ಲರೂ ವೆಂಕಟಾಚಲ ಯಾತ್ರೆ ಕೈಗೊಳ್ಳುತ್ತಾರೆ. ಈ ಬೆಟ್ಟವು ಹಲವು ಶ್ರೇಣಿಗಳಲ್ಲಿ ಇದೆ. ಮುಖ್ಯವಾಗಿ ಅದು ಸಪ್ತಗಿರಿ ಎಂದು ಪ್ರಸಿದ್ಧವಾಗಿದೆಯೆಂದು ಅಲ್ಲದೇ ವರಾಹ ಪುರಾಣವು ಹೇಳಿದಂತೆ ಹಲವಾರು ಸಾರ್ಥಕ ನಾಮಗಳನ್ನು ಹೊಂದಿದೆ.

ತಿರುಮಲ ಬೆಟ್ಟದ ದರ್ಶನದಿಂದ ಭಕ್ತರು ಬಿನ್ನವಿಸಿಕೊಂಡ ಎಲ್ಲ ಕಾರ್ಯಗಳು ಫಲಪ್ರದವಾಗುತ್ತವೆ ಅದಕ್ಕಾಗಿ 'ಚಿಂತಾಮಣಿ' ಎಂದು, ದರ್ಶನ ಮಾತ್ರದಿಂದ ಜ್ಞಾನಪ್ರಾಪ್ತಿ ಆಗುವುದಾಗಿ 'ಜ್ಞಾನಾದ್ರಿ' ಎಂದು, ಸಮಸ್ತ ತೀರ್ಥಗಳನ್ನು ಹೊಂದಿದ್ದಕ್ಕಾಗಿ 'ತೀರ್ಥಾದ್ರಿ' ಎಂದು, ಪುಣ್ಯದಾಯಕವಾದ ಸ್ವಾಮಿಪುಷ್ಕರಿಣಿ ಇರುವುದರಿಂದ 'ಪುಷ್ಕರಾದ್ರಿ' ಎಂದು, ಬೆಟ್ಟವು ಬಂಗಾರದ ವರ್ಣದ್ದೆಂದು 'ಕನಕಾದ್ರಿ' ಎಂದು, ಪೂರ್ವದಲ್ಲಿ ನಾರಾಯಣ ಎಂಬ ಭಕ್ತನು ತಪಸ್ಸು ಮಾಡಿ ಶ್ರೀವಿಷ್ಣುವಿನ ಸಾಕ್ಷಾತ್ಕಾರ ಮಾಡಿಕೊಂಡದ್ದಕ್ಕಾಗಿ 'ನಾರಾಯಣಾದ್ರಿ' ಎಂದು, ವೈಕುಂಠದಿಂದ ಗರುಡನು ಭೂಲೋಕಕ್ಕೆ ತಂದದ್ದಕ್ಕಾಗಿ 'ಗರುಡಾದ್ರಿ' ಎಂದು, ಶ್ವೇತವರಾಹ ಸ್ವಾಮಿಯು ಅಲ್ಲಿಯೇ ನಿವಾಸಿಸಿದ್ದಕ್ಕಾಗಿ 'ವರಾಹಾದ್ರಿ'

ಎಂದು, ಶ್ರೀನಿವಾಸನು ನೆಲೆಸಿದ್ದಕ್ಕಾಗಿ 'ಶ್ರೀನಿವಾಸಾದ್ರಿ' ಎಂದು, ಇಲ್ಲಿ ವೇಂಕಟೇಶ್ವರನು ಇಳಿದು ಬಂದು ಇಲ್ಲಿ ನಿಂತದ್ದಕ್ಕಾಗಿ 'ವೆಂಕಟಾದ್ರಿ' ಎಂದು ಹೀಗೆ ತಮ್ಮ ತಮ್ಮ ಅನುಭೂತಿಯಂತೆ ಆನಂದಾದ್ರಿ ಎಂದರೆ ಕ್ರೀಡಾದ್ರಿಯನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಿರುವುದು ಅದರ ಅಗ್ಗಳಿಕೆ ಎಂದು ಭಾವಿಸಬಹುದು.

ಈ ರೀತಿ ನಾಲ್ಕೂ ಯುಗಗಳಲ್ಲಿ ಈ ತಿರುಮಲವು ಬಹಳ ಪ್ರಸಿದ್ಧಿ ಹೊಂದಿದೆ. ಸಕ್ಕರೆಯಿಂದ ಹಲವಾರು ತಿಂಡಿಗಳನ್ನು ತಯಾರಿಸಿದರೂ ಆದರಲ್ಲಿನ ಸಕ್ಕರೆಯ 'ಸಿಹಿ' ಗುಣವು ಬದಲಾಗದ ರೀತಿಯಲ್ಲಿ ಶ್ರೀ ವೆಂಕಟಾಚಲವನ್ನು ಹಲವು ನಾಮಗಳಿಂದ ಸ್ಮರಿಸಿದರೆ ಪಾಪ ಪರಿಹಾರ ಎಂಬಂತೆ ಅದರ ಪವಿತ್ರತೆಯು ಕರಗದೇ ಭಗವಂತನ ಅನುಗ್ರಹದಿಂದ ಮಾನವರು ಪಾವನ ಆಗುತ್ತಿದ್ದಾರೆಂಬುದು ಎಂದೆಂದಿಗೂ ಸತ್ಯವು.

ವೆಂಕಟಾಚಲದಲ್ಲಿರುವ ವೆಂಕಟೇಶ್ವರನ ಲೀಲಾವಿಲಾಸ ಪ್ರಸಂಗಗಳು ಭಕ್ತಪಾಲನಾ ಪ್ರಸಂಗಗಳನ್ನು ವರಾಹ ಪುರಾಣದಲ್ಲಿ, ಸ್ಕಾಂದ ಪುರಾಣದಲ್ಲಿ, ಭವಿಷ್ಯೋತ್ತರ ಪುರಾಣದಲ್ಲಿ ವಿಶೇಷವಾಗಿ ಕೆಲವು ಹೇಳಿದ್ದಾರೆ. ಅಲ್ಲಿ ವೆಂಕಟಾಚಲ ವೃತ್ತಾಂತವು, ಅಲ್ಲಿನ ತೀರ್ಥಗಳು ಅವುಗಳ ಮಹಿಮೆಯನ್ನು ತಿಳಿಸಲಾಗಿದೆ. ಅವೆಲ್ಲವು ಶ್ರೀವಾರಿಯ ಮಹಿಮಾ ವಿಶೇಷಗಳನ್ನು ಸಾರಿ ಸಾರಿ ಹೇಳುತ್ತಿವೆ. ಕಲಿಯುಗದಲ್ಲಿ ತೀರ್ಥಯಾತ್ರೆಗಳೇ ಮಾನವನಿಗೆ ಮುಕ್ತಿದಾಯಕ ಎಂದು ವಿವರಿಸುತ್ತಿವೆ.

ಈ ಕಲಿಯುಗದಲ್ಲಿ ವೆಂಕಟಾಚಲಪತಿಗೆ ಬೇಡಿಕೊಂಡ ಭಕ್ತರ ಸೆರಗು ಸ್ವರ್ಣಮಯ ಆಗಿಬಿಡುವುದೆಂದು, ಆತನು ಕರೆದವರಿಗೆ 'ಓ' ಎಂದು ಉತ್ತರ ಕೊಟ್ಟು ಅವರವರ ಕೋರಿಕೆಗಳನ್ನು

ಪೂರೈಸುತ್ತಿರುವುದು ಸರ್ವವಿದಿತ. ಶ್ರೀ ವೆಂಕಟೇಶ್ವರನ ಮಂಗಳಸ್ವರೂಪವನ್ನು ಕಂಡಕೂಡಲೆ ಆ ಮೂರ್ತಿ ಭಕ್ತನ ಹೃದಯದಲ್ಲಿ ನಿಂತ ಮೇಲೆ ಭಕ್ತನು ತನ್ಮಯನಾಗಿ ಒಂದೊಂದು ಕ್ಷಣವೂ ವಿಚಲಿತವಾಗದೆ ಸ್ಮರಣೆಗೆ ತಂದುಕೊಳ್ಳುತ್ತಾನೆ ಎಂಬುದು ನಿಶ್ಚಿತ. ಹೀಗೆ ಆ ಶ್ರೀನಿವಾಸನ ಅನುಭವವನ್ನು ಹಲವಾರು ಭಕ್ತರು ಅನುಭವಿಸುತ್ತಿದ್ದಾರೆ. ಮತ್ತು ಇನ್ನುವರೆಗೂ ಜನ ಆ ಅನುಭವವನ್ನು ಹೊಂದುತ್ತಿದ್ದಾರೆ ಎಂಬುದು ಸರ್ವಜನೈಕವೇದ್ಯವು. ಅದಕ್ಕಾಗಿ ಅಲ್ಲವೇ ತಿರುಮಲ ತಿರುಪತಿಯನ್ನು ಭೂಲೋಕ ವೈಕುಂಠ ಎಂದು ಹೇಳುವುದು. ವಿದೇಶದ ಜನರೂ ಕೂಡ ಶ್ರೀ ಶ್ರೀನಿವಾಸನ ಮಹಿಮೆಯನ್ನು ಗ್ರಹಿಸಿ ತಮ್ಮ ತಮ್ಮ ದೇಶಗಳಲ್ಲಿ ಕೂಡ ಆತನ ದೇವಾಲಯಗಳನ್ನು ನಿರ್ಮಿಸಿಕೊಂಡು ಸೇವೆ ಮಾಡುತ್ತಿದ್ದಾರೆ.

## ವೆಂಕಟಾಚಲದಲ್ಲಿನ ದಿವ್ಯ ತೀರ್ಥಗಳು

ಶ್ರೀ ವೆಂಕಟಾಚಲದಲ್ಲಿ ಅನೇಕ ದಿವ್ಯ ತೀರ್ಥಗಳಿವೆ. ಅವೆಲ್ಲ ಪವಿತ್ರವಾಗಿಯೂ ಮತ್ತು ಸಾರ್ಥಕ ನಾಮವುಳ್ಳವೂ ಆಗಿವೆ. ಭಕ್ತರು ಈ ತೀರ್ಥಗಳ ದರ್ಶನ ಪಡೆದು ಸ್ನಾನ ಮಾಡಿ ಪಾವನರಾಗುತ್ತಾರೆ ಎಂಬುದು ನಿಶ್ಚಯವಾಗಿದೆ ಎಂಬುದರಲ್ಲಿ ಅತಿಶಯೋಕ್ತಿಯಲ್ಲ. 'ಆಳ್ವಾರ ತೀರ್ಥ' 'ಪೂಲ ಬಾವಿ' ಇವೆಲ್ಲ ಭಕ್ತರಿಂದ ನಿರ್ಮಿಸಲ್ಪಟ್ಟವು. ಉಳಿದ ಹಲವು ನಿಸರ್ಗ ನಿರ್ಮಾಣವಾದವುಗಳು ಇವೆ. ಅವುಗಳಲ್ಲಿ ಯಾತ್ರಿಕರ ಸೌಲಭ್ಯಕ್ಕಾಗಿ ಕೆಲವನ್ನು ವಿವರಿಸಲಾಗಿದೆ.

### 1. ಕಪಿಲತೀರ್ಥ

ಈ ಕಪಿಲತೀರ್ಥವು ಶೇಷಾಚಲದ ಕೆಳಗಿನ ಭಾಗದ ಸಪ್ತದಶ ಸಣ್ಣ ತೀರ್ಥಗಳ ಸಂಗಮದಿಂದ ಉದಯಿಸಿದೆ. ಭಕ್ತರು

ಶ್ರೀನಿವಾಸನ ದರ್ಶನಕ್ಕೆ ಬರುವ ಮುನ್ನ ಮುಖ್ಯವಾಗಿ ಕಪಿಲತೀರ್ಥದಲ್ಲಿ ಸ್ನಾನ ಮಾಡಿ, ಕಪಿಲೇಶ್ವರನ ದರ್ಶನ ಪಡೆದು ಆನಂತರದಲ್ಲಿ ಶೇಷಾಚಲ ಪರ್ವತಾರೋಹಣ ಮಾಡುವುದು ಮೊದಲಿನಿಂದ ಬಂದ ಸಂಪ್ರದಾಯ.

ಪೂರ್ವದಲ್ಲಿ ಒಮ್ಮೆ ಉತ್ತರಭಾರತದಿಂದ ಕೆಲ ಮಹಾರಾಜರು ಶ್ರೀ ವೆಂಕಟೇಶ್ವರನ ದರ್ಶನ ಪಡೆಯಲು ಬರುತ್ತಿರುವಾಗ, ವೆಂಕಟಾಚಲದ ಲೌಕಿಕ ಯಾತ್ರೆಗೆ ಮೆಚ್ಚಿ ಮಾರ್ಗ ಮಧ್ಯದಲ್ಲಿ ಮಾಧವನು ನಿತ್ಯಾಗ್ನಿಹೋತ್ರ, ಪೂಜಾದಿಗಳನ್ನು ಮುಗಿಸಿ ನಂತರದಲ್ಲಿ ಆ ವೈದಿಕ ಶಿಖಾಮಣಿಯು ಕಾಮಾತುರನಾಗಿ ಕುಂಡಲ ಎಂಬ ಪರಸ್ತ್ರೀಯನ್ನು ಬಲಾತ್ಕಾರದಿಂದ ಭೋಗಿಸಿ ಕೊನೆಯಲ್ಲಿ ಅವಳು ಮರಣ ಹೊಂದಿದಾಗ ಬುದ್ಧಿಭ್ರಮಣಗೊಂಡು ಅವನು ಮುಂದೆ ಆ ಯಾತ್ರಿಕರ ಜೊತೆಗೆ ಒಂದು ರಾತ್ರಿಯಲ್ಲಿ ತಿರುಪತಿ ಸೇರಿದನು. ಮರುದಿನ ಮುಂಜಾನೆ ಎಲ್ಲ ಯಾತ್ರಿಕರು ತಮ್ಮ ತಮ್ಮ ಕಾಲಕೃತ್ಯಗಳನ್ನು ಮುಗಿಸಿ ಕಪಿಲತೀರ್ಥದಲ್ಲಿ ಸ್ನಾನ ಮಾಡಿ ಪಿತೃದೇವತೆಗಳಿಗೆ ಅತಿಭಕ್ತಿಯಿಂದ ತರ್ಪಣ, ಪಿಂಡ ಪ್ರದಾನ ಮಾಡಿದರು. ಅವರನ್ನು ನೋಡಿ ಮಾಧವನು ಕೂಡ ಕಪಿಲತೀರ್ಥದಲ್ಲಿ ಸ್ನಾನ ಮಾಡಿ ಆ ಎಲ್ಲ ಮಹಾರಾಜರಂತೆ ಪಿಂಡ ಪ್ರದಾನ ಮಾಡಲು ಸಾಧ್ಯವಾಗದ ಸಮಯದಲ್ಲಿ ಶ್ರದ್ಧೆಯಿಂದ ಮಣ್ಣಿನ ಪಿಂಡಪ್ರದಾನ ಮಾಡಿ, ಪಿತೃಋಣವನ್ನು ತೀರಿಸಿಕೊಂಡು ಪವಿತ್ರನಾದನು. ಆವನ ಪಿತೃಗಳು ಮುಂದೆ ಸ್ವರ್ಗಕ್ಕೆ ಹೋದರು. ಅದಕ್ಕಾಗಿಯೇ ಕಪಿಲತೀರ್ಥದಲ್ಲಿ ಸ್ನಾನ ಮಾಡಿ ಪಿತೃದೇವತೆಗಳಿಗೆ ಪಿಂಡ ಪ್ರದಾನ ಮಾಡಿದಲ್ಲಿ ಅದು ಇಹಪರದ ಉಭಯತಾರಕ ಎಂಬುದು ತಿಳಿದುಬರುತ್ತದೆ.

ಯಾತ್ರಿಕರ ಜೊತೆಗೆ ಮಾಧವನು ಆ ರಾತ್ರಿ ಕಪಿಲೇಶ್ವರನಿಗೆ ಉಪಾಸನೆ ಮಾಡಿ ಅಲ್ಲಿಯೆ ರಾತ್ರಿ ನಿದ್ದೆ ಮಾಡಿದನು. ಸ್ವಲ್ಪ ಸಮಯದ ನಂತರದಲ್ಲಿ ನಿದ್ರೆಯಿಂದ ಎಚ್ಚರಗೊಂಡು ಉದಯಭಾನುವಿನಂತೆ ದಿವ್ಯ ತೇಜದಿಂದ ಕೂಡಿದ ವೆಂಕಟಾಚಲಪತಿಯ ದರ್ಶನಾಭಿಲಾಷಿಯಾಗಿ ತಾನೊಬ್ಬನೆ ಶೇಷಾಚಲವನ್ನು ಏರುತ್ತಿದ್ದನು. ಆತನ ಭವಿಷ್ಯ ತಿಳಿದ ಬ್ರಹ್ಮಾದಿ ದೇವತೆಗಳು ದಾರಿಯಲ್ಲಿಯೆ ಮಾಧವನನ್ನು ಕಂಡು ಆತನಿಗೆ 'ಅಯ್ಯಾ! ನಿನ್ನ ಪಾಪದ ಕೊಳೆಯು ಕಪಿಲತೀರ್ಥದಲ್ಲಿನ ಸ್ನಾನದಿಂದ ನಾಶವಾಯಿತು. ಇನ್ನು ನೀನು ವೆಂಕಟಾದ್ರಿ ಬೆಟ್ಟ ಸೇರಿ ವೆಂಕಟಾಚಲಪತಿಯ ನಿವಾಸ ಸ್ಥಾನವಾದ ಹುಣಿಸೆಗಿಡದ ಹತ್ತಿರ ಇರುವ ಸ್ವಾಮಿಪುಷ್ಕರಿಣಿ ತೀರ್ಥದಲ್ಲಿ ಸ್ನಾನ ಮಾಡಿ ಆ ಪುಷ್ಕರಿಣಿ ತೀರದಲ್ಲಿಯೇ ಇರುವ ವರಾಹ ಸ್ವಾಮಿಯನ್ನು ನಮಸ್ಕರಿಸಿ, ಮುಂದೆ ಶ್ರೀವಾರಿಯ ದರ್ಶನ ಪಡೆಯಬೇಕು. ಆಗ ನಿನ್ನ ಜನ್ಮ ಧನ್ಯವಾಗುವುದು. ಮತ್ತೆ ಜನ್ಮಾಂತರಗಳಲ್ಲಿ ಚೋಳರ ಚಂದ್ರವಂಶದ ಪ್ರಸಿದ್ಧ 'ಸುಧರ್ಮ' ಎಂಬ ರಾಜನ ಮಗನಾಗಿ ಹುಟ್ಟಿ ಇಡೀ ಚೋಳರಾಜ್ಯವನ್ನು ಆಳುವಿ. ಅಲ್ಲಿ ನೀನು ಮಹಾಲಕ್ಷ್ಮೀ ಸದೃಶಳಾದ ಮಗಳನ್ನು ಪಡೆಯುವಿ. ಆ ಪುತ್ರಿಯಿಂದ ವೆಂಕಟಾಚಲಪತಿಯು ನಿನಗೆ ಅಳಿಯನಾಗುವನು. ನೀನು ಆ ಸ್ವಾಮಿಗೆ ಪರಮಭಕ್ತನಾಗಿ ಕನ್ಯಾದಾನ ಮಾಡಿದ ಪುಣ್ಯವು ಲಭಿಸುತ್ತದೆ. ಆ ಪುಣ್ಯದಿಂದ ಬಹಳ ಕಾಲ ರಾಜ್ಯಪಾಲನೆ ಮಾಡುತ್ತ ಕೊನೆಗೆ ಈ ಲೋಕದ ಜೀವನ ಮುಗಿಸಿ ಪರಮಪದ ಪ್ರಾಪ್ತಿಹೊಂದುವಿ' ಎಂದು ಆತನ ಭವಿಷ್ಯವನ್ನು ಹೇಳಿ ಹೋದರು.

ಮಾಧವನು ಆ ದೇವತೆಗಳನ್ನು ಸ್ಮರಿಸುತ್ತ ಅವರು ಹೋದ ದಿಕ್ಕಿಗೆ ನಮಸ್ಕರಿಸುತ್ತ ಅವರ ಆದೇಶದಂತೆ ಸ್ವಾಮಿಪುಷ್ಕರಿಣಿ ಸ್ನಾನ

ಮುಗಿಸಿ, ವರಾಹ ಸ್ವಾಮಿ ದರ್ಶನ ಮೊದಲು ಪಡೆದು ಶ್ರೀವೆಂಕಟಾಚಲಪತಿಯನ್ನು ಸೇವಿಸುತ್ತ ಮುಂದಿನ ದಿನಗಳಲ್ಲಿ ಆ ಶ್ರೀವೆಂಕಟೇಶ್ವರನಿಗೆ ಮಾವನಾಗಿ ದೈವತ್ವವನ್ನು ಹೊಂದಿದನು ಎಂದು ಇತಿಹಾಸ ಹೇಳುತ್ತದೆ. ಅದರಿಂದ ಕಪಿಲತೀರ್ಥದ ಮಹಿಮೆಯೂ ತಿಳಿದು ಬರುತ್ತದೆ. ಅದಕ್ಕಾಗಿಯೇ ತಿರುಮಲ ಯಾತ್ರಿಗಳು ಮೊದಲು ಕಪಿಲತೀರ್ಥದಲ್ಲಿ ಸ್ನಾನಮಾಡಿ ಪಿತೃಋಣವನ್ನು ತೀರಿಸಿ, ಕಪಿಲೇಶ್ವರನ ದರ್ಶನ ಪಡೆದು ಆ ರಾತ್ರಿ ಅಲ್ಲಿಯೇ ಕಳೆದು ಮುಂದೆ ವೆಂಕಟಾಚಲ ಪರ್ವತ ಏರಿಬಂದು ಸ್ವಾಮಿ ಪುಷ್ಕರಿಣಿಯಲ್ಲಿ ಮಿಂದು, ವರಾಹ ಸ್ವಾಮಿಯ ದರ್ಶನ ಮಾಡಿಕೊಂಡು ಮುಂದೆ ಶ್ರೀವಾರಿಯ ದರ್ಶನ ಪಡೆಯುವುದು ಹಿಂದಿನಿಂದಲೂ ಬಂದ ಪದ್ಧತಿ. ಇಂದು ಛತ್ರಗಳು, ಪ್ರಯಾಣ ಸೌಕರ್ಯಗಳು ಇದ್ದ ಪ್ರಯುಕ್ತ ಬಸ್ಸುಗಳಿಂದ ಯಾತ್ರಿಕರು ನೇರವಾಗಿ ತಿರುಪತಿಯಿಂದ ತಿರುಮಲಕ್ಕೆ ಹೋಗುತ್ತಿದ್ದಾರೆ. ಆದರೂ ದೇವಸ್ಥಾನದ ಅಧಿಕಾರಿಗಳು ಕಪಿಲ ತೀರ್ಥದ ಯಾತ್ರಿಕರಿಗೆ ಬೇಕಾಗುವ ಸೌಕರ್ಯಗಳನ್ನು ಒದಗಿಸಿ, ಅವರನ್ನು ಆಕರ್ಷಿಸಿಸಲು ಎಷ್ಟೋ ಪ್ರಯತ್ನಗಳು ಮಾಡುತ್ತಲೇ ಬಂದಿದ್ದಾರೆ. ಹೀಗೆ ಕಪಿಲತೀರ್ಥವು ಭಕ್ತರ ಅನುಗುಣವಾಗಿ ಅಭಿವೃದ್ಧಿ ಹೊಂದುವುದು ಎಂದು ಆಶಿಸುತ್ತಿದ್ದೇನೆ.

ಪೂರ್ವದಲ್ಲಿ ಕಪಿಲಮಹರ್ಷಿಯು ಶೇಷಾಚಲ ಬೆಟ್ಟದ ಕೆಳಗೆ ಆಶ್ರಮವನ್ನು ನಿರ್ಮಿಸಿಕೊಂಡು ತಪವನ್ನು ಆಚರಿಸುತ್ತಿದ್ದನು. ಆಗ ಪಾತಾಳದಲ್ಲಿದ್ದ ಆರಾಧಿಸಲ್ಪಟ್ಟ ಆ ಶಿವಲಿಂಗವೇ ಭೂಮಿಯನ್ನು ಭೇದಿಸಿಕೊಂಡು ಮಹಾಶಬ್ದ ಮಾಡುತ್ತ ಮೇಲೆ ಬಂದಿತು. ಶ್ರೀ ವೆಂಕಟಾಚಲಪತಿ ಪದ್ಮಾವತಿಯ ವಿವಾಹಕ್ಕೆ ಬಂದ ದೇವತೆಗಳೆಲ್ಲರೂ ತಮ್ಮ ತಮ್ಮ ನಿವೇಶಗಳಿಗೆ ಹೋಗುತ್ತಿದ್ದಾಗ,

ಪರಮೇಶ್ವರನು ಪಾರ್ವತಿಸಹಿತನಾಗಿ ಕಪಿಲಾಶ್ರಮಕ್ಕೆ ಬಂದು ಆ ಮಹರ್ಷಿಯನ್ನು ಅನುಗ್ರಹಿಸಿ ಅಲ್ಲಿಯೇ ಕಪಿಲತೀರ್ಥದ ಹತ್ತಿರ ಕಪಿಲೇಶ್ವರ ಎಂಬ ಹೆಸರಿನಿಂದ ನೆಲೆಸಿದನೆಂದು ಪುರಾಣವು ಹೇಳುತ್ತದೆ. ಈಗಲೂ ಕೂಡ ತಿರುಮಲ ತಿರುಪತಿ ದೇವಸ್ಥಾನದವರು ಅಲ್ಲಿ ಪ್ರತಿ ವರುಷವೂ 'ತೆಪ್ಪತಿರು' ಉತ್ಸವವನ್ನು ಅತೀವೈಭವದಿಂದ ನಡೆಸಿಕೊಂಡು ಬರುತ್ತಿದ್ದಾರೆ. ಭಕ್ತರಿಗೆ ಇಹಪರ ಸಾಧನ ಮಾಡಿಕೊಳ್ಳಲು ಸದವಕಾಶ ಮಾಡಿಕೊಟ್ಟಿದ್ದಾರೆ.

ಕಪಿಲತೀರ್ಥದ ಮೇಲ್ಭಾಗದಲ್ಲಿ ಶಕ್ರತೀರ್ಥವಿದೆ. ದೇವೇಂದ್ರನು (ಶಕ್ರನು) ಈ ತೀರ್ಥದ ಸ್ನಾನದಿಂದ ಗೌತಮಮಹರ್ಷಿ ಕೊಟ್ಟ ಶಾಪದಿಂದ ಮೋಕ್ಷ ಹೊಂದಿದನು ಎಂದು ಹೇಳುವರು. ಅದಕ್ಕೂ ಮೇಲೆ ವಿಷ್ವಕ್ಸೇನತೀರ್ಥವಿದೆ. ವರುಣನ ಮಗನಾದ ವಿಷ್ವಕ್ಸೇನನು ಆ ತೀರ್ಥದಲ್ಲಿ ಮಿಂದು ಮಹಾ ತಪಸ್ಸು ಆಚರಿಸಿ ವಿಷ್ಣುವಿನ ದರ್ಶನ ಪಡೆದು, ಆತನ ಅನುಗ್ರಹದಿಂದ ಶ್ರೀವಾರಿಯ ಸೇನಾಧಿಪತಿ ಆದನೆಂದು ಹೇಳುವರು. ಅಲ್ಲಿಯೇ ಪಂಚಾಯುಧತೀರ್ಥ, ಅಗ್ನಿತೀರ್ಥ, ಬ್ರಹ್ಮತೀರ್ಥ, ಸಪ್ತರ್ಷಿತೀರ್ಥಗಳಿವೆ. ಹೀಗೆ ವೆಂಕಟಾಚಲದಲ್ಲಿ ಉತ್ತರೋತ್ತರ ಅಧಿಕಾಧಿಕ ಫಲಗಳನ್ನು ಕೊಡುವ ತೀರ್ಥಗಳು ಕಪಿಲತೀರ್ಥದ ಸುತ್ತಮುತ್ತಲೂ ಇವೆ. ಹಾಗಾಗಿ ಮುಖ್ಯವಾಗಿ ಭಕ್ತರ ತೀರ್ಥದರ್ಶನ, ಅವುಗಳಲ್ಲಿ ಸ್ನಾನ, ಒಂದು ರಾತ್ರಿ ಅಲ್ಲಿಯೇ ವಾಸ ಮಾಡುವುದು ಹಿಂದಿನಿಂದ ನಡೆದು ಬಂದ ಪದ್ಧತಿ. ಮುಂದೆ ಆ ಎಲ್ಲಾ ತೀರ್ಥಗಳ ಮಹಾತ್ಮೆಯನ್ನು ನೋಡೋಣ.

ಪೂರ್ವದಲ್ಲಿ ವೇದವೇದಾಂಗ ಸಕಲಶಾಸ್ತ್ರಗಳ ಪಾರಂಗತ ಭಕ್ತನೊಬ್ಬನು ಬ್ರಹ್ಮಾಂಡದೊಳಗಿನ ಎಲ್ಲಾ ಪುಣ್ಯತೀರ್ಥಗಳ ದರ್ಶಿಸಬೇಕೆಂಬ ಹಂಬಲದಿಂದ ಭಗವಂತನ ನಿಶ್ಚಲವಾದ

ಧ್ಯಾನದಲ್ಲಿ ಮಲಗಿ ನಿದ್ರೆ ಮಾಡಿದನು. ಆ ರಾತ್ರಿ ಬೆಳಗಿನ ನಾಲ್ಕು ಗಂಟೆಯ ಸಮಯದಲ್ಲಿ ಮಹಾವಿಷ್ಣುವು ಶಂಖಚಕ್ರಾದಿ ಪಂಚಾಯುಧಧಾರಿಯಾಗಿ ಅವನಿಗೆ ಕಾಣಿಸಿ 'ವತ್ಸಾ! ನಿನ್ನ ಮನೋಇಚ್ಛೆ ಗೊತ್ತಾಯಿತು. ವರ್ಷವರ್ಷಗಳ ಸಂಚಾರದಿಂದಲೂ ಪ್ರಪಂಚದ ಎಲ್ಲಾ ತೀರ್ಥಯಾತ್ರೆಯು ಈ ಜನ್ಮದಲ್ಲಿ ಪೂರ್ತಿಯಾಗದು. ಆದಾಗ್ಯೂ ನೀನು ವೆಂಕಟಾಚಲದ ಪ್ರಸಿದ್ಧತೀರ್ಥಗಳ ಸ್ನಾನದಿಂದ, ತ್ರಿಲೋಕ ತೀರ್ಥಗಳ ಸ್ನಾನ ಮಾಡಿದ ಫಲವನ್ನು ಪಡೆಯಬಹುದು.' ಎಂದು ಹೇಳಿ ಭಗವಂತನು ಅಂತರ್ಧಾನನಾದನು. ಹಿಂದೆಯೇ ಆ ಭಕ್ತನು ಎಚ್ಚರಗೊಂಡು ಭಗವಂತನನ್ನು ಸ್ತುತಿಸಿ ವೆಂಕಟಾಚಲ ಯಾತ್ರೆ ಮಾಡಲು ಹೊರಟು ಕಪಿಲತೀರ್ಥಗಳಾದಿ ಪುಣ್ಯತೀರ್ಥಗಳಲ್ಲಿ ಸ್ನಾನಮಾಡಿ ಮಹಾ ಪುಣ್ಯ ಸಂಪಾದಿಸಿದನೆಂದು ಜನರಲ್ಲಿ ಹೇಳುವ ಮಾತಿದೆ. ವೆಂಕಟಾಚಲದ ಎಲ್ಲ ತೀರ್ಥಗಳ ಸಂಗ್ರಹವೇ ಈ ಕಪಿಲತೀರ್ಥವು.

## 2. ಸ್ವಾಮಿ ಪುಷ್ಕರಿಣಿತೀರ್ಥ

ತಿರುಮಲದಲ್ಲಿ ಶ್ರೀವಾರಿಯ ಆನಂದನಿಲಯಕ್ಕೆ ಉತ್ತರ ಮತ್ತು ಸ್ವಲ್ಪ ಈಶಾನ್ಯ ಭಾಗದಲ್ಲಿ ಸ್ವಾಮಿ ಪುಷ್ಕರಿಣಿತೀರ್ಥವಿದೆ. ಆ ಪುಷ್ಕರಿಣಿಯ ವಾಯುವ್ಯ ದಿಕ್ಕಿಗೆ ಶ್ರೀ ವರಾಹಸ್ವಾಮಿಯ ದೇವಾಲಯವಿದೆ. ವೈಕುಂಠವಾಸನು ತನ್ನ ಕ್ರೀಡಾದ್ರಿಯನ್ನು ಭೂಲೋಕಕ್ಕೆ ತರಲು ಗರುಡನಿಗೆ ಆದೇಶಿಸಿದಾಗ ಗರುಡನು ಸ್ವಾಮಿ ಪುಷ್ಕರಿಣಿಯನ್ನು ಕೂಡ ಭೂಲೋಕಕ್ಕೆ ತಂದನೆಂದು ಪುರಾಣಗಳು ಹೇಳುತ್ತವೆ.

ಈ ಪುಷ್ಕರಿಣಿಯಲ್ಲಿ ವೈಕುಂಠವಾಸನು ಭೂದೇವಿಯವರ ಜೊತೆ ಜಲಕ್ರೀಡೆ ಆಡುತ್ತಿದ್ದನು ಎಂಬುದರಿಂದ ಪವಿತ್ರವೆನಿಸಿದೆ. ಆಕಾಶಗಂಗೆಯ ನೀರು ಕಾಣದಂತೆ ಅಂತರ್ವಾಹಿನಿಯಾಗಿ ಹರಿದು ಸ್ವಾಮಿ ಪುಷ್ಕರಿಣಿಯಾಗಿದೆ. ಅಲ್ಲದೆ ಎಲ್ಲ ತೀರ್ಥಗಳಲ್ಲಿಯೇ ಪ್ರಮುಖವೆಂದು ಹೆಸರುವಾಸಿಯಾಗಿದೆ. ಎಲ್ಲ ತೀರ್ಥಗಳಲ್ಲಿ ಅತ್ಯಂತ ಪವಿತ್ರವಾಗಿದ್ದು ಮಹಿಮೋನ್ನತಿ ಪಡೆದಿದೆ. ಈ ತೀರ್ಥದ ಸ್ಮರಣೆ, ದರ್ಶನ, ಅದರಲ್ಲಿನ ಸ್ನಾನಗಳ ಆಚರಿಸಿದರೆ ಭಕ್ತರಿಗೆ ಎಲ್ಲಾ ಸಿದ್ಧಿಗಳು ಪ್ರಾಪ್ತವಾಗುವುವು ಎಂದು ವರಾಹಪುರಾಣ ಹೇಳುತ್ತದೆ.

**ಸ್ವಾಮಿ ಪುಷ್ಕರಿಣಿ ಸ್ನಾನಂ । ಸದ್ಗುರೋಃ ಪಾದ ಸೇವನಂ ॥**
**ಏಕಾದಶೀ ವ್ರತಂ ಚಾಪಿ । ತ್ರಯಂ ಅತ್ಯಂತ ದುರ್ಲಭಮ್ ॥**

(ಸ್ವಾಮಿ ಪುಷ್ಕರಿಣಿ ಸ್ನಾನವು, ಸದ್ಗುರುವಿನ ಪಾದಸೇವೆ, ಏಕಾದಶೀ ವ್ರತವು ಈ ಮೂರು ಸಾಮಾನ್ಯರಿಗೆ ದೊರೆಯುವದಿಲ್ಲ.)

ವೈಕುಂಠ ಏಕಾದಶಿ ದಿನ ಶ್ರದ್ಧೆಭಕ್ತಿಗಳಿಂದ ಭಕ್ತರು ಸ್ವಾಮಿ ಪುಷ್ಕರಿಣಿಯಲ್ಲಿ ಮಿಂದು, ಶ್ರೀನಿವಾಸನ ದರ್ಶನ ಪಡೆದು ವೈಕುಂಠದ್ವಾರದ ಮೂಲಕ ದರ್ಶನ ಪಡೆದು ಸ್ವಾಮಿಯ ಪ್ರದಕ್ಷಿಣಿ ಹಾಕುತ್ತಿರುವದನ್ನು ಈಗಲೂ ಕಣ್ಣಿಗೆ ಹಬ್ಬದಂತೆ ಜರುಗುತ್ತಿದೆ.

ಈ ಪುಷ್ಕರಿಣಿಯ ಮಹಿಮೆಗಳನ್ನು ವಿವರಿಸುವ ಹಲವು ಕಥೆಗಳಿವೆ. ಅವುಗಳಲ್ಲಿ ಶಂಖಣನ ಮತ್ತು ಆತ್ಮಾರಾಮನ ಬಗ್ಗೆ ತಿಳಿದುಕೊಳ್ಳೋಣ.

ಪೂರ್ವದಲ್ಲಿ ಚಂದ್ರವಂಶದವನಾದ ಶಂಖಣ ಎಂಬ ಒಬ್ಬ ರಾಜನಿದ್ದ. ಅವನು ತನಗೆ ಪಿತ್ರಾರ್ಜಿತವಾಗಿ ಬಂದ ಸಾಂಕಾಶ್ಯ ಎಂಬ ರಾಜ್ಯವನ್ನು ಪಾಲಿಸುತ್ತಿದ್ದನು. ಕೆಲವು ವರ್ಷಗಳ ನಂತರ

ಆತನ ಸಾಮಂತರೆಲ್ಲರೂ ಕೂಡಿಕೊಂಡು ತಾವೇ ರಾಜರಾಗಿ ಬಂಧು, ಮಿತ್ರ, ಅಮಾತ್ಯ, ಪರಿವಾರ ಸಮೇತ ಆ ಶಂಖಣ ರಾಜನನ್ನು ರಾಜ್ಯದಿಂದ ಹೊರಹಾಕುತ್ತಾರೆ. ಆಗ ಶಂಖಣನು ಅವರನ್ನೆಲ್ಲ ತನ್ನ ಜೊತೆಗೆ ಕರೆದುಕೊಂಡು ದಕ್ಷಿಣ ದಿಕ್ಕಿನ ಕಡೆಗೆ ಸಾಗಿ ಬಂದು ರಾಮೇಶ್ವರ ನಗರವನ್ನು ಸೇರಿ ಅಲ್ಲಿ ಸಮುದ್ರ ಸ್ನಾನ ಮಾಡಿ ಸ್ವಲ್ಪ ಅಲ್ಲಿಯೇ ಉಳಿದನು. ಮುಂದೆ ಉತ್ತರ ಕಡೆಗೆ ಪ್ರಯಾಣ ಮಾಡಿ ದಕ್ಷಿಣ ಕೈಲಾಸ ಎನಿಸಿದ ಸುವರ್ಣಮುಖಿ ನದಿಯನ್ನು ದಾಟಿ ಶ್ರೀ ಕಾಳಹಸ್ತಿಪರಮೇಶ್ವರನನ್ನು ಪ್ರಜ್ಞಾಪೂರ್ವಕವಾಗಿ ಸೇವಿಸಿ ಅಲ್ಲಿಯೇ ಕೆಲಕಾಲವಿದ್ದನು. ರಾಜ್ಯಭ್ರಷ್ಟನಾಗಿ ರಾಜ್ಯವನ್ನು ಕಳೆದುಕೊಂಡ ಏಕೈಕ ಚಿಂತೆಯಿಂದ ಇರುತ್ತಿರುವಾಗ ಒಂದು ದಿನ ಅಶರೀರವಾಣಿ 'ಓ ರಾಜಾ! ವಿಪತ್ತು ಬಂದ ಸಮಯದಲ್ಲಿ ಧೈರ್ಯದಿಂದ ಇರಬೇಕಾದದ್ದು ಮಾನವನ ಕರ್ತವ್ಯ. ವಿಪತ್ತಿಗೆ ಹೆದರಿ ಗಲಿಬಿಲಿಗೊಂಡರೆ ಯಾವ ಕಾರ್ಯಗಳು ಆಗುವದಿಲ್ಲ. ಧೈರ್ಯಲಕ್ಷ್ಮೀಯನ್ನು ಬಿಡದವರು ವಿಜಯಲಕ್ಷ್ಮೀಯನ್ನು ಹೊಂದುವುದು ಸತ್ಯವೇ. ಅದು ಬಿಟ್ಟು ನೀನು ಏನೂ ವಿಚಾರ ಮಾಡದೇ ಸಾಹಸಧೈರ್ಯಗಳನ್ನು ಒಟ್ಟುಗೂಡಿಸಿಕೊಂಡು ಇಲ್ಲಿಯೇ ಸಮೀಪದಲ್ಲಿ ಇರುವ ವೆಂಕಟಾದ್ರಿಯನ್ನು ಹತ್ತಿ ಅಲ್ಲಿನ ಸ್ವಾಮಿಪುಷ್ಕರಿಣಿ ಸ್ನಾನ ಮಾಡಿ ಶುಚಿಯಾಗಿ ಶ್ರೀಪತಿಯನ್ನು ಸ್ಮರಿಸಿದರೆ ನಿನ್ನ ರಾಜ್ಯವು ನಿನಗೆ ತಪ್ಪದೇ ದೊರಕುವುದು ನಿಶ್ಚಿತ. ಅದಕ್ಕಾಗಿ ಬೇಗನೆ ಇಲ್ಲಿಂದ ಹೊರಟು ವೆಂಕಟಾಚಲ ಬೆಟ್ಟವನ್ನು ಸೇರಿ ಸ್ವಾಮಿ ಮೊದಲು ಪುಷ್ಕರಿಣಿಯ ದರ್ಶನ ಪಡೆದು ಸ್ನಾನ ಮಾಡಿ ಕೃತಾರ್ಥನಾಗು' ಎಂಬ ಶಬ್ದಗಳು ಕೇಳಿಸಿಕೊಂಡ ತಕ್ಷಣ ಆ ರಾಜ ಭಗವಂತನನ್ನು ಸ್ಮರಿಸುತ್ತ ಎದ್ದು ಸಪರಿವಾರನಾಗಿ ವೆಂಕಟಾಚಲದ ಕಡೆಗೆ ಯಾತ್ರೆ

ಪ್ರಾರಂಭಿಸಿ ವಿಕಸಿತಪದ್ಮ ಮನೋಜ್ಞವಾದ ಪುಷ್ಕರಿಣಿಯನ್ನು ಕಂಡು ಅಲ್ಲಿಯೇ ಹತ್ತಿರದಲ್ಲಿ ಒಂದು ಆಶ್ರಮವನ್ನು ನಿರ್ಮಿಸಿಕೊಂಡು ಪ್ರತಿದಿನ ಪುಷ್ಕರಿಣಿ ಸ್ನಾನ, ವೆಂಕಟಾಚಲಪತಿ ದರ್ಶನ ಮಾಡಿಕೊಳ್ಳುತ್ತ ಆರು ತಿಂಗಳು ಕಳೆದನು.

ಹೀಗಿರುವಾಗ ಒಂದು ದಿನ ಮುಂಜಾನೆ ಶಂಖಣನು ಪುಷ್ಕರಿಣಿ ತೀರದಲ್ಲಿ ಜಪವನ್ನು ಆಚರಿಸುತ್ತಿರುವಾಗ ಸರೋವರದಲ್ಲಿ ಶ್ರೀದೇವಿ ಭೂದೇವಿ ಇಬ್ಬರ ಮಧ್ಯದಲ್ಲಿ ಸೂರ್ಯನ ಪ್ರಕಾಶ ಹೊಂದಿರುವ ಮಹಾವಿಷ್ಣುವು ಪ್ರತ್ಯಕ್ಷನಾಗಿ ಆ ಭಕ್ತನ ಮನೋರಥವನ್ನು ಅರಿತು 'ವತ್ಸಾ! ಭಕ್ತಿಶ್ರದ್ಧೆಗಳಿಂದ ಸ್ನಾನವನ್ನು ಆಚರಿಸಿದ ಕಾರಣದಿಂದ ನಿನ್ನ ಪೂರ್ವದ ಎಲ್ಲ ಪಾಪಸಮೂಹವು ನಶಿಸಿಹೋಗಿ ನೀನೀಗ ಶುಚಿಭೂರ್ತನಾಗಿರುವೆ. ಇನ್ನು ನಿನ್ನ ರಾಜ್ಯವನ್ನು ನೀನು ಸುಖಶಾಂತಿಗಳಿಂದ ಪಾಲಿಸುವಂತನಾಗು. ಭಕ್ತಿಯುಕ್ತರಾಗಿ ಸ್ವಾಮಿಪುಷ್ಕರಿಣಿಯಲ್ಲಿ ನಿತ್ಯವೂ ಸ್ನಾನ ನೆರವೇರಿಸುವವರು ಸ್ವಾಮಿತ್ವವನ್ನು ಹೊಂದುತ್ತಾರೆ.' ಎಂದು ಹೇಳಿ ಅದೃಶ್ಯನಾದನು.

ಅಧೋಕ್ಷಜನ ಅನುಗ್ರಹವು ಪಡೆದ ಶಂಖಣನು ಪರಿವಾರಸಮೇತನಾಗಿ ತನ್ನ ರಾಜ್ಯಕ್ಕೆ ಪ್ರಯಾಣ ಬೆಳೆಸಿದನು. ಅಲ್ಲಿ ತನ್ನನ್ನು ರಾಜ್ಯದಿಂದ ಹೊರಹಾಕಿದ ಸಾಮಂತರಾಜರು ತಮ್ಮತಮ್ಮಲ್ಲಿ ಕಾದಾಡಿಕೊಂಡು ಕೊನೆಗೆ ಎಲ್ಲರೂ ರಾಜ್ಯವನ್ನು ಬಿಟ್ಟುಹೋಗಿದ್ದುದ್ದನ್ನು ತನ್ನ ಪ್ರಜೆಗಳಿಂದ ದಾರಿಯಲ್ಲಿಯೇ ತಿಳಿದುಕೊಂಡು ಶ್ರೀಪತಿಯ ಅನುಗ್ರಹದಿಂದ ಎಲ್ಲ ಶತ್ರುಗಳು ಓಡಿಹೋಗಿ ತನ್ನ ರಾಜ್ಯವು ತನಗೆ ನಿರಾಯಾಸವಾಗಿ ದೊರೆತದ್ದು ಕಂಡು ಬಹಳ ಹರುಷಗೊಂಡನು. ವೈಕುಂಠವಾಸನನ್ನು ಭಕ್ತಿ

ಉಪಾಸನೆಗಳಿಂದ ಆರಾಧಿಸಿ ಪ್ರಜೆಗಳನ್ನು ತನ್ನ ಮಕ್ಕಳಂತೆ ಸುಖವನ್ನು ಕರುಣಿಸಿ ಕೊನೆಗೆ ಅಮರಲೋಕ ಹೊಂದಿದನು.

ಸಕಲ ತೀರ್ಥಗಳಿಗೆ 'ಸ್ವಾಮಿ' ಎಂದಷ್ಟೇ ಅಲ್ಲ, ಶ್ರದ್ಧಾಭಕ್ತಿಗಳಿಂದ ತನ್ನನ್ನು ಸೇವಿಸಿದವರಿಗೆ 'ಸ್ವಾಮಿತ್ವ' ವನ್ನು ನೀಡುವದರಿಂದ 'ಸ್ವಾಮಿಪುಷ್ಕರಿಣಿ' ಎಂಬ ಹೆಸರಿಗೆ ಸಾರ್ಥಕತೆ ಇದೆಯೆಂದು ಪುರಾಣಗಳು ಹೇಳುತ್ತವೆ.

ಆತ್ಮಾರಾಮನೆಂಬುವನು ಉತ್ತಮ ಶೀಲವಂತನಾಗಿದ್ದು, ವಿಷ್ಣುಭಕ್ತನಾಗಿಯೂ ಇದ್ದು ಶ್ರೀನಿವಾಸನನ್ನು ಪ್ರತಿನಿತ್ಯವೂ ತುಂಬು ಮನಸ್ಸಿನಿಂದ ಧ್ಯಾನ ಮಾಡುತ್ತಿದ್ದನು. ಆದರೂ ಕೆಲಕಾಲದಲ್ಲಿ ಪಿತ್ರಾರ್ಜಿತ ಸಂಪತ್ತು ಕರ್ಪೂರವು ಕರಗಿದಂತೆ ಎಲ್ಲ ಕರಗಿಹೋಯಿತು. ಹಾಗಾಗಿ ಮುಂದೆ ಆತನಿಗೆ ಊಟಕ್ಕೂ ಕಷ್ಟವಾಯಿತು. ತನಗೆ ಹತ್ತಿರದವರು ಹೊಂದಿದವರು ಯಾರೂ ಆತನ ಗತಿ ನೋಡಿ ಸಹಾಯ ಮಾಡಲಿಲ್ಲ. ಅದೆಲ್ಲವೂ ತನ್ನ ವಿಧಿಲಿಖಿತ ಎಂದು ಭಾವಿಸಿ ವೆಂಕಟಾಚಲ ಯಾತ್ರೆಗೆ ಹೊರಟನು. ಮೊದಲು ಕಪಿಲತೀರ್ಥದ ದರ್ಶನ ಪಡೆದು ಸ್ನಾನ ಮಾಡಿ, ಕಪಿಲೇಶ್ವರನನ್ನು ನಮಸ್ಕರಿಸಿ, ತಿರುಮಲ ಬೆಟ್ಟವನ್ನು ಹತ್ತಿ ಸ್ವಾಮಿ ಪುಷ್ಕರಿಣಿಯನ್ನು ಕಂಡನು. ಆ ಪುಷ್ಕರಿಣಿ ದರ್ಶನ ಮಾತ್ರದಿಂದ ಆತನ ಪೂರ್ವಸಂಚಿತ ಪಾಪಗಳೆಲ್ಲ ಪರಿಹಾರವಾದುವು. ಆಗ ಅವನು 'ಎಂಥವರಿಗಾದರೂ ತಾವು ಮಾಡಿದ ಕರ್ಮಗಳ ಫಲವನ್ನು ಅನುಭವಿಸದೇ ತೀರುವದಿಲ್ಲ' ಎಂದು ತಮ್ಮ ಸ್ವಾನುಭವದಿಂದ ತಿಳಿದುಕೊಂಡು ದೊಡ್ಡವರು ಹೇಳಿದ ಜಾಣ್ನುಡಿಗಳು ಎಂದೆಂದಿಗೂ ಸತ್ಯವಾದವುಗಳೇ ಎಂದು ತಿಳಿದುಕೊಂಡನು. ಆ ಪುಷ್ಕರಿಣಿ ದರ್ಶನದಿಂದಲೇ ತಾನು ಎಷ್ಟೋ

ಸುಜ್ಞಾನ ಪಡೆದುಕೊಂಡೆ ಎಂದು ಭಾವಿಸಿ, ಭಕ್ತಜನಪೋಷಕನಾದ ಭಗವಂತನನ್ನು ಹಲವು ರೀತಿಯಲ್ಲಿ ಸ್ತುತಿಸುತ್ತ ಸ್ವಾಮಿಪುಷ್ಕರಿಣಿ ಸ್ನಾನ ಮುಗಿಸಿಕೊಂಡು ಅಲ್ಲಿಯೇ ಒಂದು ಇರಲು ಗುಡಿಸಲು ನಿರ್ಮಿಸಿಕೊಂಡು ಅಲ್ಲಿ ಸುತ್ತಮುತ್ತ ದೊರೆಯು ಕಂದಮೂಲಗಳಿಂದ ಮತ್ತು ಹಣ್ಣುಗಳಿಂದ ಕಾಲವ್ಯಯಿಸಹತ್ತಿದನು.

ಹೀಗೆ ಒಂದು ದಿನ ಆತ್ಮಾರಾಮನು ಕಂದಮೂಲ ಹಣ್ಣುಗಳ ಹುಡುಕುತ್ತಾ ವೆಂಕಟಾದ್ರಿ ಬೆಟ್ಟದ ಕಡೆಗೆ ಹೋದಾಗ ಅಲ್ಲಿಯೇ ಸಮೀಪದಲ್ಲಿ ಒಂದು ಗುಹೆಯಲ್ಲಿ ತಪಸ್ಸನ್ನು ಆಚರಿಸುತ್ತಿರುವ ಸನತ್ಕುಮಾರ ಎಂಬ ಯೋಗಿಯನ್ನು ಕಂಡು ನಮ್ರನಾಗಿ ಅವರ ಹತ್ತಿರ ಹೋಗಿ ಸಾಷ್ಟಾಂಗ ನಮಸ್ಕಾರ ಮಾಡಿ ಎದ್ದು ಕೈಕಟ್ಟಿಕೊಂಡು ಅವರ ಮುಂದೆ ನಿಂತನು. ಸ್ವಲ್ಪ ಸಮಯದ ನಂತರ 'ಸ್ವಾಮಿ! ಯೋಗೀಂದ್ರರೇ, ತಮ್ಮ ದಿವ್ಯ ತೇಜಸ್ಸಿನಿಂದ ನನ್ನ ಎಲ್ಲ ಹಿಂದಿನ ಪಾಪದ ಗಂಟು ಕರಗಿ ಹೋಗಿದೆ. ಅಂಧಕಾರವು ಹೋಗಿ ಪ್ರಕಾಶವನ್ನು ಕಾಣುತ್ತಾ ಇದ್ದೇನೆ. ನನ್ನನ್ನು ಅನುಗ್ರಹಿಸಿ, ನಿಮ್ಮಲ್ಲಿ ಶರಣು ಬಂದಿದ್ದೇನೆ, ನನ್ನನ್ನು ನಿಮ್ಮ ಶಿಷ್ಯನಾಗಿ ಭಾವಿಸಿ ಸದುಪದೇಶ ಮಾಡಬೇಕೆಂದು ಕೋರುತಿದ್ದೇನೆ.' ಎಂದನು. ಇದನ್ನು ಕೇಳಿಸಿಕೊಂಡ ಆ ದಿವ್ಯಮುನಿಯು ಒಳಗಣ್ಣಿನಿಂದ ಆತನ ಪೂರ್ವ ವೃತ್ತಾಂತವನ್ನು ತಿಳಿದು 'ಓ ಪುರುಷನೇ, ಪೂರ್ವಜನ್ಮದ ಸಂಚಿತ ಸರ್ವಪಾಪಗಳನ್ನು ಹರಣಮಾಡಿ ಮುಕ್ತಿ ಕೊಡುವುದು ನಾರಾಯಣನೊಬ್ಬನೇ. ಅಂಥ ನಾರಾಯಣನನ್ನು ಮರೆತು ಪೂರ್ವಜನ್ಮದಲ್ಲಿ ಭೋಗ ಲಾಲಸೆಯಿಂದ ಜೀವನ ಸಾಗಿಸುತ್ತಿದ್ದಿ. ಆ ಪಾಪದ ಫಲ ಅನುಭವಿಸುವುದು ತಪ್ಪದು. ತ್ಯಾಗ ಭಾವವನ್ನು ಆಚರಿಸದೇ ಸಂಪತ್ತಿನ ಭೋಗಗಳನ್ನು ಅನುಭವಿಸುತ್ತ ದೇವರನ್ನು ಮರೆತು ಇರುವುದೇ ಹೆಚ್ಚಿನ ಪಾಪ. ಈಗ ಜ್ಞಾನೋದಯ ಆಗಿರುವ

ನೀನು ಹಳೆಯದನ್ನೆಲ್ಲ ಮರೆತು ಭವಿಷ್ಯದ ವಿಚಾರ ಮಾಡುತ್ತ, ನಿಶ್ಚಲ ಭಕ್ತಿಯಿಂದ ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನ ಮಾಡಿ ಜಗನ್ಮಾತೆಯಾದ ಮಹಾಲಕ್ಷ್ಮೀಯನ್ನು ಸ್ತುತಿಸುತ್ತ ಆ ಮಹಾತಾಯಿಯ ಅನುಗ್ರಹದಿಂದ ಪರಮಪದವೆಂಬ ಸುಖವನ್ನು ಹೊಂದುವಿ' ಎಂದು ಹೇಳಿ ಆ ಮಹರ್ಷಿಯು ಮಾಯವಾದನು.

ಆಗ ಆತ್ಮಾರಾಮನು ಆಶ್ಚರ್ಯಆನಂದಗಳನ್ನು ಹೊಂದಿ ಆ ಯೋಗೀಂದ್ರನ ಉಪದೇಶವನ್ನು ತನ್ನ ವಿಚಾರಕ್ಕೆ ತಂದುಕೊಂಡು, ಮೊದಲಿಗಿಂತ ಹೆಚ್ಚು ಶ್ರದ್ಧಾಭಕ್ತಿಗಳಿಂದ ಪುಷ್ಕರಿಣಿಯಲ್ಲಿ ಸ್ನಾನ ಮಾಡಿ ಅಲ್ಲಿಯೇ ತೀರದಲ್ಲಿ ಕುಳಿತು ತಪಸ್ಸನ್ನು ಆಚರಿಸಹತ್ತಿದನು. ಹೀಗೆ ಮುಂದೆ ಒಂದು ದಿನ ಪಂಚಾಯುಧಯುಕ್ತನಾಗಿ ಶ್ರೀದೇವಿಭೂದೇವಿ

ಸಹಿತನಾಗಿ, ದಿವ್ಯ ಆಭರಣಗಳ ಹೊಂದಿದವನಾಗಿ, ಎದೆಯಲ್ಲಿ ಸುವಾಸನೆಯುಕ್ತ ಹೂಮಾಲೆಯನ್ನು ಧರಿಸಿದ ವೈಕುಂಠವಾಸನು ಪ್ರತ್ಯಕ್ಷನಾದನು. 'ಭಕ್ತಾ! ಪುಷ್ಕರಿಣಿ ಸ್ನಾನದಿಂದ ನಿನ್ನ ಸರ್ವಪಾಪ ಪರಿಹಾರವಾಯಿತು. ಸತ್ಪುರುಷನ ದರ್ಶನಭಾಗ್ಯದಿಂದ ಜ್ಞಾನವಂತನಾದೆ. ನಿಶ್ಚಲ ಭಕ್ತಿಯಿಂದ ಲಕ್ಷ್ಮೀಯನ್ನು ಸಂತೋಷಗೊಳಿಸಿದಿ. ಅದರಿಂದ ನೀನು ದೀರ್ಘಾಯುರಾರೋಗ್ಯಗಳಿಂದ ಅಧಿಕಸಂಪತ್ತನ್ನು ಅನುಭವಿಸಿ ಪರಲೋಕದ ಸುಖವನ್ನೂ ಕೂಡ ಹೊಂದುವಿ' ಎಂದು ಹೇಳಿ ಅಂತರ್ಧಾನನಾದನು. ಆತ್ಮಾರಾಮನ ಆನಂದಕ್ಕೆ ಪಾರವಿಲ್ಲದಂತಾಯಿತು. ಕಣ್ಣುಗಳಲ್ಲಿ ಸಂತೋಷವನ್ನು ತುಂಬಿಕೊಂಡು, ಕಂಠವು ಗದ್ಗದಿತವಾಗಿ, ಸ್ವಲ್ಪ ಹೊತ್ತು ಆಕಾಶದ ಕಡೆಗೆ ನೋಡುತ್ತ ಮಹಾದಾಯಿ ಭಗವಂತನನ್ನು ನೆನೆಯುತ್ತ ನಮಸ್ಕರಿಸುತ್ತ 'ಈ ಜನ್ಮದಲ್ಲಿ ಎಷ್ಟು ಪುಣ್ಯ ಮಾಡಿದ್ದೇ ಆಗಲಿ,

ಪಾಪ ಮಾಡಿದ್ದೇ ಆಗಲಿ ಅನುಭವಿಸಲೇಬೇಕು, ತಪ್ಪಲಾಗದು'. ಎಂದು ಅಂದುಕೊಳ್ಳುತ್ತ ತನ್ನ ನಿವಾಸದ ಕಡೆಗೆ ಹೊರಟನು.

ಆತ್ಮಾರಾಮನು ಪೂರ್ವಪುಣ್ಯದಿಂದ ಪಿತ್ರಾರ್ಜಿತ ಸಂಪತ್ತನ್ನು ಅನುಭವಿಸುತ್ತ, ಆತಿಥಿಸತ್ಕಾರ ಮುಂತಾದವುಗಳನ್ನು ಆಚರಿಸುತ್ತ, ಶಾಸ್ತ್ರಜ್ಞಾನವನ್ನು ಸಂಪಾದಿಸಿದರೂ, ಪೂರ್ವಜನ್ಮದ ಪಾಪಕರ್ಮಗಳಿಂದ ಕಷ್ಟಗಳನ್ನು ಅನುಭವಿಸಿದನು. ಪುಣ್ಯತೀರ್ಥಗಳ ಕ್ಷೇತ್ರದರ್ಶನ ಭಾಗ್ಯದಿಂದ, ಸತ್ಪುರುಷರ ಸಂದರುಶನದಿಂದ ಅವರೆಲ್ಲರ ಹಿತಬೋಧವನ್ನು ಅನುಷ್ಠಾನಕ್ಕೆ ತಂದು ಸಕಲ ಸಂಪತ್ತನ್ನು ಹಾಗು ಸಕಲೈಶ್ವರ್ಯಗಳನ್ನು ಹೊಂದಿ ನಾರಾಯಣನ ಅನುಗ್ರಹಕ್ಕೆ ಪಾತ್ರನಾಗಿ ಚರಿತ್ರಾರ್ಥ ಪುರುಷನಾದನು. **'ಏಷಃ ಸರ್ವಭೂತಾಂತರಾತ್ಮಾ ಅಪಹಾತಪಾಪ್ಮಾ ದಿವ್ಯದೇವ ಏಕೋ ನಾರಾಯಣ'** ಎಂಬ ವೇದವಾಕ್ಯದ ಭಾವವನ್ನು ಆತ್ಮಾರಾಮನ ವೃತ್ತಾಂತವು ಬಲಪಡಿಸುವಂತಿದೆ. ಚತುರ್ವಿಧ ಪುರುಷಾರ್ಥಗಳಲ್ಲಿ ಧರ್ಮಾರ್ಥಕಾಮಗಳನ್ನು ದಾಟಿ ಪ್ರಧಾನವಾದ ಮೋಕ್ಷವನ್ನು ಕೋರುವವರು ನಾರಾಯಣನನ್ನೇ ಭಜಿಸಬೇಕು. ಆ ನಾರಾಯಣನೇ ಕಲಿಯುಗ ವೈಕುಂಠ ವಾಸನಾದ, ಈ ಕ್ಷೇತ್ರನಿವಾಸನಾದ ಶ್ರೀ ವೆಂಕಟೇಶ್ವರನು. ಶ್ರೀನಿವಾಸನೊಬ್ಬನೇ ಮೋಕ್ಷ ಪ್ರದಾಯಕನು. ಸದ್ಗತಿ ಹೊಂದುವದಕ್ಕೆ ಭಕ್ತಿ ಮಾರ್ಗಕ್ಕಿಂತ ಬೇರೆ ಸರಿಯಾದ ಮಾರ್ಗವಿಲ್ಲ. ಒಂದು ವೇಳೆ ಶ್ರೀನಿವಾಸನ ಭಕ್ತಿಸಾಧನೆಯಲ್ಲಿ ವಿಘ್ನವೇನಾದರೂ ಬಂದರೆ ಮುಂದಿನ ಜನ್ಮದಲ್ಲಿ ಅವನು ನಿಶ್ಚಯವಾಗಿ ವಿಷ್ಣುಪಾದವನ್ನು ಸೇರುವನು. ತೀರ್ಥಕ್ಷೇತ್ರದರ್ಶನವೇ ಸರ್ವರಿಗೆ ಮುಕ್ತಿಸಾಧನವು.

## 3. ಆಕಾಶಗಂಗಾ ತೀರ್ಥ

ಸ್ವಾಮಿ ಪುಷ್ಕರಿಣಿ ತೀರ್ಥಕ್ಕೆ ಉತ್ತರದಿಶೆಯಲ್ಲಿ ಮಹಾವೃಕ್ಷಗಳೊಂದಿಗೆ, ಲತಾಗುಲ್ಮಗಳೊಂದಿಗೆ ನಾನಾ ಫಲಪುಷ್ಪಭರಿತವಾಗಿರುವ ದಟ್ಟ ಗಿಡಮರಗಳ ಗುಂಪಿನೊಂದಿಗೆ ಎತ್ತರದ ಗುಡ್ಡದ ಕಲ್ಲುಬಂಡೆಗಳು ಕಾಣುವುವು. ಹಿಂದೆ ಈ ದಟ್ಟವಾದ ಅರಣ್ಯದಲ್ಲಿ ಹಲವು ಅಡವಿಮೃಗಗಳು ಮತ್ತು ವನಮೃಗಗಳು ಬಹಳ ಸಂಚರಿಸುತ್ತಿದ್ದವು. ಅಲ್ಲಿ ಒಂದು ಎತ್ತರದ ಪರ್ವತದ ಸುರಂಗಮಾರ್ಗದಿಂದ ಕೆಳಗೆ ನಿರಂತರವಾಗಿ ನೀರು ಪ್ರವಹಿಸುತ್ತಿತ್ತು. ಈ ಪ್ರವಾಹವು ಪರ್ವತದ ಆಯಾ ಭಾಗಗಳಲ್ಲಿ ಹರಿಯುತ್ತ ಆ ನೀರು ಕೆಳಗೆ ಭೂಮಿಗೆ ಇಳಿದು ಬರುತ್ತದೆ. ಇಂದು ದಿವ್ಯ ಗಂಗೆಯ ನೀರು ಕಲೆತು ಮುಂದೆ ಬರುತ್ತದೆ ಎಂದು ಹೇಳುವರು. ಇದು ಒಂದು ಬಹಳ ಪವಿತ್ರವಾದ ತೀರ್ಥವು.

ಪೂರ್ವದಲ್ಲಿ ಗೌತಮೀತೀರ ಎಂಬ ಗ್ರಾಮದಲ್ಲಿ ಮಹಾಸಜ್ಜನನಾದ, ಸತ್ಕುಲಜಾತನಾದ, ಧರ್ಮಶೀಲನಾದ, ಸಕಲಶಾಸ್ತ್ರಪುರಾಣ ಧರ್ಮಗಳನ್ನು ಸರಿಯಾಗಿ ತಿಳಿದುಕೊಂಡ, ಮಾತಾಪಿತಾಗುರುದೈವರೆಲ್ಲರಲ್ಲಿ ಅತ್ಯಂತ ಭಯಭಕ್ತಿಯುಳ್ಳವನಾದ, ಪಿತ್ರಾರ್ಜಿತ ಸ್ಥಿರಚರ ಆಸ್ತಿಗಳನ್ನು ಅನುಭವಿಸುತ್ತ, ಅತಿಥಿಗಳನ್ನೂ ಆದರಿಸುತ್ತ ಒಬ್ಬ ಗೃಹಸ್ಥನು ಇರುತ್ತಿದ್ದನು. ಒಂದು ದಿನ ಆತನ ಮನೆಗೆ ಒಬ್ಬ ಅಭ್ಯಾಗತನು ಬಂದನು. ಆ ದಿವಸ ಮನೆಯಲ್ಲಿ ಪಿತೃಶ್ರಾದ್ಧ ಇದ್ದ ಕಾರಣ ಅವನನ್ನು ಆ ಶ್ರಾದ್ಧಕ್ಕಾಗಿ ಆಮಂತ್ರಿಸಿದನು. ಆ ಗೃಹಸ್ಥನು ಭಕ್ತಿಶ್ರದ್ಧೆಗಳಿಂದ ಪಿತೃಕಾರ್ಯಗಳನ್ನು ಮುಗಿಸಿ, ತಾಂಬೂಲ ಹಾಗೂ ದಕ್ಷಿಣಗಳಿಂದ ಆತನನ್ನು ಆದರಿಸಿ ಸಂತೃಪ್ತನನ್ನಾಗಿಸಿ ಕಳಿಸಿಕೊಟ್ಟನು. ಸ್ವಲ್ಪ ದಿನಗಳ

ನಂತರದಲ್ಲಿ ಆ ಪುಣ್ಯವಂತನಾದ ಗೃಹಸ್ಥನ ಮುಖವು ಬದಲಾಗುತ್ತ ಬದಲಾಗುತ್ತ ಕೊನೆಗೆ ಆತನಿಗೆ ಕತ್ತೆಯ ಮುಖ ಪ್ರಾಪ್ತವಾಯಿತು. ಆಗ ಆ ಸಜ್ಜನನು ಚಿಂತಿಸುತ್ತ ಅದನ್ನು ಪರಿಹರಿಸಲು ಉಪಾಯ ಹುಡುಕುತ್ತ ಕೃಷ್ಣಾ, ಪೆನ್ನಾ ಇತರ ನದಿಗಳ ಸ್ನಾನ ಮಾಡಿ ಸುತ್ತಲೂ ಇರುವ ಎಲ್ಲಾ ಕ್ಷೇತ್ರಗಳನ್ನು ದರ್ಶಿಸುತ್ತ ಮುಂದೆ ಸುವರ್ಣಮುಖಿ ನದಿತೀರದಲ್ಲಿ ಇರುವ ಅಗಸ್ತ್ಯಾಶ್ರಮಕ್ಕೆ ಬಂದನು. (ಈಗ ಆ ಆಶ್ರಮವು ತಿರುಪತಿಯಿಂದ ಚಿತ್ತೂರಿಗೆ ಹೋಗುವ ಮಾರ್ಗದಲ್ಲಿ ಚಂದ್ರಗಿರಿಯ ಹತ್ತಿರ ತೋಂಡವಾಡ ಗ್ರಾಮದ ಉತ್ತರ ದಿಕ್ಕಿನಲ್ಲಿ ಸುವರ್ಣನದಿಯ ತೀರದಲ್ಲಿದೆ. ಅಲ್ಲಿನ ಅಗಸ್ತ್ಯಋಷಿಯು ಸ್ಥಾಪಿಸಿದ ಈಶ್ವರಾಲಯವು ಪ್ರಸಿದ್ಧವಾಗಿದೆ). ಹಲವಾರು ಮುನಿಪುಂಗವರ ಮಧ್ಯ ಕುಳಿತಿರುವ ತೇಜೋಧಿಕರಾಗಿದ್ದ ಅಗಸ್ತ್ಯ ಮಹಾಮುನಿಯನ್ನು ಕಂಡು, ನಮಸ್ಕರಿಸಿ, ಅವರ ಎದುರು ವಿಧೇಯನಾಗಿ ನಿಂತು, ನಡೆದುದ್ದೆಲ್ಲವನ್ನು ವಿವರಿಸಿ ತನ್ನ ವಿಕೃತರೂಪವನ್ನು ಕಳೆಯಲು ಬೇಡಿಕೊಂಡನು. ಅದನ್ನು ಕೇಳಿ ಆ ಮಹಾಮುನಿಯು ಸ್ವಲ್ಪ ಸಮಯ ಸಮಾಧಿಯಲ್ಲಿ ಮಗ್ನನಾಗಿ ತನ್ನ ತಪೋಮಹಿಮೆಯಿಂದ ಆತನ ಎಲ್ಲ ವೃತ್ತಾಂತವನ್ನು ಗ್ರಹಿಸಿಕೊಂಡು, ಪಿತೃಶ್ರಾದ್ಧಕ್ಕೆ ಅಪುತ್ರನನ್ನು ನೇಮಿಸಿಕೊಂಡ ದೋಷಕ್ಕಾಗಿ ಈ ಮುಖ ಹೊಂದಿರುವಿ ಎಂದು ಹೇಳಿ, ಮತ್ತೇ ಸ್ವಲ್ಪ ಹೊತ್ತು ಆಲೋಚಿಸಿ 'ವತ್ಸಾ! ನೀನು ಸಕಲ ಶಾಸ್ತ್ರ ಪುರಾಣಗಳನ್ನು ತಿಳಿದವನೇ, ಸರ್ವಸದ್ಗುಣಗಳೂ ನಿನ್ನಲ್ಲಿ ಇವೆ, ಜೊತೆಗೆ ನೀನು ಜಗದನುಭವವೂ ಪಡೆದವನು. ತನಗೆ ತಿಳಿಯದ ವಿಷಯಗಳ ದೊಡ್ಡವರನ್ನು ಕೇಳಿ ತಿಳಿಯುವುದು ಒಳ್ಳೆಯದು. ದಿವ್ಯ ತೀರ್ಥಗಳ ಶ್ರೇಷ್ಠಮಹಿಮೆಗಳಿವೆ. ಈಗಲಾದರೂ ಈಶಾನ್ಯದಿಕ್ಕಿನ ಮೂರು ಯೋಜನ ದೂರದಲ್ಲಿ ವೆಂಕಟಾಚಲ ಎಂಬ ಬೆಟ್ಟವಿದೆ.

ಅಲ್ಲಿ ಸ್ವಾಮಿಪುಷ್ಕರಿಣಿ ಎಂಬ ಪುಣ್ಯತೀರ್ಥವಿದೆ. ನೀನು ಆ ವೆಂಕಟಾಚಲವನ್ನು ಹತ್ತಿ, ಸ್ವಾಮಿ ಪುಷ್ಕರಿಣಿ ಸೇರಿ, ಭಕ್ತಿಶ್ರದ್ಧೆಯಿಂದ ಸ್ನಾನ ಮಾಡಿದರೆ ನಿನ್ನ ದೋಷವು ನಿವಾರಣೆಯಾಗುವುದು. ಆ ಪುಷ್ಕರಿಣಿತೀರದ ಹತ್ತಿರ ಇರುವ ವರಾಹ ಸ್ವಾಮಿಯ ದರ್ಶನ ಪಡೆದು ಮುಂದೆ ಉತ್ತರದಿಶೆಯಲ್ಲಿ ಇರುವ ಆಕಾಶಗಂಗಾ ತೀರ್ಥದಲ್ಲಿ ಸ್ನಾನ ಮಾಡಿದ ಮೇಲೆ ನಿನ್ನ ಮುಖವು ಪೂರ್ವರೂಪವನ್ನು ಪಡೆಯುವದು. ಅದಕ್ಕಾಗಿ ತಡಮಾಡದೇ ಆ ವೆಂಕಟಾಚಲಕ್ಕೆ ಹೊರಡು.' ಎಂದು ಉಪದೇಶಿಸಿ ಕಳಿಸಿದ ಮೇಲೆ ಆ ಸಜ್ಜನೋತ್ತಮನು ಆ ಮುನಿಯ ಆದೇಶದ ಪ್ರಕಾರ ವೆಂಕಟಾಚಲ ಪರ್ವತವನ್ನು ಏರಿ ಸ್ವಾಮಿಪುಷ್ಕರಿಣಿಯಲ್ಲಿ ಸ್ನಾನ ಮಾಡಿ, ವರಾಹಸ್ವಾಮಿಯ ದರ್ಶನ ಪಡೆದು, ಆಕಾಶಗಂಗಾತೀರ್ಥದಲ್ಲಿ ಮುಳುಗಲು, ದೋಷಮುಕ್ತನಾಗಿ ಗಾರ್ದಭಮುಖವು ಹೋಗಿ ಹಿಂದಿನ ಮುಖಸ್ಥಿತಿಯನ್ನು ಪಡೆದನು. ಆಕಾಶಗಂಗಾ ತೀರ್ಥದ ಮಹಿಮೆಯನ್ನು ತಿಳಿದುಕೊಂಡು, ಕೆಲವು ದಿವಸ ಅಲ್ಲಿಯೇ ವಸತಿ ಮಾಡಿ ಮುಂದೆ ತನ್ನ ಊರು ಸೇರಿದನು ಎಂದು ತಿಳಿದುಬರುತ್ತದೆ.

ಪೂರ್ವದಲ್ಲಿ ಅಂಜನಾದೇವಿಯು ಕೇಸರಿ ಎಂಬ ವಾನರೋತ್ತಮನನ್ನು ವಿವಾಹವಾಗಿ, ಎಷ್ಟೋ ವರುಷಗಳವರೆಗೆ ಸಂತಾನವಿಲ್ಲವಾಗಿ ಮುಂದೆ ಮತಂಗಮುನಿಯನ್ನು ಕಂಡು ತನಗೆ ಸಂತಾನಪ್ರಾಪ್ತಿಗಾಗಿ ಮಂತ್ರೋಪದೇಶ ಮಾಡಲು ಪ್ರಾರ್ಥಿಸಿದಳು. ಮತಂಗಮುನಿಯು ಅವಳ ಭಕ್ತಿಗೆ ಮೆಚ್ಚಿ 'ಅಮ್ಮಾ! ವೈಕುಂಠದ ಕ್ರೀಡಾದ್ರಿಯು ಭೂಲೋಕದಲ್ಲಿ ಸ್ವರ್ಣಮುಖಿ ನದಿಗೆ ಉತ್ತರದಲ್ಲಿದೆ. ಹತ್ತಿರದಲ್ಲಿ ಸ್ವಾಮಿ ಪುಷ್ಕರಿಣಿಯೂ ಇದೆ. ಆ ಪುಷ್ಕರಿಣಿಯಲ್ಲಿ

ಸ್ನಾನ ಮಾಡಿದಲ್ಲಿ ಸರ್ವದೋಷಗಳು ಪರಿಹಾರವಾಗುವುವು. ಆ ಪುಷ್ಕರಿಣಿಯ ದಡದಲ್ಲಿ ವರಾಹ ಸ್ವಾಮಿಯು ಇದ್ದಾನೆ. ಆತನ ದರ್ಶನವನ್ನು ಪಡೆದುಕೊಂಡರೆ ನಿನ್ನ ಅಭಿಲಾಷೆಗಳೆಲ್ಲವೂ ಈಡೇರುವುವು. ಆ ಪುಷ್ಕರಿಣಿಗೆ ಉತ್ತರದಲ್ಲಿ ದಿವ್ಯವಾದ ಒಂದು ಪರ್ವತಾರಣ್ಯವಿದೆ. ಆ ಪರ್ವತಾರಣ್ಯದಿಂದ ಆಕಾಶಗಂಗಾನದಿಯು ಕೆಳಹರಿಯುತ್ತದೆ. ಆ ನದಿಯಲ್ಲಿ ಸ್ನಾನ ಮಾಡಿದಲ್ಲಿ ಪಾವನವಾಗುವುದಲ್ಲದೇ ಆಯುರಾರೋಗ್ಯಗಳು ಲಭಿಸುವವು. ನೀನು ದೃಢ ಮನಸ್ಸಿನಿಂದ ವಾಯುದೇವರನ್ನು ಕುರಿತು ಆಕಾಶಗಂಗಾ ತೀರದಲ್ಲಿ ತಪಸ್ಸು ಆಚರಿಸು, ಆ ವಾಯುದೇವನು ನಿನಗೆ ಮಹಾಪ್ರಸಾದ ರೂಪದಲ್ಲಿ ಮಹಾಬಲಶಾಲಿಯಾದ ಸುಪುತ್ರನನ್ನು ದಯಪಾಲಿಸುವನು.' ಎಂದು ಅವಳಿಗೆ ವಾಯುದೇವನ ಮಂತ್ರವನ್ನು ಉಪದೇಶಿಸಿ ಕಳುಹಿಸಿದನು.

ಅಂಜನಾದೇವಿಯು ಭೂಲೋಕ ಕ್ರೀಡಾದ್ರಿ ಸೇರಿ ಮತಂಗಮುನಿಗಳ ಉಪದೇಶದಂತೆ ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನವನ್ನು ಮತ್ತು ವರಾಹ ದೇವರ ದರ್ಶನವನ್ನು ಪಡೆದು, ಆಕಾಶಗಂಗಾ ತೀರ್ಥದಲ್ಲಿ ಸ್ನಾನ ಮಾಡಿ ಮಹಾದೀಕ್ಷೆಯಲ್ಲಿ ವಾಯುದೇವನನ್ನು ಕುರಿತು ತಪವನ್ನಾಚರಿಸಿದಳು. ಕೆಲ ವರುಷಗಳ ನಂತರ ವಾಯುದೇವನು ಪ್ರಸನ್ನನಾಗಿ ಆವಳು ಕೇಳಿದ ವರವನ್ನು ಕೊಟ್ಟು ಹೋಗಿಬಿಟ್ಟನು. ಆ ವರಪ್ರಸಾದದಿಂದ ಅಂಜನಾದೇವಿಗೆ 'ಆಂಜನೇಯ' ಎಂಬ ಮಹಾಬಲಶಾಲಿಯಾದ ಪುತ್ರನು ಜನಿಸಿದನು. ಆವಳು ಆಚರಿಸಿದ ಆ ಪರ್ವತ ಕ್ರೀಡಾದ್ರಿಗೆ ಅಂಜನಾದ್ರಿ ಎಂಬ ಹೆಸರು ತ್ರೇತಾಯುಗದಿಂದ ಪ್ರಸಿದ್ಧವಾಗಿದೆ ಎಂದು ಪುರಾಣಗಳು ಹೇಳುತ್ತವೆ. ಆಕಾಶಗಂಗಾ ತೀರ್ಥವು

ಸರ್ವಪಾಪಗಳನ್ನು ನಾಶ ಮಾಡಿ ಆಯುರಾರೋಗ್ಯೈಶ್ವರ್ಯಗಳನ್ನು ಕೊಡುವುದಲ್ಲದೇ, ಸಂತಾನ ಇಲ್ಲದವರಿಗೆ ವ್ರತ ಆಚರಿಸಿದವರಿಗೆ ಸಂತಾನ ಪ್ರಾಪ್ತಿಯಾಗುವದೆಂದು ಈ ಅಂಜನಾದೇವಿಯ ಇತಿಹಾಸವು ತಿಳಿಸಿಕೊಡುತ್ತದೆ.

ಪ್ರತಿವರುಷ ಚೈತ್ರಮಾಸದಲ್ಲಿ ಚಿತ್ತಾನಕ್ಷತ್ರದಲ್ಲಿ ಹುಣ್ಣಿಮೆದಿನ ಆಕಾಶಗಂಗಾದಲ್ಲಿ ಸ್ನಾನ ಮಾಡಿ ತಮ್ಮ ಇಷ್ಟದೈವವನ್ನು ಕುರಿತು ವ್ರತವಾಚರಿಸಿದವರು ಸಂತಾನ ಪಡೆಯುವರೆಂದು ತಿಳಿದು ಬರುತ್ತದೆ.

## 4. ಪಾಪನಾಶನ ತೀರ್ಥ

ಪಾಪನಾಶನ ತೀರ್ಥವು ನಿಜವಾಗಿಯೂ ಸಾರ್ಥಕನಾಮಧೇಯವಾಗಿದೆ. ಜಲದ ಮೇಲಿನ ಬಿಳಿನೊರೆಯಿಂದ ನೀರಿನ ಕಲ್ಮಷವು ಹೋಗುವಂತೆ ಅದರಲ್ಲಿ ಸ್ನಾನ ಮಾಡಿರುವವರ ಎಲ್ಲ ಪಾಪಗಳು ಕಳೆದು ಹೋಗುತ್ತವೆ. ಈ ಪಾಪನಾಶನ ತೀರ್ಥವು ಸ್ವಾಮಿಪುಷ್ಕರಿಣಿಯ ಉತ್ತರದಿಶೆಯ ಪರ್ವತಶ್ರೇಣಿಯಲ್ಲಿ ಒಂದು ಪರ್ವತದ ಮೇಲಿರುವ ಪ್ರಮುಖವಾದ ತೀರ್ಥಗಳಲ್ಲಿ ಇದು ಒಂದು. ಸದ್ಯಕ್ಕೆ ತಿರುಮಲದಿಂದ ಪಾಪನಾಶನಕ್ಕೆ ಹೋಗಲು ದೇವಸ್ಥಾನದ ಬಸ್ಸುಗಳ ಸೌಕರ್ಯವಿದೆ. ಯಾತ್ರಿಕರು ಪಾಪನಾಶನ ತೀರ್ಥದಲ್ಲಿ ಸ್ನಾನ ಮಾಡಿ ತಮ್ಮ ಪಾಪಗಳನ್ನು ಕಳೆದುಕೊಳ್ಳುವರು. ಪಶ್ಚಿಮದ ಪರ್ವತದ ಸ್ವಲ್ಪ ಎತ್ತರದ ಭಾಗವು ಕೆಲವು ಚದುರ ಮೈಲು ಮುಂದು ಹೋಗಿದೆ. ಆ ಎತ್ತರದ ಭಾಗದಿಂದ ಧಾರಾಕಾರವಾಗಿ ನೀರು ಕೆಳಗೆ ಹರಿದು ಬರುತ್ತದೆ. ದೇವಸ್ಥಾನದವರು ಅಲ್ಲಿ ಯಾತ್ರಿಕರ ಅವಶ್ಯಕತೆಯಂತೆ ಕೆಲವು ಕಟ್ಟಡಗಳ ಏರ್ಪಾಟು ಮಾಡಿದ್ದಾರೆ, ಅಲ್ಲಿನ ಪ್ರಕೃತಿ ರಮಣೀಯ

ಸೌಂದರ್ಯವನ್ನು ಆನಂದಿಸಬಹುದು, ಆಗಲಿ ವರ್ಣಿಸಲಸಾಧ್ಯ. ಅಲ್ಲಿನ ಮಹಾವೃಕ್ಷಗಳು ಮಟಮಟ ಮಧ್ಯಾಹ್ನದಲ್ಲಿಯೂ ತಂಪುನೆರಳು ನೀಡುವುವಲ್ಲದೇ ತಣ್ಣನೆಯ ಗಾಳಿ ಒದಗಿಸುವುವು. ಪಾಪನಾಶನ ಸಂದರ್ಶನ ಮಾತ್ರದಿಂದಲೇ ಭಕ್ತರು ಭಗವಂತನ ದಿವ್ಯಸೃಷ್ಟಿ ಹಾಗೂ ಮಹಿಮೆಗಳ ಬಗ್ಗೆ ತಿಳಿದು, ಆಸ್ತಿಕ್ಯವು ಬಂದು ಆ ಭಗವಂತನನ್ನು ನಿಶ್ಚಲವಾಗಿ ಧ್ಯಾನಿಸಿದರೆ ಆ ಭಗವಂತನ ಅಸ್ತಿತ್ವದ ಬಗ್ಗೆ ಗೊತ್ತಾಗುವುದು ಎಂಬುದು ಅನುಭವವೇದ್ಯ.

ಈ ತೀರ್ಥದ ಮಹಿಮೆಯನ್ನು ತಿಳಿಯಲು ಹೀಗೊಂದು ಪೌರಾಣಿಕ ಕಥೆ ಇದೆ.

ಪೂರ್ವದಲ್ಲಿ ಭದ್ರಮತಿ ಎಂಬ ವೇದವೇದಾಂಗಾದಿ ಸಕಲ ಶಾಸ್ತ್ರಪುರಾಣ ಪಾರಂಗತನಾದ ಒಬ್ಬ ಪಂಡಿತನಿದ್ದನು. ಆತನು ವಿದ್ಯಾವಿನಯ ಸಂಪನ್ನನಾಗಿದ್ದನು. ಅವನು ಸರಸ್ವತಿ ಪುತ್ರನಾಗಿದ್ದಕ್ಕಾಗಿ ಲಕ್ಷ್ಮೀಕಟಾಕ್ಷವು ಇರಲೇ ಇಲ್ಲ. ಯಾವುದೇ ಉದ್ಯೋಗವಿಲ್ಲ. ಸಂಪಾದನೆ ಇಲ್ಲ. ದಾರಿದ್ರ್ಯವು ಸಂಪೂರ್ಣವಾಗಿ ಆವರಿಸಿಕೊಂಡಿತ್ತು. ಆತನ ರೂಪ, ಯೌವನ, ವಿದ್ಯಾದಿಗಳನ್ನು ನೋಡಿ ಕೃತ, ಸಿಂಧು, ಯಶೋವತಿ, ಕಾಮಿನಿ, ಮಾಲಿನಿ, ಶೋಭ ಎಂಬ ಆರು ಜನರು ಮದುವೆಯಾದರು. ಇಷ್ಟಾಗಿ ಅವರಲ್ಲಿ ಯಾರಿಗೂ ಸಂತಾನವಾಗಲಿಲ್ಲ. ದರಿದ್ರರಿಗೆ ಸಂತಾನ ಜಾಸ್ತಿ ಎಂಬ ಮಾತಿದೆ. ಆದರೆ ಇಲ್ಲಿ ಹಾಗಾಗಲಿಲ್ಲ. ಹೇಗೋ ಜೀವನಯಾತ್ರೆ ನಡೆಸುತ್ತಿದ್ದ. ಬರುಬರುತ್ತ ಆತನ ಸಂಸಾರ ನಿರ್ವಹಣೆಯೂ ದೊಡ್ಡ ಸಮಸ್ಯೆಯಾಯಿತು. ಧನವಿಲ್ಲದದವನಿಗೆ ಧಣಿಗಳು ಯಾರು ಆದರಿಸುತ್ತಾರೆ? ಅದಕ್ಕೇನೆ 'ಧನಮೂಲಂ ಇದಂ ಜಗತ್' ಎಂಬ ನಾಣ್ನುಡಿ ಹುಟ್ಟಿದೆ ಅಲ್ಲವೇ? ವಿದ್ಯೆಯಲ್ಲಿ ವಿವೇಕದಲ್ಲಿ

ಶೂನ್ಯನಾಗಿದ್ದರೂ ಪೂರ್ವ ಪುಣ್ಯಗಳಿಂದ ಧನವಂತನಾಗಿದ್ದಾನೆ ಎಂದು ಆದರಿಸುವುದು ಲೋಕದ ಪರಿಪಾಠ. ಕೆಲವರು ವಿದ್ಯಾವಂತರು ಸಂಪದ್ಭರಿತರಾಗಿರಬಹುದು. ಅದು ಅವರವರ ಪುಣ್ಯವಿಶೇಷವಷ್ಟೇ. ಆದರೆ ನಿತ್ಯದಾರಿದ್ರ್ಯದಿಂದ ಕಷ್ಟ ಪಡುವವರು ಸಾಕಷ್ಟು ಜನರಿದ್ದಾರೆ. ಅವರು ಪರಧನಕ್ಕೆ ಎಂದೂ ಆಶೆ ಪಟ್ಟವರಲ್ಲ. ತನಗೆ ವಿದ್ಯಾಸಾರವನ್ನು ತಿಳಿಸಿದ ಕೆಲವು ವಿದ್ಯಾವಂತರನ್ನು ರಾಜ ಮಹಾರಾಜರು ಪೋಷಿಸುತ್ತಾರೆ. ಕೆಲವರನ್ನು ರಾಜಸನ್ಮಾನ ಕೂಡ ಮಾಡುತ್ತಾರೆ. ಆದರೆ ಈ ಭದ್ರಮತಿಯು ಸನ್ಮಾನಗಳನ್ನು ಆಶಿಸದೇ ಸ್ವಯಂ ಅರ್ಜಿತದಿಂದ ದೊರೆತ ಗಂಜಿಯೇ ಮೇಲು ಎಂದು ತಿಳಿದವನು. ಈಕಡೆ ಭಾರ್ಯಾಪುತ್ರರ ಪೋಷಣೆಗಾಗಿ ಯಾರಿಗೂ ಕೈಚಾಚದೇ ತನ್ನ ಆತ್ಮ ಗೌರವವನ್ನು ಬಿಡದೇ ಹೇಗೋ ಕಷ್ಟಗಳ ಅನುಭವಿಸುತ್ತ ಕೆಲ ಕಾಲ ಕಳೆದನು.

ದಿನದಿನಕ್ಕೂ ಸಂಸಾರದ ಭಾರ ಹೆಚ್ಚಾಗುತ್ತಾ ಹೋಯಿತು. ದೇಹದ ಶಕ್ತಿ ಕುಂದುತ್ತಾ ಹೋಯಿತು. ಮುಂದೆ ಒಂದು ದಿನ ಭದ್ರಮತಿ ಚಿಂತಾಕ್ರಾಂತನಾಗಿ ಕುಳಿತದ್ದು ಕಂಡು ಹೆಂಡತಿ ಕಾಮಿನಿಯು ಪತಿಯನ್ನು ವಿಚಾರಿಸಲು ಆತನ ಕಡೆಗೆ ಬಂದು ಹೀಗೆ ಹೇಳಿದಳು, “ಪ್ರಿಯಾ! ನಾನು ಸಣ್ಣವಳಿದ್ದಾಗ ಒಂದು ದಿವಸ ಒಬ್ಬ ಯತೀಶ್ವರರು ಬಂದು ನಮ್ಮ ತಂದೆಯೊಂದಿಗೆ ಮಾತನಾಡುತ್ತಿರುವ ಸಂದರ್ಭದಲ್ಲಿ ‘ವೆಂಕಟಾಚಲದಲ್ಲಿ ಪಾಪನಾಶನ ಎಂಬ ತೀರ್ಥ ಇದೆಯೆಂದು, ಅದರಲ್ಲಿ ಸ್ನಾನ ಮಾಡಿದರೆ ಪಾಪಗಳೆಲ್ಲವೂ ನಶಿಸಿ ಹೋಗಿ ಅವರು ಲಕ್ಷ್ಮೀಕಟಾಕ್ಷಕ್ಕೆ ಪಾತ್ರರಾಗುವರು, ಸ್ನಾನ ಮಾಡಿ ಭೂದಾನ ಮಾಡಿದವರಿಗೆ ಸಕಲೈಶ್ವರ್ಯಗಳು ಪಡೆದು ಸರ್ವಸುಖಗಳನ್ನು ಅನುಭವಿಸುವರು’

ಎಂದು ಆ ತೀರ್ಥದ ಮಹಾತ್ಮೆಯನ್ನು ತಿಳಿಯಪಡಿಸಿದರು. ಹಾಗಾಗಿ ನೀವು ತೀರ್ಥಯಾತ್ರೆ ಕೈಕೊಂಡು ಲಕ್ಷ್ಮೀ ಅನುಗ್ರಹವನ್ನು ಹೊಂದುವುದೇ ನಿಮ್ಮ ಸಮಸ್ಯೆಗೆ ಪರಿಹಾರ." ಇದನ್ನು ಕೇಳಿದ ಕೂಡಲೇ ಆ ಭದ್ರಮತಿಯು ಸಕುಟುಂಬ ವೆಂಕಟಾಚಲ ಯಾತ್ರೆಗೆ ಹೊರಟನು. ಮಾರ್ಗಮಧ್ಯದಲ್ಲಿ ಸುಶಾಲಿ ಎಂಬ ಪಟ್ಟಣವನ್ನು ಸೇರಿದನು. ಅಲ್ಲಿ ಧನವಂತನಾದ, ಮಹಾದಾನಿಯಾದ, ದಯಾಪರನಾದ, ಬಡವರ ಬಗ್ಗೆ ಆದರಾಭಿಮಾನಗಳನ್ನು ಹೊಂದಿದ ಸುಘೋಷ ಎಂಬುವನು ಬಹಳ ಒಳ್ಳೆಯವನು ಎಂದು ಅವರಿವರಿಂದ ತಿಳಿದು ಅವನ ಹತ್ತಿರ ಹೋಗಿ ತನ್ನ ಕಥೆಯನ್ನೆಲ್ಲ ಅರುಹಿ ತನಗೆ ಒಂದಿಷ್ಟು ಭೂದಾನ ಮಾಡಬೇಕೆಂದು ಕೇಳಿಕೊಂಡನು. ವೇದಶಾಸ್ತ್ರಪಂಡಿತನಾಗಿದ್ದು ಸಂತಾನ ಯುಕ್ತನಾದವನಿಗೆ ಮಾಡಿದ ದಾನವು ಸತ್ಪಾತ್ರದಾನ ಆಗುವದೆಂದು ತಿಳಿದು ಆ ಭದ್ರಮತಿಗೆ ಆತಿಥ್ಯ ನೆರವೇರಿಸಿ ಕೇಳಿದ ಭೂದಾನ ಮಾಡಿ ಅವನನ್ನು ಸಂತೋಷ ಪಡಿಸಿದನು. ಭದ್ರಮತಿಯು ತನಗೆ ಭೂಮಿ ದೊರಕಿತು ಎಂದು ಬಹಳ ಸಂತೋಷದಿಂದ ಪ್ರಯಾಣವನ್ನು ಮುಂದುವರಿಸಿ, ತಿರುಪತಿ ಸೇರಿ, ಕಪಿಲತೀರ್ಥದಲ್ಲಿ ಸ್ನಾನ ಮಾಡಿ ನಂತರ ವೆಂಕಟಾಚಲಕ್ಕೆ ಹೊರಟನು.

ವೆಂಕಟಾಚಲ ಬೆಟ್ಟ ಸೇರಿ ಸ್ವಾಮಿಪುಷ್ಕರಿಣಿಯಲ್ಲಿ ಸ್ನಾನ ಮಾಡಿಕೊಂಡು, ವರಾಹ ಸ್ವಾಮಿಯ ದರ್ಶನ ಪಡೆದು ಮುಂದೆ ಕುಟುಂಬ ಸಮೇತನಾಗಿ ಪಾಪನಾಶನ ತೀರ್ಥವನ್ನು ತಲುಪಿದನು. ಮನಶುದ್ಧಿಯಿಂದ ಪಾಪನಾಶನ ತೀರ್ಥದಲ್ಲಿ ಸ್ನಾನ ಮಾಡಿ ಲಕ್ಷ್ಮೀನಾರಾಯಣನನ್ನು ಧ್ಯಾನಿಸುತ್ತ, ತಾನು ಸುಘೋಷನಿಂದ ದಾನವಾಗಿ ಗ್ರಹಿಸಿದ್ದನ್ನು ಸಜ್ಜನನಾದ, ಸಂತಾನವಂತನಾದ, ವಿದ್ಯಾವಂತನಾದ ಒಬ್ಬ ಬಡವನಿಗೆ ಭಗವತ್ಪ್ರೀತಿಯಿಂದ ದಾನ

ಮಾಡಿದನು. ಆಗ ಲಕ್ಷ್ಮೀನಾರಾಯಣನು ಆ ಭದ್ರಮತಿಗೆ ತನ್ನ ದಿವ್ಯದರ್ಶನ ಅನುಗ್ರಹಿಸಿದನು. ಭದ್ರಮತಿಯು ದೇವರ ದರ್ಶನದಿಂದ ಪಾವನನಾಗಿ ಇನ್ನೂ ಹೆಚ್ಚಿನ ರೀತಿಯಲ್ಲಿ ದೇವರನ್ನು ಸ್ತುತಿಸಿ, ಪದೇ ಪದೇ ನಮಸ್ಕರಿಸುತ್ತ, ಆನಂದಾತಿಶಯದಿಂದ ಕಣ್ಣುಗಳಿಂದ ಆನಂದಬಾಷ್ಪಧಾರೆಯನ್ನು ಸುರಿಸುತ್ತ ದೇವರ ಮುಂದೆ ಕೈಕಟ್ಟಿಕೊಂಡು ನಿಂತನು. ಭಗವಂತನು ಆತನ ಅಭೀಷ್ಟಗಳನ್ನು ತಿಳಿದು ಸಕಲೈಶ್ವರ್ಯಗಳನ್ನು ಅನುಗ್ರಹಿಸಿ ಮಾಯವಾದನು. ಲಕ್ಷ್ಮೀನಾರಾಯಣನ ಪೂರ್ಣ ಅನುಗ್ರಹಕ್ಕೆ ಪಾತ್ರನಾದ ಭದ್ರಮತಿಯು ಸಕಲ ಪರಿವಾರದೊಂದಿಗೆ ಪ್ರಯಾಣವನ್ನು ಮುಗಿಸಿ ತನ್ನ ಊರು ಸೇರಿದನು. ಅಲ್ಲಿ ತನಗೆ ಸಂದ ಸ್ವಾಮಿಯ ಕಟಾಕ್ಷದಿಂದ ಲಭಿಸಿದ ಸಕಲ ಐಶ್ವರ್ಯಗಳನ್ನು ಅನುಭವಿಸುತ್ತ ಕೊನೆಗೆ ಮುಕ್ತಿ ಹೊಂದಿದನು. ಮುಂದೆ ಸುಮತಿ, ದೃಢಮತಿ ಎಂಬುವವರೂ ಕೂಡ ಪಾಪನಾಶನ ತೀರ್ಥದಲ್ಲಿ ಸ್ನಾನ ಮಾಡಿ ತಮ್ಮ ಪೂರ್ವ ಪಾಪಗಳನ್ನು ಕಳೆದುಕೊಂಡು ಇಹಪರ ಸೌಖ್ಯಗಳನ್ನು ಹೊಂದಿದರೆಂದು ಅವರ ಕತೆಗಳನ್ನು ಹೇಳುತ್ತಾರೆ.

ಸಪ್ತಮಿ, ಭಾನುವಾರ, ಪುಷ್ಯ, ಹಸ್ತಾ ನಕ್ಷತ್ರಗಳು ಕೂಡಿದ ಸುದಿನದಲ್ಲಿ ಶ್ರದ್ಧಾಭಕ್ತಿಗಳಿಂದ ಪಾಪನಾಶನ ತೀರ್ಥದಲ್ಲಿ ಸ್ನಾನ ಮಾಡುವವರ ಪಾಪಗಳು ಕರಗಿಹೋಗಿ ಶುಭವಾಗುವುದೆಂದು ಪುರಾಣವು ಹೇಳುತ್ತದೆ.

## 5. ಕುಮಾರಧಾರಾ ತೀರ್ಥ

ಈ ತೀರ್ಥವು ಪಾಪನಾಶನ ತೀರ್ಥಕ್ಕೆ ವಾಯುವ್ಯ ದಿಕ್ಕಿನಲ್ಲಿದೆ. ಇದೂ ಕೂಡ ಬಹಳ ಪವಿತ್ರವಾದದ್ದು ಮತ್ತು ಸಾರ್ಥಕವಾದ ಚರಿತ್ರೆ ಹೊಂದಿದೆ. ಇದರಲ್ಲಿ ಶತವರ್ಷದ ವೃದ್ಧರು

ಸ್ನಾನ ಮಾಡಿದರೆ ಕೌಮಾರ್ಯಕ್ಕಿಂತ ಹೆಚ್ಚಿನ ಶಕ್ತಿಯ ಶರೀರವನ್ನು ಹೊಂದುವರು ಎಂದು ಹೇಳುವದುಂಟು. ಮಾಘ ಮಾಸದ ಪೂರ್ಣಿಮಾ ಮಘಾ ನಕ್ಷತ್ರಗಳು ಕೂಡಿದ ದಿನ ಮಧ್ಯಾಹ್ನ ಕಾಲದಲ್ಲಿ ಸ್ನಾನ ಮಾಡಿಕೊಂಡು ದಕ್ಷಿಣಸಹಿತ ಅನ್ನದಾನ ಮಾಡುವವರು ಗಂಗಾದಿ ಸರ್ವಪುಣ್ಯತೀರ್ಥಗಳಲ್ಲಿ ಸ್ನಾನ ಮಾಡಿದ ಫಲ ದೊರೆಯುವುದೆಂದು ಪುರಾಣಗಳು ಹೇಳುತ್ತವೆ.

ಅದಕ್ಕೊಂದು ಉದಾಹರಣೆ.... ಪೂರ್ವದಲ್ಲಿ ಸಕಲ ಶಾಸ್ತ್ರ ಪುರಾಣ ಪಾರಂಗತನು, ಸಜ್ಜನನು, ದೈವಭಕ್ತನು ಆಗಿದ್ದ ಒಬ್ಬ ವೃದ್ಧನು, ಸಜ್ಜನನಾದ ಕೌಂಡಿಣ್ಯನೆಂಬ ಎಂಬ ಶಿಷ್ಯನ ಜೊತೆಗೆ ವೆಂಕಟಾಚಲದಲ್ಲಿನ ಆಶ್ರಮದಲ್ಲಿ ಇಳಿದುಕೊಂಡು, ಹೋಮಾದಿ ಕಾರ್ಯಗಳನ್ನು ಜೊತೆಗೆ ತಪವನ್ನು ಆಚರಿಸುತ್ತಿದ್ದನು. ಒಂದು ದಿನ ಆತನು ನಿತ್ಯ ಪೂಜೆಗಳ ಸಲುವಾಗಿ ಪುಷ್ಪ ಫಲ ಮತ್ತು ಸಮಿತ್ತುಗಳನ್ನು ಆರಿಸಲು ಆರಣ್ಯಕ್ಕೆ ಹೋಗಿ ಸಾಕಾಗುವಷ್ಟು ಎಲ್ಲ ಪದಾರ್ಥಗಳನ್ನು ಸಂಗ್ರಹಿಸಿಕೊಂಡು ತಿರುಗಿ ಆಶ್ರಮಕ್ಕೆ ಬರಬೇಕಾದರೆ ದಾರಿ ತಪ್ಪಿಸಿಕೊಂಡನು. ಹೊತ್ತು ಹೋಗುತ್ತಾ ಇತ್ತು, ಆಗ ಆಶ್ರಮದಲ್ಲಿನ ತನ್ನ ಶಿಷ್ಯನನ್ನು ಕರೆಯುತ್ತ, 'ಓ ಕೌಂಡಿಣ್ಯಾ! ಓ ಕೌಂಡಿಣ್ಯಾ!' ಎಂದು ಅರಚುತ್ತಾ ದಿಕ್ಕುದಿಕ್ಕಿಗೆ 'ಎಲ್ಲಿದ್ದೀ ಎಂದು' ಕೇಳುತ್ತಿದ್ದನು. ಆ ಸಮಯದಲ್ಲಿ ವೆಂಕಟಾಚಲಪತಿಯು ನವನವೋನ್ಮೇಷದಂತೆ ಒಬ್ಬ ಚಿಕ್ಕಹುಡುಗನ ರೂಪ ಧರಿಸಿ ಆ ವೃದ್ಧನ ಹತ್ತಿರ ಬಂದು 'ಅಯ್ಯಾ! ಇದು ನರಸಂಚಾರದ ಪ್ರದೇಶವೇ ಅಲ್ಲ, ಇಲ್ಲಿ ಯಾರೂ ಇಲ್ಲವಲ್ಲ. ಕೌಂಡಿಣ್ಯ ಯಾರು? ಎಲ್ಲಿದ್ದಾನೆ?' ಎಂದು ಕೇಳಿದನು. ಇದರಿಂದ ಆ ವೃದ್ಧನು ಗಲಿಬಿಲಿಗೊಂಡು ನಂತರ ಸ್ವಲ್ಪ ಸುಧಾರಿಸಿಕೊಂಡು 'ಅಯ್ಯಾ! ಕೌಂಡಿಣ್ಯನು ನನ್ನ ಶಿಷ್ಯ, ಸಮೀಪದಲೇ ನನ್ನ ಆಶ್ರಮದಲ್ಲಿ ಇದ್ದಾನೆ. ನಾನು ದಾರಿ

ತಪ್ಪಿಸಿಕೊಂಡು ಇಲ್ಲಿ ತಿರುಗುತ್ತಿದ್ದೇನೆ. ಇಲ್ಲಿ ಯಾರೂ ಇಲ್ಲವಾ! ನನಗೆ ದೃಷ್ಟಿ ಕಡಿಮೆ ಆಗಿದೆ. ಈ ಕತ್ತಲಿನಲ್ಲಿ ನನಗೇನೂ ಕಾಣುತ್ತಾ ಇಲ್ಲ. ನನ್ನ ಆಶ್ರಮಕ್ಕೆ ಹೋಗುವ ಹಾದಿ ಗೊತ್ತಾಗುತ್ತಾ ಇಲ್ಲ. ನನ್ನ ದಿನನಿತ್ಯಕೃತ್ಯಗಳನ್ನು ಹೇಗೆ ನೆರವೇರಿಸಲಿ ಎಂದು ಚಿಂತಿಸುತ್ತಿದ್ದೇನೆ. ವಯಸ್ಸು ಮೀರಿ ಮೆತ್ತಗಾಗಿದ್ದೇನೆ. ಸ್ವಲ್ಪ ದೂರವೂ ಮುಂದೆ ಹೋಗುವುದಾಗುತ್ತಿಲ್ಲ. ಇಲ್ಲಿ ನನ್ನವರೆನ್ನುವವರು ಯಾರೂ ಇಲ್ಲ. ಓ ಸ್ವಾಮಿ ವೆಂಕಟೇಶ್ವರ! ನಿನ್ನನ್ನೇ ನಂಬಿದ್ದೇನೆ. ಸೂರ್ಯನೂ ಅಸ್ತವಾಗುತ್ತಿದ್ದಾನೆ. ಈಗ ನನ್ನದೇನು ಗತಿ?' ಎಂದು ಗೋಗರೆಯುತ್ತಿರುವಾಗ ಶ್ರೀ ವೆಂಕಟಾಚಲಪತಿಯು ಆತನಿಗೆ 'ಅಯ್ಯಾ! ಶತಾಧಿಕ ವಯೋವೃದ್ಧನು ನೀನು. ಕೃಷನಾಗಿ, ಶಕ್ತಿ ಇಲ್ಲದೇ, ಕಣ್ಣಿನ ದೃಷ್ಟಿ ಮಂದವಾಗಿ ನಡೆಯಲಾಗದ ಸ್ಥಿತಿಯಲ್ಲಿ ಇದ್ದಿಯಾ. ನೀನೇಕೆ ಈ ಕ್ರೂರಮೃಗಗಳ ಸಂಚಾರವಿರುವ ಈ ಆರಣ್ಯಕ್ಕೆ ಬಂದಿದ್ದೀ? ಇನ್ನೂ ಬದುಕಬೇಕೆಂದು ಆಶೆಯೇ' ಎಂದು ಹಾಸ್ಯದಿಂದ ಕೇಳಿದನು.

ಆಗ ಆ ವೃದ್ಧನು 'ಅಯ್ಯಾ! ನೀನಾರು ನನಗೆ ಗೊತ್ತಿಲ್ಲ, ನಿಜವಾಗಿ ನನಗೆ ಜೀವದ ಮೇಲೆ ಆಶೆ ಇಲ್ಲ. ಆದರೆ ಜನ್ಮ ಮುಗಿಯುವವರೆಗೆ, ಜೀವ ಇರುವವರೆಗೆ ದೇವಋಣವು ತೀರಿಸಿಯೇ ಈ ದೇಹ ತ್ಯಾಗ ಮಾಡಬೇಕು ಎಂದು ನಾವು ಅಂಗೀಕರಿಸಿದ್ದೇವೆ ಅಲ್ಲವೇ! ನಿತ್ಯಪೂಜೆಗಳನ್ನು ಸಕ್ರಮವಾಗಿ ನಡೆಸದೇ ನಾನು ಹೇಗಿರಲಿ ಎಂಬ ವಿಚಾರ ಬಿಟ್ಟು ನನಗೆ ಬೇರೆ ಆಶೆಯೇ ಇಲ್ಲ.' ಎಂಬುದನ್ನು ಕೇಳಿ ವೆಂಕಟಾಚಲಪತಿ, ಆತನ ಮನೋಸ್ಥಿತಿಯನ್ನು ತಿಳಿದು 'ಅಯ್ಯಾ! ನೀನು ನನ್ನ ಕೈ ಹಿಡಿದುಕೊಂಡು ಬಾ, ನಿನ್ನನ್ನು ಸುರಕ್ಷಿತವಾಗಿ ಆಶ್ರಮಕ್ಕೆ ಸೇರಿಸುವೆನು.' ಎಂದು ಆತನ ಕೈ ಹಿಡಿದು, ಸ್ವಲ್ಪ ದೂರ ಹೋಗಿ,

ಅಲ್ಲಿನ ತೀರ್ಥವನ್ನು ತೋರಿಸಿ 'ಈ ತೀರ್ಥದಲ್ಲಿ ಸ್ನಾನ ಮಾಡು, ಆಮೇಲೆ ಆಶ್ರಮಕ್ಕೆ ಹೋಗೋಣ.' ಎಂದಾಗ ಆ ವೃದ್ಧನು ಆ ತೀರ್ಥದಲ್ಲಿ ಮುಳುಗಿ, ಮೇಲೆ ಎದ್ದು ಬಂದಾಗ ಹದಿನಾರು ವರ್ಷದ ಯುವಕನಾಗಿ ಪರಿವರ್ತನಾಗಿ, ತೇಜೋಮಯವಾದ ಕಣ್ಣುಗಳಿಂದ, ಹದಿಹರೆಯದವನು ಆಗಿದ್ದನ್ನು ಕಂಡು ಆಶ್ಚರ್ಯಚಕಿತನಾಗಿ ಬಿಟ್ಟನು. ಅಲ್ಲಿಗೆ ತನ್ನನ್ನು ತಂದ ಯುವಕನು ಆಮೇಲೆ ಕಾಣಲೇ ಇಲ್ಲ. ಆಮೇಲೆ ಶ್ರೀ ವೆಂಕಟಾಚಲಾಧೀಶನ ಭಕ್ತವತ್ಸಲತೆಯನ್ನು ಕಂಡು ಆಶ್ಚರ್ಯ ಚಕಿತರಾಗಿ ದೇವತೆಗಳು ಪುಷ್ಪವರ್ಷವನ್ನು ಸುರಿಸಿದರು, ಸ್ವಾಮಿಯನ್ನು ವಿಧವಿಧದಲ್ಲಿ ಸ್ತುತಿಸಿದರು. ಆ ನಂತರ ಆ 'ಬಾಲಕುಮಾರ' ನಿಗೆ ದೇವಋಣ ತೀರಿಸಲು ಸರ್ವಸಂಪದಗಳನ್ನು ಅನುಗ್ರಹಿಸಿ ದೇವತೆಗಳು ಅಂತರ್ಧಾನರಾದರು. ವೃದ್ಧನು ಕುಮಾರನಾಗಿದ್ದಕ್ಕಾಗಿ ಆ ತೀರ್ಥಕ್ಕೆ ಕುಮಾರಧಾರಾತೀರ್ಥವು ಎಂದು ಸಾರ್ಥಕ ನಾಮ ಪಡೆಯಿತು. ಆತನು ತನ್ನ ಆಶ್ರಮಕ್ಕೆ ಬಂದು ನಿತ್ಯಹೋಮಾದಿ ದೈವಕಾರ್ಯಗಳನ್ನು ನಿರ್ವಹಿಸಿ ದೇವ ಋಣವನ್ನು ತೀರಿಸಿಕೊಂಡು ದಿವ್ಯಲೋಕ ಸೇರಿದನು.

ಈ ಕುಮಾರಧಾರಾತೀರ್ಥದಲ್ಲಿ ಮಾಘಮಾಸ, ಪೂರ್ಣಿಮಾ, ಮಘಾ ನಕ್ಷತ್ರಗಳು ಇವೆಲ್ಲ ಕೂಡಿದ ದಿನದಿಂದ ನಿತ್ಯವೂ ಮುಂಜಾನೆ ಸ್ನಾನ ಮಾಡಿ ಮೂರು ತಿಂಗಳು ವೆಂಕಟಾಚಲಪತಿಯನ್ನು ಶಕ್ತ್ಯಾನುಸಾರ ಪೂಜಿಸಿ ಧ್ಯಾನಿಸಿದರೆ ವಯೋವೃದ್ಧರೂ ಕೂಡ ಯೌವನಪ್ರಾಯದ ಹಾಗೆ ಶರೀರ ಪುಷ್ಟಿ ಪಡೆದು ಇಹಸುಖಗಳನ್ನು ಅನುಭವಿಸಿ ಕೊನೆಗೆ ವೈಕುಂಠ ಸೇರುವರೆಂದು ಪ್ರಾಜ್ಞರ ಸೂಕ್ತಗಳು ಹೇಳುತ್ತವೆ. ಇಂಥ ಪ್ರಸಿದ್ಧ ತೀರ್ಥಗಳು ವೆಂಕಟಾಚಲದಲ್ಲಿ ಬಹಳ ಇವೆ. ಹಾಗಾಗಿಯೇ ವೆಂಕಟಾಚಲವು ದಿವ್ಯ ಕ್ಷೇತ್ರವು ಹೌದು, ಪುಣ್ಯಕ್ಷೇತ್ರವು ಹೌದು.

## 6. ದೇವತೀರ್ಥ

ಈ ದೇವತೀರ್ಥವು ಶ್ರೀವೆಂಕಟಾಚಲಪತಿಯ ಆಲಯದ ವಿಮಾನಕ್ಕೆ ವಾಯುವ್ಯ ದಿಕ್ಕಿಗೆ ಬೆಟ್ಟದ ಗುಹೆಯ ಹತ್ತಿರ ಇದೆ. ಪುಷ್ಯಮೀ ನಕ್ಷತ್ರವು ಗುರುವಾರ ಬಂದಾಗ ಆಗಲಿ, ಶ್ರವಣಾ ನಕ್ಷತ್ರವು ಸೋಮವಾರ ಬಂದಾಗ ಆಗಲಿ ಇಲ್ಲವೇ ವ್ಯತೀಪಾತ ಯೋಗವು ಇದ್ದ ದಿನ ಮಾನವರು ಪರಿಶುದ್ಧರಾಗಿ ಈ ದೇವತೀರ್ಥದಲ್ಲಿ ಸ್ನಾನ ಮಾಡಿದವರ ಸರ್ವದೋಷಗಳು ನಶಿಸಿ ಹೋಗುತ್ತವೆ, ಆಯುರಾರೋಗ್ಯ ಸಹಿತ ಪುತ್ರಪೌತ್ರಾದಿ ಸಂತಾನ ಭಾಗ್ಯದಿಂದ ಇಹಪರ ಸುಖಗಳು ಅನುಭವಿಸುವರೆಂದು ಪುರಾಣವು ಹೇಳುತ್ತದೆ.

## 7. ಪಾಂಡವತೀರ್ಥ

ಈ ತೀರ್ಥವು ಸ್ವಾಮಿಪುಷ್ಕರಿಣಿ ತೀರ್ಥಕ್ಕೆ ಪೂರ್ವದಿಕ್ಕಿಗೆ ಸುಮಾರು ಎರಡು ಕಿಲೋಮಿಟರ್ ದೂರದಲ್ಲಿದೆ. ದ್ವಾಪರದಲ್ಲಿ ಪಾಂಡವರು ತಮ್ಮ ದಾಯಾದಿಗಳಾದ ಕೌರವರ ವಂಶವನ್ನು ಅಂತ್ಯಗೊಳಿಸಿದರಿಂದ ಬಂದ ಪಾಪಗಳ ಪರಿಹಾರಾರ್ಥವಾಗಿ ಶ್ರೀ ಕೃಷ್ಣನು ಅವರನ್ನು ಕೆಲದಿವಸಗಳು ಶೇಷಾದ್ರಿಗಿರಿಯಲ್ಲಿಯೇ ಇರಲು ಕಳುಹಿಸಿದ್ದನು. ಶ್ರೀ ಕೃಷ್ಣನ ಆಜ್ಞೆಯಂತೆ ಪಾಂಡವರು ವೈಶಾಖ ಶುದ್ಧ ದ್ವಾದಶೀ ಭಾನುವಾರದಂದು ಶೇಷಾದ್ರಿಗೆ ಬಂದು ಅಲ್ಲಿ ಒಂದು ಜಲಾಶಯದ ತೀರದಲ್ಲಿ ಆಶ್ರಮ ಮಾಡಿಕೊಂಡು ವಾಸಮಾಡಿದ ಕಾರಣ ಆ ಜಲಾಶಯಯಕ್ಕೆ ಪಾಂಡವತೀರ್ಥ ಎಂದು ಹೆಸರಾಯಿತು ಎಂದು ಹಿರಿಯರು ಹೇಳುತ್ತಾರೆ.

## 8. ತುಂಬುರುತೀರ್ಥ

ಪೂರ್ವದಲ್ಲಿ ತುಂಬುರು ಎಂಬ ಒಬ್ಬ ಗಂಧರ್ವನು ವೆಂಕಟಾಚಲಕ್ಕೆ ಬಂದು ಪಾಪನಾಶನತೀರ್ಥದ ಉತ್ತರ ದಿಕ್ಕಿಗೆ ಒಂದು ಜಲಾಶಯದ ತೀರದಲ್ಲಿ ಆಶ್ರಮ ನಿರ್ಮಿಸಿಕೊಂಡು ಅಲ್ಲಿ ವೆಂಕಟೇಶ್ವರನ ಕುರಿತು ತಪಸ್ಸು ಆಚರಿಸುತ್ತಿದ್ದನು. ಕೆಲವು ವರ್ಷಗಳ ನಂತರ ಭಕ್ತವತ್ಸಲನಾದ ವೆಂಕಟಾಚಲಪತಿಯು ತುಂಬುರುವಿಗೆ ದರ್ಶನ ಕೊಟ್ಟು ಆತನ ಕೋರಿಕೆಗಳನ್ನು ನೆರವೇರಿಸಿದನು. ಮುಂದೆ ಸ್ವಾಮಿಯ ದರ್ಶನಭಾಗ್ಯದಿಂದ ಶಾಶ್ವತವಾದ ವೈಕುಂಠಪ್ರಾಪ್ತಿ ಹೊಂದಿದನು. ಈ ತುಂಬುರುತೀರ್ಥದಲ್ಲಿ ಫಾಲ್ಗುಣ ಮಾಸದ ಶುದ್ಧಪೂರ್ಣಿಮಾ, ಉತ್ತರಪಾಲ್ಗುಣ ನಕ್ಷತ್ರ ಮತ್ತು ಸೋಮವಾರ ಇದ್ದಾಗ ಸ್ನಾನ ಮಾಡಿ ಶ್ರೀ ವೆಂಕಟೇಶ್ವರನನ್ನು ಆರಾಧಿಸಿದವರಿಗೆ ಪುನರ್ಜನ್ಮ ಇಲ್ಲವೆಂದು ಪುರಾಣವು ತಿಳಿಸುತ್ತದೆ.

## 9. ಘೋಣತೀರ್ಥ

ಈ ತೀರ್ಥವು ತುಂಬುರುತೀರ್ಥಕ್ಕೆ ಸಮೀಪದಲ್ಲಿಯೇ ಇದೆ. ಇದು ಭೂಲೋಕದಲ್ಲಿ ಮಾನವರು ಮಾಡುವ ಸಕಲ ಪಾತಕಗಳನ್ನು ಪರಿಹಾರ ಮಾಡಿ ಅವರನ್ನು ಪವಿತ್ರರನ್ನಾಗಿ ಮಾಡುವುದು. ಪೂರ್ವದಲ್ಲಿ ಅಗಸ್ತ್ಯ ಋಷಿಯು ತನ್ನ ಶಿಷ್ಯವರ್ಗಸಹಿತವಾಗಿ ವೆಂಕಟಾಚಲಕ್ಕೆ ಬಂದು ಘೋಣತೀರ್ಥವನ್ನು ನೋಡಿ ಆ ತೀರ್ಥಮಹಿಮೆಯನ್ನು ತನ್ನ ಶಿಷ್ಯರಿಗೆ ತಿಳಿಸಿದನು.

ವನದ ಮರಗಳನ್ನು ಕಡಿಯುವವರು, ಕನ್ಯೆಯನ್ನು ಮಾರುವವರು, ದೇವಾಲಯದ ಆಸ್ತಿಗಳನ್ನು ಅಪಹರಿಸುವವರು, ತುಂಬಿರುವ ಕೆರೆಗಳನ್ನು ಒಡೆಯುವವರು, ಪರಸ್ತ್ರೀಯನ್ನು

ಬಲಾತ್ಕಾರಿಸುವವರು, ಗಂಡನ ಮಾತುಗಳ ನಿರಾಕರಿಸುವವರು, ಅಲ್ಲದೇ ಮಾತು ಕೊಟ್ಟು ತಪ್ಪುವುದು, ಸುಳ್ಳು ಸಾಕ್ಷಿ ಹೇಳುವುದು, ಸುರಾಪಾನ ಮಾಡುವುದು, ಬ್ರಹ್ಮದ್ವೇಷ ಮಾಡುವುದು, ಗುರುದ್ರೋಹ ಮಾಡುವುದು, ದೇಹಶಕ್ತಿ ಕಳೆದುಕೊಳ್ಳುವದು, ನಂಬುಗೆ ದ್ರೋಹ ಮಾಡುವದು ಈ ರೀತಿಯ ಮಹಾಪಾತಕಗಳನ್ನು ಮಾಡಿದವರು ಈ ಘೋಣತೀರ್ಥದಲ್ಲಿ ಮಾಘಮಾಸದ ಸೂರ್ಯೋದಯಕ್ಕೆ ಮುಂಚೆ ಸ್ನಾನ ಮಾಡಿ ಅದೇ ಆಗ ಉದಯಿಸಿದ ಸೂರ್ಯನನ್ನು ಉಪಾಸನೆ ಮಾಡಿದಾಗ ಅವರ ಸರ್ವದೋಷಗಳು ಪರಿಹಾರವಾಗುವವು. ಮತ್ತೇ ಆ ತೀರ್ಥದ ತೀರದಲ್ಲಿ ವಾಸಮಾಡಿ ಶ್ರೀಮನ್ನಾರಾಯಣನ ಕುರಿತು ಒಂದು ತಿಂಗಳು ವ್ರತನಿಯಮಯುಕ್ತರಾಗಿ ಪೂಜಿಸಿದವರ ಸಮಸ್ತ ಪಾಪಗಳು ನಷ್ಟ ಹೊಂದಿ ಮಹಾಪುಣ್ಯವು ದೊರೆಯುವದು ಎಂದು ಘೋಣತೀರ್ಥದ ಮಹಿಮೆಯನ್ನು ವಿವರಿಸಿದನು. ಅದರ ಸಮೀಪದಲ್ಲಿ ಇರುವ ಅಶ್ವತ್ಥವೃಕ್ಷ ಪೊಟರಿನ ಒಳಗೆ ತುಂಬುರು ಎಂಬ ಗಂಧರ್ವನ ಭಾರ್ಯೆಯು ಗಂಡನು ಕೊಟ್ಟ ಶಾಪವನ್ನು ಅನುಭವಿಸುತ್ತ ಹೆಂಡತಿ ಕಪ್ಪೆಯಾಗಿ ಬಹಳ ಕಾಲ ಅಲ್ಲಿ ಇದ್ದಳಂತೆ. ಅಗಸ್ತ್ಯನು ಘೋಣತೀರ್ಥ ಪ್ರಭಾವವನ್ನು ತನ್ನ ಶಿಷ್ಯರಿಗೆ ಹೇಳುತ್ತಿರುವದನ್ನು ಕೇಳಿದ ಆ ಮಂಡೂಕವು (ಕಪ್ಪೆಯು) ತನ್ನ ಪತಿಯು ಕೊಟ್ಟ ಶಾಪದಿಂದ ವಿಮೋಚನ ಹೊಂದಿ ಮೊದಲಿನ ರೂಪ ಪಡೆದಳು. ಅವಳು ಆಶ್ಚರ್ಯಚಕಿತಳಾಗಿ ಆಗಸ್ತ್ಯನಿಗೆ ಹೇಳಿಕೊಂಡಳು. 'ಮುನೀಶ್ವರಾ! ನಾನು ನನ್ನ ಪತಿಯ ಜೊತೆಗೆ ವಾದವಿವಾದ ಮಾಡಿ ಆತನನ್ನು ನಿರಾಕರಿಸಿದ ಕೂಡಲೆ ನನ್ನ ಪತಿಯು ನನ್ನನ್ನು ಒಂದು ಮಂಡೂಕಳಾಗು ಎಂದು ಶಾಪ ಕೊಟ್ಟನು. ಮುಂದೆ ನಾನು ಈ ಅಶ್ವತ್ಥವೃಕ್ಷದ ಪೊಟರಿನೊಳಗೆ

ಜೀವಿಸುತ್ತಿದ್ದೆನು. ತಾವು ನಿಮ್ಮ ಶಿಷ್ಯರಿಗೆ ಘೋಣತೀರ್ಥದ ಮಹಿಮೆ ತಿಳಿಸುತ್ತಿರುವದನ್ನು ಕೇಳಿಯೇ ನನ್ನ ಶಾಪ ಪರಿಹಾರವಾಯಿತು. ಈಗ ನಾನು ನನ್ನ ಪತಿಯ ಆಜ್ಞೆ ಮೀರದಂತೆ ನನ್ನ ಸಾಧ್ವೀತ್ವವನ್ನು ತೋರಿಸಿಕೊಡುತ್ತೇನೆ. ನನಗೆ ನೀವು ಆಶೀರ್ವದಿಸಿ ಕಳಿಸಬೇಕೆಂದು ಕೋರುತ್ತಿದ್ದೇನೆ' ಎಂದು ಆ ಮುನೀಶ್ವರನನ್ನು ನಮಸ್ಕರಿಸಿ ಆತನ ಅನುಗ್ರಹ ಪಡೆದಳು. ಅಗಸ್ತ್ಯನು ಅವಳು ಪಶ್ಚಾತ್ತಾಪ ಪಟ್ಟದ್ದಕ್ಕೆ ಸಂತೋಷಗೊಂಡು ಅವಳಿಗೆ ಪತಿವ್ರತಾ ಧರ್ಮವನ್ನು ಬೋಧಿಸಿ **ಪತಿರಾತ್ಮಾ ಪತಿರ್ವಿಷ್ಣುಃ ಪತಿರ್ಬ್ರಹ್ಮ ಪತಿಶ್ಶಿವಃ । ಪತಿರ್ಗುರುಃ ಪತಿಸ್ಥಿರಂ ಇತಿ ಸ್ತ್ರೀಣಾಂ ವಿದುಃ ಬುಧಾಃ** ॥ ಎಂದು ಉಪದೇಶಿಸಿದನು. ಆ ಗಂಧರ್ವಪತ್ನಿಯು ಆ ಮುನಿಗೆ ತನ್ನ ಕೃತಜ್ಞತೆಗಳನ್ನು ಸಮರ್ಪಿಸಿ ಆತನ ಆಶೀರ್ವಾದ ಪಡೆದು 'ಭರ್ತಯಜ್ಞ' ಶಾಸ್ತ್ರಪ್ರಕಾರ ಘೋಣತೀರ್ಥದಲ್ಲಿ ಮಾಘಸ್ನಾನ ವ್ರತವನ್ನು ಪಾಲಿಸುತ್ತ ಶ್ರೀಮನ್ನಾರಾಯಣನನ್ನು ಮನಸಾ ಪೂಜಿಸಿ ಗಂಡನ ಪ್ರೀತಿಪ್ರೇಮಗಳನ್ನು ಪಡೆದು ತನ್ನ ಸತೀತ್ವವನ್ನು ಉಳಿಸಿಕೊಂಡಳೆಂದು ಇತಿಹಾಸ ಹೇಳುತ್ತದೆ.

## 10. ಸನಕಸನಂದನತೀರ್ಥ

ವೆಂಕಟಾಚಲದಲ್ಲಿ ಅತಿಪವಿತ್ರವಾದ ಮತ್ತು ಮಹಾಮಹಿಮೆಯುಳ್ಳ ಅನೇಕ ತೀರ್ಥಗಳಿವೆ. ಪಾಪನಾಶನ ತೀರ್ಥದ ಉತ್ತರ ಭಾಗದಲ್ಲಿ ಸುಮಾರು ಐದಾರು ಕಿಲೋಮಿಟರ್ ದೂರದಲ್ಲಿ ಸನಕಸನಂದನತೀರ್ಥವು ಇದೆ. ಮಾರ್ಗಶೀರ್ಷ ಶುಕ್ಲ ದ್ವಾದಶಿಯ ಅರುಣೋದಯದ ಸಮಯದಲ್ಲಿ ಸನಕ ಸನಂದನತೀರ್ಥದಲ್ಲಿ ಸ್ನಾನ ಮಾಡಿ ತ್ರಯೋದಶಿಯಿಂದ ಭಕ್ತಿ ಆದರಗಳಿಂದ ಶ್ರೀವೆಂಕಟೇಶಾಷ್ಟಾಕ್ಷರಿ 'ಶ್ರೀ ವೆಂಕಟೇಶಾಯ ನಮಃ'

ಮಂತ್ರೋಪದೇಶಯುಕ್ತ ಒಂದು ತಿಂಗಳು ನಿಷ್ಠೆಯಿಂದ ಜಪಿಸಿ ವ್ರತವಾಚರಿಸಿದವರಿಗೆ ಅವರ ಎಲ್ಲ ಅಭೀಷ್ಟಗಳು ಫಲಪ್ರದವಾಗುತ್ತವೆ ಎಂದು ದೊಡ್ಡವರು ಹೇಳುತ್ತಾರೆ.

## 11. ಕಾಯ ರಸಾಯನತೀರ್ಥ

ಸನಕಸನಂದನತೀರ್ಥಕ್ಕೆ ಸಮೀಪದಲ್ಲೇ ಕಾಯ ರಸಾಯನತೀರ್ಥವಿದೆ. ಈ ತೀರ್ಥದಲ್ಲಿ ಶ್ರದ್ಧೆಭಕ್ತಿಗಳಿಂದ ಸ್ನಾನ ಮಾಡಿ ಜಲಪಾನ ಮಾಡಿದರೆ ಕೆಲವು ವರ್ಷಗಳಲ್ಲಿ ಸರ್ವವ್ಯಾಧಿ ಬಾಧೆಗಳಿಂದ ವಿಮುಕ್ತರಾಗಿ ಪರಿಶುದ್ಧವಾದ ಅಂಗಸೌಷ್ಟವಗಳಿಂದ ಮುಪ್ಪು ಅಡರದಂಥ ಕಾಯಕಲ್ಪಸಿದ್ಧಿ ಪಡೆಯುತ್ತಾರೆ ಎಂದು ಪುರಾಣವು ಹೇಳುತ್ತದೆ.

## 12. ಕ್ಷೇತ್ರತೀರ್ಥಗಳ ಅವಶ್ಯಕತೆ

ವೆಂಕಟಾಚಲದಲ್ಲಿ ಹೆಚ್ಚಿನ ಮಹಾತ್ಮೆಯುಳ್ಳ ಎಷ್ಟೋ ದಿವ್ಯತೀರ್ಥಗಳು ಇವೆ. ತೀರ್ಥಗಳೇ ಅಲ್ಲದೇ ದಿವ್ಯೌಷಧಮೂಲಿಕೆಗಳು ಕೂಡ ವಿಶೇಷವಾಗಿ ಇವೆ ಎಂದೂ ಪ್ರಸಿದ್ಧವಾಗಿದೆ. ಅವುಗಳ ಮಹಿಮೆಯನ್ನು ಋಷಿಮಹರ್ಷಿಗಳು ಪುರಾಣಗಳಲ್ಲಿ ಹೇಳಿದ್ದಾರೆ. ನಮ್ಮ ತೀರ್ಥಸೇವನೆಯು ಮನೋವಿಲಾಸಕ್ಕಲ್ಲದೇ ಶ್ರದ್ಧೆಯಿಂದ ಭಕ್ತಿಯಿಂದ ಪಾರಮಾರ್ಥಿಕ ಚಿಂತನೆಯಿಂದ ಸೇವಿಸಿದಾಗ ಮಾತ್ರ ನಮಗೆ ಆ ತೀರ್ಥಗಳ ಮಹಿಮೆ ತಿಳಿಯುವದು. ಒಂದೇ ದಿನದ ಕಸರತ್ತಿನಿಂದ ಹೇಗೆ ಮಹಾವೀರನಾಗುವದಿಲ್ಲವೋ ಹಾಗೆ ಒಂದು ಸಾರಿ ಸ್ನಾನಮಾಡಿ ಪವಿತ್ರತೀರ್ಥಗಳ ಮಹಿಮೆಯನ್ನು ತಿಳಿದುಕೊಳ್ಳುವುದು ಸಾಧ್ಯವಿಲ್ಲ. ಮನಶುದ್ಧಿ ಯಿಂದ, ಪರಿಸರಶುದ್ಧಿಯಿಂದ, ಶ್ರಮವಹಿಸಿ

ಭಗವನ್ನಾಮ ಜಪಿಸುತ್ತ ಸರ್ವ ಜೀವಿಗಳಿಗೆ ಶುಭಕೋರಿ, ಪ್ರಶಾಂತಚಿತ್ತದಿಂದ ನಿತ್ಯಸಂತೃಪ್ತನಾಗಿ, ಪವಿತ್ರತೀರ್ಥಗಳನ್ನು ಸೇವಿಸುತ್ತ, ವಿಧಿ ತೋರಿದಂತೆ ನಡೆಯುವ ಮಾನವರು ಭಗವಂತನಿಗೆ ಪ್ರೀತಿಪಾತ್ರರಾಗಿ ಇಷ್ಟಾರ್ಥಸಿದ್ಧಿ ಪಡೆಯುವುದೇ ನಮ್ಮ ಪುರಾಣಗಳ ಅಂತರಾರ್ಥವು.

**'ಗಂಗಿಗೋವುಪಾಲುಗರಿ ತೇಡೈನನು ಚಾಲು'**

**'ಭಕ್ತಿಗಲಗು ಕೂಡು ಪಟ್ಟೇಡೈನನು ಚಾಲು'**

(ಗಂಗಾ ಎಂಬ ಗೋವಿನ ಹಾಲು ಒಂದು ಚಮಚೆಯಷ್ಟು ಆದರೂ ಸಾಕು, ಅದರಂತೆ ಭಕ್ತಿಯಿಂದ ಕೂಡಿದ ಒಂದು ಮುಷ್ಟಿಯಷ್ಟು ಅನ್ನ ಸಾಕು.) ಎಂಬ ಮಹಾವಾಕ್ಯಗಳ ಮಹಾರ್ಥ ತಾತ್ಪರ್ಯವನ್ನು ಗ್ರಹಿಸಿ ಮಾನವರು ಮಾನವಂತರಾಗಿ ಮೇಲಾಗಿ ಮಾಧವಸೇವೆಗೆ ಬದ್ಧರಾಗಿ ಇರುವುದೇ ನಮ್ಮ ಮಹಾಪುರಾಣಗಳ ಅಂತರಾರ್ಥ.

ಆಯಾ ತೀರ್ಥಗಳಿಗೆ ಮತ್ತು ಕ್ಷೇತ್ರಗಳಿಗೆ ಹೋಗಿ ದರ್ಶನ ಪಡೆದುಕೊಳ್ಳದಿದ್ದರೂ ಶ್ರದ್ಧೆಯಿಂದ ಆಯಾ ಕ್ಷೇತ್ರಗಳ ಬಗ್ಗೆ ಕೇಳಿ, ಓದಿ, ಮನಸ್ಸಿನೊಳಗೆ ಧ್ಯಾನ ಮಾಡಿದರೂ ಕೂಡ ಮಾನವರ ಅಭೀಷ್ಟಗಳು ನೆರವೇರುತ್ತವೆ ಎಂಬುದು ಸತ್ಯ.

ಕಲಿಯುಗದಲ್ಲಿ ಮಾನವರು ಈ ಸಂಸಾರಸಾಗರ ದಾಟಲು ಮುಂಚೆಯೇ ನಮ್ಮ ಋಷಿಮಹರ್ಷಿಗಳು ಬಹಳ ವಿಧದಲ್ಲಿ ತಮ್ಮ ಸಾಧನಸಂಪತ್ತನ್ನು ಬಹಳ ಜತನದಿಂದ ಬರೆದು ಇಟ್ಟಿದ್ದಾರೆ. ಅದರಲ್ಲಿ ಪುರಾಣಗಳೂ ಒಂದು. ನಮ್ಮ ಪೂರ್ವಿಕರೆಲ್ಲರೂ ಪುರಾಣಸೂಕ್ತಗಳ ಅನುಸರಿಸಿ ಭುಕ್ತಿಮುಕ್ತಿಗಳನ್ನು ಪಡೆದವರಾಗಿದ್ದಾರೆ. ಈ ಕಲಿಯುಗವು ಪಾಪಯುಕ್ತವಾಗಿದೆ. ಆ

ಪಾಪದ ಕೊಳೆಯನ್ನು ತೊಳೆದುಕೊಳ್ಳಲು ನಮ್ಮ ಭರತಭೂಮಿಯಲ್ಲಿ ನದಿನದಗಳಲ್ಲದೇ ಎಷ್ಟೋ ತೀರ್ಥಗಳಿವೆ.

ಗಂಗೆಯಮುನೆಗಳು, ಅವುಗಳ ಉಪನದಿಗಳು, ಸಿಂಧು, ಬ್ರಹ್ಮಪುತ್ರಾದಿ ದಿವ್ಯನದಿಗಳು, ಗೌತಮಿ, ಕೃಷ್ಣಾ, ತುಂಗಭದ್ರಾ, ಕಾವೇರಿ, ಪಿನಾಕಿನಿ, ದಕ್ಷಿಣ ಪ್ರಾಂತದ ನದಗಳು ನಮ್ಮ ಭರತಭೂಮಿಯಲ್ಲಿ ಭುಕ್ತಿಮುಕ್ತಿಗೆ ಸಾಧನಗಳು ಎಂಬುದರಲ್ಲಿ ಅತಿಶಯೋಕ್ತಿಯೇನಿಲ್ಲ.

ಗೌರಿಶಂಕರ ಶಿಖರದಿಂದ ಕನ್ಯಾಕುಮಾರಿ, ರಾಮೇಶ್ವರವರೆಗೆ ಇನ್ನೂ ಬಹಳಷ್ಟು ದಿವ್ಯಕ್ಷೇತ್ರಗಳು ಇವೆ. ಕಾಲ್ನಡಿಗೆಯು ದಿವ್ಯೌಷಧವು ಎಂದು ತಿಳಿದರೂ ನಾವು ಕೇವಲ ಕಾಲ್ನಡಿಗೆಯಿಂದ ಎಲ್ಲ ಕ್ಷೇತ್ರಗಳ ದರ್ಶನ ಮಾಡಲು ಸಾಧ್ಯವಿಲ್ಲ. ಅದಕ್ಕಾಗಿ ಈ ವೈಕುಂಠವಾಸನು ಮಾನವನ ಈ ರೀತಿಯ ಬಾಧೆಗಳನ್ನು ಹೋಗಲಾಡಿಸಲು ತಾನೇ ಸ್ವತಃ ವೆಂಕಟಾಚಲದಲ್ಲಿ ಬಂದು ನಮಗೆ ತೀರ್ಥಸೇವೆಯ ಫಲಗಳನ್ನು ಕೊಡುತ್ತಿದ್ದಾನೆ ಎಂಬುದು ಸತ್ಯವೇ!

'ಕೊಡುತ್ತಾನೆ' ಎಂಬ ನಂಬಿಕೆಯಿದ್ದಲ್ಲಿ ಫಲಗಳನ್ನು ಪಡೆದು ಅನುಭವಿಸಬಹುದು. ಅದಕ್ಕಾಗಿ ಕ್ಷೇತ್ರ ತೀರ್ಥ ಯಾತ್ರೆಗಳು ಅತ್ಯಂತ ಪ್ರಯೋಜನಕಾರಿ ಎಂದು ವಿಶ್ವಾಸದಿಂದ ಭಕ್ತಿಯನ್ನು ಆಚರಿಸಬೇಕು. ಅದೇ ಮಾನವನ ಕಲ್ಯಾಣದ ಸಾಧನೆಗೆ ಸೋಪಾನವು.

**"ಪುಣ್ಯಂ ಪವಿತ್ರಮಾಯುಷ್ಯಂ ಮಾಹಾತ್ಮ್ಯಮಿದಮುತ್ತಮಮ್ ।**
**ಯಃ ಪಠೇತ್ಪ್ರಯತೋ ಭಕ್ತ್ಯಾ ಶೃಣುಯಾದ್ವಾ ಲಿಖೇದಪಿ ।**
**ಸರ್ವಾನ್ ಕಾಮಾನ್ನವಾಪ್ನೋತಿ ಸಂಪ್ರಾಪ್ನೋತಿ ಚ ಮಂಗಳಮ್"।**
**(ವರಾಹಪುರಾಣ)**

[ಗದ್ಯ: ಇದಿ ಶ್ರೀ ಶ್ರೀನಿವಾಸನ ಪಾದಾರವಿಂದ ಧ್ಯಾನಾಮೃತಾಸ್ವಾದನಮತ್ತಚಿತ್ತ, ಶ್ರೀ ಜ್ಞಾನಪ್ರಸೂನಾಂಬಿಕಾ ಸಹಿತ ಶ್ರೀ ಕಾಳಹಸ್ತೀಶ್ವರಾನುಗ್ರಹಾಲಬ್ಧ ಕವಿತಾವಿಶೇಷ, ಶ್ರೀ ಕೈಲಾಸವಾಸಚಿಂತನ ಮಾನಸಸರೋವರ ವಿಹಾರ ಮರಾಳ ಮಿಥುನ ಲಕ್ಷ್ಮಾರ್ಯ ಲಕ್ಷ್ಮೀ ವರಸಾಂಬಾ ದ್ವಿತೀಯ ಪುತ್ರ, ಶ್ರೀ ವೆಂಕಟಕೃಷ್ಣಾರ್ಯಾನುಜ ಬುಧವಿಧೇಯ ಗುಂಟಕಟ್ಟ ತಿರುವೆಂಗಡ ಸೂರಿ ನಾಮಧೇಯ ಪ್ರಣೀತಂಬೈನ ತಿರುಮಲ ತಿರುಪತಿ ಕ್ಷೇತ್ರಮು – ಮಹಾತ್ಮ್ಯಮನ ಕಾವ್ಯಮುನ ಪ್ರಥಮಾಶ್ವಾಸಮು ಸಂಪೂರ್ಣಮು.]

* * *

## ದ್ವಿತೀಯಾಸ್ವಾಸವು

ಆ. ಶ್ರೀ ಸತೀಶ! ದೇವ! ಶ್ರಿತಜನ ರಕ್ಷಕಾ!
ಭಕ್ತಿಂದಲಕು ನಿನ್ನು ಶಕ್ತಿಕೋಲಂದಿ,
ಕರುಣಂ ಚೂಶಿ ಮಮ್ಮು ಕಾಪಾಡು ನಿತ್ಯಂಬು
ಶೇಷಶೈಲವಾಸ! ಶ್ರೀನಿವಾಸ,

ಕ. ಕಲಿಬಾಧಮಾನ್ಪ ತಿರುಮಲ ಕಲಿಯುಗ
ವೈಕುಂಠಮನಗ ಗೈಸೇಸಿನ ಮೀ
ಸಲಲಿತ ಕರುಣಾಹೃದಯಮು
ಕಲನೈನನು ಮರುವಜಾಲ ಕಂಜದಳಾಕ್ಷಾ!

ಕ. ಆಲುಮೇಲುಮಂಗ ಸತಿತೋ
ಅಲರುಚು ನಿಜಭಕ್ತ ಜನುಲನಲರಿಂಚುಚು ಈ
ಕಲಿಯುಗ ವೈಕುಂಠುಡನನ್
ವೆಲಸೆಡು ತಿರುಮಲನಿವಾಸ! ವಿಜಯವಿಲಾಸಾ!

ಕ. ಪಲಿಕೆದ ಪಾಪನ ತಿರುಮಲ
ಸಲಲಿತ ಚರಿತಮು ಜನುಲಕು ಸಮ್ಮತಿ ಕೊಂಗನ್
ಪಲಿಕಿನದಂತಯು ಶುಭಮುಗು
ಕಲಿಯುಗ ವೈಕುಂಠವಾಸು ಕಥನಂ ಬಗುಟನ್

ಕ. ವ್ಯಾಸಮುನಿ ಪುರಾಣ ಚಯಮುನಂದು
ವೆಂಕಟೇಶುನಿ ಲೀಲಲು ಪೆದಕಿ ಪೆದಕಿ
ಜಾನು ತೆನುಂಗುನ ವಿನಿಚೆದ ಸಾಮಿಕಥನು
ವೇಡ್ಕವಿನ್ನಂತ ಕನಿನಂತ ವಿಶದ ಫಣಿತಿ

## 1. ಶ್ರೀ ವೆಂಕಟಾಚಲಪತಿ ಅವತರಣ ಪ್ರಸ್ತಾವನೆ

**ಕೃತೇऽತು ನರಸಿಂಹऽಭೂತ್ ತ್ರೇತಾಯಾಂ ರಘುನಂದನಃ**

**ದ್ವಾಪರೇ ವಾಸುದೇವಶ್ಚ ಕಲೌ ವೆಂಕಟನಾಯಕಃ**

ನಾಲ್ಕು ಯುಗಗಳಲ್ಲಿ ಪ್ರಜಾಸಂರಕ್ಷಣಾರ್ಥವಾಗಿ, ಭೂದೇವಿಯನ್ನು ಉದ್ಧರಿಸುವದಕ್ಕಾಗಿ ವೈಕುಂಠವಾಸನು ಭೂಲೋಕದಲ್ಲಿ ಯಾವುದೋ ನೆಪದಿಂದ ಅವತರಿಸಿ ಶಿಷ್ಟರಕ್ಷಣ ಹಾಗೂ ದುಷ್ಟಶಿಕ್ಷಣ ಮಾಡುವನು ಎಂದು ಪುರಾಣಗಳು ನಮಗೆ ತಿಳಿಸಿಕೊಡುತ್ತವೆ.

ಕೃತಯುಗದಲ್ಲಿ ಭಕ್ತಪ್ರಹ್ಲಾದನನ್ನು ರಕ್ಷಿಸುವದಕ್ಕಾಗಿ ಶ್ರೀಹರಿಯು ನರಹರಿಯಾಗಿ ಅವತರಿಸಿ ಹಿರಣ್ಯಕಶ್ಯಪನನ್ನು ಸಂಹರಿಸಿ ಪ್ರಹ್ಲಾದನನ್ನು ರಕ್ಷಿಸಿದನು.

ತ್ರೇತಾಯುಗದಲ್ಲಿ ಶ್ರೀನಿವಾಸನು ಶ್ರೀರಾಮನಾಗಿ ದಶರಥ ಮಹಾರಾಜನಲ್ಲಿ ಜನಿಸಿ, ಮುನಿಗಳನ್ನು ಮಹರ್ಷಿಗಳನ್ನು ಬಾಧಿಸುತ್ತಿರುವ ರಾಕ್ಷಸ ಸಮೂಹವನ್ನು ವಧಿಸಿ ಪ್ರಜೆಗಳಿಗೆ ಆನಂದವನ್ನುಂಟು ಮಾಡಿ ತೃಪ್ತಿಗೊಳಿಸಿದನು. ಮುಂದೆ ಬ್ರಹ್ಮರಾಕ್ಷಸ ನಾಯಕನಾದ, ಲಂಕಾಧೀಶ್ವರನಾದ ರಾವಣನನ್ನು ಹತ್ಯೆ ಮಾಡಿ, ಪರಸ್ತ್ರೀಯರ ಅಪಹರಣ ಮಾಡಬಾರದೆಂದು ತಿಳಿಸಿಕೊಟ್ಟನು. ಮತ್ತೇ ಲೋಕಕ್ಷೇಮವನ್ನು ಅಪೇಕ್ಷಿಸಿ, ಗುರುಭಕ್ತಿ, ಪಿತೃವಾಕ್ಯ ಪರಿಪಾಲನ, ಏಕಪತ್ನಿವ್ರತ, ಆಶ್ರಿತರಕ್ಷಣ, ದೀನಜನಪೋಷಣ ಇವೆಲ್ಲವುಗಳನ್ನು ಸಾಮಾಜಿಕ ಮತ್ತು ಸಾಮೂಹಿಕ ಧರ್ಮಗಳೆಂದು ತಿಳಿಸಿ, ಚಿತ್ರಕೂಟದಲ್ಲಿ ಶ್ರೀರಾಮನು ಭರತನಿಗೆ ರಾಜ್ಯಪಾಲನ ಧರ್ಮವನ್ನು ಸರಿಯಾಗಿ ಬೋಧಿಸಿ, ತಮ್ಮ ರಾಜಕೀಯ

ಪರಿಜ್ಞಾನವನ್ನು ಒಬ್ಬ ಸಾಮಾನ್ಯ ಮನುಷ್ಯನು ಗ್ರಹಿಸುವಂತೆ ತಾನೂ ನಡೆದು ತೋರಿಸಿ, ಇತರರು ಅನುಸರಿಸುವಂತೆ ಸೂಚಿಸಿದನು ಎಂದು ತಿಳಿಯಬೇಕು. ಶ್ರೀರಾಮಾವತಾರದಲ್ಲಿ ವೈಕುಂಠವಾಸನು ಎಷ್ಟೋ ಮಾನವಧರ್ಮಗಳನ್ನು ಆಚರಿಸಿ ತೋರಿಸಿದನು. ಅದಕ್ಕಾಗಿಯೇ ಇಂದಿಗೂ ಶ್ರೀರಾಮನನ್ನು ಲೋಕದಲ್ಲಿ ಅತ್ಯಂತ ಭಕ್ತಿಯಿಂದ ಪೂಜಿಸುತ್ತಿದ್ದಾರೆ. ಆತನು ದೇವರಾದರೂ ಮಾನವನ ರೂಪದಲ್ಲಿ ಬಂದು ಧರ್ಮಪಾಲನೆ ಆಚರಿಸಿ ತೋರಿಸಿ ಮಹಾ ಸಜ್ಜನರ ಹೃದಯದಲ್ಲಿ ಸ್ಥಿರವಾಗಿ ನೆಲೆಸಿದ್ದಾನೆ.

ದ್ವಾಪರಯುಗದಲ್ಲಿ ಬರಲಿರುವ ಕಲಿಕಾಲದ ಕರಾಳ ಛಾಯೆಗಳು ಕಾಣಿಸಿದ ಕೂಡಲೆ ವೈಕುಂಠವಾಸನು ಶ್ರೀಕೃಷ್ಣಾವತಾರದಲ್ಲಿ ಗೋಪಾಲನಂತೆ ವರ್ತಿಸುತ್ತ, ಚಿಕ್ಕವನಿರುವಾಗಲೆ ಅಲ್ಲಿರುವ ಮದಾಂಧರಾದವರನ್ನು ಅಡಗಿಸಿ, ಆಗಿನ ಕಾಲದಲ್ಲಿದ್ದ ಕಂಸನನ್ನು ಮರ್ದಿಸಿ ಲೋಕರಕ್ಷಣ ಮಾಡಿದನು. ಸತ್ರಾಜಿತ್ತುವಿನಿಂದ ತನ್ನ ಮೇಲೆ ಬಂದ ಅಪವಾದವನ್ನು ತೊಲಗಿಸಿಕೊಂಡು ಮಾನವರಿಗೆ ಹಲವು ರೀತಿಯಲ್ಲಿ ಬೋಧಿಸಿದನು. ಪಾಂಡವ ಕೌರವರಿಗೆ ಹತ್ತಿರದ ಸಂಬಂಧಿಯಾಗಿ, ತನ್ನ ರಾಜಕೀಯ ಚತುರತೆಯನ್ನು ತೋರಿಸಿ ಧರ್ಮದ ರಕ್ಷಣೆಯೇ ತನ್ನ ಪರಮ ಗುರಿ ಎಂದು ನಿರೂಪಿಸಿದನು. ಕುರುಪಾಂಡವರ ರಣಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಅರ್ಜುನನಿಗೆ ಕ್ಷತ್ರಿಯ ಧರ್ಮವನ್ನು ಉಪದೇಶಿಸುವ ನೆಪದಿಂದ ಮಾನವರ ಸಹೋದರತ್ವಕ್ಕಾಗಿ ಭೂಲೋಕದವರಿಗೆ ಗೀತೋಪದೇಶವನ್ನು ಸಾರಿದನು. ಮನುವಿನ ಅಂಶರಾಗಿ ಜನಿಸಿದ ಮಾನವರು ಹೇಗೆ ಇರಬೇಕು, ಯಾವುದು ಧರ್ಮ, ಜೀವನದ ಪರಮಾವಧಿ ಎಷ್ಟು

ಇವುಗಳನ್ನು ನಿರೂಪಿಸುವುದಕ್ಕೆ 'ಧರ್ಮಮ್ ಏವ ಜಯತೇ' ಎಂಬ ಸತ್ಯವನ್ನು ಲೋಕದಲ್ಲಿ ಪ್ರಸಾರ ಮಾಡಿದಂಥ ಮಹನೀಯನು ಈ ಶ್ರೀಕೃಷ್ಣ. ಕಲಿಯುಗದ ದುರಾಚಾರಗಳನ್ನು ಮೊದಲೇ ಊಹಿಸಿದ ಪರಮಾತ್ಮ ದ್ವಾಪರ ಯುಗದಲ್ಲೇ ಕಲಿಯುಗ ಛಾಯೆಗಳನ್ನು ಎದುರಿಸುವ ವಿಧಾನಗಳನ್ನು ತೋರಿಸಿಕೊಟ್ಟಿದ್ದಾನೆ. ಶಿಷ್ಟರಕ್ಷಣ, ದುಷ್ಟಶಿಕ್ಷಣಗಳು ತನ್ನ ಕರ್ತವ್ಯವೆಂದೂ, ತಾನು ಆಯಾ ಯುಗಗಳಲ್ಲಿ ಉಚಿತ ಅವಸರಗಳಲ್ಲಿ ಅವತರಿಸುವೆನೆಂದು ಅವನೇ ಹೇಳಿದ್ದಾನೆ. ಶ್ರೀ ರಾಮ ಕೃಷ್ಣರು ಮಾನವಜೀವಿಗಳಿಗೆ ಒಳ್ಳೆಯ ಸಂಸ್ಕಾರ ತೋರಿಸಿಕೊಟ್ಟಿದ್ದಾರೆ.

ಶ್ರೀರಾಮನ ನಡತೆಯ ರೀತಿಗಳು, ಶ್ರೀಕೃಷ್ಣನ ಗೀತೋಪದೇಶಗಳು ನಮಗೆ ಆದರ್ಶವಾಗಿ ಚಿರಸ್ಥಾಯಿಯಾಗಿ ಆದರ್ಶವಾಗಿ ನಿಲ್ಲುತ್ತವೆ. ಅವೇ ನಮ್ಮ ಸನಾತನ ಧರ್ಮಕ್ಕೆ ನಂದದೇ ಇರುವ ಜ್ಯೋತಿಗಳು.

ಸೃಷ್ಟಿ,ಸ್ಥಿತಿ,ಲಯಗಳಿಂದ ಕೂಡಿದ ಈ ಲೋಕವನ್ನು ಬ್ರಹ್ಮನು ಸೃಷ್ಟಿಸುವವನು, ವಿಷ್ಣುವು ಪೋಷಿಸುವವನು, ಶಿವನು ಲಯ ಮಾಡುವವನು ಎಂದು ಪುರಾಣಗಳು ಹೇಳುವ ಸತ್ಯವು ಮಾನವನ ಅನುಭವಕ್ಕೆ ಬಂದಿರುವದು ನಿಜವೇ. ವಿಷ್ಣುವು ತನ್ನ ಪಾಲಿನ ಧರ್ಮವನ್ನು ಆಚರಿಸಲಿಕ್ಕೆ ಅವತರಿಸುವನು.

ಕಲಿಯುಗದ ಧರ್ಮಧೇನುವಿಗೆ 'ಒಂದೇಪಾದ' ವಿದೆ ಎಂದು ಗ್ರಹಿಸಿದ ವೈಕುಂಠವಾಸನು ತನ್ನ ನಗರವಾದ ಕ್ರೀಡಾದ್ರಿಯನ್ನು ಗರುಡನಿಂದ ಭೂಲೋಕದಲ್ಲಿ ಸ್ಥಾಪಿಸಿದನು. ಆ ಕ್ರೀಡಾದ್ರಿಯೇ ವೆಂಕಟಾಚಲವಾಗಿ ಪ್ರಸಿದ್ಧಿ ಹೊಂದಿದೆ. ಆ

ವೆಂಕಟಾಚಲ ನಿವಾಸಿಯೇ ಶ್ರೀ ವೆಂಕಟೇಶ್ವರಸ್ವಾಮಿ. 'ಕಲೌ ವೆಂಕಟನಾಯಕ' ಎಂದು ಪುರಾಣವು ಸಾರಿಸಾರಿ ಹೇಳುತ್ತಿದೆ.

ಈ ವೆಂಕಟಾಚಲವು ನಾಲ್ಕು ಯುಗಗಳಲ್ಲಿ ವಿವಿಧ ಹೆಸರುಗಳಿಂದ ಕರೆಯಲ್ಪಡುತ್ತದೆ ಎಂದು ಪುರಾಣಗಳು ತಿಳಿಸುತ್ತವೆ.

ಕೃತಯುಗದಲ್ಲಿ ವೈಕುಂಠವಾಸನು ಹಿರಣ್ಯಾಕ್ಷನನ್ನು ಕೊಂದು, ಅವನು ಪಾತಾಳಕ್ಕೆ ಕೊಂಡೊಯ್ದ ಭೂದೇವಿಯನ್ನು ಶ್ವೇತವರಾಹರೂಪದಿಂದ ಉದ್ಧರಿಸಿದನು. ಪ್ರಹ್ಲಾದನನ್ನು ಅನುಗ್ರಹಿಸಲು ಹಿರಣ್ಯಕಶ್ಯಪುವನ್ನು ಸಂಹರಿಸಿದನು. ಆದಿಯಲ್ಲಿ ವರಾಹಸ್ವಾಮಿ ವೆಂಕಟಾಚಲದಲ್ಲಿಯೇ ಇದ್ದನು. ಆನಂತರ ತ್ರೇತಾಯುಗದಲ್ಲಿ ಭಗವಂತನು ದುಷ್ಟ ಶಿಕ್ಷಣಕ್ಕಾಗಿ ದಶರಥ ಮಹಾರಾಜನಲ್ಲಿ ಪುತ್ರನಾಗಿ ಜನಿಸಿದನು. ಆ ವೈಕುಂಠವಾಸನ ಪರಿವಾರವು, ಇನ್ನಿತರರು, ಭರತ, ಲಕ್ಷ್ಮಣ, ಶತ್ರುಘ್ನ ಎಲ್ಲರೂ ಜನಿಸಿದರು ಎಂದು ರಾಮಾಯಣ ಕಾವ್ಯ ಹೇಳುತ್ತದೆ. ದಶರಥನು ಮತ್ತು ಶ್ರೀರಾಮನು ವೆಂಕಟಾಚಲ ಪರ್ವತವನ್ನು ದರ್ಶಿಸಿದ್ದಾರೆ ಎಂದು ಪುರಾಣವು ಸೂಚಿಸುತ್ತದೆ. ದ್ವಾಪರಯುಗದಲ್ಲಿ ಶ್ರೀ ಕೃಷ್ಣನು ಪಾಂಡವರಿಗೆ ವೆಂಕಟಾಚಲದಲ್ಲಿರುವ ಎಲ್ಲ ತೀರ್ಥಗಳ ದರ್ಶನ ಮಾಡಿಸಿದ್ದಾನೆ ಎಂದು ಪುರಾಣದಲ್ಲಿ ತಿಳಿಸಿದೆ. ಅದಕ್ಕಾಗಿಯೇ ಕೃತ, ತ್ರೇತಾ, ದ್ವಾಪರ ಯುಗಗಳಲ್ಲಿ ವೆಂಕಟಾಚಲವು ಪವಿತ್ರವಾಗಿ ಮತ್ತು ಮಹಿಮೋನ್ನತವಾಗಿ ಇತ್ತೆಂದು ತಿಳಿದುಬರುತ್ತದೆ. ಇನ್ನು ಕಲಿಯುಗದಲ್ಲಿ ವೈಕುಂಠವಾಸನು ವೆಂಕಟಾಚಲದಲ್ಲಿ ಅವತರಿಸಿ ಆನಂದನಿಲಯದಲ್ಲಿ ನಿಂತು ಭೂಲೋಕ ವೈಕುಂಠವೆನಿಸಿದ ತಿರುಮಲದ ಭಕ್ತರಿಗೆ ದರ್ಶನ ಬಾಗ್ಯಕೊಟ್ಟು ರಕ್ಷಿಸುತ್ತಿದ್ದಾನೆ.

ದ್ವಾಪರದಲ್ಲಿ ದೇವಕಿದೇವಿಯ ಗರ್ಭದಲ್ಲಿ ಜನಿಸಿದ ಶ್ರೀಕೃಷ್ಣನನ್ನು ರೇಪಲ್ಲಿಯಲ್ಲಿ (ಗೋಕುಲದಲ್ಲಿ) ನಂದಗೋಪನ ಸತಿ ಯಶೋದೆಯು ತನ್ನ ಸ್ವತಃ ಮಗನೆಂದು ಲಾಲಿಸಿ ಪೋಷಿಸಿ, ಬೆಳೆಸಿ ತನ್ನ ಪುತ್ರವ್ಯಾಮೋಹವನ್ನು ಬಿಡದೇ ಆ ಕೃಷ್ಣ ಪರಮಾತ್ಮನಿಂದ ತನ್ನ ಬಯಕೆಯನ್ನು ತೀರಿಸಿಕೊಂಡು, ವೆಂಕಟಾಚಲದಲ್ಲಿ ಬಕುಳಾಮಾತೆಯಾಗಿ ವರಾಹಸ್ವಾಮಿಯನ್ನು ಸೇವಿಸುತ್ತಿದ್ದಳು.

ವೆಂಕಟಾಚಲವು ಆನಂದಾಮೃತೈಶ್ವರ್ಯಗಳಿಂದ ತುಂಬಿದ ಪವಿತ್ರಕ್ಷೇತ್ರ. ಲೋಕ ರಕ್ಷಣಕ್ಕಾಗಿ ವೆಂಕಟಾಚಲಪತಿಯು ಅವತರಿಸಿ ಸ್ವಲ್ಪ ಕಾಲ ವಲ್ಮೀಕದಲ್ಲಿ (ಹುತ್ತಿನಲ್ಲಿ) ಅಜ್ಞಾತ ರೀತಿಯಲ್ಲಿ ಕಳೆದು, ಆಕಾಶರಾಜನ ಪುತ್ರಿಯಾದ ಪದ್ಮಾವತಿಯನ್ನು ಮದುವೆಯಾಗಿ, ಸುವರ್ಣಮುಖಿ ತೀರದಲ್ಲಿ, ಅಗಸ್ತ್ಯಋಷಿಯ ಆಶ್ರಮದ ಸಮೀಪದಲ್ಲಿ (ಇಂದಿನ ಶ್ರಿನಿವಾಸ ಮಂಗಾಪುರ) ಕೆಲಕಾಲ ಇದ್ದು, ನಂತರದಲ್ಲಿ ತಿರುಪತಿ ಸೇರಿ ತೋಂಡಮಾನ ಚಕ್ರವರ್ತಿ ನಿರ್ಮಿಸಿದ ಆನಂದನಿಲಯದಲ್ಲಿ ಉಳಿದು ಭಕ್ತರನ್ನು ಪಾಲಿಸುತ್ತಿದ್ದಾನೆ. ಆ ವೆಂಕಟಾಚಲಪತಿಯ ಲೀಲಾವಿಲಾಸಗಳನ್ನು ಬರೆದ, ಓದಿದ, ಕೇಳಿದ ಜನರು ಆ ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾಗುವರು. ಇದಕ್ಕೆ ಎಷ್ಟೋ ನಿದರ್ಶನಗಳಿವೆ ಎಂದು ಚೋಳರಾಜ ಚರಿತ್ರೆ ಹಾಗೂ ಇನ್ನಿತರ ಭಕ್ತರ ಚರಿತ್ರೆಗಳು ತಿಳಿಸುತ್ತವೆ. ವೆಂಕಟಾಚಲಪತಿಯು ಪ್ರತ್ಯಕ್ಷ ದೈವವೇ ಎಂದು ತಿಳಿದುಕೊಳ್ಳಲು ಭಕ್ತರ ಚರಿತ್ರೆಗಳನ್ನು ತಿಳಿಯುವುದು ಅವಶ್ಯಕ.

ಶ್ರೀಕೃಷ್ಣಾವತಾರ ಮುಗಿಯುವದರೊಂದಿಗೆ ದ್ವಾಪರಯುಗವು ಸಮಾಪ್ತಿಯಾಗಿ ಕಲಿಯುಗ ಪ್ರಾರಂಭವಾಯಿತು. ಕಲುಷದಿಂದ

ಕೂಡಿದ ಕಲಿಯುಗದಲ್ಲಿ ಪ್ರಜೆಗಳು ಬುದ್ಧಿಶೂನ್ಯರಾಗಿ, ಸ್ವಾರ್ಥಪರರಾಗಿ, ಆಧ್ಯಾತ್ಮದಲ್ಲಿ ನಂಬಿಕೆ ಇಲ್ಲದವರಾಗಿ, ಅರಿಷಡ್ವರ್ಗಗಳಿಗೆ ಆಧೀನರಾಗಿ, ಪಾಪಭೀತಿ ಪ್ರಭುಭೀತಿಯಿಲ್ಲದೇ, ಗುರುಗಳನ್ನು ಹಿರಿಯರನ್ನು ಮತ್ತು ತಂದೆತಾಯಂದಿರನ್ನು ತಿರಸ್ಕರಿಸಿ, ಸಾಂಘಿಕ ದುರಾಚಾರಗಳಿಗೆ ಒಗ್ಗಿ, ಸತ್ಯಧರ್ಮಗಳಿಂದ ದೂರವಾಗಿ, ಉಪಕಾರಕ್ಕೆ ಅಪಕಾರ ಮಾಡಿ, ನ್ಯಾಯವನ್ನು ಅನ್ಯಾಯವೆಂದು ಅನ್ಯಾಯವನ್ನು ನ್ಯಾಯವೆಂದು ವಾದಿಸುತ್ತ, ಲಂಚಕೋರರಾಗಿ, ಪಾಪಭೂಯಿಷ್ಠವರ್ತನೆ ಯುಳ್ಳವರಾಗಿ, ಮುಕ್ತಿಮಾರ್ಗದಿಂದ ದೂರ ಸರಿದು ಇರುವ ಜನರ ಬಗ್ಗೆ ಸೃಷ್ಟಿಕರ್ತನು ಮೊದಲೇ ಯೋಚಿಸಿ ಈ ಪಾಪಯುಕ್ತರಾದ ಜನರನ್ನು ರಕ್ಷಿಸುವದಕ್ಕಾಗಿ ವಿವಿಧ ರೀತಿಯಲ್ಲಿ ಆಲೋಚಿಸಿ ಕೊನೆಗೆ ಮಾನವರ ಪಾಪಗಳನ್ನು ಪರಿಹರಿಸಿ ಮೋಕ್ಷ ಕೊಡುವುದಕ್ಕೋಸ್ಕರ ವಿಷ್ಣುಭಗವಾನನೇ ಕಲಿಯುಗ ಪ್ರಜೆಗಳ ರಕ್ಷಿಸಲೇಬೇಕೆಂದು ನಿಶ್ಚಯಿಸಿ ತನ್ನ ಮಾನಸಪುತ್ರನಾದ ನಾರದನನ್ನು ಕರೆಸಿದನು.

ಕಲಿಯುಗದ ಪ್ರಜೆಗಳ ಪಾಪಕೃತ್ಯಗಳನ್ನು ವಿವರಿಸಿ ಅವರ ಉದ್ಧಾರಕ್ಕಾಗಿ ವೈಕುಂಠವಾಸನು ಭೂಲೋಕದಲ್ಲಿ ಅವತರಿಸುವ ವಿಶೇಷ ಉಪಾಯಗಳನ್ನು ಆಲೋಚನೆ ಮಾಡಿ ಕಾರ್ಯಸಾಧನೆಗಾಗಿ ನಾರದನನ್ನು ಕರೆದು ಕಲಿಯುಗದ ಪ್ರಜೆಗಳ ಪಾಪಕೃತ್ಯಗಳನ್ನು ವಿವರಿಸಿ ಅವರನ್ನು ಉದ್ಧರಿಸುವದಕ್ಕಾಗಿ ಭೂಲೋಕದಲ್ಲಿ ಅವತರಿಸಿ ಒಳ್ಳೆಯ ಉಪಾಯಗಳನ್ನು ಕಂಡುಕೊಂಡು ಕಾರ್ಯವನ್ನು ಸಾಧಿಸಬೇಕೆಂದು ತಿಳಿಸಿದನು.

ಆಗ ಮಹಾವಿಷ್ಣುವು ಶೇಷತಲ್ಪದಲ್ಲಿ ಒರಗಿ ಕಲಿಯುಗ ಪ್ರಜಾರಕ್ಷಣೆಗಾಗಿ ಆಲೋಚಿಸುತ್ತ ಯೋಗನಿದ್ರೆಯಲ್ಲಿ ಮಲಗಿದನು.

## 2. ಮಹರ್ಷಿಗಳ ಯಜ್ಞ – ಭೃಗುಮಹರ್ಷಿಗಳಿಂದ ತ್ರಿಮೂರ್ತಿಗಳ ಸತ್ತ್ವಗುಣ ಪರೀಕ್ಷೆ

ಕಲಿಯುಗವು ರಾಕ್ಷಸಕೃತ್ಯಗಳಿಂದಾಗಿ ಆಲಸ್ಯತನದಿಂದಾಗಿ ಎಲ್ಲಿ ನೋಡಿದರೂ ಶಾಂತಿಯಿಲ್ಲದೇ ಪ್ರಜೆಗಳು ಭಯಭ್ರಾಂತಿಗೊಳಗಾಗಿದ್ದರು. ಆ ಪರಿಸ್ಥಿತಿಯಲ್ಲಿ ಋಷಿಗಳು ಮಹರ್ಷಿಗಳು ಕಲಿಪುರುಷನನ್ನು ವಿಜೃಂಭಣೆಯಿಂದ ನೆನೆಯುತ್ತ ಲೋಕಕ್ಷೋಭೆಯನ್ನು ಪರಿಹರಿಸಿ ಶಾಂತಿಯನ್ನು ಸ್ಥಾಪಿಸಲು ಗಂಗಾತೀರದ ನೈಮಿಷಾರಣ್ಯದಲ್ಲಿ ಸಮಾವಿಷ್ಟರಾಗಿ ಮಹಾಯಜ್ಞ ನೆರವೇರಿಸಲು ನಿರ್ಣಯಿಸಿದರು.

ಆ ಯಜ್ಞಫಲ ಭೋಕ್ತರಾರು? ಎಂದು ಆಲೋಚಿಸಹತ್ತಿದರು. ಆ ಸಮಯದಲ್ಲಿ ನಾರದ ಮಹರ್ಷಿಗಳು ಅಲ್ಲಿಗೆ ಬಂದಾಗ ಅವರನ್ನು ಎದುರುಗೊಂಡು ಸ್ವಾಗತಿಸಿ, ಉಚಿತ ರೀತಿಯಲ್ಲಿ ಸತ್ಕರಿಸಿದರು. ಮಾತನಾಡುತ್ತಲೇ ಮಹರ್ಷಿಗಳು ತಾವು 'ಕಲಿಯುಗ ಪ್ರಾರಂಭವಾಗಿದೆ, ಅದಕ್ಕಾಗಿ ಪ್ರಜೆಗಳ ಕ್ಷೇಮಕ್ಕಾಗಿ ಒಂದು ದೊಡ್ಡ ಯಾಗವನ್ನು ಮಾಡುವುದೆಂದು ನಿಶ್ಚಯಿಸಿ, ಆ ಯಜ್ಞಭೋಕ್ತ ವಿಷಯವನ್ನು ಆಲೋಚಿಸುತ್ತ ಇದ್ದೆವು' ಎಂದು ಕೇಳಿದರು. ಆಗ ನಾರದನು ಈ ಕಲಿಯುಗ ಸತ್ತ್ವಗುಣಪ್ರಧಾನನಾದ ದೇವರನ್ನು ನೀವು ಪೂಜಿಸುತಿರುವುದು ಒಳ್ಳೆಯದೇ ಎಂದನು. ಹಿಂದೆಯೇ ಆ ಎಲ್ಲ ಮುನಿಗಳು ನಾರದನಿಗೆ ಅಂಥಾ ದೇವರ ಬಗ್ಗೆ ಹೇಳಬೇಕೆಂದು ಕೇಳಿದರು. ಆಗ ನಾರದನು 'ಅತ್ರಿ, ವಶಿಷ್ಠ, ಭೃಗು ಮೂರು ಜನ ಮಹಾತ್ಮರು ಇಲ್ಲಿಯೇ ಇರಲಿಕ್ಕಾಗಿ ನಾನೇನು ಹೇಳುವುದು ಸರಿಯಲ್ಲ. ತಮ್ಮಲ್ಲಿಯೇ ಒಬ್ಬರು ಕಾರ್ಯಾಸಕ್ತರಾಗಿ ಮೂರುಲೋಕಗಳನ್ನು ಒಮ್ಮೆ ಪ್ರವಾಸ ಮಾಡಿ ತಿಳಿದುಕೊಳ್ಳುವುದು

ಒಳ್ಳೆಯದು', ಎಂದುತನ್ನ ಅಭಿಪ್ರಾಯ ಕೊಟ್ಟು ಅಲ್ಲಿಂದ ಹೋಗಿಬಿಟ್ಟನು. ಆಗ ಆ ಎಲ್ಲಾ ಮಹರ್ಷಿಗಳು ತ್ರಿಲೋಕಾಧಿಪತಿಗಳಲ್ಲಿ ಸತ್ತ್ವಗುಣಪ್ರಧಾನ ದೇವರು ಯಾರು ಎಂದು ತರ್ಜನ ಭರ್ಜನ ಮಾಡತೊಡಗಿದರು. ಆದರೂ ಅವರೆಲ್ಲರಲ್ಲಿ ಏಕಾಭಿಪ್ರಾಯ ಕುದುರಲಿಲ್ಲ. ಆಗ ಭೃಗು ಮಹರ್ಷಿಯು ತಾನು ತ್ರಿಮೂರ್ತಿಗಳ ಪರೀಕ್ಷೆ ಮಾಡಿಯಾರು ಸತ್ತ್ವಮೂರ್ತಿ ಎಂದು ತಿಳಿದುಕೊಂಡು ಬರುವೆನು ಎಂದು ಎಲ್ಲರ ಸಮ್ಮತಿಯೊಂದಿಗೆ ತ್ರಿಲೋಕ ಸಂಚಾರಕ್ಕಾಗಿ ಹೊರಟನು.

ಮೊದಲು ಭೃಗುಮಹರ್ಷಿಯು ಸತ್ಯಲೋಕಕ್ಕೆ ಹೋದನು. ಅಲ್ಲಿ ಬ್ರಹ್ಮದೇವನು ನಾಲ್ಕೂ ಮುಖದಿಂದ ವೇದಪಾರಾಯಣ ಮಾಡುತ್ತಿದ್ದನು. ವಾಣಿಯು ಆತನ ಪಕ್ಕದಲ್ಲಿಯೇ ಇದ್ದು ಲಯಬದ್ಧವಾಗಿ ವೀಣಾ ನುಡಿಸುತ್ತಿದ್ದಳು. ಅಷ್ಟದಿಕ್ಪಾಲಕರಾದಿಯಾಗಿ ಎಲ್ಲ ದೇವತೆಗಳು, ಮಹರ್ಷಿಗಳು ಆ ಸಭೆಯಲ್ಲಿ ಕುಳಿತು ಬ್ರಹ್ಮೋಪದೇಶವನ್ನು ಶ್ರದ್ಧೆಯಿಂದ ಕೇಳುತ್ತಿದ್ದರು. ಚತುರಾಸ್ಯನಾದ ಬ್ರಹ್ಮನು ವೇದೋಕ್ತ ಮಂತ್ರಗಳ ಅಂತರಾರ್ಥವನ್ನು ವಿವರಿಸುತ್ತಿದ್ದನು. ಆ ತುಂಬು ಓಲಗದಲ್ಲಿ ಭೃಗುಮುನಿಯು ಪ್ರವೇಶಿಸಿ ಬೃಹ್ಮನನ್ನು ಸಾಷ್ಟಾಂಗ ನಮಸ್ಕಾರ ಮಾಡಿ ಒಂದು ಸ್ಥಳದಲ್ಲಿ ನಿಂತು ತನ್ನ ಕಡೆಗೆ ನೋಡಿ ಆಹ್ವಾನಿಸಬಹುದೆಂದು ಕಣ್ಣು ಬಡಿಯದಂತೆ ಚತುರಾನನನ ಕಡೆ ನೋಡುತ್ತ ನಿಂತನು. ಆದರೆ ಆ ಕಮಲಗರ್ಭನು ತನ್ನ ಉಪನ್ಯಾಸದ ಧೋರಣೆಯಲ್ಲಿ ಲೀನವಾಗಿದ್ದು ಆಗಮಿಸಿದ ಭೃಗುಮುನಿಗಳ ಕಡೆ ಗಮನಕೊಡಲಿಲ್ಲ. ಸುತ್ತಲಿರುವ ಯಾವ ಸಭ್ಯನೂ ಭೃಗುಮಹರ್ಷಿಗಳನ್ನು ಮಾತನಾಡಿಸಲಿಲ್ಲ. ಹಾಗಾಗಿ ಭೃಗುಮುನಿಯು ಕೋಪಾಯುಕ್ತರಾಗಿ ತಪೋಧನನಾದ

ತನ್ನನ್ನು ಬ್ರಹ್ಮನು ಗಮನಿಸಲಿಲ್ಲವೆಂದು ಲೋಕದಲ್ಲಿ ನೀನು 'ಅಪೂಜ್ಯನಾಗಿರು' ಎಂದು ಹೇಳುತ್ತ ಅಲ್ಲಿಂದ ನಿಷ್ಕ್ರಮಿಸಿದನು.

ಮುಂದೆ ಭೃಗುವು ಕೈಲಾಸಮಾರ್ಗವನ್ನು ಅನುಸರಿಸಿ ಅಲ್ಲಿಗೆ ಹೋದಾಗ ಭೃಂಗಿ, ನಂದಿ, ಪ್ರಮಥಗಣದವರು ಫಾಲಾಕ್ಷನನ್ನು ಬಹುವಿಧಗಳಿಂದ ಸ್ತುತಿಸುತ್ತಿದ್ದರು, ಅವುಗಳನ್ನೆಲ್ಲ ಕೇಳುತ್ತ ಮಹಾ ಉತ್ಸಾಹದಿಂದ ಕೈಲಾಸನಾಥನ ಅಂತಃಪುರಕ್ಕೆ ಹೋದನು. ಆಗ ಆ ಶಿವಪಾರ್ವತಿ ದಂಪತಿಗಳು ಸರಸ ವಿನೋದ ಸಂಭ್ರಮದಲ್ಲಿ ಮುಳುಗಿಹೋಗಿದ್ದರು. ಪಾರ್ವತಿದೇವಿಯು ಆ ಮಹರ್ಷಿ ಬರುವುದನ್ನು ಕಂಡು ಮಹೇಶ್ವರನಿಗೆ ಸನ್ನೆ ಮಾಡಿದಳು. ಭೃಗುಮುನಿಯ ಬರುವುದು ತನ್ನ ಏಕಾಂತಕ್ಕೆ ಭಂಗ ಬಂದಿತೆಂದು ಸಿಟ್ಟಿನಿಂದ ಮತ್ತು ನಿರ್ಲಕ್ಷ್ಯದಿಂದ ಮುನಿಯ ಕಡೆ ನೋಡಿದನು. ಇದನ್ನು ಗಮನಿಸಿದ ಭೃಗುಮುನಿಯು ತಾನಿಲ್ಲಿ ಇನ್ನು ನಿಲ್ಲಬಾರದೆಂದು ವಿಚಾರ ಮಾಡಿ ಅಲ್ಲಿಂದ ಹೊರಟನು.

ಸತ್ಯಲೋಕದಲ್ಲಿ, ಕೈಲಾಸದಲ್ಲಿ ತಾನು ಬಂದ ಕಾರ್ಯವು ಅನುಕೂಲವಾಗಲಿಲ್ಲ ಎಂದು ನಿರಾಶರಾಗಿ, ನಿರುತ್ಸಾಹರಾಗಿ ಭೃಗುಋಷಿಯು ಹಾಗೋ ಹೀಗೋ ಪ್ರಯಾಣ ಮಾಡಿ ವೈಕುಂಠವನ್ನು ಸೇರಿದನು. ಅಲ್ಲಿ ಶ್ರೀಮನ್ನಾರಾಯಣನ ನಾಮ ಸಂಕೀರ್ತನ ಹಾಡುತ್ತ, ಭಜನೆ ಮಾಡುತ್ತ ಮಗ್ನರಾಗಿರುವ ಭಕ್ತಜನರನ್ನು ಭೃಗು ಮುನಿಯು ನೋಡಿದನು. ತನ್ನ ಪೂರ್ವಾನುಭವಗಳನ್ನು ನೆನೆದು ಮುಂದೆ ನಡೆದು ಅಂತಃಪುರವನ್ನು ಪ್ರವೇಶಿಸಿದನು. ಅಲ್ಲಿ ನಿಶ್ಶಬ್ದವಾಗಿತ್ತು. ಶೇಷಪರ್ಯಂಕದ ಮೇಲೆ ಮಹಾವಿಷ್ಣುವು ಮಲಗಿದ್ದನು. ಲಕ್ಷ್ಮೀದೇವಿಯು ಆತನ ಪಾದಗಳನ್ನು ಒತ್ತುತ್ತಿದ್ದಳು. ಅಲ್ಲಿ ತನ್ನನ್ನು

ಯಾರು ಮಾತನಾಡಿಸುವವರಿಲ್ಲ ಎಂದು ತಿಳಿದನು. ವಿಷ್ಣುವು ಮಾಯಾನಿದ್ರೆಯ ಸೋಗಿನಲ್ಲಿದ್ದನು. ಇದನ್ನು ಕಂಡು ಭೃಗು ಮಹರ್ಷಿಯು ಕೋಪೋದ್ರೇಕನಾಗಿ ಹತ್ತಿರ ಹೋಗಿ ಆ ವಿಷ್ಣುವಿನ ವಕ್ಷಸ್ಥಳಕ್ಕೆ ತನ್ನ ಎಡಗಾಲಿನಿಂದ ಒದ್ದನು. ಭೃಗುಮಹರ್ಷಿ ಬಂದದ್ದು ತನ್ನ ಕಾರ್ಯಸಾಧನಕ್ಕೆ ಅನುಕೂಲವಾಯಿತೆಂದು ತಿಳಿದ ವಿಷ್ಣುವು ನಿದ್ರೆಯಿಂದ ದಿಗ್ಗನೆ ಎದ್ದಂತೆ ನಟಿಸುತ್ತ ಆ ಮಹರ್ಷಿಗಳ ಕುರಿತು 'ಮಹಾತ್ಮಾ, ನಿದ್ರೆಯಿಂದಾಗಿ ತಾವು ಬರುವುದು ನನಗೆ ಗೊತ್ತಾಗಲಿಲ್ಲ, ಕ್ಷಮಿಸಬೇಕು, ತಪೋಧನರಾದ ತಮ್ಮ ಪಾದಧೂಳಿ ಬಹಳ ಪವಿತ್ರವು. ನಾನು ಧನ್ಯನಾದೆನು. ಆದರೆ ತಮ್ಮ ಈ ಮೃದು ಪಾದಗಳು ನನ್ನ ಕಠಿಣ ಎದೆಗೆ ತಾಕಿದರೆ ಎಷ್ಟು ನೋವಾಯಿತೋ, ಅಲ್ಲವೇ!' ಎಂದು ಆತನ ವಾಮಪಾದವನ್ನು ತನ್ನ ಎರಡೂ ಕೈಯಿಂದ ಮೃದುವಾಗಿ ಒತ್ತುತ್ತ ಪಾದದಲ್ಲಿ ಇರುವ ಕಣ್ಣನ್ನು ಒತ್ತಿ ಬಿಟ್ಟನು. ಸಹನೆಯಿಂದ ಸಾಧ್ಯವಾಗದ ಕೆಲಸ ಯಾವುದು? ಭೃಗುಮಹರ್ಷಿಯು ವಿಷ್ಣುವಿನ ಮೃದು ಮಾತುಗಳಿಗೆ ಮತ್ತು ಉಪಚಾರಗಳಿಗೆ ಮನಸೋತನು. ಆದರೆ ಆತನ ನಿಗೂಢ ಲೋಕರಕ್ಷಣ ಪ್ರಯೋಜನಗಳನ್ನು ಗ್ರಹಿಸಲಿಲ್ಲ. ಲೋಕದಲ್ಲಿ ಕಾರ್ಯಸಾಧನೆಗೆ ಎಷ್ಟು ಸೌಮ್ಯವಾಗಿ ವರ್ತಿಸಬೇಕು ಎಂಬುದನ್ನು ವಿಷ್ಣುವು ಒಂದು ನಿದರ್ಶನದಂತೆ ತೋರಿಸಿಕೊಟ್ಟನು. ತನ್ನನ್ನು ಒದ್ದ ಮುನಿಯ ಪಾದಗಳನ್ನು ತೊಳೆದು, ಆ ಜಲವನ್ನು ಶಿರದಲ್ಲಿ ಪ್ರೋಕ್ಷಣೆ ಮಾಡಿಕೊಂಡನು. ಮತ್ತು ಹಿತಮಿತ ಮಾತುಗಳಿಂದ ಭೃಗುವನ್ನು ಸಂತೃಪ್ತಿ ಹೊಂದುವಂತೆ ಮಾಡಿದನು. ಮಹರ್ಷಿಯು ಮಹದಾನಂದ ಹೊಂದಿ ತ್ರಿಮೂರ್ತಿಗಳಲ್ಲಿ ಮಹಾವಿಷ್ಣುವೇ ಸರ್ವೋತ್ತಮನಾಗಿದ್ದಾನೆ ಎಂದು ತಿಳಿದು ವಿಷ್ಣುವನ್ನು ಭಕ್ತಿಶ್ರದ್ಧೆಗಳಿಂದ ಸಂತೋಷಪಡಿಸಿ, ಪ್ರಸಂಗಾನುಸಾರ

ಮಾತುಗಳನ್ನು ಹೇಳಿ, ವೈಕುಂಠವಾಸನಿಂದ ಅನುಮತಿ ಪಡೆದು, ತನ್ನ ಬರುವಿಗಾಗಿ ನಿರೀಕ್ಷೆಯಲ್ಲಿರುವ ಎಲ್ಲ ಋಷಿಮುನಿಗಳ ಇದ್ದ ನೈಮಿಷಾರಣ್ಯಕ್ಕೆ ಸಂತೋಷದಿಂದ ಹೊರಟನು.

ತನ್ನ ಬರುವಿಕೆಯ ನಿರೀಕ್ಷೆಯಲ್ಲಿರುವ ಮಹರ್ಷಿಗಳ ಗುಂಪನ್ನು ಸೇರಿದನು. ಆತನ ಹಾವಭಾವಗಳ ನೋಡಿ ಎಲ್ಲ ಮಹರ್ಷಿಗಳು ಕಾರ್ಯವು ಸಫಲವಾಗಿರಬಹುದು ಎಂದು ಊಹಿಸಿ 'ಮುನಿವರ್ಯರೇ, ತಮ್ಮ ಪ್ರಯತ್ನವು ಸುಸಾಧ್ಯ ಆಗಿದೆಯೆಂದು ಎನಿಸುತ್ತಿದೆ. ಆದರೂ ತಮ್ಮಿಂದ ಅದನ್ನು ಕೇಳಬೇಕೆಂದು ಎನ್ನಿಸುತ್ತಿದೆ, ಹೇಳಿ' ಎಂದು ಭೃಗುವಿಗೆ ವಿನಂತಿಸಿಕೊಂಡರು. ಆಗ ಭೃಗುವು ವಿರಿಂಚಿ ಮತ್ತು ತ್ರಿನೇತ್ರರ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸುತ್ತ, ಅವರಿಬ್ಬರ ನಂತರ ವೈಕುಂಠವಾಸನನ್ನು ಪರೀಕ್ಷೆ ಮಾಡಿದ ರೀತಿಯನ್ನು ಮುಂದೆ ಆತನು ತನ್ನ ಸತ್ತ್ವ ಗುಣವನ್ನು ಹಾಗೂ ಆತನ ಸಹನೆಯನ್ನು ಮತ್ತು ಆತನು ತನಗೆ ತೋರಿಸಿದ ಆದರಾಭಿಮಾನಗಳನ್ನು ಹಾವಭಾವದೊಂದಿಗೆ ನಾಟಕೀಯವಾಗಿ ಅಭಿನಯಿಸಿ ತೋರಿಸಿದನು.

**ಹರಿ ಸರ್ವೋತ್ತಮಃ ಸಾಕ್ಷಾದ್ । ರಮಾದೇವಿ ತದಂತರಾ ।**
**ತದಧೋ ವಿಧಿವಾಣ್ಯಾ ಚ । ತದಧಃ ಶರ್ವಪೂರ್ವಕಾಃ**

ಹೀಗೆ ಹೇಳಿ ಕುಳಿತುಕೊಂಡನು. ಭೃಗುಮಹರ್ಷಿಯ ವಾಚಕ ಭಾಷಣ ಕೇಳಿ ಎಲ್ಲ ಮಹರ್ಷಿಗಳು ಮಹದಾನಂದ ಹೊಂದಿ ಮಹಾವಿಷ್ಣುವೇ ದೇವೋತ್ತಮನೆಂದು ನಿರ್ಣಯಿಸಿ, ತಾವು ಆರಂಭಿಸಿದ ಮಹಾಯಾಗವನ್ನು ಮುಂದುವರಿಸಿ ಸಾರ್ಥಕವಾಗಿ ಪೂರ್ತಿಗೊಳಿಸಿ ಯಾಗಫಲವನ್ನು ವಿಷ್ಣುದೇವನಿಗೆ ಅರ್ಪಿಸಿದರು.

## 3. ಲಕ್ಷ್ಮೀದೇವಿ ಕರವೀರಪುರ (ಕೊಲ್ಹಾಪುರ)ಕ್ಕೆ ಹೋಗುವುದು

ವೈಕುಂಠದಲ್ಲಿ ಭೃಗುಮಹರ್ಷಿಯು ಬಂದಾಗ ತನ್ನ ಮಾಯಾನಾಟಕಕ್ಕೆ ನಾಂದಿ, ಸಮಾಪ್ತಿ ಹೊಂದಿದಂತೆ ವಿಷ್ಣುವು ಸಂತೋಷದಿಂದ ಇದ್ದನು. ಆದರೆ ಲಕ್ಷ್ಮೀದೇವಿ ಮಹರ್ಷಿಗಳು ಬಂದಾಗ ತನಗೆ ಅವಮಾನ ಆಗಿದೆಯೆಂದು ಮ್ಲಾನವದನಳಾಗಿ ಏನೋ ವಿಚಾರದಲ್ಲಿದ್ದು ಮೌನವಾಗಿದ್ದಳು. ಆಗ ವಿಷ್ಣು ಮತ್ತು ಲಕ್ಷ್ಮೀಯರಲ್ಲಿ ಹೀಗೆ ಸಂಭಾಷಣೆ ಜರುಗಿತು.

'ಲಕ್ಷ್ಮೀ! ಏನೋ ದೀರ್ಘಾಲೋಚನೆಯಲ್ಲಿ ಇದ್ದಹಾಗೆ ಕಾಣುತ್ತಿದೆಯಲ್ಲ?'

'ಸ್ವಾಮಿ, ಆಲೋಚನೆ ಏನಿಲ್ಲ. ಜರುಗಿದ ಪರಾಭವಕ್ಕೆ ಪರಿತಾಪ ಹೊಂದುತ್ತಿದ್ದೇನೆ.'

'ಪರಾಭವವಾ?'

'ಅಲ್ಲದೇ ಮತ್ತೇನು? ಎಂತ ಧೈರ್ಯ ಆ ಮಾನವನಿಗೆ? ತಮ್ಮನ್ನು ಈ ರೀತಿ ಅವಮಾನ ಮಾಡುವುದೇ!'

'ಆ ಮಹರ್ಷಿಗಳಿಗೆ ನಮ್ಮನ್ನು ಅವಮಾನ ಮಾಡುವ ಉದ್ದೇಶವೇನು ಇರಲಿಲ್ಲವಲ್ಲ'

'ಮತ್ತೇ...'

'ಮನೆಗೆ ಬಂದ ಅತಿಥಿಯನ್ನು ಗಮನಿಸದೇ ಇರುವುದು ಯಜಮಾನನ ತಪ್ಪಲ್ಲವೇ?'

'ಆ ಮಹರ್ಷಿ ನನ್ನ ಎದುರೇ ಆ ರೀತಿ ಪ್ರವರ್ತಿಸುವುದು ದೊಡ್ಡ ತಪ್ಪು ಅಲ್ಲವೆನ್ನುವಿರಾ?'

'ತಂದೆ ತಾಯಿಯರು ತಮ್ಮ ಮಕ್ಕಳನ್ನು ಎತ್ತಿಕೊಂಡು ಆಡಿಸುವಾಗ ಹೀಗೆ ಕಾಲು ತಾಕುವುದು ಸಹಜವೇ. ಅವು ಸಂತೋಷಜನಕ ವಿಷಯಗಳೇ. ಅವನ್ನೆಲ್ಲ ಸಹಿಸಬೇಕು'

'ನಾನೇನೋ ಹಿಂದಿನ ಜನ್ಮದಲ್ಲಿ ಪಾಪ ಮಾಡಿರಬೇಕು, ಅದಕ್ಕಾಗಿ ನನ್ನ ಪತಿಗೆ ನನ್ನ ಮನೆಯಲ್ಲಿ ನನ್ನ ಎದುರೇ ಇಷ್ಟು ಅವಮಾನ ನಡೆದಿದೆ. ಇದನ್ನು ನಾನು ಸಹಿಸಲಾರೆ, ನನ್ನ ತಲೆ ತಿರುಗುತ್ತಿದೆ, ಏಕಾಂತದಲ್ಲಿ ತಪಸ್ಸು ಆಚರಿಸುವವರೆಗೆ ಮನಶ್ಶಾಂತಿ ಸಿಗದು. ನಾಥಾ! ಸರ್ವಜಗದ್ರಕ್ಷಕನಾದ ನೀನು ಸಹಿಷ್ಣುವು. ನನ್ನನ್ನು ಕ್ಷಮಿಸಬೇಕು, ಇನ್ನು ನಾನು ಈ ವೈಕುಂಠದಲ್ಲಿರಲು ಸಾಧ್ಯವಿಲ್ಲ. ಈಗಲೇ ನಿಮ್ಮನ್ನು ಬಿಟ್ಟುಹೋಗುತ್ತಿದ್ದೇನೆ.'

'ಲಕ್ಷ್ಮೀ ಏನಿದು ನಿನ್ನ ಸಿಟ್ಟು, ಕೋಪ? ಈ ಎಲ್ಲವೂ ನನ್ನದೆಂದು ತಿಳಿ. ನನ್ನ ಅತ್ಯಂತ ಭಕ್ತರನ್ನು ನಾನು ಬಿಡಲು ಸಾಧ್ಯವಿಲ್ಲ. ಅವರೆಲ್ಲರೂ ನನ್ನ ಮಕ್ಕಳು. ಲೋಕೋಪಕಾರಕ್ಕಾಗಿ ನನ್ನ ಭಾವನೆಗಳಿಗೆ ಒಂದು ರೂಪ ಕೊಡುತ್ತಾರೆ ಅಷ್ಟೇ. ಜಗದ್ರಕ್ಷಣ ಕಾರ್ಯಭಾರವನ್ನು ಆ ಮಹರ್ಷಿಗಳು ನನಗೆ ಒಪ್ಪಿಸಿದ್ದಾರೆ.'

'ಆಗಿರಬಹುದು, ಆದರೆ ನಾನು ಮಾತ್ರ ನಿಮ್ಮನ್ನು ಬಿಟ್ಟು ಹೋಗುತ್ತಿದ್ದೇನೆ. ಪ್ರಶಾಂತ ರೀತಿಯಿಂದ ತಪಸ್ಸು ಮಾಡಿ ನನ್ನ ಪರಾಭವ ಪರಿತಾಪವನ್ನು ಶಮನಗೊಳ್ಳಿಸಿಕೊಳ್ಳುವೆನು. ನಾರಾಯಣಾ! ಚರಾಚರ ಪ್ರಪಂಚ ಭಾರವು ನಿನ್ನದೇ. ಆದಕಾರಣ ನೀನು ಎಲ್ಲವನ್ನು ಸಹಿಸಬಹುದು.'

'ಹಾಂ, ನಿಜವೇ ನೀನು ಹೇಳಿರುವುದು. ಲಕ್ಷ್ಮೀ ನಿನ್ನ ಜೊತೆಜೊತೆಗೆ ಪ್ರಪಂಚಪೋಷಣ ಭಾರವನ್ನು ನಾನೇ ಹೊತ್ತಿರುವೆನು ಎಂದು ನಿನಗೂ ತಿಳಿದ ವಿಷಯವೇ.'

'ಆದರೂ ಈ ವಿಷಯವನ್ನು ನನ್ನ ಮನಸ್ಸು ಅಂಗೀಕರಿಸಿದೆ. ನನ್ನ ಪ್ರಾರ್ಥನೆಯನ್ನು ಕೇಳು, ನಡೆಸಿಕೊಡು. ಈಗಲೇ ವೈಕುಂಠವನ್ನು ತ್ಯಜಿಸಿ ಕೋಲ್ಹಾಪುರದಲ್ಲಿ ಇರುವೆನು.'

ಹೀಗೆ ಲಕ್ಷ್ಮೀನಾರಾಯಣರು ಜಗಳವಾಡಿಕೊಂಡರು. ಲಕ್ಷ್ಮೀ ವೈಕುಂಠವನ್ನು ಬಿಟ್ಟು ಕರವೀರಪುರ ಕ್ಷೇತ್ರಕ್ಕೆ ಹೋಗಿಬಿಟ್ಟಳು.

## 4. ವಿಷ್ಣುವು ವೆಂಕಟಾಚಲಕ್ಕೆ ಬರುವುದು

ಮನೆಯಲ್ಲಿ ಗೃಹಲಕ್ಷ್ಮಿ ಅಂದರೆ ಹೆಂಡತಿ ಇಲ್ಲದಿದ್ದರೆ ಮನೆ ಕಳೆಯಿಲ್ಲದಂತೆ ಕಾಣುವುದು ಸಹಜ. ಮನೆಗೆ ಅವಳೇ ಜ್ಯೋತಿ, ಜೀವನಜ್ಯೋತಿ. ಜ್ಯೋತಿ ಇಲ್ಲದ ಮನೆ ಎಷ್ಟು ಸರಿಯಾಗಿದ್ದರೂ ಅದು ಅಂಧಕಾರಮಯವೇ ಅಲ್ಲವೇ! ಒಬ್ಬ ಪುರುಷನಿಗೆ ಸಕಲಸೌಭಾಗ್ಯಗಳನ್ನು ತಂದುಕೊಡುವವಳು ಸತಿಯೇ. ಸತಿಯಿಲ್ಲದ ಪತಿಯು ಮತಿಯಿಲ್ಲದ ಗತಿಯಿಲ್ಲದ ವ್ಯಕ್ತಿಯೇ ಸರಿ. ಭಾರ್ಯೆ ಭರ್ತನಿಗೆ ಸಹಧರ್ಮಚಾರಿಣಿಯಾಗಿ ಇಹಪರ ಸುಖಗಳಿಗೆ ಸಮಭಾಗಿಯಾಗಿರಬೇಕು. ಆದರ್ಶ ದಾಂಪತ್ಯಕ್ಕೆ ಅನುಗುಣವಾಗಿ ಪರಮಾತ್ಮನು ನಡೆದುಕೊಳ್ಳಬೇಕಾಗಿದೆ. ಮಾನವರು ತನ್ನನ್ನು ಅನುಸರಿಸಿ ಸದ್ಧರ್ಮದಂತೆ ನಡೆದರೆ ಪರಮಾತ್ಮನು ಆನಂದ ಹೊಂದುವನೆಂದು ತಿಳಿಯಬೇಕು.

ವೈಕುಂಠವಾಸನು ವೈಕುಂಠವನ್ನು ಬಿಟ್ಟು ಎಲ್ಲೆಲ್ಲಿಯೋ ತಿರುಗಾಡಹತ್ತಿದನು. ಲಕ್ಷ್ಮೀಯನ್ನು ಸಮಾಧಾನಗೊಳಿಸುವ ರೀತಿಯ ಆಲೋಚನೆಯಿಂದ ಅಲ್ಲಲ್ಲಿ ಸಂಚಾರ ಮಾಡುತ್ತ ಗಂಗಾನದಿತೀರಕ್ಕೆ ಬಂದನು. ಅಲ್ಲಿಯೂ ಮನಸ್ಥಿಮಿತ ಆಗದ ಕಾರಣ ಅಲ್ಲಿಂದ ದಕ್ಷಿಣಾಭಿಮುಖವಾಗಿ ವಿಂಧ್ಯ ಪರ್ವತವನ್ನು ದಾಟಿ, ಗೋದಾವರಿ

ಕೃಷ್ಣ ಪಿನಾಕಿನಿ ನದಿಗಳನ್ನು ದಾಟಿ ಕೊನೆಗೆ ಸ್ವರ್ಣಮುಖಿನದಿಯ ಉತ್ತರದಲ್ಲಿ ಇರುವ ವೆಂಕಟಾಚಲವನ್ನು ಸೇರಿದನು. ಅಲ್ಲಿನ ಪ್ರಕೃತಿ ಸೌಂದರ್ಯವು ತನಗೆ ಹಿಡಿಸಿತೆಂದು ಕೊನೆಗೆ ಸ್ವಾಮಿಪುಷ್ಕರಿಣಿ ತೀರ್ಥವನ್ನು ಕಂಡು ಹೆಚ್ಚಿನ ಸಮಾಧಾನಗೊಂಡನು.

ಅಲ್ಲಿ ಜಿಂಕೆಗಳು ಸ್ವೇಚ್ಛೆಯಿಂದ ವಿಹಾರ ಮಾಡುತ್ತಲಿದ್ದವು. ವಿವಿಧ ಪಕ್ಷಿಗಳ ಮನೋಹರವಾದ ಕಲರವಗಳು ಕೇಳಲಿಕ್ಕೆ ಇಂಪು ಎನಿಸುತ್ತಿದ್ದವು. ಕಣ್ಣಿಗೆ ಹಬ್ಬದಂತೆ ಅವು ಆಟ ಆಡುತ್ತಿದ್ದವು. ಮಹಾವೃಕ್ಷಗಳು, ಲತೆಗಳು, ಗುಲ್ಮಗಳು ಫಲಪುಷ್ಪಗಳಿಂದ ಅಲ್ಲಾಡುವಿಕೆಯು ಮನೋಹರವಾಗಿ ಕಂಡಿತು. ಆ ವಸಂತಮಾಸದಲ್ಲಿ ಇರಬೇಕಿದ್ದ ಜಾಜಿ ಹೂ ಇಲ್ಲದಿದ್ದರೂ ಬೇರೆ ಪುಷ್ಪೋತ್ಕರವು ದರ್ಶನೀಯವಾಗಿತ್ತು. ಶ್ರೀಪತಿಗೆ ಸಂಪೂರ್ಣ ಮನಃಶಾಂತಿ ದೊರೆಯಿತು. ಅಂದು ನಿವಾಸಕ್ಕೋಸ್ಕರ ವಸತಿ ಹುಡುಕಿ, ಸ್ವಾಮಿಪುಷ್ಕರಿಣಿ ದಕ್ಷಿಣ ದಿಕ್ಕಿನಲ್ಲಿರುವ ದೊಡ್ಡ ಹುಣಿಸೆಮರದ ಕೆಳಗೆ ದೊಡ್ಡಹುತ್ತನು ಮತ್ತು ಆ ಹುತ್ತಿಗೆ ಹತ್ತಿರದ ದ್ವಾರವನ್ನು ಕಂಡು, ಸಂತೋಷಗೊಂಡು ಅದನ್ನೇ ತನ್ನ ನಿವಾಸವಾಗಿ ಮಾಡಿಕೊಂಡು ಆ ಹುತ್ತಿನಲ್ಲಿ ಶ್ರೇಷ್ಠ ತಪೋನಿಷ್ಠನಾಗಿ ಇರಹತ್ತಿದನು.

## 5. ಚೋಳರಾಜ – ಗೋವಿನ ವೃತ್ತಾಂತ

ವಿಷ್ಣುವು ವೈಕುಂಠವನ್ನು ಬಿಟ್ಟು ವೆಂಕಟಾಚಲದ ವಲ್ಮೀಕದಲ್ಲಿ ಗಾಢ ತಪೋನಿರತನಾಗಿ ಇದ್ದುದನ್ನು ತಿಳಿದು ಎಲ್ಲ ದೇವತೆಗಳು ಶಂಕರನ ನಾಯಕತ್ವದಲ್ಲಿ ಸತ್ಯಲೋಕ್ಕೆ ಹೋದರು. ಶಂಕರನು ವಿಷ್ಣುವಿನ ಗಾಢತಪಸ್ಸು ಕುರಿತು ಬ್ರಹ್ಮನಿಗೆ ಹೇಳಿದಾಗ ಅದರ ಕಾರಣವನ್ನು ಕೇಳಿದನು. ಅದರಲ್ಲೂ ವಾಣಿವಲ್ಲಭನು ಜಗದ್ರಕ್ಷನಾದ

ನಾರಾಯಣನು ಕಲಿಯುಗದಲ್ಲಿ ಪ್ರಜೆಗಳನ್ನು ಪಾಪವಿಮುಕ್ತರನ್ನಾಗಿ ಮಾಡಲು ವೈಕುಂಠವನ್ನು ಬಿಟ್ಟು ಭೂಲೋಕದಲ್ಲಿ ಪುಣ್ಯಭೂಮಿ ಭಾರತದಲ್ಲಿ ದಕ್ಷಿಣಪ್ರಾಂತದ ವೆಂಕಟಾಚಲದಲ್ಲಿ ಇದ್ದಾನೆಂದು ಎಲ್ಲ ದೇವತೆಗಳಿಗೆ ವಿಶದಪಡಿಸಿ, ಆ ಭಗವಾನನ ಕಾರ್ಯಸಾಧನೆಗೆ ತಮ್ಮ ಪಾಲಿನ ಕಾರ್ಯವನ್ನು ಮಾಡಲು ಬ್ರಹ್ಮನು 'ಕೈಲಾಸವಾಸಾ ! ವಿಷ್ಣು ದೇವನಿಗೆ ನಮ್ಮ ಪಾಲಿನ ಕಾರ್ಯದಲ್ಲಿ ನಾನು ಆಕಳು ಆಗುವೆನು. ನೀನು ಗೋವತ್ಸನಾಗು. ಓ ಆದಿತ್ಯಾ ! ನೀನು ಕರವೀರಪುರದಲ್ಲಿರುವ ಲಕ್ಷ್ಮೀದೇವಿಗೆ ನಮ್ಮ ಕಾರ್ಯವನ್ನು ತಿಳಿಸಿ ಆಕೆಯು ಯಾದವವನಿತೆಯಾಗಿ ಗೋವತ್ಸವನ್ನು ವೆಂಕಟಾದ್ರಿ ಪ್ರಾಂತದ ರಾಜ್ಯವನ್ನು ಪಾಲಿಸುವ ಚೋಳರಾಜ ಸುವೀರನ ಮುಖ್ಯ ಪಟ್ಟಣವಾದ ನಾರಾಯಣಪುರಕ್ಕೆ ಕರೆದುಕೊಂಡು ಹೋಗಿ ಆ ರಾಜನ ಹತ್ತಿರ ಮಾರುವಂತೆ ಹೇಳಿ ಒಪ್ಪಿಸಿ ಕರೆದುಕೊಂಡು ಬನ್ನಿರಿ. ಇದು ವೈಕುಂಠವಾಸನ ಜಗದ್ರಕ್ಷಣ ಕಾರ್ಯವೆಂದು ತಿಳಿಸಿ ಹೇಳಿ' ಎಂದು ಸೂರ್ಯನಿಗೆ ಕರವೀರಪುರಕ್ಕೆ ಕಳಿಸಿದನು. ಸೂರ್ಯದೇವರು ತನ್ನ ಪಾಲಿನ ಕಾರ್ಯವನ್ನು ನೆರವೇರಿಸಲು ಕರವೀರಪುರದಲ್ಲಿರುವ ಲಕ್ಷ್ಮೀದೇವಿಯನ್ನು ಭೆಟ್ಟಿ ಮಾಡಿ ಬ್ರಹ್ಮದೇವರು ಹೇಳಿದ ವಿಷಯವನ್ನು ಹೇಳಿ ಆಕೆಯನ್ನು ಕರೆದುಕೊಂಡು ಬರುವುದರೊಳಗಾಗಿ ಬ್ರಹ್ಮ ಶಂಕರುಗಳು ಗೋ, ಗೋವತ್ಸರಾಗಿ ಸಿದ್ಧರಾಗಿದ್ದರು. ಲಕ್ಷ್ಮೀಯು ತನ್ನ ಪಾಲಿನ ಕಾರ್ಯವನ್ನು ನಿರ್ವಹಿಸಲು ಗೋ ಗೋವತ್ಸಗಳನ್ನು ಒಯ್ದು ನಾರಾಯಣಪುರದ ರಾಜಮಂದಿರದ ಮುಂದೆ ಆಕಳು ಕರುಗಳ ಜೊತೆಗೆ ನಿಂತುಬಿಟ್ಟಳು. ಆಗ ಅಂತಃಪುರದ ಪರಿಚಾರಕರು 'ಯಾರೋ ಗೊಲ್ಲರ ಹೆಂಗಸು ಒಳ್ಳೆಯ ಆಕಳು ಮತ್ತು ಕರುವನ್ನು ಮಾರಲಿಕ್ಕೆ ಬಂದಿದ್ದಾಳೆ.' ಎಂದು ಮಹಾರಾಜನಿಗೆ ಹೇಳಿದರು. ಕೂಡಲೆ ರಾಜನು ಅಂತಃಪುರದಿಂದ ಹೊರಬಂದು ಆ ಹೆಂಗಸು

ಹೇಳಿದಷ್ಟು ಮೌಲ್ಯವನ್ನು ಕೊಟ್ಟು ಗೋ–ಗೋವತ್ಸಗಳನ್ನು ಕೊಂಡುಕೊಂಡನು. ಮುಂದೆ ಲಕ್ಷ್ಮೀಯು ಕರವೀರಪುರಕ್ಕೆ ತಿರುಗಿ ಹೋಗಿಬಿಟ್ಟಳು. ರಾಜನು ಗೋಪಾಲಕನನ್ನು ಕರೆದು ತನ್ನ ಎಲ್ಲ ಆಕಳುಗಳ ಜೊತೆಗೆ ಇವುಗಳನ್ನು ಜಾಗ್ರತೆಯಿಂದ ಮೇಯಿಸಬೇಕೆಂದು ಆಜ್ಞೆ ಮಾಡಿ ತನ್ನ ಅಂತಃಪುರಕ್ಕೆ ಹೋದನು. ಗೋಪಾಲನು ಆ ಆಕಳನ್ನು ಎಲ್ಲ ಆಕಳುಗಳ ಜೊತೆಗೆ ಮೇಯಿಸುವದಕ್ಕಾಗಿ ವೆಂಕಟಾಚಲಕ್ಕೆ ಹೊಡೆದುಕೊಂಡು ಹೋಗುತ್ತಿದ್ದನು. ಆ ಹೊಸ ಆಕಳು ಸರಿಯಾಗಿ ಮೇಯ್ದು ಸಾಕಷ್ಟು ಹಾಲು ಕೊಡುತ್ತಿತ್ತು. ಮಹಾರಾಣಿಯೂ ಕೂಡ ಹೊಸ ಆಕಳಿನ ಹಾಲಿನಿಂದ ತೃಪ್ತಿಹೊಂದಿ ಅದನ್ನು ಪ್ರತ್ಯೇಕವಾಗಿ ಮೆತ್ತನೆ ಹುಲ್ಲಿನಿಂದ ಸಾಕಬೇಕೆಂದು ಆ ಗೋಪಾಲನಿಗೆ ಆಜ್ಞೆ ಮಾಡಿದಳು. ಕರುವು ಕೂಡ ಹೊಟ್ಟೆತುಂಬ ಹಾಲು ಕುಡಿದು ದೊಡ್ಡಿಯಲ್ಲಿ ಕೇಕೇ ಹಾಕುತ್ತ ಹೆಗರಾಡುತ್ತಿರುವದನ್ನು ನೋಡಿ ಅಂತಃಪುರದ ಎಲ್ಲ ಪರಿವಾರವು ಆನಂದಗೊಳ್ಳುತ್ತಿತ್ತು.

ಆ ಚೋಳರಾಜನು ಮಹಾ ಧರ್ಮಾತ್ಮನು. ಪ್ರಜೆಗಳನ್ನು ತನ್ನ ಸ್ವತಃ ಮಕ್ಕಳಂತೆ ಪಾಲಿಸುತ್ತಿದ್ದನು. ನೀತಿವಂತನು ಮತ್ತು ಗುಣವಂತನು ಆಗಿದ್ದ ಆತನ ರಾಜ್ಯವು ಸುಭಿಕ್ಷವಾಗಿತ್ತು. ಗೋವುಗಳಿಗೆ ಸಾಕಷ್ಟು ನೀರು ಮತ್ತು ಹಸಿಹುಲ್ಲು ಸಿಗುತ್ತಿತ್ತು. ಗೋಗಣದ ಅಭಿವೃದ್ಧಿ ಮಾಡುತ್ತಿದ್ದನು. ತಿಂಗಳಿಗೆ ಮೂರು ಮಳೆಗಳಾಗಿ ಪೈರುಗಳು ಮತ್ತು ಹುಲ್ಲು ಸರಿಯಾಗಿ ಬರುತ್ತಿದ್ದವು. ಬರ ಮತ್ತು ಕ್ಷಾಮಗಳಿಗೆ ಅಲ್ಲಿ ಸ್ಥಳವಿರಲಿಲ್ಲ. ಪ್ರಜೆಗಳು ರಾಜಭಕ್ತಿಯಿಂದ ಮಳೆಬೆಳೆಗಳಿಂದ ಸುಖಜೀವನ ನಡೆಸುತ್ತ ಅನ್ಯೋನ್ಯ ಸಹಾನುಭೂತಿಯಿಂದ ಯಾವುದೇ ಭೇದಭಾವಗಳಿಲ್ಲದೆ ಕಲೆತು ಮೆಲೆತು ಜೀವನ ನಡೆಸುತ್ತಿದ್ದರು. ಎಂತಹ ಸಣ್ಣ

ಕುಗ್ರಾಮವಾದರೂ ಅತಿಥಿ ಅಭ್ಯಾಗತರನ್ನು ಗೌರವಾದರಗಳಿಂದ ಕಾಣುತ್ತಿದ್ದರು. ಹಿರಿಯರಲ್ಲಿ ಗೌರವ, ತಾಯಿತಂದೆಯರಲ್ಲಿ ಭಕ್ತಿ, ಬಡವರಲ್ಲಿ ಕರುಣೆ, ಪುಣ್ಯಕಾರ್ಯಗಳಲ್ಲಿ ಆಸಕ್ತಿ, ಸತ್ಯವರ್ತನೆ, ಪಾಪಭೀತಿ ಮುಂತಾದ ಶ್ರೇಷ್ಠ ಗುಣಗಳಿಂದ ನಡೆದು ರಾಜನಿಗೆ ಕೀರ್ತಿ ತಂದುಕೊಡುತ್ತಿದ್ದರು.

ಗೋಪಾಲನು ಆ ಹೊಸ ಆಕಳನ್ನು ಪ್ರತ್ಯೇಕವಾದ ಸಾಲಿನಲ್ಲಿ ಕಟ್ಟಿ, ಹಾಲು ಹಿಂಡಿ ರಾಣಿವಾಸಕ್ಕೆ ಕಳುಹಿಸಿ, ಕರುವು ಹಾಲು ಕುಡಿದ ನಂತರ ಆಕಳಿನ ಕಟ್ಟಿದ ಹಗ್ಗ ಬಿಚ್ಚಿ, ಉಳಿದ ಆಕಳುಗಳ ಜೊತೆಗೆ ಮೇಯಲು ವೆಂಕಟಾಚಲಕ್ಕೆ ಹೊಡೆದು ಕೊಂಡು ಹೋಗುವುದು ಆತನ ನಿತ್ಯಕೃತ್ಯವು. ಹೀಗೆ ವೆಂಕಟಾಚಲ ಸೇರಿದ ಎಲ್ಲ ಆಕಳುಗಳನ್ನು ಬಿಟ್ಟು ಹೊಸ ಆಕಳು ಶ್ರೀನಿವಾಸನು ತಪಸ್ಸನ್ನು ಆಚರಿಸುತ್ತಿರುವ ಹುತ್ತದ ಬಳಿಗೆ ರಹಸ್ಯವಾಗಿ ಬಂದು ಆತನಿಗೆ ತನ್ನ ಮೊಲೆಹಾಲನ್ನು ಕೊಟ್ಟು ನಂತರ ಆಕಳುಗಳನ್ನು ಸೇರಿ ಮನೆಗೆ ಹೋಗುತ್ತಿತ್ತು. ಈ ರೀತಿ ಕೆಲವು ದಿನ ಜರುಗಿದ ಮೇಲೆ ಆ ಕರುವು ಸಣ್ಣದಾಗಿ ಸೊರಗಹತ್ತಿತು. ಗೋಪಾಲನು ಆಕಳು ಹಾಲು ಕೊಡುತ್ತಿಲ್ಲ ಎಂದು ರಾಣಿವಾಸಕ್ಕೆ ತಿಳಿಸಿದನು. ಒಂದು ದಿನ ಮಹಾರಾಣಿ ಆ ಗೋಪಾಲನ್ನು ಕರೆಯಿಸಿ ಕೇಳಿದಾಗ ಅವನು 'ನನಗೇನು ತಿಳಿಯದು' ಎಂದು ಹೇಳಿದನು. ಆದರೆ ಮಹಾರಾಣಿ ಅವನ ಮಾತುಗಳನ್ನು ನಂಬದೆ ಆ ಗೋಪಾಲಕನೇ ಅದರ ಹಾಲನ್ನು ಹಿಂಡಿಕೊಳ್ಳುತ್ತಿದ್ದಾನೆಂದು ಊಹಿಸಿ ಅವನನ್ನು ಸರಿಯಾಗಿ ಛೀಮಾರಿ ಹಾಕಿ 'ಆಕಳು ಹಾಲು ಕೊಡಲಾರದ್ದಕ್ಕೆ ನೀನೇ ಕಾರಣ, ಅದಕ್ಕಾಗಿ ಸರಿಯಾಗಿ ನೋಡುತ್ತಿರು' ಎಂದು ಎಚ್ಚರಿಸಿದಳು. ಮರುದಿನ ಆ ಗೋಪಾಲಕನು ಎಲ್ಲ ಆಕಳುಗಳನ್ನು ವೆಂಕಟಾಚಲಕ್ಕೆ

ಹೊಡೆದುಕೊಂಡು ಹೋಗಿ ಹೊಸ ಆಕಳ ಮೇಲೆ ಕಣ್ಣಿಟ್ಟನು. ಗೋವು ದಿನನಿತ್ಯದ ಪ್ರಕಾರ ಪುಟ್ಟರಂಧ್ರದಿಂದ ಹಾಲನ್ನು ಹುತ್ತಿನೊಳಕ್ಕೆ ಹನಿಯುವದನ್ನು ಗ್ರಹಿಸಿ, ತನಗೆ ಅಪವಾದ ತಂದಿದೆ ಎಂದು ಕೋಪದಿಂದ ಕೈಕೊಡಲಿಯನ್ನು ಎತ್ತಿ ಆಕಳಿಗೆ ಹೊಡೆಯುವದರೊಳಗೆ ಶ್ರೀನಿವಾಸನು ತನ್ನ ತಲೆಯನ್ನು ಮೇಲೆಕ್ಕೆತ್ತಿ ಆಕಳನ್ನು ರಕ್ಷಿಸಿದನು. ಆಗ ಗೋಪಾಲನ ಕೊಡಲಿ ಏಟು ಶ್ರೀನಿವಾಸನ ತಲೆಗೆ ತಾಕಿ ಗಾಯವಾಯಿತು. ಆ ಗಾಯದಿಂದ ರಕ್ತಪ್ರವಾಹ ಪ್ರಾರಂಭವಾಯಿತು. ಗೋಪಾಲನು ರಕ್ತವನ್ನು ನೋಡಿ ಸ್ಮೃತಿತಪ್ಪಿ ನೆಲಕ್ಕೆ ಬಿದ್ದು ಪ್ರಾಣ ಬಿಟ್ಟನು. ಹಿಂದೆಯೇ ಆಕಳು ನಾರಾಯಣಪುರದ ಕಡೆಗೆ ಓಡುತ್ತ ಹೋಯಿತು.

## 6. ಆಕಳು ಚೋಳರಾಜನಿಗೆ ವೆಂಕಟಾಚಲಕ್ಕೆ ಕರೆದುತರುವುದು– ರಾಜನಿಗೆ ಶ್ರೀನಿವಾಸನ ಶಾಪ – ಶಾಪ ವಿಮೋಚನ

ಆಕಳು 'ಅಂಬಾ ಅಂಬಾ' ಎಂದು ಒದರುತ್ತ ಒಂದೇ ಓಟದಲ್ಲಿ ರಾಜಮಂದಿರವನ್ನು ಪ್ರವೇಶಿಸಿ, ಅರಚುತ್ತ ತಲೆಯಾಡಿಸುತ್ತ ರಾಜನ ಎದುರು ನಿಂತಿತು. ರಾಜನು ಆಕಳು ಒದರುತ್ತಿವುದನ್ನು, ಮಾಡುತ್ತಿರುವ ಸಂಜ್ಞೆಗಳನ್ನು ಗ್ರಹಿಸಿ, ಏನೋ ಪ್ರಮಾದ ಜರುಗಿದೆ ಎಂದು ಭಾವಿಸಿ ಗೋವು ಮುಂದೆ ಮುಂದೆ ಹೋದಂತೆ ಅದನ್ನು ಹಿಂಬಾಲಿಸಿ ವೆಂಕಟಾಚಲ ಸೇರಿದನು. ಅಲ್ಲಿಂದ ಅದು ಸ್ವಾಮಿ ಪುಷ್ಕರಿಣಿಯ ಹತ್ತಿರದ ಹುತ್ತಿನತನಕ ಹೋಯಿತು. ಅಲ್ಲಿ ಗೋಪಾಲನು ರಕ್ತಸ್ರಾವದಿಂದ ಸತ್ತು ಬಿದ್ದದ್ದು ನೋಡಿ ಆಶ್ಚರ್ಯ ಪಟ್ಟು 'ಇಲ್ಲಿ ಯಾರು ಇಲ್ಲವೇ! ಗೋಪಾಲನು ಗಾಯವಿಲ್ಲದೇ ಮರಣ ಹೊಂದಿದ್ದಾನೆ. ಆದರೆ ಈ ರಕ್ತಮಡುವು ಏನಿದು?' ಎಂದು ವಿಚಾರ ಮಾಡುವದರೊಳಗೆ ಶ್ರೀನಿವಾಸನು

ಹುತ್ತಿನಿಂದ ಹೊರಬಂದು ರಾಜನನ್ನು ನೋಡಿ 'ಓಯ್! ನೀನು ಪಾಪಿ, ರಾಜಗರ್ವದಿಂದ ಇರುವಿ. ಕಾರ್ಯಾಕಾರ್ಯಗಳನ್ನು ತಿಳಿಯದವ, ನಾನು ತಾಯಿತಂದೆ ಇರಲಾರದವನು, ಸ್ವಜನರನ್ನು ಬಿಟ್ಟು ಬಂದು ಕಷ್ಟಗಳನ್ನು ಅನುಭವಿಸುತ್ತಿರುವ ನಿರಪರಾಧಿ. ಇಂತಹ ನನ್ನನ್ನು ಈ ಸೇವಕನಿಂದ ನನ್ನ ತಲೆಗೆ ಹೊಡೆಸಿದಿ. ಕುಟುಂಬದಲ್ಲಿನ ಯಾರೊಬ್ಬರು ಪಾಪಕೃತ್ಯಗಳು ಮಾಡಿದರೆ ಆ ಪಾಪದ ಫಲಗಳನ್ನು ಮನೆಯ ಯಜಮಾನ ಅನುಭವಿಸುವನು. ಹಾಗೆಯೇ ಪ್ರಜೆಗಳು ಮಾಡಿದ ಅಪರಾಧಗಳಿಗೆ ರಾಜನೇ ಬಾಧ್ಯನಾಗುತ್ತಾನೆ. ರಾಜಭೋಗಗಳನ್ನು ಅನುಭವಿಸುವದಷ್ಟೇ ಅಲ್ಲ, ಪ್ರಜೆಗಳ ದೋಷಗಳನ್ನು ಕೂಡ ಭರಿಸಬೇಕು. ಅದಕ್ಕಾಗಿ ನಿನ್ನ ಸೇವಕನು ಮಾಡಿದ ಪಾಪದ ಫಲವನ್ನು ನೀನು ಅನುಭವಿಸದೇ ತೀರದು. ಅದಕ್ಕೆ ಪಿಶಾಚಿಯಾಗು' ಎಂದು ಶಪಿಸಿದನು.

ಆ ಶಾಪವಾಕ್ಯಗಳು, ಆ ಶನಿಕಾಟಗಳು ಇವುಗಳಿಂದ ರಾಜನು ಸ್ವಲ್ಪ ಹೊತ್ತು ಅಚೇತನನಾಗಿ, ಆ ದಿವ್ಯಪುರುಷನು ಮಹಾವಿಷ್ಣು ಎಂದರಿತು ಮುಂದೆ ಹೋಗಿ ನಮಸ್ಕಾರ ಮಾಡಿ, ಮತ್ತೆ ಎದ್ದುನಿಂತು, ಕೈಕಟ್ಟಿಕೊಂಡು ಬಗ್ಗಿ ವಿನಯದಿಂದ ತಲೆತಗ್ಗಿಸಿ 'ಸ್ವಾಮಿ! ಲೋಕರಕ್ಷಕ! ನನಗೆ ಯಾವ ಪಾಪವು ತಿಳಿಯದು, ಬಾಯಿಯಿಲ್ಲದ ಆ ಆಕಳು ನನ್ನ ಅಂತಃಪುರಕ್ಕೆ ಬಂದು ಒದರುತ್ತ, ನನ್ನನ್ನು ತನ್ನ ಹಿಂದೆ ಬರುವಂತೆ ಸಂಜ್ಞೆ ಮಾಡಿದಾಗ, ಏನೋ ವಿಶೇಷ ವಿಷಯವಿದೆಯೆಂದು ತಿಳಿದು ಆ ಆಕಳಿನ ಹಿಂದೆ ಇಲ್ಲಿಗೆ ಬಂದು ಇಲ್ಲಿನ ಪರಿಸ್ಥಿತಿಗಳ ನೋಡಿ, ತಮ್ಮಿಂದ ಈ ವಿಷಯವನ್ನು ತಿಳಿದುಕೊಂಡೆನು. ನನ್ನನ್ನು ಕ್ಷಮಿಸಿ ಈ ಶಾಪ ಉಪಸಂಹರಿಸುವಂತೆ ಪ್ರಾರ್ಥಿಸುತ್ತಿದ್ದೇನೆ.' ಎಂದು ಭಕ್ತಿಭಾವದಿಂದ ಸ್ವಾಮಿಗೆ ವಿನಂತಿಸಿ ಕೊಂಡನು. ಆಗ ಶ್ರೀನಿವಾಸನು

ಸುವೀರರಾಜನಲ್ಲಿ ಕನಿಕರ ಹೊಂದಿ 'ಓ ಸುವೀರಾ! ನಿನ್ನ ಪೂರ್ವಪುಣ್ಯಗಳ ವೃತ್ತಾಂತ ನೋಡಿದೆ, ನಿನ್ನ ಪೂರ್ವಜರು ನನಗೆ ಅತ್ಯಂತ ಪ್ರಿಯರಾದವರು, ಪಾಂಡವರಂತೂ ಚಂದ್ರವಂಶದ ರಾಜರು. ನೀನು ಆ ಚಂದ್ರವಂಶದ ರಾಜರ ಕುಲದವನು. ನಿನ್ನ ಭಕ್ತಿಗೆ ನಾನು ಸಂತೋಷಗೊಂಡೆ. ಆದರೆ ನಾನು ಕೊಟ್ಟ ಶಾಪ ವಾಪಸ್ಸು ತೆಗೆದುಕೊಳ್ಳಲಾಗದು. ಭಕ್ತರ ಮೇಲೆ ನನಗೆ ಬಹಳ ಪ್ರೀತಿ. ಅವರ ಕೋರಿಕೆಗಳು ಏನಿದ್ದರೂ ತೀರಿಸುವೆನು. ಸ್ವಲ್ಪ ಕಾಲ ನೀನು ನನ್ನ ಶಾಪ ಅನುಭವಿಸಿದ ನಂತರ ಈ ಸ್ವಾಮಿ ಪುಷ್ಕರಿಣಿ ತೀರ್ಥದಲ್ಲಿ ಸ್ನಾನ ಮಾಡಿ ಶಾಪವಿಮೋಚನ ಹೊಂದುವಿ. ಆನಂತರದಲ್ಲಿ ಸುಧರ್ಮ ಎಂಬ ಸುಪುತ್ರ ಹುಟ್ಟುವನು. ಆ ಸುಧರ್ಮನಿಗೆ ಆಕಾಶರಾಜ, ತೋಂಡಮಾನ ಎಂಬ ಇಬ್ಬರು ಮಕ್ಕಳು ಹುಟ್ಟುವರು. ಆಕಾಶರಾಜನ ಮಗಳಿಗೆ ನಾನು ವಿವಾಹವಾಗುವೆನು. ಆ ಕಾರಣದಿಂದ ನೀನು ಪುಣ್ಯಲೋಕ ಹೊಂದುವಿ.' ಎಂದು ಹೇಳಿ ಕಳುಹಿಸಿಕೊಟ್ಟನು. ಗೋ ಮತ್ತು ಗೋವತ್ಸಗಳು ಮತ್ತೇ ಬ್ರಹ್ಮ ಮಹೇಶ್ವರರಾಗಿ ತಮ್ಮ ಲೋಕಕ್ಕೆ ಹೋಗಿಬಿಟ್ಟರು.

ಹೀಗೆ ಸುವೀರನು ಸಂತೋಷಗೊಂಡು ಕೆಲಕಾಲ ಪಿಶಾಚಿರೂಪದಲ್ಲಿ ವೆಂಕಟಾಚಲದಲ್ಲಿ ಇದ್ದು, ಸ್ವಾಮಿಪುಷ್ಕರಿಣಿ ತೀರ್ಥದಲ್ಲಿ ಸ್ನಾನ ಮಾಡಿ, ಶಾಪ ವಿಮೋಚನ ಹೊಂದಿ ಮುಂದೆ ತನ್ನ ರಾಜ್ಯವನ್ನು ಪ್ರಜಾಸಮ್ಮತಿಯಿಂದ ಪಾಲಿಸಿದನು. ಮುಂದೆ ಸ್ವಲ್ಪ ಕಾಲದಲ್ಲಿ ಪುತ್ರನನ್ನು ಪಡೆದನು. ಅವನಿಗೆ ಸುಧರ್ಮ ಎಂದು ನಾಮಕರಣ ಮಾಡಿ, ದೊಡ್ಡವನಾದ ಮೇಲೆ ಪಾಂಡ್ಯರಾಜನ ಮಗಳ ಜೊತೆಗೆ ವಿವಾಹ ಏರ್ಪಡಿಸಿ ರಾಜ್ಯವನ್ನು ಅವರಿಗೆ ಕೊಟ್ಟುಬಿಟ್ಟು ತಾನು ವೆಂಕಟಾಚಲದಲ್ಲಿ ತಪಸ್ಸನ್ನು ಆಚರಿಸುತ್ತ ಕೊನೆಗೆ ಪುಣ್ಯಲೋಕ ಹೊಂದಿದನು.

## 7. ವರಾಹಸ್ವಾಮಿ ಶ್ರೀನಿವಾಸರ ಮಿಲನ, ಬಕುಳಾಮಾತೆ ಶ್ರೀನಿವಾಸನಿಗೆ ಸೇವೆಗೈಯುವಿಕೆ

ಚೋಳರಾಜ ಹೋದನಂತರ ಶ್ರೀನಿವಾಸನು ಬೃಹಸ್ಪತಿಯನ್ನು ಸ್ಮರಿಸಿ, ಬಂದ ದೇವಗುರುವಿಗೆ ತನ್ನ ತಲೆಯ ಗಾಯಕ್ಕೆ ಸರಿಯಾದ ಚಿಕಿತ್ಸೆ ಹೇಳಬೇಕೆಂದು ಕೋರಿದನು. ಬೃಹಸ್ಪತಿ ಕೆಲವು ಮೂಲಿಕೆಗಳನ್ನು ತಂದು ಅರೆದು ಹತ್ತಿಯಿಂದ ಹಚ್ಚಿ ಆ ರೀತಿ ಪಟ್ಟಿಮಾಡಿ ಕೊಳ್ಳಬೇಕು ಎಂದು ಹೇಳಿ ಹೋದನು.

ಒಂದು ದಿವಸ ಶ್ರೀನಿವಾಸನು ಔಷಧ ಸಲುವಾಗಿ ವನದಲ್ಲಿ ತಿರುಗುತ್ತಿರುವಾಗ, ದುಷ್ಟ ರಾಕ್ಷಸರನ್ನು ಸಂಹರಿಸಿ ತಿರುಗಿ ಸ್ವಾಮಿಪುಷ್ಕರಿಣಿತೀರಕ್ಕೆ ವಾಸವಾಗಿರಲು ಬರುತ್ತಿರುವಾಗ ಮಾರ್ಗಮಧ್ಯದಲ್ಲಿ ವರಾಹಸ್ವಾಮಿಯು ಶ್ರೀನಿವಾಸನನ್ನು ಕುರಿತು 'ಯಾರು ನೀನು' ಎಂದು ಕೇಳಿದನು. ಶ್ರೀನಿವಾಸನು ಅವನಿಗೆ ಉತ್ತರಿಸದೇ ವೇಗವಾಗಿ ಹೋಗಿ ತನ್ನ ಹುತ್ತನ್ನು ಪ್ರವೇಶಿಸಿದನು. ಆಗ ವರಾಹಸ್ವಾಮಿ ದೀರ್ಘವಾಗಿ ಯೋಚಿಸಿ ಆತನು ವೈಕುಂಠವಾಸನು ಎಂದು ನಿಶ್ಚಯಿಸಿ, ಹುತ್ತಿನ ಹತ್ತಿರ ಹೋಗಿ ಶ್ರೀನಿವಾಸನನ್ನು ಕರೆದನು. ಶ್ರೀನಿವಾಸನು ಆ ವರಾಹಸ್ವಾಮಿಯು ತನ್ನ ಅಂಶಸಂಭೂತನೆಂದು ತಿಳಿದು ಹುತ್ತಿನಿಂದ ಹೊರಗೆ ಬಂದನು. ಭಿನ್ನರೂಪಗಳ ಬೆಳಕು ಆ ಮೂರ್ತಿದ್ವಯಗಳ ಏಕರೂಪದ ಜ್ಯೋತಿಯೇ ಎಂಬಂತೆ ಕಂಡ ದೇವತೆಗಳು ಅವರ ಮೇಲೆ ಪುಷ್ಪವೃಷ್ಟಿ ಮಾಡಿದರು. ಹಾಗೆಯೇ ಸ್ತುತಿಸಿ ಹೋಗಿಬಿಟ್ಟರು.

ತದನಂತರದಲ್ಲಿ ವರಾಹಸ್ವಾಮಿಯು ಶ್ರೀನಿವಾಸನಿಗೆ ವೈಕುಂಠ ಬಿಟ್ಟು ಬಂದಿರುವ ಕಾರಣ ಕೇಳಿದನು. ಆಗ ವಿಷ್ಣುವು

ಭೃಗುಮಹರ್ಷಿ ವೈಕುಂಠಕ್ಕೆ ಬಂದು ನಿದ್ರೆಯಲ್ಲಿರುವ ನನ್ನನ್ನು ಎದೆಯ ಮೇಲೆ ಒದ್ದದ್ದು, ಆ ಕಾರಣ ಲಕ್ಷ್ಮೀಯು ತನ್ನನ್ನು ಬಿಟ್ಟುಹೋದದ್ದು, ತಾನು ವೈಕುಂಠದಲ್ಲಿ ಒಬ್ಬನೇ ಇರಲಾಗದೆ ಅಲ್ಲಿಂದ ಭೂಲೋಕ ಸೇರಿದ್ದು, ಮುಂದೆ ಪುಣ್ಯ ನದಿಗಳ ಸಂದರ್ಶನ ಪಡೆದು ವಿಂಧ್ಯ ಪರ್ವತವನ್ನು ಸೇರಿದ್ದು, ತನಗೆ ಪತ್ನಿವಿಯೋಗದ ವ್ಯಥೆಯನ್ನು ಶಾಂತಿಗೊಳಿಸಲು ವಿಂಧ್ಯೆಗೆ ದಕ್ಷಿಣಕ್ಕೆ ಪ್ರಯಾಣ ಬೆಳೆಸಿ, ಗೌತಮಿ, ಕೃಷ್ಣಾ, ಪೆನ್ನಾ ನದಿಗಳನ್ನು ದಾಟಿ, ಸುವರ್ಣಮುಖಿನದಿಯನ್ನು ದರ್ಶಿಸಿ, ಕೊನೆಗೆ ವೆಂಕಟಾಚಲ ಸೇರಿ, ಅಲ್ಲಿ ಸ್ವಾಮಿಪುಷ್ಕರಿಣಿಯನ್ನು ನೋಡಿ, ಅಲ್ಲಿನ ಪ್ರಕೃತಿ ಸೌಂದರ್ಯವು ತನಗೆ ಸಮಾಧಾನ ಕೊಡುವದೆಂದು ತಿಳಿದು, ಹುಣಸೆಗಿಡದ ಬುಡದಲ್ಲಿ ಇದ್ದ ಹುತ್ತದಲ್ಲಿ ತಪಸ್ಸು ಆಚರಿಸುತ್ತಿರುವಂತೆ ತನ್ನ ಎಲ್ಲಾ ವೃತ್ತಾಂತವನ್ನು ವಿವರಿಸಿದನು. ಆಮೇಲೆ ತನ್ನ ತಲೆಯ ಮೇಲಿನ ಗಾಯದ ಬಗ್ಗೆ ವರಾಹಸ್ವಾಮಿಗೆ ವಿವರಿಸಿದನು. ಅದೆಲ್ಲ ಕೇಳಿ ವರಾಹಸ್ವಾಮಿ 'ಲೋಕರಕ್ಷಕ! ಎಷ್ಟು ಕಾಲದವರೆಗೆ ನೀವು ಇಲ್ಲಿ ಇರುತ್ತೀರಿ?' ಕೇಳಿದ್ದಕ್ಕೆ 'ನಾನು ಕಲಿಯುಗ ಮುಗಿಯುವವರೆಗೆ ಇರುವೆನು' ಎಂದು ಶ್ರೀನಿವಾಸನು ಹೇಳಿದ್ದನ್ನು ಕೇಳಿ ವರಾಹಸ್ವಾಮಿ 'ತಾವು ಕಲಿಯುಗದ ಮಾನವರನ್ನು ಕಷ್ಟಗಳನ್ನು ಪರಿಹರಿಸಲು ಬಂದಿದ್ದೀರಿ ಎಂಬುದು ತಿಳಿಯಿತು. ಮತ್ತು ಮಾನವರು ನೈತಿಕ ಮಾರ್ಗವನ್ನು ಅನುಸರಿಸಿ, ಆಧ್ಯಾತ್ಮಸಂಪತ್ತನ್ನು ಪಡೆದು ಸದ್ಧರ್ಮವರ್ತನೆ ಆಚರಿಸುವಂತೆ ಮಾಡುವುದೇ ನಿಮ್ಮ ಆಶಯ ಎಂದು ಗ್ರಹಿಸಿದೆನು. ತಾವು ಲೋಕಕಲ್ಯಾಣಕ್ಕಾಗಿ ಎಷ್ಟೋ ಅವತಾರಗಳನ್ನು ಮಾಡಿದಿರಿ. ಕಲಿಯುಗದ ಮಾನವರ ಪಾಪಗಳನ್ನು ತಪ್ಪಿಸಲಿಕ್ಕೆ ವೆಂಕಟಾಚಲವನ್ನು ಭೂಲೋಕ ವೈಕುಂಠವನ್ನಾಗಿ ಮಾಡುವಂತೆ ದ್ಯೋತಕವಾಯಿತು. ಈ ಪ್ರಾಂತವು ವರಾಹಪ್ರಾಂತವೆಂದು

ಅನ್ನಿಸಿಕೊಳ್ಳುವದರಿಂದ ಇಲ್ಲಿ ಇರಬೇಕಾದಲ್ಲಿ ಸ್ವಲ್ಪ ಮುಂಗಡ ಧನ ಕೊಡಬೇಕಾಗುತ್ತದೆ.'

'ಹೌದು, ಆದರೆ ಪ್ರಸ್ತುತದಲ್ಲಿ ಲಕ್ಷ್ಮೀಯು ನನ್ನನ್ನು ಬಿಟ್ಟು ಹೋಗಿದ್ದಾಳೆ, ಹಾಗಾಗಿ ನಾನು ನಿಮಗೆ ಧನವನ್ನು ಹೇಗೆ ಕೊಡಲಿ?'

'ಶ್ರೀನಿವಾಸ! ತಾವು ಮಾನವರ ಕಲ್ಯಾಣಕ್ಕಾಗಿ ಇಲ್ಲಿ ಇರುವದಕ್ಕಾಗಿ ಬಂದಿರಿ. ತಮ್ಮ ಭಕ್ತರು ಕ್ರಮವಾಗಿ ನೂರು ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ದರ್ಶನಕ್ಕೆ ಬಂದು ತಮಗೆ ಸಮರ್ಪಿಸುವ ನಿವೇದನೆಗಳಲ್ಲಿ ಮೊದಲ ಭಾಗವು ನನಗೆ ಸಲ್ಲಬೇಕೆಂದು ವಚನ ಕೊಟ್ಟರೆ ಸಾಕು'

'ಬಹಳ ಸಂತೋಷವಾಯಿತು, ಅಲ್ಲದೇ ನನ್ನ ದರ್ಶನಾರ್ಥಿಯಾಗಿ ಬರುವ ಭಕ್ತರು ಮೊದಲು ಸ್ವಾಮಿಪುಷ್ಕರಿಣಿಯಲ್ಲಿ ಸ್ನಾನ ಮಾಡಿ ಅಲ್ಲಿಯೇ ದಡದಲ್ಲಿರುವ ನಿಮ್ಮ ದರ್ಶನ ಪಡೆದು ಆರಾಧಿಸಿ ನಿವೇದನೆಗಳನ್ನು ಸಮರ್ಪಿಸಿ ನಿಮ್ಮ ಅನುಗ್ರಹವನ್ನು ಹೊಂದಿದ ನಂತರ ನನ್ನ ದರ್ಶನಕ್ಕೆ ಬಂದು ಅವರು ತಮ್ಮ ನಿವೇದನೆಗಳನ್ನು ನನಗೆ ಕೊಡುವರು. ಹೀಗೆ ಮಾಡಿದ ನಿವೇದನೆಗಳನ್ನೇ ನಾನು ಅತ್ಯಂತ ಪ್ರೀತಿಯಿಂದ ಸ್ವೀಕರಿಸುವೆನು. ನನ್ನ ಭಕ್ತರು ನಿಮ್ಮನ್ನು ಸೇವಿಸಿದ ನಂತರ ನನ್ನನ್ನು ಸೇವಿಸುವವರು ನನಗೆ ಅತ್ಯಂತ ಪ್ರೀತಿಪಾತ್ರರು. ಅವರನ್ನು ಮೊದಲು ನಾನು ಆದರಿಸುತ್ತೇನೆ.' ಎಂದು ಹೇಳಿದ್ದನ್ನು ಕೇಳಿ ವರಾಹಸ್ವಾಮಿ 'ತಥಾಸ್ತು' ಎಂದು ಹೇಳಿ ಅಲ್ಲಿವರೆಗೆ ನಡೆದಿರುವ ಸಂಭಾಷಣೆಯನ್ನು ಸಮಾಪ್ತಗೊಳಿಸಿ ಮುಂದೆ 'ತನ್ನಲ್ಲಿ ಪರಿಚಾರಿಕೆಯಾಗಿ ಇರುವ ಬಕುಳಮ್ಮನನ್ನು ಶ್ರೀನಿವಾಸನಿಗೆ ಸೇವೆ

ಮಾಡಲು ಕಳಿಸುತ್ತೇನೆ' ಎಂದು ಹೇಳಿ ಅಲ್ಲಿಂದ ಹೊರಟುಹೋದನು.

ವರಾಹಸ್ವಾಮಿಯು ತನ್ನ ನಿವಾಸವನ್ನು ಸೇರಿ ಬಕುಳಾದೇವಿಯನ್ನು ಕುರಿತು 'ಅಮ್ಮಾ! ನಿನ್ನ ಅಭಿಲಾಷೆ ಪೂರ್ಣವಾಗುವ ಸಮಯ ಬಂದಿದೆ. ಆ ಮೂಲ ಹುಣಿಸೆಗಿಡದ ಕೆಳಗೆ ಇರುವ ಹುತ್ತಿನಲ್ಲಿ ನಿನ್ನ ಕೃಷ್ಣನು ವೈಕುಂಠವನ್ನು ಬಿಟ್ಟು ಶ್ರೀನಿವಾಸನಾಗಿ ವಾಸಮಾಡುತ್ತಿದ್ದಾನೆ. ಈಗ ಆತನು ತಲೆಯ ಮೇಲಿನ ಗಾಯದಿಂದ ಬಾಧೆ ಪಡುತ್ತಿದ್ದಾನೆ. ನೀನು ಅಲ್ಲಿಗೆ ಹೋಗಿ ಶ್ರೀನಿವಾಸನಿಗೆ ಸರಿಯಾದ ಸೇವೆ ಮಾಡಿ ಪುತ್ರವಾತ್ಸಲ್ಯವನ್ನು ತೀರಿಸಿಕೋ' ಎಂದುದ್ದನ್ನು ಕೇಳಿ ಬಕುಳಾದೇವಿಯು ಅತ್ಯಂತ ಆನಂದ ಹೊಂದಿ ತನ್ನ ಮನೋರಥವು ಈಡೇರುತ್ತಿರುವುದೆಂದು ಅತಿಶಯ ಸಂತೋಷಗೊಂಡು ವರಾಹಸ್ವಾಮಿಯನ್ನು ಬೀಳ್ಕೊಂಡು ಶ್ರೀನಿವಾಸನ ವಾಸಕ್ಕೆ ಹೋದಳು. ಶ್ರೀನಿವಾಸನು ಬಕುಳಮ್ಮಳನ್ನು ಕಂಡು ಬಹಳ ಸಂತೋಷಗೊಂಡು 'ಅಮ್ಮಾ' ಎಂದು ಕಣ್ಣುತುಂಬ ಆನಂದಬಾಷ್ಪಗಳಿಂದ ಅವಳನ್ನು ನಮಸ್ಕರಿಸಿದನು. ಬಕುಳಮ್ಮನು ಶ್ರೀನಿವಾಸನನ್ನು ಬರಸೆಳೆದು ಅಪ್ಪಿಕೊಂಡಳು. ಬಾಲ್ಯದ ಕೃಷ್ಣನೆಂದು ಭಾವಿಸಿ ಮುದ್ದಾಡಿ ರೋಮಾಂಚನಳಾಗಿ 'ಅಪ್ಪಯ್ಯಾ' ಎಂದು ಸ್ವಲ್ಪ ಹೊತ್ತು ಮಾತಾಡದೆ ಮೌನವಾಗಿ ಇದ್ದುಬಿಟ್ಟಳು. ಶ್ರೀನಿವಾಸನು ಆ ಭಾವನಾತ್ಮಕ ಪ್ರಸಂಗವನ್ನು ಬದಲಾಯಿಸಲು 'ಅಮ್ಮಾ! ನನ್ನ ತಲೆಯ ಗಾಯವು ಬಹಳ ನೋಯುತ್ತಿದೆ' ಎಂದಾಗ ಬಕುಳಾದೇವಿಯು ಭಾವನೆಗಳನ್ನು ಬದಿಗಿಟ್ಟು ಎಚ್ಚರಗೊಂಡು 'ಅಪ್ಪಯ್ಯಾ! ಈಗಲೇ ಔಷಧಿ ಮಾಡಿಕೊಡುತ್ತೇನೆ' ಎಂದು ಹೇಳಿ ಎದ್ದು ವನದೊಳಗೆ ಹೋಗಿ ಕೆಲವು ಎಲೆ, ಗಿಡಮೂಲಿಕೆಗಳನ್ನು

ತಂದು ಚೆನ್ನಾಗಿ ಅರೆದು ಹತ್ತಿಯಿಂದ ಅದನ್ನು ಗಾಯದ ಮೇಲೆ ಸವರಿದಳು. ಹೀಗೆ ಬೇಕಾಗುವ ಎಲ್ಲ ಉಪಚಾರಗಳನ್ನು ಮಾಡುತ್ತ ಪ್ರತಿದಿನ ಗಾಯಕ್ಕೆ ಪಟ್ಟಿ ಮಾಡುತ್ತ, ಒಳ್ಳೆಯ ಫಲ ಆಹಾರಗಳನ್ನು ಕೊಡುತ್ತ ಸಣ್ಣ ಕೂಸನ್ನು ಪೋಷಿಸುವಂತೆ ಸೇವೆಮಾಡುತ್ತಿದ್ದಳು.

ಕೆಲವು ದಿನಗಳಲ್ಲಿ ಗಾಯವು ಮಾಯ್ದ ಮೇಲೆ ಶ್ರೀನಿವಾಸನು ವನಗಳಲ್ಲಿ ಹೋಗಿ ಕಂದಮೂಲಗಳು, ಹಣ್ಣುಗಳು, ಅಕ್ಕಿ ಹಾಗೂ ಇತರ ಧಾನ್ಯಗಳು, ಮತ್ತು ಜೇನುತುಪ್ಪ ಮುಂತಾದ ಖಾದ್ಯ ವಸ್ತುಗಳನ್ನು ತಂದುಕೊಡುವುದರಿಂದ ಶ್ರೀನಿವಾಸನು ಆವಳಿಗೆ ಬಹಳ ಪ್ರೀತಿಪಾತ್ರನಾದನು. ಬಕುಳಾದೇವಿಯು ಶ್ರೀನಿವಾಸನಿಗೆ ಪ್ರಿಯವಾದ ತಿಂಡಿ ತಿನಸುಗಳನ್ನು ಮಾಡಿಕೊಡುವುದು ಇದರಿಂದ ತನ್ನ ಪುತ್ರವಾತ್ಸಲ್ಯವನ್ನು ತೋರಿಸುತ್ತ ಶ್ರೀನಿವಾಸನಿಗೇನೂ ತೊಂದರೆಯಾಗದಂತೆನೋಡಿಕೊಳ್ಳುತ್ತಿದ್ದಳು. ಜನ್ಮಾಂತರದಲ್ಲಿಯಂತೆ ಯಶೋದೆ ಶ್ರೀನಿವಾಸನನ್ನು ಕೃಷ್ಣನೆಂದೆ ಭಾವಿಸಿ ಅವನ ಇಷ್ಟವಾದ ಆಹಾರಗಳನ್ನು ಅಲಂಕಾರಗಳನ್ನು ಮಾಡುತ್ತ ತನ್ನ ಜನ್ಮಸಾರ್ಥಕ ಮಾಡಿಕೊಳ್ಳುತ್ತಿದ್ದಳು. ಶ್ರೀನಿವಾಸನು ಬಕುಳಾದೇವಿಯನ್ನು ತನ್ನ ಹಡೆದ ತಾಯಿಯಂತೆ ಭಾವಿಸಿ ಅತ್ಯಂತ ಪ್ರೇಮ ಭಕ್ತಿ ಮರ್ಯಾದೆಗಳಿಂದ ಅವಳ ಮನಸ್ಸಿನ ತಕ್ಕಂತೆ ವಿನಯದಿಂದ ವರ್ತಿಸುತ್ತಿದ್ದನು.

## 8. ಆಕಾಶರಾಜ ತೋಂಡಮಾನರ ಜನ್ಮವೃತ್ತಾಂತ

ಹಿಂದೆ ಮಾಧವನೆಂಬ ವೈದಿಕ ಶಿಖಾಮಣಿ ಪರಮ ನಿಷ್ಠಾಗರಿಷ್ಠನಾಗಿದ್ದು ವಿಧಿವಶದಿಂದ ಕುಂಡಲ ಎಂಬ ಹೆಂಗಸನ್ನು ಕಾಮಿಸಿ ಕಾಮಾತುರನಾಗಿ ಬಲಾತ್ಕಾರದಿಂದ ಭೋಗಿಸಿ ಆಕೆಯನ್ನು ಪತ್ನಿಯಾಗಿ ಸ್ವೀಕರಿಸಿ ಕೆಲಕಾಲ ವನದಲ್ಲಿಯೇ ತಿರುಗಾಡುತ್ತಿದ್ದನು.

ಸ್ವಲ್ಪ ಕಾಲದಲ್ಲಿ ಅವಳು ಮರಣಹೊಂದಿದಳು. ಆನಂತರ ಮಾಧವನು ಬುದ್ಧಿಭ್ರಷ್ಟನಾಗಿ ಹುಚ್ಚನಂತೆ ಅಡವಿಅಡವಿ ತಿರುಗುತ್ತ ದೈವವಶಾತ್ ಸತ್ಸಂಗವ ಸೇರಿ ಅವರ ಜೊತೆಯಲ್ಲಿ ಪುಣ್ಯಸ್ಥಳಗಳಿಗೆ ಯಾತ್ರೆ ಮಾಡುತ್ತ ಕಪಿಲಾದಿ ವೆಂಕಟಾಚಲ ತೀರ್ಥಗಳಲ್ಲಿ ಸ್ನಾನ ಮಾಡಿ ಹಾಗೆಯೇ ಸ್ವಾಮಿಪುಷ್ಕರಿಣಿಯಲ್ಲಿ ಸ್ನಾನ ಮಾಡಿ ವರಾಹಸ್ವಾಮಿಯ ದರ್ಶನ ಪಡೆದು ಪರಮ ಪಾವನನಾದನು. ಪೂರ್ವಜನ್ಮದ ಸುಕೃತದಿಂದ ವೆಂಕಟಾದ್ರಿಯಲ್ಲಿ ದಿವಂಗತನಾಗಿ ಮರುಜನ್ಮದಲ್ಲಿ ವೆಂಕಟಾಚಲ ಪ್ರಾಂತದಲ್ಲಿ ಚೋಳರಾಜ್ಯವನ್ನು ಪಾಲಿಸುತ್ತಿರುವ ಚಂದ್ರವಂಶದ ರಾಜ ಸುಧರ್ಮನಿಗೆ ಧರ್ಮಪತ್ನಿಯಾದ ಮನೋರಮಾದೇವಿಯಲ್ಲಿ ಪುತ್ರನಾಗಿ ಜನಿಸಿ ಆಕಾಶರಾಜ ನಾಮದಿಂದ ಬೆಳೆದು ದೊಡ್ಡವನಾದನು.

ಅಲ್ಲಿ ಆಕಾಶರಾಜನ ಜನ್ಮದ ನಂತರ ಮೊದಲು ರಾಜ್ಯದಲ್ಲಿ ಸರಿಯಾಗಿ ಮಳೆಗಳಾದುವು, ಕೆರೆಗಳು ತುಂಬಿಕೊಂಡು ಒಳ್ಳೆಯ ಬೆಳೆಗಳು ಬಂದುವು. ಸುತ್ತಮುತ್ತಲು ಒಳ್ಳೆಯ ಹಸಿರು ಹುಲ್ಲು ಬರಹತ್ತಿತು. ಆಕಳುಗಳು ಸರಿಯಾಗಿ ಹಾಲು ಕೊಡಹತಿದ್ದವು. ಯಾವುದೇ ತೊಂದರೆಯಿಲ್ಲದೆ ಪ್ರಜೆಗಳು ಉತ್ತಮ ಬೆಳೆಗಳಿಂದ ಸಂತೋಷದಿಂದ ಜೀವಿಸುತ್ತಿದ್ದರು.

ಒಂದು ದಿವಸ ಸುಧರ್ಮನು ವಿಹಾರಾರ್ಥವಾಗಿ ಬೇಟೆಗೆಂದು ವನಗಳೊಳಗೆ ತಿರುಗಾಡುತ್ತ ಬೇಟೆಗಾಗಿ ವನಮೃಗಗಳನ್ನು ನೋಡಲು ವನವೆಲ್ಲ ಹುಡುಕುತ್ತ ವೆಂಕಟಾಚಲ ಪ್ರಾಂತದ ಆರಣ್ಯವನ್ನು ಸೇರಿದನು. ಅಲ್ಲಿ ಘಾತಕ ಪ್ರಾಣಿಗಳಿಂದ ಸಾಧುಗಳಿಗೆ, ಸಾಧುಮೃಗಗಳಿಗೆ ಕೇಡು ಆಗಬಾರದೆಂದು ಅವುಗಳನ್ನು ಸಂಹರಿಸಿ ಬಹಳ ಆಯಾಸಗೊಂಡು ಎಲ್ಲ ಜಲಸಮೂಹಗಳನ್ನು ದಾಟಿ ಕೊನೆಗೆ ಶೇಷಾದ್ರಿ ಕೆಳಬಾಗದಲ್ಲಿರುವ

ಕಪಿಲತೀರ್ಥವನ್ನು ನೋಡಿದನು. ಸುಧರ್ಮನು ಒಂದು ಕೊಳದಲ್ಲಿ ಇಳಿದು ನೋಡಿದಾಗ ಎದುರಿನಲ್ಲಿ ಒಬ್ಬ ಕನ್ಯಾಮಣಿಯು ಸ್ನಾನ ಮಾಡುವುದನ್ನು ಕಂಡನು. ಸುಧರ್ಮನಿಗೆ ಆ ಕನ್ಯೆಯ ಮೇಲೆ ಮೋಹ ಹುಟ್ಟಿ ಅವಳ ಹತ್ತಿರ ಹೋಗಿ ತನ್ನ ಮನದ ಅಭಿಲಾಷೆಯನ್ನು ವ್ಯಕ್ತಪಡಿಸಿದನು. ಆಗ ಆ ಕನ್ಯೆಯು 'ಅಯ್ಯಾ! ನಾನು ಧನಂಜಯನೆಂಬ ನಾಗರಾಜನ ಏಕೈಕ ಪುತ್ರಿ. ನಮ್ಮ ತಂದೆ ನನ್ನನ್ನು ಒಬ್ಬ ಸುಪ್ರಸಿದ್ಧವಂಶದವನಾದ ಕ್ಷತ್ರಿಯನಿಗೆ ಕೊಟ್ಟು ಮದುವೆ ಮಾಡ ಬೇಕೆಂದು ಅಂದುಕೊಂಡಿದ್ದಾನೆ. ನಾನು ನಮ್ಮ ತಂದೆಯ ಮಾತು ವಿರುದ್ಧವಾಗಿ ವರ್ತಿಸುವದಿಲ್ಲ,' ಎಂದು ಹೇಳಿದಳು.

'ಹಾಗಾದರೆ ನಾನು ಚಂದ್ರವಂಶದ ಕ್ಷತ್ರಿಯನು, ಈ ಪ್ರಾಂತ ಚೋಳರಾಜ್ಯವನ್ನು ಪಾಲಿಸುತ್ತಿದೇನೆ. ಕ್ಷತ್ರಿಯರಿಗೆ ಗಂಧರ್ವ ವಿವಾಹವು ಧರ್ಮೋಕ್ತವಾದುದ್ದೇ'

'ಇರಬಹುದು, ಆದರೂ ನನ್ನದೊಂದು ಮಾತು, ನಿನ್ನಿಂದ ನನ್ನ ಗರ್ಭದಲ್ಲಿ ಜನಿಸುವ ಕುಮಾರನಿಗೇನೇ ರಾಜ್ಯಾಭಿಷೇಕ ಮಾಡುತ್ತೇನೆಂದು ವಚನ ಕೊಡು'

'ನನಗೀಗಾಲೇ ಒಬ್ಬ ಮಗನಿದ್ದಾನೆ, ಜ್ಯೇಷ್ಠ ಮಗನಿರಲಾಗಿ ಸಣ್ಣವನಿಗೆ ರಾಜ್ಯ ವಹಿಸುವುದು ಆಗುವದಿಲ್ಲ.'

'ಹಾಗಾದರೆ ರಾಜ್ಯವನ್ನು ಇಬ್ಬರಿಗೆ ಸಮವಾಗಿ ಹಂಚಿಕೊಡು'

ಈ ಮಾತಿಗೆ ಸುಧರ್ಮನು ಸಮ್ಮತಿಸಿ, ಸಂತೋಷಗೊಂಡು ತನ್ನ ಕೈಯಲ್ಲಿನ ಉಂಗುರವನ್ನು ತೆಗೆದು ನಾಗಕನ್ನಿಕೆಯ ಬೆರಳಿಗೆ ಹಾಕಿ ಗಾಂಧರ್ವರೀತಿಯಲ್ಲಿ ವಿವಾಹವಾಗಿ ಕೆಲಕಾಲ ಆ

ಪ್ರಾಂತದಲ್ಲಿಯೇ ಇದ್ದು ತೊಂಡೆಬಳ್ಳಿಗಳ ಕೆಳಗೆ ಪೊದೆಗಳಲ್ಲಿ ವಿಹಾರ ಮಾಡುತ್ತ ವಿನೋದದಿಂದ ಇರುತ್ತಿದ್ದನು. ಒಂದು ದಿವಸ ಆ ನಾಗಕನ್ಯೆಯು ತಾನು ನಾಗಲೋಕಕ್ಕೆ ಹೋಗಬೇಕೆಂದು ರಾಜನಿಗೆ ಹೇಳಿದಾಗ ರಾಜನು ಅದನ್ನು ಸಮ್ಮತಿಸಿ 'ನಿನ್ನ ಉದರದಲ್ಲಿ ಹುಟ್ಟುವ ಮಗನನ್ನು ಸರಿಯಾಗಿ ಬೆಳೆಸಿ ನನ್ನ ಕಡೆ ಕಳಿಸಿಕೊಡು. ಹಾಗೆ ಕಳಿಸುವಾಗ ಆತನ ಕೈಯಲ್ಲಿ ನಾನು ಕೊಟ್ಟ ಉಂಗುರವನ್ನು ಹಾಕಿ ಕಳಿಸಿದರೆ ಅವನ ಗುರುತು ಹಿಡಿಯುವೆನು. ನಾನು ಆ ಕುಮಾರನಿಗೆ ಅರ್ಧರಾಜ್ಯವನ್ನು ಕೊಟ್ಟು ಪಟ್ಟಾಭಿಷೇಕ ಮಾಡುತ್ತೇನೆ.' ಎಂದು ಹೇಳಿ ಅವಳನ್ನು ಬೀಳ್ಕೊಟ್ಟನು.

ನಾಗಕನ್ನಿಕೆಯು ತನ್ನ ಲೋಕವನ್ನು ಸೇರಿಕೊಂಡು ತನ್ನ ತಂದೆಗೆ ಜರುಗಿದ ವೃತ್ತಾಂತವೆಲ್ಲವನ್ನು ಹೇಳಿದಳು. ಚೋಳರಾಜನ ವಿಷಯವನ್ನು ಕೇಳಿ ಧನಂಜಯನು ಆ ವಿವಾಹಕ್ಕೆ ಸಮ್ಮತಿಸಿ ಸಂತೋಷಗೊಂಡನು. ಹೀಗೆ ಕೆಲವು ದಿನಗಳ ನಂತರ ಆ ನಾಗಕನ್ಯೆಯು ನವಮಾಸಗಳ ಪೂರ್ತಿ ಮುಗಿಸಿ ಸುಂದರ ಮಗನನ್ನು ಹಡೆದಳು. ಆ ಕುಮಾರನನ್ನು ಹದಿನಾರು ವರ್ಷ ಪಾಲಿಸಿ ಪೋಷಿಸಿ, ಸರಿಯಾಗಿ ಬಾಲ್ಯ ವಿದ್ಯೆಯನ್ನು ಕಲಿಸಿ ತನ್ನ ತಂದೆಯ ಆಜ್ಞೆ ಪಡೆದು ಒಂದು ಶುಭದಿನದಂದು ಆ ಮಗನನ್ನು ತನ್ನ ಹತ್ತಿರ ಕೂಡಿಸಿಕೊಂಡು 'ಅಯ್ಯಾ, ನೀನಿನ್ನು ರಾಜಧರ್ಮವನ್ನು, ಕ್ಷತ್ರಿಯ ವಿದ್ಯೆಗಳನ್ನು ಕಲಿಯಲು ನಿನ್ನ ತಂದೆಯ ಕಡೆಗೆ ಹೋಗಬೇಕಾಗಿದೆ. ಭೂಲೋಕದ ವೆಂಕಟಾಚಲ ಪ್ರಾಂತದಲ್ಲಿ ನಿನ್ನ ತಂದೆ ಸುಧರ್ಮನು ಚೋಳರಾಜ್ಯವನ್ನು ಆಳುತ್ತಿದ್ದಾನೆ. ನೀನು ಈ ರತ್ನದ ಉಂಗುರವನ್ನು ಧರಿಸಿ ಈ ನಾಗಲೋಕದಿಂದ ಭೂಲೋಕ ಸೇರಿ ಹತ್ತಿರದಲ್ಲಿ ಕಪಿಲತೀರ್ಥ ಇದೆ. ಮತ್ತು ಅಲ್ಲಿ ತೊಂಡೆಬಳ್ಳಿಗಳ ಪೊದೆಗಳಿವೆ. ನೀನು

ರಾಜದರ್ಶನಕ್ಕೆ ಹೋಗುವಾಗ ಆ ತೊಂಡೆಬಳ್ಳಿಯನ್ನು ಟೊಂಕಕ್ಕೆ ಕಟ್ಟಿಕೊಂಡು ಅವರಿಗೆ ಈ ಉಂಗುರವನ್ನು ತೋರಿಸು.' ಎಂದು ಆ ಉಂಗುರವನ್ನು ಕೊಟ್ಟು ಬುದ್ಧಿ ಮಾತುಗಳನ್ನು ಹೇಳಿ ಸ್ವಲ್ಪ ದಾರಿ ಅವನ ಜೊತೆಗೆ ನಡೆದು ಮುಂದೆ ಅವನನ್ನು ಬೀಳ್ಕೊಟ್ಟಳು.

ಕುಮಾರನು ತಾಯಿ ಹೇಳಿದಂತೆ ಪಾತಾಳವನ್ನು ದಾಟಿ ಭೂಲೋಕ ಪ್ರವೇಶಿಸಿ, ಕಪಿಲತೀರ್ಥವನ್ನು ದರ್ಶಿಸಿ ಆ ಪ್ರಾಂತದಲ್ಲಿನ ತೊಂಡೆಬಳ್ಳಿಯ ಕೆಲವನ್ನು ತೆಗೆದುಕೊಂಡು ತನ್ನ ಟೊಂಕಕ್ಕೆ ಕಟ್ಟಿಕೊಂಡು, ನಾರಾಯಣಪುರವನ್ನು ಸೇರಿ ಅಂತಃಪುರವನ್ನು ಸಮೀಪಿಸಿ ಅಲ್ಲಿ ರಾಜದರ್ಶನಕ್ಕೆ ಕಾಯುತ್ತಿದ್ದ. ರಾಜನ ಪರಿವಾರವು ಆ ಕುಮಾರನು ಬಂದಿರುವದನ್ನು ರಾಜನಿಗೆ ತಿಳಿಸಿದರು. ರಾಜಾಜ್ಞೆಯಂತೆ ಭಟರು ಆ ಕುಮಾರನನ್ನು ರಾಜಾಂತಃಪುರಕ್ಕೆ ಕರೆದುಕೊಂಡು ಹೋದರು. ಸುಧರ್ಮನು ಆ ಕುಮಾರನನ್ನು ನೋಡಿ, ನಾಗಕನ್ನೆಯ ವೃತ್ತಾಂತವನ್ನು ಜ್ಞಾಪಿಸಿಕೊಂಡು, ಅವನ ಕೈ ಉಂಗುರವನ್ನು, ನಡುವಿಗೆ ಸುತ್ತಿಕೊಂಡ ತೊಂಡೆಬಳ್ಳಿ ನೋಡಿ, ತಾನು ನಾಗಕನ್ನಿಕೆಯ ಸಂಗಡದ ವಿಹಾರವನ್ನು, ಆಕೆಗೆ ಕೊಟ್ಟ ಭಾಷೆಯನ್ನು ನೆನೆಸಿಕೊಂಡು ಪುತ್ರಗಾತ್ರಪರಿಷ್ವಂಗ ಸುಖವನ್ನು ಅನುಭವಿಸುತ್ತ, ಆ ಕುಮಾರನ ವೃತ್ತಾಂತವನ್ನು ತನ್ನ ಹೆಂಡತಿಗೆ ಹೇಳಿ, ಆ ಕುಮಾರನನ್ನು ಆಕಾಶರಾಜನಿಗೆ ಮತ್ತು ಉಳಿದ ಬಂಧುಮಿತ್ರರಿಗೆ ಪರಿಚಯಿಸಿ, ತೊಂಡೆಬಳ್ಳಿಯ ಗುರುತಿನಿಂದ ಆ ಕುಮಾರನನ್ನು 'ತೋಂಡಮಾನ' ಎಂದು ನಾಮಕರಣ ಮಾಡಿದನು. ತನ್ನ ರಾಜ್ಯದ ನಾರಾಯಣಪುರ ಸಹಿತವಾಗಿ ಪಶ್ಚಿಮೋತ್ತರ ಭಾಗವನ್ನು ಜ್ಯೇಷ್ಠಪುತ್ರನಾದ ಆಕಾಶರಾಜನಿಗೆ, ಪೂರ್ವದಕ್ಷಿಣ ಭಾಗವನ್ನು

ಎರಡನೆ ಕುಮಾರನಾದ ತೋಂಡಮಾನನಿಗೆಂದು ನಿಶ್ಚಯಿಸಿ, ನೂರುಮಂದಿ ಮಾರ್ಬಲರೊಂದಿಗೆ ದಾಸದಾಸಿಯರ ಸಹಿತ ಪರಿವಾರದೊಂದಿಗೆ ಎರಡು ಸಮಭಾಗ್ಯದೊಂದಿಗೆ ವಿಭಜಿಸಿದನು. ಮತ್ತು ಸುಧರ್ಮನು ತೋಂಡಮಾನನಿಗಾಗಿ ಸುವರ್ಣಮುಖಿ ನದಿಯ ಪಶ್ಚಿಮ ಭಾಗದಲ್ಲಿ ಒಂದು ದೊಡ್ಡ ಕೋಟೆಯನ್ನು, ಆ ಕೋಟೆಯ ಸುತ್ತ ಕಂದಕ ನಿರ್ಮಿಸಿ, ಆ ಕೋಟೆಯ ಮಧ್ಯದಲ್ಲಿ ಸುಂದರ ಅಂತಃಪುರವನ್ನು ಕೂಡ ಕಟ್ಟಿಸಿದನು. ತೋಂಡಮಾನನ ಈ ರಾಜ್ಯವಿಭಾಗಕ್ಕೆ **'ತೋಂಡಮನಾಡು'** ಎಂದು ಹೆಸರಿಸಿದನು. ಸುಧರ್ಮನು ಹೀಗೆ ರಾಜ್ಯವಿಭಾಗ ಮಾಡಿ ನಾಗಕನ್ನಿಕೆಗೆ ಕೊಟ್ಟ ವಚನ ನೆರವೇರಿಸಿದನು. ಆದರೆ ಆಕಾಶರಾಜ ಮತ್ತು ತೋಂಡಮಾನರು ಚಿಕ್ಕವರಾಗಿದ್ದ ಕಾರಣ ಸುಧರ್ಮನೇ ರಾಜ್ಯಭಾರ ಮಾಡುತ್ತಿದ್ದನು. ಮಕ್ಕಳಿಬ್ಬರು ಅನ್ಯೋನ್ಯರಾಗಿದ್ದು ತಾಯಿತಂದೆಯ ಮಾತನ್ನು ಮೀರದೇ ಪ್ರಜೆಗಳ ಸಂತೋಷವನ್ನು ಅರಿತು ಬೆಳೆಯುತ್ತಿದ್ದರು.

ಆಗಿನ ತೋಂಡಮನಾಡು ಈ ದಿನಗಳ ಸ್ವರ್ಣಮುಖಿ ನದಿಯ ತೀರದ ಶ್ರೀಕಾಳಹಸ್ತಿಯ ನೈಋತ್ಯದ ಭಾಗವಾಗಿದೆ. ಈಗ ಆ ಪ್ರಾಂತದಲ್ಲಿ ಸಣ್ಣ ಸಣ್ಣ ಗ್ರಾಮಗಳು ಹುಟ್ಟಿಕೊಂಡಿವೆ. ಆ ಕಾಲದ ಕೋಟೆಯ ಗೋಡೆಗಳು ಬಹಳ ದಿನಗಳವರೆಗೆ ಇದ್ದುವು. ಈಗ ಅವಾವುಗಳು ಕಾಣುವದಿಲ್ಲ. ತೋಂಡಮಾನನು ಕಟ್ಟಿಸಿದ ಕೆರೆಯು **'ತೋಂಡಮಾನನ ಕೆರೆ'** ಎಂದು ಇಂದಿಗೂ ಪ್ರಸಿದ್ಧವೆನಿಸಿದೆ. ಕೋಟೆಯೊಳಗೆ ತೋಂಡಮಾನನು ಕಟ್ಟಿಸಿದ ವೆಂಕಟೇಶ್ವರ ದೇವಾಲಯವು ಇವತ್ತಿಗೂ ಇತಿಹಾಸವನ್ನು ನೆನಪಿಸುವಂತೆ ನಿಂತಿದೆ.

ಆಕಾಶರಾಜ ಮತ್ತು ತೋಂಡಮಾನರ ತಂದೆಯಾದ ಸುಧರ್ಮನು ರಾಜ್ಯವನ್ನು ಭಾಗಮಾಡಿ ಹಂಚಿಕೊಟ್ಟ ಮೇಲೆ ಇಬ್ಬರು ಅಣ್ಣತಮ್ಮಂದಿರು ರಾಮಲಕ್ಷ್ಮಣರಂತೆ ಗಾಢ ಮೈತ್ರಿಯಿಂದ ಇರುತ್ತಿದ್ದರು. ಎರಡೂ ರಾಜ್ಯಗಳು ನಾರಾಯಣಪುರದಲ್ಲಿನ ರಾಜರ ಕೈಯಿಂದ ಪಾಲಿಸಲ್ಪಡುತ್ತಿದ್ದವು. ಇಬ್ಬರೂ ಐಕ್ಯಮತ್ಯದಿಂದ ಇದ್ದುದರಿಂದ ಆ ರಾಜರುಗಳ ಕೈಯಲ್ಲಿ ರಾಜ್ಯಗಳು ಸರಿಯಾಗಿ ಪಾಲಿಸಲ್ಪಡುತ್ತಿದ್ದವು. ಅವರವರ ರಾಜ್ಯಗಳನ್ನು ಪ್ರಜೆಗಳ ಹಿತದೃಷ್ಟಿಯಿಂದ ಪಾಲಿಸಲು ಸುಧರ್ಮನು ಅತೀವ ಸಂತೋಷಗೊಂಡು ಕುಮಾರರೀರ್ವರಿಗೂ ಮದುವೆ ಮಾಡಿ, ಪ್ರಜಾಪಾಲನ ಧರ್ಮವನ್ನು ಉಪದೇಶಿಸಿ ಮನಶ್ಶಾಂತಿ ಹೊಂದಿ ವೆಂಕಟಾಚಲ ಸೇರಿ ತಪವನ್ನು ಆಚರಿಸುತ್ತ ಮುಕ್ತಿ ಹೊಂದಿದನು.

ಅಂದಚೆಂದದ ದಂಪತಿ ಆಕಾಶರಾಜ ಹೆಂಡತಿ ಧರಣಿದೇವಿ ಇವರು ಸದ್ಗುಣಯುಕ್ತರಾಗಿ, ದೈವಭಕ್ತಿಯುಳ್ಳವರಾಗಿ, ಧರ್ಮಮಾರ್ಗದಿಂದ ಪ್ರಜೆಗಳ ಕ್ಷೇಮಕಾರ್ಯಗಳನ್ನು ಮಾಡುವದರಲ್ಲಿಯೇ ಅತ್ಯಂತ ಆನಂದ ಹೊಂದಿದವರಾಗಿದ್ದರು. ಪ್ರಜೆಗಳು ಸುಭಿಕ್ಷೆಯಲ್ಲಿ ಜೀವನ ಸಾಗಿಸುತ್ತಿದ್ದು ರಾಜಭಕ್ತಿ ಯುಳ್ಳವರಾಗಿ ಪಾಲಕ ಮತ್ತು ಪಾಲಿತ ಧರ್ಮಗಳನ್ನು ತಿಳಿದವರಾಗಿ ತಮ್ಮ ಅವಶ್ಯಕತೆಗಳನ್ನು ರಾಜನಿಗೆ ಮನವಿ ಮಾಡಿ ನೆರವೇರಿಸಿಕೊಳ್ಳುತ್ತಿದ್ದರು. ಆಗಿನ ಪ್ರಜೆಗಳು ಸ್ವಾರ್ಥವನ್ನು ಬದಿಗಿರಿಸಿ ಪಾರಮಾರ್ಥದಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಇಬ್ಬರು ಸೋದರರು ಸೋಮಾರಿಜೀವನ ಮತ್ತು ಸುಖಜೀವನ ನಡೆಸದೆ, ಪರೋಪಕಾರದಿಂದ ರಾಜನ ಎಲ್ಲ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಅದು ಒಂದು ಧರ್ಮರಾಜ್ಯವಾಗಿ ಅತಿಥಿ

ಅಭ್ಯಾಗತರಿಗೆ ಸತ್ರಗಳನ್ನು ಕಟ್ಟಿಸಿ ಸೌಕರ್ಯಗಳನ್ನು ಒದಗಿಸುತ್ತಿದ್ದರು.

ತೋಂಡಮಾನನು ತನ್ನ ತಂದೆ ತನಗೆ ಕೊಟ್ಟಿರುವ ರಾಜ್ಯಭಾಗವನ್ನು ಸಮರ್ಥ ರೀತಿಯಿಂದಲೇ ಪಾಲಿಸುತ್ತಿದ್ದನು. ತಾನು ಪಾಂಡ್ಯರಾಜನ ಮಗಳನ್ನು ವಿವಾಹವಾದನು. ಪ್ರಜೆಗಳ ಸದುಪಯೋಗಕ್ಕಾಗಿ ಒಂದು ದೊಡ್ಡ ಕೆರೆಯನ್ನು ಕಟ್ಟಿಸಿ ಅದಕ್ಕೆ ಸುವರ್ಣಮುಖಿನದಿಯಿಂದ ನೀರನ್ನು ಹಾಯಿಸಲು ದೊಡ್ಡ ಕಾಲುವೆ ತೋಡಿಸಿದನು. ಆ ಕೆರೆಯು ಇಡೀ ರಾಜ್ಯಕ್ಕೆ ಬೇಕಾಗುವ ನೀರು ಹಿಡಿಯುವಷ್ಟು ದೊಡ್ಡದಾಗಿತ್ತು. ಇವತ್ತಿಗೂ ಅದು ತೋಂಡಮಾನನ ಕೆರೆ ಎಂದು ಹೆಸರಿನಿಂದ ಕರೆಯಲ್ಪಡುತ್ತದೆ.

ಹೀಗೆ ನಾರಾಯಣಪುರವನ್ನು, ತೋಂಡಮಾನ ರಾಜ್ಯಗಳನ್ನು ಅಣ್ಣತಮ್ಮಂದಿರಿಬ್ಬರು ಅನ್ಯೋನ್ಯ ಭಾವದಿಂದ ಪ್ರಜೆಗಳ ಕ್ಷೇಮವೇ ಪ್ರಧಾನವೆಂದು ತಿಳಿದು ಪಾಲಿಸುತ್ತಿರುವುದರಿಂದ ಪ್ರಜೆಗಳು ಸುಖದಿಂದ ಬದುಕುತ್ತಿದ್ದರು.

## 9. ಆಕಾಶರಾಜನಿಗೆ ಪದ್ಮಾವತಿ ಸಿಕ್ಕಳು – ವಸುನಾಯಕನೆಂಬ ಮಗನ ಪಡೆದನು

ಆಕಾಶರಾಜನು ಮತ್ತು ಧರಣೀದೇವಿಯು ಯೌವನಸುಖವನ್ನು ಅನುಭವಿಸುತ್ತಿದ್ದರೂ ಸಂತಾನಫಲಹೊಂದಲಿಲ್ಲ. ಧರಣೀದೇವಿಯು ಎಷ್ಟೋ ವ್ರತಗಳು ಮಾಡಿದಳು. ಎಷ್ಟೋ ಪೂಜೆಗಳನ್ನು ಮಾಡಿದಳು. ದಾನಧರ್ಮಗಳು, ಸಂತರ್ಪಣಗಳು ಮತ್ತು ನಾಗಪ್ರತಿಷ್ಠೆಗಳನ್ನು ಮಾಡಿದಳು. ಆಕಾಶರಾಜನು ಪುತ್ರನನ್ನು ಪಡೆದಿರುವ ಪುಣ್ಯವಂತ ತಾನಲ್ಲ ಎಂದು ಭಾವಿಸಿ, ಬಹುವಿಧದಲ್ಲಿ

ಚಿಂತಿಸುತ್ತ ಸಂತಾನಾಭಿಲಾಷೆಯಿಂದ ಪುಣ್ಯಕಾಲದಂದು ಪುರಾಣ, ವೇದಶಾಸ್ತ್ರ ಪಾರಂಗತರಾದ ಪಂಡಿತರಿಗೆ ಕರೆಯಿಸಿ ಅವರವರಿಗೆ ತಕ್ಕಂತೆ ದಾನಗಳ ಮಾಡಿ, ಸಂತೃಪ್ತಿ ಪಡಿಸಿ ಆವರ ಆಶೀರ್ವಾದಗಳನ್ನು ಹೊಂದಿದನು. ನಿಷ್ಣಾತ ಜ್ಯೋತಿಷಿಗಳಿಗೆ ಕರೆಯಿಸಿ ತನ್ನ ಜಾತಕ ಫಲವನ್ನು ಕೇಳುತ್ತ, ಜನ್ಮಲಗ್ನ, ರಾಶಿಫಲಗಳನ್ನು ಅನುಸರಿಸಿ ಸಂತಾನ ಭಾಗ್ಯ ಇಲ್ಲ ಎಂದು ಅವರು ಹೇಳುತ್ತಿರುತ್ತಲೇ 'ಸಂತಾನವಿಲ್ಲದ ಬಾಧೆ ದೊಡ್ಡ ಭೂತವಿದ್ದಂತೆ' ಎಂದು ಮನಸ್ಸಿನಲ್ಲಿ ಬಾಧೆಯಾಗುತ್ತಿದ್ದಂತೆ ರಾಜವ್ಯಾಧಿ, ಮಗುವ್ಯಾಧಿ, ಮನೋವ್ಯಾಧಿಗಳಿಗೆ ತುತ್ತಾದನು.

ಒಂದು ದಿವಸ ರಾಜನು ತಪಸ್ವಿಗಳನ್ನು, ವೇದಶಾಸ್ತ್ರಪಂಡಿತರನ್ನು ಜ್ಯೋತಿಶಾಸ್ತ್ರ ವಿದ್ವಾನರನ್ನು ಸಭೆಗೆ ಕರೆದು ತನಗೆ ಸಂತಾನವಿಲ್ಲದ ಕಾರಣವೇನು ತಿಳಿಸಿ ಎಂದು ಪ್ರಾರ್ಥಿಸಿದನು. ಅವರೆಲ್ಲರು ರಾಜನ ಭೂತವರ್ತಮಾನ ಭವಿಷ್ಯತ್ತುಗಳನ್ನು, ಜನ್ಮಕುಂಡಲಿಯನ್ನು, ಶಾಸ್ತ್ರವಿಧಾನಗಳನ್ನು ಸರಿಯಾಗಿ ಪರೀಕ್ಷಿಸಿ ತಮ್ಮ ತಮ್ಮ ಪಾಂಡಿತ್ಯವನ್ನು ಅನುಸರಿಸಿ ಏಕಾಭಿಪ್ರಾಯದಿಂದ ರಾಜನಿಗೆ 'ರಾಜಾ! ಪೂರ್ವದಲ್ಲಿ ಸೂರ್ಯವಂಶದ ರಾಜನಿಗೆ ಮೂರುಜನ ಹೆಂಡತಿಯರಿದ್ದರೂ ಸಂತಾನ ಇರಲಿಲ್ಲ, ಆದ್ದರಿಂದ ಅವನು ತನ್ನ ಕುಲಗುರು ವಶಿಷ್ಠನ ಆದೇಶದಿಂದ ವೆಂಕಟಾಚಲ ಸಂದರ್ಶಿಸಿ ಪುತ್ರಕಾಮೇಷ್ಟಿ ಯಜ್ಞ ಮಾಡಿ ನಾಲ್ಕು ಪುತ್ರರನ್ನು ಪಡೆದನೆಂದು ಪುರಾಣವು ಹೇಳುತ್ತದೆ. ಅದಕ್ಕಾಗಿ ನೀನು ಕೂಡ ವೆಂಕಟಾಚಲವನ್ನು ಸೇವಿಸಿ ಪುತ್ರ ಪ್ರಾಪ್ತಿಗೆ ಯಜ್ಞ ಮಾಡಬೇಕು. ಸಂತಾನವಂತನಾಗುವಿ.' ಎಂದು ಹೇಳಿದರು

ಈ ಮಾತನ್ನು ಕೇಳಿ ರಾಜನು ಹೆಚ್ಚಿನ ಸಂತೋಷಗೊಂಡು, ಸಭೆಗೆ ಬಂದಂಥ ಮಹಾಮುನಿಗಳು, ವೇದಶಾಸ್ತ್ರಪಂಡಿತರು,

ಜ್ಯೋತಿಷಿಗಳು, ತನ್ನ ಪುರೋಹಿತರು ಈ ಎಲ್ಲರನ್ನು ಪ್ರಾರ್ಥಿಸಿ ಯಾಗಪ್ರಯತ್ನ ಸಫಲವಾಗುವಂತೆ ನೋಡಿಕೊಳ್ಳಲು ಕೇಳಿಕೊಂಡನು. ಆವರೆಲ್ಲರು ಯಾಗಕ್ಕೆ ಸರಿಯಾದ ಸ್ಥಳವನ್ನು ನಿರ್ಣಯಿಸಿದರು. ಆಕಾಶರಾಜನು ವೆಂಕಟಾಚಲ ದರ್ಶನವನ್ನು ಮಾಡಿ ಬಂದು ಹಿರಿಯರು ನಿಶ್ಚಯಿಸಿದ ಸುಮುಹೂರ್ತದಲ್ಲಿ ಅಲ್ಲಿನ ಕ್ಷೇತ್ರವನ್ನು ಬಂಗಾರದ ನೇಗಿಲಿನಿಂದ ಅಗೆಯುತ್ತಿದ್ದನು. ಸುಮುಹೂರ್ತದಲ್ಲಿ ಮಹರ್ಷಿಗಳು, ವೇದಶಾಸ್ತ್ರಪುರಾಣ ಪಂಡಿತರು, ಯಾಗ ಪುರೋಹಿತರು ಆ ಕಾರ್ಯವನ್ನು ವೇದೋಕ್ತವಾಗಿ ನಡೆಸುತ್ತಿದ್ದರು. ಸುಮುಹೂರ್ತ ಸಮಯದಲ್ಲಿ ಗುರುಗಳು ಹೇಳಿದಂತೆ ಸರ್ವದೇವತೆಗಳನ್ನು ಅಷ್ಟದಿಕ್ಪಾಲಕರನ್ನು ಪೂಜಿಸಿ ಅವರ ಅನುಗ್ರಹದ ಅಕ್ಷತೆಗಳನ್ನು ಶಿರದಲ್ಲಿ ಧರಿಸಿ, ಹಿರಿಯರ ಅನುಮತಿ ಪಡೆದು ನೆಲ ಅಗಿಯಲು ಪ್ರಾರಂಭಿಸಿದನು. ರಾಜನು ಎರಡು ಗುಡ್ಡ ಅಗೆದು ಮೂರನೇ ಗುಡ್ಡ ಪ್ರಾರಂಭಿಸಿದನು. ಸ್ವಲ್ಪ ದೂರದವರೆಗೆ ಸಾಗಿ ಮುಂದೆ ಅಲ್ಲಿ ಏನೋ ಗಟ್ಟಿ ಹತ್ತಿ ನೇಗಿಲು ಮುಂದೆ ಸಾಗಲಿಲ್ಲ. ಆಗ ಕೆಲಸದವರು ಹಾರಿಗಳಿಂದ ಆ ಭೂಮಿಯನ್ನು ಅಗೆದಾಗ ಒಂದು ದೊಡ್ಡ ಪೆಟ್ಟಿಗೆ ಕಾಣಿಸಿತು. ಅದನ್ನು ಸರಿಯಾಗಿ ಅಗೆದು ಮೇಲೆ ತೆಗೆದುಕೊಂಡು ಬಂದರು. ಹಿರಿಯರೆಲ್ಲ ಗುಂಪುಗೂಡಿದರು. ರಾಜನು ಆ ಪೆಟ್ಟಿಗೆಯ ಮುಚ್ಚಳವನ್ನು ತೆರೆದನು. ಅಲ್ಲಿ ಮೆತ್ತನೆಯ ಪದ್ಮಗಳಲ್ಲಿ ಪೂರ್ಣಚಂದ್ರಬಿಂಬದಂತೆ ಪ್ರಕಾಶಿಸುವ ಕನ್ಯೆ ಇದ್ದಳು. ಅಲ್ಲಿನ ಜನರ ಆನಂದಕ್ಕೆ ಮೇರೆಯಿರಲಿಲ್ಲ. ಅವರೆಲ್ಲರೂ ರಾಜನನ್ನು ಹಲವು ರೀತಿಯಿಂದ ಹರಸಿ, 'ರಾಜಾ! ಜನಕಮಹಾರಾಜನಿಗೆ ಹಿಂದೆ ಸೀತೆಯಾಗಿ ಲಕ್ಷ್ಮೀದೇವಿಯು ಮಗಳಾಗಿ ದೊರಕಿದ್ದಳು. ನಿನ್ನ ಪುಣ್ಯದಿಂದ ಈಗ ಆ ಲಕ್ಷ್ಮೀದೇವಿಯೇ ಕಮಲಹೂಗಳ ಮಧ್ಯದಲ್ಲಿ ನಿನಗೆ ಮಗಳಾಗಿ ಲಭಿಸಿದ್ದಾಳೆ. ಇವಳಿಗೆ 'ಪದ್ಮಾವತಿ'

ಎಂದು ನಾಮಕರಣ ಮಾಡಿರುವೆವು.' ಎಂದು ಹೇಳಿ ಆನಂತರ ಪುರೋಹಿತನು ಆ ಕೂಸನ್ನು ಎತ್ತಿ ರಾಜನ ಕೈಯಲ್ಲಿ ಕೊಟ್ಟನು. ರಾಜನು ಆ ಕೂಸನ್ನು ಸಂತೋಷದಿಂದ ಎತ್ತಿಕೊಂಡು ಹಿರಿಯರ ಅನುಮತಿ ಪಡೆದು ಅಂತಃಪುರಕ್ಕೆ ಹೋದನು. ಆ ಕಡೆ ಧರಣೀದೇವಿ ದಾಸಿಯರಿಂದ ಈ ಶುಭಸುದ್ದಿ ಮೊದಲೇ ತಿಳಿದು ಪತಿಗೆ ಎದುರು ಬಂದಳು. ರಾಜನು ಮಹಾನಂದದಿಂದ ಕೂಸನ್ನು ಪತ್ನಿಗೆ ಕೊಟ್ಟು 'ಪದ್ಮಾವತಿ ನಮಗೆ ದೊರಕಿದ್ದಾಳೆ. ಅವಳನ್ನು ಸ್ವತಃ ಮಗಳಂತೆ ಪೋಷಿಸು' ಎಂದು ಹೇಳಿದನು. ಇಡೀ ರಾಣಿವಾಸವೇ ಬಲು ಸಂತೋಷಗೊಂಡಿತು. ಆ ದಿನ ಪಟ್ಟಣದ ಸರ್ವಪ್ರಜೆಗಳು ಮಹಾ ಉತ್ಸಾಹದಿಂದ ಹಬ್ಬವನ್ನಾಚರಿಸಿದರು. ಕ್ರಮದಿಂದ ನಾಮಕರಣದ ಕಾರ್ಯಕ್ರಮವೂ ಬಲು ಹರುಷದಿಂದ ಜರುಗಿತು. ರಾಜನು ಪುರೋಹಿತರಿಗೆ, ಪಂಡಿತರಿಗೆ ಸಮುಚಿತವಾಗಿ ಗೌರವಿಸಿದನು. ವೇದಶಾಸ್ತ್ರವೇತ್ತರಿಗೆ ಹಿರಣ್ಯದಾನ, ಭೂದಾನ, ಗೋದಾನಗಳನ್ನು ಮಾಡಿದನು. ಬಡವರಿಗೆ ಅನ್ನದಾನ ಮಾಡಿದನು. ಇಡೀ ರಾಜ್ಯವೇ ಸಂತೋಷದಲ್ಲಿ ಮುಳುಗಿತು. ತೋಂಡಮಾನನೂ ಕೂಡ ಅಣ್ಣನಿಗೆ ಪುತ್ರಿ ದೊರೆತದ್ದಕ್ಕಾಗಿ ಆನಂದ ಹೊಂದಿದನು.

ಆ ಬಾಲಿಕೆಯು ದಿನಗಳು ತಿಂಗಳುಗಳು ಹೋದಂತೆಲ್ಲಾ 'ಊಂ' ಹೇಳುವುದು, ತಾಯಿತಂದೆಯರನ್ನು ಗುರುತು ಹಿಡಿಯುವುದು, ಆಕಡೆ ಈಕಡೆ ನೋಡುವುದು, ನಗುವುದು, ನಗುತ್ತ ಬೋರಲಾಗುವುದು, ಮುಸುಕಾಟ ಕಳ್ಳಾಟವಾಡುವುದು ಹೀಗೆ ಕ್ರಮವಾಗಿ ಮಾಸಗಳು ಹೋದಂತೆ ತಪ್ಪು ಹೆಜ್ಜೆಗಳನ್ನು ಇಡುತ್ತ ನಡೆಯಲಿಕ್ಕೆ ಪ್ರಾರಂಭಿಸಿದಳು. ಆ ಪದ್ಮಾವತಿಯು ತಾಯಿತಂದೆಯರಿಗೆ ಪ್ರಾಣಪ್ರಿಯವಾಗಿ ಬಿಟ್ಟಳು. ಅವಳ ತೊದಲು ಮಾತುಗಳನ್ನು ಕದ್ದು ನಿಂತು ನೋಡಿ ಕೇಳಿ ಆನಂದಿಸುತ್ತಲೇ ಎರಡು ವಸಂತಗಳು ಮುಗಿದುವು.

ಆವರೆಗೆ ಒಳಗೊಳಗೆ ರಾಣಿ ಧರಣೀದೇವಿಗೆ ನವಮಾಸಗಳು ತುಂಬಿವೆ. ಸೂರ್ಯನು ಮೇಷದಲ್ಲಿ, ಗುರುವು ಕಟಕದಲ್ಲಿ ಎಲ್ಲವೂ ಉಚ್ಚ ಸ್ಥಳದಲ್ಲಿದ್ದು ಶುಭಲಗ್ನದಲ್ಲಿ ತೇಜೋವಂತನಾದ, ಎಲ್ಲ ರಾಜಲಕ್ಷಣಗಳಿಂದ ಯುಕ್ತನಾದ ಮಗನನ್ನು ಹಡೆದಳು. ರಾಜನ ಬಹುದಿನದ ಅಭೀಪ್ಸೆಯು ಅಂದಿಗೆ ತೀರಿತು. ಆತನು ಆನಂದಸಾಗರದಲ್ಲಿ ಮೇಲೆದ್ದು ಬರುವ ತರಂಗಗಳಲ್ಲಿ ಉಯ್ಯಾಲೆ ಆಡುತ್ತಿರುವಂತೆ ಕಂಡನು. ರಾಜ್ಯದ ಎಲ್ಲಾ ಪ್ರಜೆಗಳು ಸಂತೋಷಭರಿತರಾದರು. ರಾಜಶಾಸ್ತ್ರಪಂಡಿತರನ್ನು, ಪುರೋಹಿತರನ್ನು ಕರೆಯಿಸಿ, ಕ್ರಮದಲ್ಲಿ ಜಾತಕರ್ಮ, ನಾಮಕರಣ, ಡೋಲಾರೋಹಣ ಮುಂತಾದ ಸಂಸ್ಕಾರಗಳನ್ನು ವಿಜೃಂಭಣೆ ಯಿಂದ ಜರುಗಿಸಿದನು. ಆ ಮಗುವು ಶುಕ್ಲಪಕ್ಷದ ಚಂದ್ರನಂತೆ ವೃದ್ಧಿಹೊಂದುತ್ತ ಕ್ರಮವಾಗಿ ಅನ್ನಪ್ರಾಶನ, ಕರ್ಣವೇಧ, ಕೇಶಖಂಡನ, ಅಕ್ಷರಾಭ್ಯಾಸ ಆದಿ ಸಂಸ್ಕಾರಗಳನ್ನು ಹೊಂದಿ ದೊಡ್ಡವನಾಗಿ ಬೆಳೆದನು. ಆ ರಾಜಕುಮಾರನು ಸಕಲವಿದ್ಯೆಗಳು ಕಲಿತು ವಸುನಾಯಕನೆಂಬ ಪ್ರಸಿದ್ಧನಾಮದಿಂದ ತಾಯಿತಂದೆಯವರಿಗೆ ಸಂತೋಷ ಪಡಿಸುತ್ತಿದ್ದನು. ಹೀಗೆ ಆಕಾಶರಾಜನು 'ಪದ್ಮಾವತಿ' ಎಂಬ ಪುತ್ರಿ, 'ವಸುನಾಥ'ನೆಂಬ ಪುತ್ರನನ್ನು ಪಡೆದನು.

ಪದ್ಮಾವತಿಯು ಸಾಕ್ಷಾತ್ ಮಹಾಲಕ್ಷ್ಮೀಯೆ ಎಂದು ಆಕೆಯನ್ನು ನೋಡಿದವರೆಲ್ಲರು ಹೇಳುತ್ತಿದ್ದರು. ಅವಳ ಸೌಂದರ್ಯಸಂಪತ್ತು, ಸುಗುಣ ಸಂಪತ್ತು ಅದಕ್ಕಿಂತ ಮಿಗಿಲಾಗಿ ಅವಳ ಶೀಲಸಂಪತ್ತು ಅತಿಶಯವಾಗಿತ್ತು. ಪದ್ಮಾವತಿಯು ವಸುನಾಯಕನು ಇಬ್ಬರೂ ಬಾಲ್ಯದ ಕ್ರೀಡೆಗಳನ್ನು ಆಡುತ್ತ, ವಿದ್ಯೆಗಳನ್ನು ಕಲಿಯುತ್ತ ಜೊತೆಗೆ ಆರೋಗವ್ಯ ಮತ್ತು

ಅಂಗಸೌಷ್ಠವವು ಎಲ್ಲ ಪಡೆಯುತ್ತ ನಡೆದರು. ಪದ್ಮಾವತಿಯು ತನ್ನ ಮೃದು ಮಾತುಗಳಿಂದ ಆಟಪಾಟ ಗಳೊಂದಿಗೆ, ಆನಂದದ ವಿಹಾರಗಳೊಂದಿಗೆ ಅಂತಃಪುರದಲ್ಲಿ ಕೋಲಾಟಗಳು, ಕುಣಿದಾಟಗಳು ಇವುಗಳಿಂದ ಕ್ರೀಡೆಗಳನ್ನು ಆಟಗಳನ್ನು ಆಡುತ್ತ ತಾಯಿತಂದೆಯವರಿಗೆ ತುಂಬು ಸಂತೋಷ ಉಂಟುಮಾಡುತ್ತಿದ್ದಳು. ವಸುನಾಯಕನು ತನ್ನ ಸ್ನೇಹಿತರೊಂದಿಗೆ ಆಡುತ್ತ, ವ್ಯಾಯಾಮಗಳ ಮಾಡುತ್ತ ಶ್ರದ್ಧಾಭಕ್ತಿಯಿಂದ ವಿನಯತೆ ವಿಧೇಯತೆಗಳಿಂದ ಹೆಚ್ಚಿನ ಶಾಸ್ತ್ರವಿದ್ಯೆಗಳನ್ನು, ಅರ್ಥಶಾಸ್ತ್ರವನ್ನು, ಧರ್ಮನ್ಯಾಯಶಾಸ್ತ್ರಗಳನ್ನು ಅಭ್ಯಾಸಮಾಡಿ ಸರಿಯಾಗಿ ಕಲಿತನು. ಹೀಗೆ ತಾಯಿತಂದೆಯರಿಗೆ ಅವರು ಇಬ್ಬರೂ ಎರಡು ಕಣ್ಣುಗಳಂತೆ ಇದ್ದರು.

## 10. ಶ್ರೀನಿವಾಸನ ವನವಿಹಾರವು

ವಸಂತಋತುವು ಋತುಗಳ ರಾಜ. ಪ್ರಕೃತಿಶೋಭೆಗೆ ವಿಜೃಂಭಣಕಾಲವು. ಕಾಲುವೆ, ನಾಲೆಗಳಲ್ಲಿ ಸಿಹಿ ಮತ್ತು ಸ್ವಚ್ಛ ನೀರು ಪ್ರವಹಿಸುತ್ತಿತ್ತು. ಲತಾಗುಲ್ಮಗಳು ನವನವೀನ ಪಲ್ಲವಗಳಿಂದ, ಮೊಗ್ಗೆಗಳಿಂದ, ವಿವಿಧವರ್ಣದ ಪುಷ್ಪಗಳಿಂದ, ಪಿಂದೆಗಳಿಂದ, ಕಾಯಿ ಹಣ್ಣುಗಳಿಂದ ತುಂಬಿಕೊಂಡಿದ್ದವು. ಫಲವೃಕ್ಷಗಳು ತಮ್ಮ ಫಲಗಳ ಭಾರದಿಂದ ಬಾಗಿ ಹಾದಿಹೋಕರನ್ನು ಅಹ್ವಾನಿಸುವಂತೆ, ತಮ್ಮ ಫಲಗಳ ಕಡೆ ನೋಡು ಎಂಬಂತಿತ್ತು. ವಸಂತಕಾಲವು ಮನೋಹರವಾದ ಪುಷ್ಪವಿಲಾಸಗಳಿಗೆ ಸಹಜವಾದ ಸಮಯ. ಸೂರ್ಯನು ವೃಕ್ಷಗಳಿಗೆ, ಹಸಿರು ಬಳ್ಳಿಗಳಿಗೆ ಪುಷ್ಪಗಳಿಗೆ ಬೇಕಾಗುವಷ್ಟೇ ಉಷ್ಣವನ್ನು ಕೊಟ್ಟು, ಅವುಗಳ ಇಂಪು, ಸೊಂಪುಗಳನ್ನು ನೋಡುತ್ತಲೇ ಮನಸ್ಸಿಲ್ಲದೇ ಪಶ್ಚಿಮದಿಕ್ಕಿಗೆ ಮೆಲ್ಲನೆ ಸೇರಿಕೊಳ್ಳುತಿರುವಂತೆ ಕಾಣಿಸುತಿತ್ತು.

ವನ್ಯಮೃಗಗಳಿಗೆ ಅದು ತಮ್ಮ ಆಟ ಕಚ್ಚಾಟ ಕ್ರೀಡೆಗಳಿಗೆ ಸಮಯವೂ ಕೂಡ. ಅವು ಹಸಿಯಾದ ಹುಲ್ಲನು ಮೇಯ್ದು, ಬಲಗೊಂಡು, ಅತಿಶಯ ಸಂತೋಷದಿಂದ ವಿಹಾರಗಳಿಂದ ಕೂಡಿಕೊಂಡು ಆಟವಾಡುತ್ತಿದ್ದವು. ಕೋಗಿಲೆಗಳು ಸವಿಯಾದ ಮಾವನ್ನು ಮೆದ್ದು ಮದದಿಂದ 'ಕೂಂ ಕೂಂ ಕೂಂ' ಎಂದು ಕೂಗುತ್ತ ವಿಹರಿಸುತ್ತಿದ್ದವು. ಮೂಕಪ್ರಾಣಿಗಳು ವಸಂತ ಕಾಲದ ಶೋಭೆಯನ್ನು ಕಂಡು ಅತ್ಯಂತ ಆನಂದಪರವಶವಾಗಿ ತಮ್ಮ ಸಹಪ್ರಾಣಿಗಳ ಜೊತೆಗೆ ಉದ್ರೇಕಗೊಳ್ಳುತ್ತಿದ್ದವು. ಇಂಥದ್ದರಲ್ಲಿ ಯುವತಿಯುವಕರ ವಸಂತವಿಹಾರಗಳ ಕುರಿತು ಏನು ಹೇಳುವುದು? ಅವರ ವಯಸ್ಸು, ಪರಿಸರಗಳು ಉತ್ಸಾಹಭರಿತರನ್ನಾಗಿ ಮಾಡುವುದು ಪ್ರಕೃತಿಯ ಸ್ವಭಾವವೇ ಸರಿ.

ಅಂತಃಪುರದ ಕನ್ಯಾಲಲಾಮ ಪದ್ಮಾವತಿ ನವನವ ವಸಂತಗಳನ್ನು ಪ್ರೀತಿಸಲುಗೆಯಿಂದ ಕಾಣುತ್ತ ಬೆಳೆಯಹತ್ತಿದ್ದಳು. ಸ್ನೇಹತರೊಡಗೂಡಿ ಶೃಂಗಾರವನಗಳ, ಉಪವನಗಳ ಆರಣ್ಯಗಳಲ್ಲಿ ಆಡುತ ಪಾಡುತ ವಸಂತ ಋತುವನ್ನು ಆನಂದಿಸುತ್ತಿದ್ದಳು.

ಇತ್ತ ವೆಂಕಟಾಚಲದಲ್ಲಿ ನಿತ್ಯ ಅತಿಶಯ ಯೌವನಶೋಭೆಯಿಂದ ಕೂಡಿದ ವೆಂಕಟಾಚಲಪತಿಯು ವಸಂತಸಮಯದಲ್ಲಿ ಮುಂಜಾನೆ ಬೇಗನೆ ಎದ್ದು ಪುಷ್ಕರಿಣಿಯಲ್ಲಿ ಸ್ನಾನಮಾಡಿ ಪೀತಾಂಬರಗಳನ್ನು ಧರಿಸಿ, ಚಿಕ್ಕದಾದ ಚೊಕ್ಕದಾದ ನಾಮವನು ತಿದ್ದಿಕೊಂಡು ಮೇಲೆ ಶ್ರೀಗಂಧವನ್ನು ತೀಡಿ ಕೊಂಡು, ತಾಯಿ ಕಟ್ಟಿಕೊಟ್ಟ ಪಾಗಡ ಹೂಗಳನ್ನು ಧರಿಸಿ, ಬಡಿಸಿ ಕೊಟ್ಟ ಉಪಹಾರವನ್ನು ತೆಗೆದುಕೊಂಡು, ತಾಂಬೂಲ ತೆಗೆದುಕೊಂಡು, ಧನುರ್ಬಾಣಗಳ ಧರಿಸಿ, ಬಂಗಾರುಪಾದುಕೆಗಳನ್ನು ಹಾಕಿಕೊಂಡು, ಸ್ಮರಣಮಾತ್ರದಿಂದಲೇ ಸಂಸಿದ್ಧವಾಗಿ ಪಡೆದ ಕುದುರೆಯನ್ನು ಏರಿ, ಬಕುಳಾದೇವಿಯ ಆಜ್ಞೆ ಪಡೆದು ವೆಂಕಟಾಚಲ ವಿಹಾರಕ್ಕೆ

ಹೊರಡುವುದು, ಘಾತಕ ಮೃಗಗಳನ್ನು ಸಂಹರಿಸಿ, ಸಾಧುಪ್ರಾಣಿಗಳನ್ನು ರಕ್ಷಿಸುವುದು, ಸ್ವಲ್ಪ ದಣಿದ ವೆಂಕಟಾಚಲಪತಿ ಅಲ್ಲಿಯೇ ಇರುವ ಒಂದು ಮಾವಿನ ಮರ ನೋಡಿ ಕುದುರೆಯಿಂದ ಇಳಿದು ನೆರಳಲ್ಲಿ ಕುದುರೆಯನ್ನು ಕಟ್ಟಿ ಸ್ವಲ್ಪ ಹೊತ್ತು ವಿಶ್ರಮಿಸುವುದು, ಸಂಜೆಸಮಯದಲ್ಲಿ ಆ ಸಮೀಪದ ಪ್ರದೇಶಗಳಲ್ಲಿ ತಿರುಗಿ ತನಗೆ ಇಷ್ಟವಾದ ಕಾಯಿಹಣ್ಣು ಮತ್ತು ಗಡ್ಡೆಗಳನ್ನು ಆರಿಸಿಕೊಂಡು ಬರುವುದು ಮತ್ತೆ ಕುದುರೆಯನ್ನೇರಿ ತನ್ನ ನಿವಾಸಕ್ಕೆ ಬಂದು ತಾಯಿಗೆ ಸಂತೋಷ ಪಡಿಸುವುದು ಆತನ ನಿತ್ಯಕೃತ್ಯವಾಗಿತ್ತು.

## 11. ಉಪವನದೊಳಗಿರುವ ಪದ್ಮಾವತಿಗೆ ನಾರದರು ಹಸ್ತಸಾಮುದ್ರಿಕ ತಿಳಿಸುವುದು

ಒಂದು ದಿನ ಪದ್ಮಾವತಿಯು ತನ್ನ ಸಹಪಾಠಿಗಳೊಂದಿಗೆ ಉಪವನದಲ್ಲಿ ವಿಹಾರಕ್ಕಾಗಿ ಬಂದು ಹೂಗಳನ್ನು ಆರಿಸಿಕೊಂಡು ಮಾಲೆಯನ್ನು ಕಟ್ಟುತ್ತಿದ್ದಳು. ಎಲ್ಲರೂ ಹೂ ಹಣ್ಣು ಮತ್ತು ಮೆಹಂದಿ ಎಲೆಗಳನ್ನು ಸಂಗ್ರಹಿಸಲು ತಿರುಗಾಡುತ್ತಿದ್ದರು. ಪದ್ಮಾವತಿಯು ದಟ್ಟವಾದ ಗಿಡಗಳ ನೆರಳು ನೋಡಿ ಒಂದು ಶಿಲೆಯ ಮೇಲೆ ಕುಳಿತುಕೊಂಡಳು.

ಆ ಸಮಯದಲ್ಲಿ ತ್ರಿಲೋಕಸಂಚಾರಿ ಸರ್ವಜ್ಞನಾದ ನಾರದ ಮಹರ್ಷಿಯು ಕನ್ಯೆಯ ಮನಸ್ಸಿನಲ್ಲಿ ಪ್ರೇಮಾಂಕುರ ಬಿತ್ತಲು ಒಬ್ಬ ವೃದ್ಧನ ರೂಪ ಧರಿಸಿ ಹತ್ತಿರ ಹೋದನು. ಪದ್ಮಾವತಿಯು ಅವರನ್ನು ನೋಡಿ ಭಯಗೊಂಡುದ್ದನ್ನು ನೋಡಿ ನಾರದನು 'ಅಮ್ಮಾ, ನಾನೊಬ್ಬ ವೃದ್ಧತಪಸ್ವಿಯು. ಭಯಪಡಬೇಡ, ನಿನ್ನ ಒಳ್ಳೆಯದಕ್ಕಾಗಿ ಬಂದಿದ್ದೇನೆ. ನಿನಗೆ ತಕ್ಕ ವರನ್ಯಾರಿದ್ದಾರೆ ಎಂದು ನಿನ್ನ ಸಾಮುದ್ರಿಕವನ್ನು ನೋಡಲು ಬಂದಿದ್ದೇನೆ. ನೀನು ಒಬ್ಬ

ಸಾಮಾನ್ಯ ಕನ್ಯೆಯಲ್ಲ. ಆಕಾಶರಾಜನ ಪೂರ್ವಪುಣ್ಯಗಳ ಫಲಸ್ವರೂಪ ಲಭ್ಯವಾದ ದೇವಾಂಶಸಂಭೂತಳು. ನಿನ್ನ ಅಂದಚೆಂದಗಳಿಗೆ ಅನುರೂಪವಾಗಿರುವ ವರನಾರು ಎಂದು ಹೇಳುವೆ. ನಿನ್ನ ಎಡಗೈ ತೋರಿಸು.' ಎಂದಾಗ ಪದ್ಮಾವತಿಯು ಶಿಲೆಯಿಂದ ಕೆಳಗಿಳಿದು ಬಂದು ಆ ವೃದ್ಧಮುನಿಗಳಿಗೆ ನಮಸ್ಕರಿಸಿ, ಅವರನ್ನು ಆ ಶಿಲೆಯ ಮೇಲೆ ಕುಳ್ಳಿರಿಸಿ, ಮುಸಿಮುಸಿ ನಗುತ್ತ, ಭಯನಿವಾರಣೆಗೊಂಡು ನಾಚುತ್ತ ತಲೆ ತಗ್ಗಿಸಿ ತನ್ನ ಎಡಹಸ್ತವನ್ನು ತೋರಿಸಿದಳು. ಅವಳ ಅಂಗೈಯಲ್ಲಿನ ರೇಖೆಗಳನ್ನು ಸ್ವಲ್ಪ ಹೊತ್ತು ನೋಡಿ, ಪರೀಕ್ಷಿಸಿ ಮೇಲೆ ನೋಡುತ್ತ ಅತಿಶಯ ಸಂತೋಷಗೊಂಡಂತಾಗಿ 'ಅಹಹಾ! ಅಮ್ಮಾ! ನೀನು ನಿಜವಾಗಿ ಜಗನ್ಮಾತೆಯೇ, ನಿನ್ನ ವಯೋರೂಪ ಸಂಪದಕ್ಕೆ ಆ ಜಗನ್ನಾಥನೇ ಸರಿಯಾದ ವರ. ಪೂರ್ವದಲ್ಲಿ ರುಕ್ಮಿಣಿದೇವಿಯು ಶ್ರೀಕೃಷ್ಣನ ರೂಪಗುಣಗಳನ್ನು ಕೇಳಿ ಆತನನ್ನು ತನ್ನ ವಲ್ಲಭನೆಂದು ನಿಶ್ಚಯಿಸಿಕೊಂಡಿದ್ದಳು. ನೀನೂ ಪುರುಷೋತ್ತಮನಾದ ವರನನ್ನು ವಿವಾಹವಾಗುವಿ. ನಿನ್ನ ತಲೆಯಲ್ಲಿನ ಹೂಗಳು ಪಲ್ಲವಿಸಿ ಫಲಕೊಡುತ್ತಿವೆ. ಭರ್ತೃನಾಗುವ ಶ್ರೇಷ್ಠನು ನಿನಗೆ ಎಲ್ಲ ರೀತಿಯಲ್ಲಿ ಅನುಕೂಲನಾಗಿಯೇ ಇರುವನು. ಕಂಕಣಭಾಗ್ಯ ಪ್ರಾಪ್ತಿಯ ಸಮಯ ಸಮೀಪಿಸಿದೆ. ವರನೇ ನಿನ್ನನ್ನು ಹುಡುಕಿಕೊಂಡು ಬರುವನು. ದೇವತೆಗಳೇ ನಿನ್ನ ಮದುವೆ ಕುದುರಿಸುವರು.' ಎಂದು ನಾರದನು ಹೇಳುತ್ತಿರುವಾಗ ಪದ್ಮಾವತಿಯು ಹೃದಯದೊಳಗಿನ ಆನಂದವು ಮುಖದಲ್ಲಿ ಪ್ರತಿಫಲಿಸುತ್ತಿತ್ತು. ನಾರದನು ತಮ್ಮ ಕಾರ್ಯ ನೆರವೇರಿತೆಂದು ತಿಳಿದು ಅವಳನ್ನು ಆಶಿರ್ವದಿಸಿ ಅಲ್ಲಿಂದ ಹೊರಟನು.

## 12. ಶ್ರೀನಿವಾಸನು ಉದ್ಯಾನವನದಲ್ಲಿ ಪದ್ಮಾವತಿಯನ್ನು ಭೆಟ್ಟಿಯಾದುದು

ಒಂದು ದಿನ ಶ್ರೀನಿವಾಸನು ಎಂದಿನಂತೆ ವನಸಂಚಾರಕ್ಕೆ ಹೊರಟನು. ಬತ್ತಳಿಕೆಯನ್ನು ಬೆನ್ನಲ್ಲಿ ಕಟ್ಟಿಕೊಂಡು, ಕೈಯಲ್ಲಿ ಬಿಲ್ಲುಬಾಣಗಳನ್ನು ಹಿಡಿದುಕೊಂಡು, ಬಣ್ಣದ ಚಲ್ಲಣವನ್ನು ಮತ್ತು ಅಂಗಿಯನ್ನು ಧರಿಸಿ, ತಲೆಗೆ ರುಮಾಲು ಕಟ್ಟಿಕೊಂಡು ಬೇಟೆಯಾಡಲು ಕುದುರೆಯನ್ನೇರಿ ಹೋಗುತ್ತಿರುವ ಮಗನನ್ನು ಬಕುಳಾದೇವಿಯು ಕಣ್ಣಿಗೆ ಕಾಣುವವರೆಗೆ ನೋಡುತ್ತ ಆನಂತರ ತನ್ನ ನಿವಾಸದೊಳಗೆ ಹೋದಳು.

ಕುದುರೆ ಅತಿವೇಗದಿಂದ ಹೋಗುವ ಮಾರ್ಗದಲ್ಲಿ ದೊಡ್ಡ ಹುಲಿಗಳು, ಆನೆಗಳು ಆಡುತ್ತ ಬರುವುದನ್ನು ನೋಡಿ ತನ್ನ ವೇಗವನ್ನು ತಗ್ಗಿಸಿ ನಿಂತನು. ಶ್ರೀನಿವಾಸನು ಹಿಂದೆಯೇ ಆ ಹುಲಿಗಳನ್ನು ಒಂದು ಬಾಣದಿಂದ ಕ್ಷಣದಲ್ಲಿ ಅವುಗಳ ಸೊಕ್ಕನ್ನು ಅಡಗಿಸಿ, ಕುದುರೆಯನ್ನು ಏರಿ ಮತ್ತೆ ವೇಗದಿಂದ ನಡೆದನು. ಸ್ವಲ್ಪ ದೂರ ಹೋಗುವದರಲ್ಲಿ ಆನೆಗಳು ತಮ್ಮ ಮಕ್ಕಳೊಂದಿಗೆ ಸಪ್ಪಳ ಮಾಡುತ್ತ ಶ್ರೀನಿವಾಸನ ಎದುರಿಗೆ ಭಯದಿಂದ ಓಡುತ್ತ ಬರುತ್ತಿದ್ದವು. ಆಗ ಶ್ರೀನಿವಾಸನು ಮುಂದೆ ನೋಡಿದಾಗ ಒಂದು ಮದಗಜವು ಶ್ರೀನಿವಾಸನಿಗೆ ಹತ್ತಿರ ಬಂದಿತು. ಬೇಗನೆ ಶ್ರೀನಿವಾಸನು ವಿಶೇಷ ಬಾಣವನ್ನು ಆ ಮದಗಜದ ಮೇಲೆ ಬಿಟ್ಟಾಗ ಅದು ಹೆದರಿ ಹಿಂತಿರುಗಿ ವೇಗವಾಗಿ ಓಡಹತ್ತಿತು. ಶ್ರೀನಿವಾಸನು ಆ ಆನೆಯ ಬೆನ್ನುಹತ್ತಿ ಹೋಗುತ್ತ ಇದ್ದಾಗ, ಅದು ಒಂದು ವನವನ್ನು ಪ್ರವೇಶಿಸಿ ಘೀಳು ಹಾಕಿ ಶ್ರೀನಿವಾಸನಿಗೆ ತನ್ನ ಸೊಂಡಿಲೆತ್ತಿ ನಮಸ್ಕರಿಸಿ ಮಾಯವಾಗಿ ಹೋಯಿತು. ಶ್ರೀನಿವಾಸನು

ಆಶ್ಚರ್ಯದಿಂದ ನಾಲ್ಕು ಕಡೆ ನೋಡುತ್ತ ಮೆಲ್ಲನೆ ವನಪ್ರವೇಶ ಮಾಡಿ ಆ ಆನೆಯನ್ನು ಹುಡುಕ ಹತ್ತಿದನು.

ಅದು ಆಕಾಶರಾಜನು ನಿರ್ಮಿಸಿದ ವನವು. ಅಲ್ಲಿ ಪದ್ಮಾವತಿಯು ನಿತ್ಯವೂ ವಿಹಾರಾರ್ಥವಾಗಿ ಬಂದು ಹೂಹಣ್ಣುಗಳ ಸಂಗ್ರಹ ಮಾಡಿ ಮತ್ತೇ ನಗರಕ್ಕೆ ಹೋಗುತ್ತಿದ್ದಳು. ಆ ದಿನ ತನ್ನ ಎಲ್ಲ ಸ್ನೇಹಿತೆಯರ ಸಂಗಡ ಬಂದು, ಅವರಿಗೆ ಹೂಗಳನ್ನು ಆರಿಸಿಕೊಂಡು ಬರಲು ಹೇಳಿ ತಾನೊಬ್ಬಳೇ ಒಂದು ಗಿಡದ ಕೆಳಗೆ ಕಲ್ಲಿನ ಮೇಲೆ ಕುಳಿತಳು. ಶ್ರೀನಿವಾಸನು ಪೂರ್ತಿ ವನದಲ್ಲಿ ಆ ಆನೆಯನ್ನು ಹುಡುಕುತ್ತಾ ಅಲ್ಲಿಗೆ ಬಂದು ಪದ್ಮಾವತಿಯನ್ನು ನೋಡಿ ಒಂದು ಕ್ಷಣ ನಿಂತು ಅವಳ ಸೌಂದರ್ಯಕ್ಕೆ ಸಮ್ಮೋಹಿತನಾಗಿ ಕುದುರೆಯಿಂದ ಇಳಿದು ಮೆಲ್ಲಗೆ ಅವಳ ಕಡೆ ಬರಹತ್ತಿದನು. ಜಗನ್ನಾಥನು ಅವಳನ್ನು ರಮಾದೇವಿ ಎಂದು ಭ್ರಮಿಸಿ ಸಮೀಪಕ್ಕೆ ಬಂದನು.

ಯಾರೋ ಹೊಸ ಪುರುಷ ಬರುವದನ್ನು ನೋಡಿದ ಪದ್ಮಾವತಿಯು ಸಂಭ್ರಮ, ಉತ್ಸಾಹ ಮತ್ತು ಭಯಗಳು ಮುಪ್ಪುರಿಗೊಂಡು, ತಾನು ರಾಜಪುತ್ರಿ ಎಂಬ ಧೈರ್ಯದಿಂದ ಎದ್ದು ನಿಂತು **'**ಯಾರು ನೀವು**?** ರಾಜಪುತ್ರಿಯಾದ ನಾನು ಒಬ್ಬಳೇ ಇದ್ದಾಗ ನನ್ನ ಹತ್ತಿರ ಬರುತ್ತಿದ್ದೀರಲ್ಲ**?'**

**'**ಬಾಲೆ, ನಾನೊಬ್ಬ ರಾಜವಂಶಸ್ಥನು. ಶ್ರೀಕೃಷ್ಣನು. ದೇವಕಿ ವಸುದೇವರು ನನ್ನ ತಾಯಿ ತಂದೆಯರು. ನಾನು ಒಂದು ಮದಗಜದ ಬೆನ್ನು ಹತ್ತಿ ಬರುವಾಗ ಆ ಗಜವು ಈ ವನದಲ್ಲಿ ಪ್ರವೇಶಿಸಿ ಮುಂದೆ ಕಾಣಲೇ ಇಲ್ಲ. ಅದರ ಸಲುವಾಗಿ ಬಂದಾಗ ನಿನ್ನನ್ನು ನೋಡಿದೆನು. ನಾನು ರಾಜಕುಮಾರನಾಗಿದ್ದೇನೆ ಅದಕ್ಕಾಗಿ

ನಿನ್ನಲ್ಲಿ ಅನುರಾಗ ಹುಟ್ಟಿದೆ. ಕ್ಷತ್ರಿಯೋಚಿತವಾದ ಗಾಂಧರ್ವ ವಿಧಾನದಲ್ಲಿ ನಿನ್ನನ್ನು ವಿವಾಹವಾಗಲು ಬಯಸಿದ್ದೇನೆ.' ಎಂದಾಗ, ಪದ್ಮಾವತಿಗೆ ನಾರದಮುನಿಗಳು ಮುನ್ನಾದಿನ ಹೇಳಿದ ಮಾತುಗಳು ಮತ್ತೇ ಕಿವಿಯಲ್ಲಿ ಕೇಳಿದಂತಾಗಿ ಪ್ರೇಮಬೀಜಾಂಕುರವಾಗಿ ತನಗೇನೋ ವಿಧವಾದ ಅಭಿಮಾನ ಆ ಪುರುಷನ ಮೇಲೆ ಹೊಂದಿ, ಏನೂ ಮಾತನಾಡದೇ, ತಲೆಯೆತ್ತಿ ಆತನನ್ನು ನೋಡುತ್ತ ನಿಂತು ಬಿಟ್ಟಳು. ಶ್ರೀನಿವಾಸನು ಅವಳ ಇಂಗಿತವನ್ನು ಅರಿತು ನಸುನಗುವಿನಿಂದ ಎರಡು ಹೆಜ್ಜೆ ಮುಂದೆ ಬರುವದರೊಳಗಾಗಿ, ದೂರದಿಂದ ಬರುತ್ತಿರುವ ಪದ್ಮಾವತಿಯ ಸಂಗಡಿಗರು ಆತನನ್ನು ನೋಡಿ ಕೇಕೇ ಹಾಕುತ್ತ ಓಡೋಡಿ ಆ ಸ್ಥಳಕ್ಕೆ ಬಂದು ಪದ್ಮಾವತಿ ಮತ್ತು ಶ್ರೀನಿವಾಸರ ಮಧ್ಯ ನಿಂತರು. ಅದನೋಡಿ ಶ್ರೀನಿವಾಸನು ನಾಲ್ಕು ಹೆಜ್ಜೆ ಹಿಂದೆ ಸರಿದನು. ಪದ್ಮಾವತಿಯು ನಿಟ್ಟುಸಿರು ಬಿಟ್ಟಳು. ಆ ಸಂಗಡಿಗರು ಆ ಪುರುಷನಿಗೆ 'ಅಯ್ಯಾ ತಾವು ಯಾರು? ನೋಡಿದರೆ ಒಳ್ಳೆಯ ವಂಶಕ್ಕೆ ಸೇರಿದವರಂತೆ ಕಾಣುತ್ತೀರಿ, ಒಬ್ಬೊಂಟಿಗಳಾಗಿ ಇರುವ ರಾಜಪುತ್ರಿಯ ಸಮೀಪಕ್ಕೆ ಬರುವ ಸಾಹಸ ಹೇಗೆ ಮಾಡಿದಿರಿ? ಯುವತಿಯೊಬ್ಬಳು ಏಕಾಂತದಲ್ಲಿ ಇದ್ದಾಳೆ ಎಂದು ಭಾವಿಸಿದಿರಾ? ಸಾವಿರ ಕಣ್ಣುಗಳಿಂದ ಕಾಯುತ್ತಿರುವ ನಾವಿರುವಾಗ ಒಂದು ಗಂಡು ಚಿಟ್ಟೆಯೂ ಅವಳ ಹತ್ತಿರ ಬಾರದು. ಎಚ್ಚರಿಕೆ ಇರಲಿ, ನಮ್ಮ ರಾಜನಿಗೆ ಈ ವಿಷಯ ತಿಳಿದರೆ ನಿನಗೆ ಜರುಗುವ ಕಲ್ಯಾಣವು ನಿನಗೇ ತಿಳಿಯುವುದು. ಜಾಗೃತದಿಂದ ಹಿಂದುಮುಂದು ನೋಡದೇ ಬಂದ ದಾರಿ ಹಿಡಿದು ಬೇಗನೆ ಹೋಗಿಬಿಡು.'

'ವಯೋರೂಪದ ಗುಣಗಳಿಗೆ ಸರಿಯಾದ ಜೋಡಿಯೆಂದು ತಿಳಿದು ಬಂದೆನು.'

'ಏನಯ್ಯಾ! ಶ್ರುತಿ ಮಿಂಚುತ್ತಿದೆ. ನಮ್ಮ ರಾಜ ಆಕಾಶರಾಜನೆಂದು ತಿಳಿಯದಾ?'

'ಎಂದೋ ತಿಳಿದುಕೊಂಡಿದ್ದೇನೆ'

'ತಿಳಿದೂ ರಾಜಪುತ್ರಿಯ ಸಮೀಪಿಸಿದೆಯಾ?'

'ಭೃಂಗವು ತನಗೆ ಅವಶ್ಯವಾದ ಪುಷ್ಪವನ್ನು ಸೇರುವುದು ತಪ್ಪೇ?'

'ತಪ್ಪಾ! ಮಹಾತಪ್ಪು. ಯಾವುದೋ ಬಳ್ಳಿಯಲ್ಲಿಯ, ಮರದ ಕೊಂಬೆಯಲ್ಲಿ ಇದ್ದ ಹೂವು ಅಂದುಕೊಂಡೆಯಾ?'

'ಅಲ್ಲ, ಅಂತಃಪುರದಲ್ಲಿ ಮುದ್ದುಮುದ್ದಾಗಿ ಬೆಳೆಸಿದ, ಮುಳ್ಳು ಎಲೆಗಳ ನಡುವೆ ಇರುವ ಗುಲಾಬಿ ಹೂವು ಎಂದು.'

'ಓಹೋ! ಅಯ್ಯಾ! ಸ್ವಾಮಿ! ನಿಮ್ಮ ಮೋಸಗರ್ಭಿತ ಭಾಷಣಗಳಿನ್ನು ಸಾಕುಮಾಡು. ದುಷ್ಟರನ್ನು ಅತಿಕಠಿಣವಾಗಿ ಶಿಕ್ಷಿಸುವ ನಮ್ಮ ರಾಜನಿಗೆ ಈ ವಿಷಯ ತಿಳಿಯುವ ಮೊದಲೇ ತಾವು ಇಲ್ಲಿಂದ ಪಲಾಯನಕ್ಕೆ ವಿಚಾರಮಾಡಿರಿ.'

'ನೀವು ಮೊದಲು ನನ್ನ ಮಾತುಗಳನ್ನು ಚಿತ್ತದಿಂದ ಕೇಳಿ, ಮತ್ತೇ ನಮ್ಮೀ ಸ್ಥಳವನ್ನು ಬಿಟ್ಟು ಹೋಗಿರಿ.' ಎಂದು ಶ್ರೀನಿವಾಸನು ಹೇಳಿದ ಕೂಡಲೆ ಒಬ್ಬಳು 'ವಿಜಯಾ? ನೀನು ಆ ಕುದುರೆ ಏರಿ ವೇಗವಾಗಿ ಪಟ್ಟಣಕ್ಕೆ ಹೋಗಿ ರಾಜರಿಗೆ ಈ ಪ್ರಬುದ್ಧನ ಕುರಿತು ಹೇಳಿ ಸೈನಿಕರನ್ನು ಕರೆದುಕೊಂಡು ಬಾ' ಹೇಳಿದ್ದನ್ನು ಕೇಳಿ ವಿಜಯ ಎಂಬ ಸ್ನೇಹಿತೆಯು ಸಮೀಪದಲ್ಲಿರುವ ಕುದುರೆಯನ್ನು ಹತ್ತಲು ಹೋದಳು. ಆ ಕುದುರೆಯು ಅವಳನ್ನು ಏರಗೊಡದೆ

ಹೆಗರಾಡಹತ್ತಿತು. ಹಿಂದಿನ ಕಾಲಿಂದ ಒದೆಯಹತ್ತಿತು. ಅಲ್ಲಿ ಕೆಲವರು ಅವಳಂತೆ ಗಾಬರಿಯಾಗಿ ಆ ಕುದುರೆಯನ್ನು ಕಲ್ಲಿನಿಂದ ಹೊಡೆಯಹತ್ತಿದರು. ಆ ಪೆಟ್ಟುಗಳಿಗೆ ಆ ಕುದುರೆ ಕೆಳಗೆ ಬಿದ್ದಿತು. ಅಷ್ಟರಲ್ಲಿ ಇನ್ನೊಬ್ಬಳು 'ನಾನೇ ಓಡುತ್ತ ಹೋಗಿ ರಾಜರನ್ನು ಕರೆದುಕೊಂಡು ಬರುತ್ತೇನೆ' ಎಂದು ಹೋಗುತ್ತಿರುವವಳನ್ನು ಪದ್ಮಾವತಿ ಕೈಹಿಡಿದು ನಿಲ್ಲಿಸಿದಳು. ಅದನ್ನು ನೋಡಿ ಶ್ರೀನಿವಾಸನು ಪಕಪಕ ನಗಹತ್ತಿದನು. ಅದನೋಡಿ ಎಲ್ಲ ಸಂಗಡಿಗರು 'ಈತನು ಒಬ್ಬ ಬುದ್ಧಿ ಸ್ಥಿಮಿತದಲ್ಲಿ ಇಲ್ಲದ ಹುಚ್ಚನೇನೋ' ಎಂದು ಅವರು ನಗಹತ್ತಿದರು. 'ಈಗ ತಿಳಿಯಿತೇ ನಾನು ಪ್ರೇಮಹುಚ್ಚನೆಂದು' ಎಂದು ಶ್ರೀನಿವಾಸನು ಹೇಳಿದಾಗ ಅವರೆಲ್ಲರೂ ಪದ್ಮಾವತಿಯನ್ನು ನಡುವೆ ಮಾಡಿಕೊಂಡು ಪಟ್ಟಣದ ಕಡೆಗೆ ಹೊರಟರು. ಪದ್ಮಾವತಿಯು ಆತನನ್ನು ತಿರುಗಿ ತಿರುಗಿ ನೋಡುತ್ತ ಹೋಗುತ್ತಿದ್ದಳು. ಶ್ರೀನಿವಾಸನು ಅವಳನ್ನು ನೋಡುತ್ತ ಹಾಗೆಯೇ ನಿಂತುಬಿಟ್ಟನು. ಪದ್ಮಾವತಿಯು ಎಲ್ಲ ಸಂಗಡಿಗರೊಂದಿಗೆ ಅಂತಃಪುರದೊಳಗೆ ಪ್ರವೇಶಿಸಿದಳು.

ಶ್ರೀನಿವಾಸನು ಪದ್ಮಾವತಿಯನ್ನೇ ನೆನೆಯುತ್ತ ಸ್ವಲ್ಪ ಕಾಲ ಅಲ್ಲಿಯೇ ನಿಂತು ಅವಳು ಹೋಗುವ ದಾರಿಯನ್ನೇ ನೋಡುತ್ತ ನಿಂತನು.

ಸೂರ್ಯ ಮುಳುಗಿದನು. ಸಂಜೆಯ ಕತ್ತಲೆ ಆವರಿಸುತ್ತಿತ್ತು. ಹಾಲಿನ ಸಮುದ್ರವನ್ನು ಕಟ್ಟಿದಂಥ ಮನೋಸ್ಥಿತಿಯನ್ನು ನೋಡಿ ಪರಿಹಾಸ್ಯದಿಂದ ನಗುತ್ತಿರುವನೋ ಎಂಬಂತೆ ಉದಯಪರ್ವತವನ್ನು ಏರಿ ಮಂದಹಾಸ ಬೀರುತ್ತ ಕ್ರಮಕ್ರಮವಾಗಿ ನಗುವಿನ ಭೇದಗಳನ್ನು ಯೋಚಿಸುತ್ತ ಮುಂದೆ ಸಾಗಿದನು. ತನ್ನ ಭಾವಮೈದುನ ಚಂದ್ರನು ತನ್ನನ್ನು ನೆರಳಮರೆಯಲ್ಲಿದ್ದು ಇಣುಕಿ

ನೋಡುತ್ತಿದ್ದಾನೋ ಎಂಬಂತೆ ಕಂಡು, ಶ್ರೀನಿವಾಸನು ನಾಚಿ ಹಿಂದೆಯೇ ಕುದುರೆಯ ಬಳಿ ಬಂದು, ಅದನ್ನು ತಟ್ಟಿ ಎಬ್ಬಿಸಿ, ಏರಿ ವೆಂಕಟಾಚಲದಲ್ಲಿನ ತನ್ನ ನಿವಾಸದ ಕಡೆಗೆ ಹೋಗುತ್ತಿದ್ದನು.

## 13. ಶ್ರೀನಿವಾಸನ ಬರುವ ಹಾದಿ ಬಕುಳಾದೇವಿಯು ನಿರೀಕ್ಷಿಸುವುದು – ತಡವಾದ ವಿಚಾರದ ಬಗ್ಗೆ ಕೇಳುವುದು

ಬಕುಳಾದೇವಿಯು ದಿನಾಗಲೂ ಸಂಜೆತನಕ ಬರುವ ಶ್ರೀನಿವಾಸನು ಇಂದು ಬಾರದಿದ್ದಕ್ಕೆ ಏನಾದರೂ ಆತಂಕವಾಯಿತೇನೋ ಎಂದು ಯೋಚಿಸುತ್ತ ದಾರಿ ನೋಡುತ್ತಿದ್ದಳು. ಅಂದು ಹುಣ್ಣಿಮೆ. ಹಾಡುಹಗಲಿನಂತೆ ಬೆಳದಿಂಗಳಲ್ಲಿ ಸರ್ವ ವಸ್ತುಗಳು ನಿಚ್ಚಳವಾಗಿ ಕಾಣುತ್ತಿವೆ. ಆದರೆ ತನ್ನ ಮಗನ ಸುಳುವು ಕಾಣಿಸಲಿಲ್ಲ. ಅವಳು ಏನೇನೋ ವಿಚಾರ ಮಾಡಿದಳು. ರಾತ್ರಿ ಮೂರು ಗಂಟೆ ದಾಟಿತು. ಶ್ರೀನಿವಾಸನ ಸುಳಿವು ಕಾಣದೆ ಚಿಂತಾಕ್ರಾಂತಳಾದಳು. ಆಗ ಅವಳಿಗೆ ದೂರದಿಂದ ಕುದುರೆ ನಡೆಯ ಸಪ್ಪಳ ಕೇಳಿಸಿತು. ಸ್ವಲ್ಪ ಹೊತ್ತಲ್ಲಿ ಮಗನು ಬರುತ್ತಲೇ ಚಿಂತೆಯು ಮಾಯವಾಗಿ ಸಂತೋಷಗೊಂಡಳು. ಆದರೆ ಎಂದಿನಂತೆ ಅಂದು ಶ್ರೀನಿವಾಸನು ಕುದುರೆಯಿಂದ ಇಳಿದು ಅದನ್ನು ಕಟ್ಟಿ, ತಾಯಿಯನ್ನು ವಿಚಾರಿಸಿ ತಂದ ಹಣ್ಣುಗಳನ್ನು ಅವಳಿಗೆ ಕೊಡದೆ, ತಾಯಿಯನ್ನು ಮಾತನಾಡಿಸದೆ, ತಲೆ ತಗ್ಗಿಸಿಕೊಂಡು ಮನೆಯೊಳಗೆ ಹೋಗಿ ಮಲಗಿಬಿಟ್ಟನು. ಬಕುಳಾದೇವಿಗೆ ಏನೂ ತೋಚಲಿಲ್ಲ, ಅವಳು ತಾನೆ ಮಗನ ಹತ್ತಿರ ಹೋಗಿ ಎಷ್ಟೋ ರೀತಿಯಲ್ಲಿ ಕೇಳಿದಳು. ಆದರೆ ಶ್ರೀನಿವಾಸನು ಉತ್ತರಿಸಲಿಲ್ಲ. ಆಗ ಬಕುಳಾದೇವಿಯು ಗದ್ಗದ ಕಂಠದಿಂದ 'ಅಪ್ಪಾ!

ನನ್ನ ತಪ್ಪೇನು? ಏನು ನನ್ನೊಡನೆ ಮಾತನಾಡುತ್ತಿಲ್ಲ? ನಿನಗೇನು ನೋವಾಗಿದೆ? ನನ್ನಲ್ಲಿ ಹೇಳು. ಮಕ್ಕಳ ಒದ್ದಾಟ ನೋಡಿ ತಾಯಿತಂದೆಯರು ಸಹಿಸರು. ನನ್ನ ಹೃದಯ ಎಷ್ಟು ಬಾಧೆ ಪಡುತ್ತಿದೆ ನಿನಗೆ ತಿಳಿಯದೇ? ನಿನಗೆ ಕಷ್ಟ ಕೊಟ್ಟವರು ಯಾರು? ನನಗೆ ಎಲ್ಲ ಹೇಳಿ ಬಿಡು. ನಾನು ನಿನ್ನ ಮನಸ್ಸು ಸಮಾಧಾನವಾಗುವಂತೆ ಮಾಡುವೆನು.' ಎಂದದ್ದು ಕೇಳಿ ಶ್ರೀನಿವಾಸನು ಒಂದು ದೀರ್ಘ ನಿಟ್ಟುಸಿರು ಬಿಟ್ಟು ಈ ಕಡೆ ಮಗ್ಗುಲಾಗಿ 'ಅಮ್ಮಾ! ಇವತ್ತು ಸಾಯಂಕಾಲ ವೆಂಕಟಾಚಲ ಪ್ರಾಂತರಾಜ್ಯವನ್ನು ಪಾಲಿಸುವ ಆಕಾಶರಾಜನ ಮಗಳಾದ ಪದ್ಮಾವತಿ ಎಂಬ ಕನ್ಯೆಯನ್ನು ನೋಡಿದೆನು. ಅವಳು ತನ್ನ ಕುಡಿನೋಟಗಳಿಂದ ನನ್ನನ್ನು ಆಕರ್ಷಿಸಿದ್ದಾಳೆ. ಅವಳ ಕೊಟ್ಟ ಮನಸ್ಸನ್ನು ಮರಳಿಸದ ಸ್ಥಿತಿಯಲ್ಲಿ ಇದ್ದೇನೆ'

'ಅಪ್ಪಯ್ಯಾ! ಕೈಗೆ ನಿಟುಕದ ದಾಕ್ಷಿಹಣ್ಣುಗಳ ಆಶಿಸುತ್ತಿದೆಯಲ್ಲ? ನಾರಾಯಣಪುರದ ರಾಜಕುಮಾರಿಯು ಪರ್ವತ ಆರಣ್ಯ ವಾಸಿಸುವವರ ಅಪೇಕ್ಷೆ ಮಾಡುವಳೇ? ಆ ರಾಜನು ಅಂಗೀಕರಿಸ್ತಾನಾ?'

'ಹಾಗಲ್ಲಮ್ಮಾ! ಆ ಕನ್ಯೆಯು ನನ್ನನ್ನು ಪ್ರೇಮಿಸಿದಂತೆ ಅನಿಸಿತು. ಅವಳು ನನ್ನ ಸಲುವಾಗಿಯೇ ಹುಟ್ಟಿಬೆಳೆದಿದ್ದಾಳೆ. ಯಜ್ಞಶೇಷ ಸ್ವೀಕಾರಕ್ಕೆ ನಾನೇ ಅಲ್ಲವೇ ಅಧಿಕಾರಿ! ನೀನು ಕೇಳಬೇಕಾದ ಅವಳ ಪೂರ್ವಜನ್ಮದ ವೃತ್ತಾಂತವನ್ನು ಹೇಳುವೆನು. ಕೇಳು.' ಎಂದು ಶ್ರೀನಿವಾಸನು ಬಕುಳಾದೇವಿಗೆ ಪದ್ಮಾವತಿಯ ಕಥೆಯನ್ನು ಹೀಗೆ ಹೇಳಿದನು.

## 14. ಪದ್ಮಾವತಿ ಪೂರ್ವಜನ್ಮ ವೃತ್ತಾಂತ

ಒಂದೊಮ್ಮೆ ಶುಕಧ್ವಜನೆಂಬ ಮಹರ್ಷಿಯು ಹಿಮವತ್ಪ್ರಾಂತದಲ್ಲಿ ಆಶ್ರಮ ನಿರ್ಮಿಸಿಕೊಂಡು ಅತ್ಯಂತ ಭಕ್ತಿಯಿಂದ ನಿತ್ಯ ಹೋಮಾದಿಗಳ ಸಹಿತ ಪೂಜೆ ಮಾಡಿಕೊಂಡು ನನ್ನನ್ನು ನಿಷ್ಕಾಮವಂತನಾಗಿ ಆರಾಧಿಸುತ್ತಿದ್ದನು. ಒಂದು ದಿನ ಆತನು ಅಗ್ನಿಪೂಜೆ ಮುಗಿಸಿ ಹೋಮ ಆಚರಿಸಲು ವೇದಮಂತ್ರಗಳಿಂದ ನನ್ನನ್ನು ಸ್ತುತಿಸುತ್ತಿದ್ದನು. ಆ ಹೋಮಾಗ್ನಿಗಾಗಿ ಇದ್ದ ದರ್ಭದ ಮೇಲೆ ಒಂದು ಚಿಕ್ಕ ಬಾಲಕಿಯು ಅಳುವುದನ್ನು ಕೇಳಿ, ಆ ಮಹರ್ಷಿಯು ಆಕಡೆ ನೋಡಿ ವಿಸ್ಮಯಗೊಂಡು ಆ ಬಾಲಕಿಯನ್ನು ನೋಡಿ, ಅವಳು 'ನನ್ನ' ಸಲುವಾಗಿ ಹುಟ್ಟಿ ಬಂದಿದ್ದಾಳೆಂದು ಸಂತೋಷಗೊಂಡು, ವೇದಮಂತ್ರೋಪಾಸನಾ ಸಮಯದಲ್ಲಿ ಹುಟ್ಟಿದ ಆ ಕೂಸಿಗೆ 'ವೇದವತಿ'ಯೆಂದು ನಾಮಕರಣ ಮಾಡಿ ಪೋಷಿಸಿ ಬೆಳೆಸಿದನು. ಆ ಬಾಲೆ ಸಣ್ಣ ವಯಸ್ಸಿನಲ್ಲಿಯೇ ನನ್ನಲ್ಲಿ ಭಕ್ತಿಯುಕ್ತಳಾಗಿ ತಂದೆಗೆ ಪೂಜಾವೇದಿಕೆಯ ಶುಭ್ರಮಾಡಿ, ರಂಗೋಲಿ ಹಾಕಿ, ಪೂಜೆಗೆ ಬೇಕಾಗುವ ದರ್ಭೆಗಳು, ಹೂಗಳು. ಹಣ್ಣುಗಳು, ಪವಿತ್ರಜಲಗಳನ್ನು ಸಂಗ್ರಹಿಸಿಡುತ್ತಿದ್ದಳು. ಯುಕ್ತವಯಸ್ಸು ಬಂದ ಮೇಲೆ ಒಂದು ದಿನ ಆ ವೇದವತಿ ತಂದೆಗೆ 'ಅಪ್ಪಾಜಿ! ಮಹಾವಿಷ್ಣುವನ್ನೇ ಮದುವೆಯಾಗಬೇಕೆಂದು ನನ್ನ ಕೋರಿಕೆ ಇದೆ. ಆದರೂ ತಮ್ಮ ಇಷ್ಟದಂತೆ ನಡೆಯುವೆನು' ಎಂದು ಹೇಳಿದಾಗ ಮಹರ್ಷಿಯು ತನ್ನ ಮಗಳ ಉನ್ನತಾಶಯಕ್ಕೆ ಸಂತೋಷಿಸಿ 'ಅಮ್ಮಾ! ನಿನ್ನ ಆಶಯವು ಸರಿಯಾದದ್ದೇ. ಉನ್ನತಾಶಯವನ್ನು ಹೊಂದಿರುವುದು ಸಜ್ಜನಸಮ್ಮತವೇ ಸರಿ. ಇಂಥ ಆಶಯಗಳ ಕೋರಿಕೆಗಳು ಎಂದಿಗಾದರೂ ನೆರವೇರುವುವು. ನಿನ್ನ ಆಶಯವು ಸಫಲವಾಗಲಿ. ನಿನ್ನ ಆಶಯಸಿದ್ಧಿಗೆ ವಿಷ್ಣುದೇವನ ಕುರಿತು ತಪಸ್ಸು

ಮಾಡಿ ಆತನ ಅನುಗ್ರಹ ಹೊಂದಿ ಸಿದ್ಧಿ ಪಡೆಯುವುದು. ಒಂದೊಮ್ಮೆ ಪಾರ್ವತಿದೇವಿ ಪರಮೇಶ್ವರನನ್ನು ಪತಿಯಾಗಿ ಹೊಂದುವದಕ್ಕೆ ತಂದೆಯಾದ ಹಿಮವಂತನ ಆಜ್ಞೆ ಪಡೆದು ಹಿಮಾಲಯವು ಸರಿಯೆಂದು ತಪಸ್ಸು ಮಾಡಿ ಫಾಲಾಕ್ಷನನ್ನು ಪತಿಯಾಗಿ ಪಡೆದಳು. ಹಾಗೆಯೇ ನೀನು ಕೂಡ ಹಿಮವಂತದಲ್ಲಿ ನಿನಗೆ ಸರಿಯೆನಿಸಿದ ಸ್ಥಳ ನೋಡಿಕೊಂಡು ತಪಸ್ಸನ್ನಾಚರಿಸು. ಆ ರಮಾಪತಿ ನಿನ್ನ ಕೋರಿಕೆಯನ್ನು ಎಂದಿಗಾದರೂ ನೆರವೇರಿಸುವನೆಂದು ನಂಬಿಕೆ ಇದೆ.' ಎಂದು ಸಲಹೆ ಕೊಟ್ಟನು. ಮುಂದೆ ಆ ವೇದವತಿಯು ತಂದೆ ಹೇಳಿದಂತೆ ಹಿಮಾಲಯಕ್ಕೆ ಹೋಗಿ ಒಂದು ಆಶ್ರಮದ ಏರ್ಪಾಟು ಮಾಡಿಕೊಂಡು ತಪವನ್ನು ಆಚರಿಸಹತ್ತಿದಳು.

ಕೆಲವು ದಿನಗಳ ನಂತರ ಲಂಕಾಧಿಪತಿ ರಾವಣನು ವಿಮಾನದಿಂದ ಸಂಚರಿಸುತ್ತ ಹಿಮಾಲಯ ಪರ್ವತದ ಶಿಖರಗಳನ್ನು ನೋಡಿದಾಗ ತಪಸ್ಸನ್ನು ಆಚರಿಸುತ್ತಿರುವ ವೇದವತಿಯನ್ನು ಕಂಡು, ಆಕೆಯ ಹತ್ತಿರ ವಿಮಾನವನ್ನು ಇಳಿಸಿ, ಅವಳ ಹತ್ತಿರ ಹೋದನು. ಅವನು ಬರುವದರಿಂದ ತನ್ನ ನಿಶ್ಚಲತೆಗೆ ಭಂಗ ಬಂದು ಕಣ್ಣು ತೆರೆದು ನೋಡಿದಳು. ಎದುರಿನಲ್ಲಿ ಭೀಕರಾಕಾರವನ್ನು ನೋಡಿಯೂ ವಿಚಲಿತಗೊಳ್ಳದೆ ಅವಳು ಮತ್ತೇ ಕಣ್ಣು ಮುಚ್ಚಿ ತಪದಲ್ಲಿ ನಿರತಳಾದಳು. ಆಗ ರಾವಣನು ಇನ್ನೂ ಹತ್ತಿರ ಹೋಗಿ

'ಸುಂದರಿ! ನಿನ್ನ ತಪಸ್ಸಿಗೆ ಮೆಚ್ಚಿ ಬಂದಿದ್ದೇನೆ. ನನ್ನನ್ನು ಅನುಗ್ರಹಿಸು.'

'ನೀನು ಯಾರು? ನನ್ನ ಹತ್ತಿರ ಹೇಗೆ ಬಂದಿ?'

'ನಾನು ಲಂಕಾಧಿಪತಿಯಾದ ರಾವಣನು. ವಿಕಸಿತ ಪುಷ್ಪವನ್ನು ಹುಡುಕುತ್ತ ಭೃಂಗದಂತೆ ಬಂದವನು ನಾನು. ಮಧುವನ್ನು ಆಸ್ವಾದಿಸುತ್ತೇನೆ.'

'ಓ ರಾವಣಾಸುರಾ? ಕಾಮಾಂಧಕಾರದಿಂದ ಏನು ಮಾತನಾಡಿತ್ತಿದ್ದೀ ನಿನಗೆ ತಿಳಿಯುತ್ತಿಲ್ಲ. ಈಗ ಏನೂ ಅವಾಚ್ಯ ಮಾತುಗಳಾಡದೆ ಇಲ್ಲಿಂದ ಹೊರಟುಹೋಗು.'

'ನಿನ್ನನ್ನು ಹಿಂದೆಯೇ ಒಯ್ಯಲು ಬಂದವನು ನಾನು, ಒಬ್ಬನೆ ಹೋಗಬಾರದಲ್ಲವೇ!'

'ಛೀ! ನಿನ್ನ ವಕ್ರಸಂಭಾಷಣೆಯನ್ನು ನಿಲ್ಲಿಸಿ ದೂರಹೋಗು'

'ನನ್ನದು ವಕ್ರಸಂಭಾಷಣೆಯಲ್ಲ. ನೇರ ಸಂಭಾಷಣೆ. ಬಾ, ವಿಮಾನಯೇರಿ ಕುಳಿತುಕೊ.' ಎಂದು ಅವಳ ಹತ್ತಿರ ಹೋದನು. ವೇದವತಿ ದೂರದಲ್ಲಿ ನಿಂತು ಅವನನ್ನು ತೀಕ್ಷ್ಣದೃಷ್ಟಿಯಿಂದ ನೋಡುತ್ತಲಿದ್ದಾಗ, ರಾವಣನು 'ಮೇಲೇರಿದ ನಿನ್ನ ಕಣ್ಣುಗುಡ್ಡೆಗಳಿಂದ ನಿನ್ನ ಮುಖಕ್ಕೆ ವಿಶೇಷ ವಿಕಾಸ ಬಂದಂತಾಗಿದೆ.' ಎಂದು ಅವಳ ಮೇಲೆ ಹೋಗುತ್ತಿರುವಾಗ ಒಬ್ಬ ಸೌಮ್ಯಳು ರಾಕ್ಷಸಕೃತ್ಯವನ್ನು ಎದುರು ಹಾಕಿಕೊಳ್ಳಬಾರದೆಂದು 'ಏ ಅವಿವೇಕಿ, ವನಿತೆಯ ಬಲಾತ್ಕಾರವೇ ನಿನ್ನ ವಂಶದ ನಾಶಕ್ಕೆ ಮೂಲಕಾರಣ ಆಗಲಿ' ಎಂದು ಶಪಿಸಿ, ಅಲ್ಲೇ ಪಕ್ಕದಲ್ಲಿ ಇದ್ದ ಉರಿಯುತ್ತಿರುವ ದಾವಾಗ್ನಿಜ್ವಾಲೆಯಲ್ಲಿ ಹಾರಿದಳು. ರಾವಣನು ಹತಾಶನಾಗಿ ಅಲ್ಲಿಂದ ಹೋಗಿಬಿಟ್ಟನು.

ಅಗ್ನಿದೇವನು ಆ ವೇದವತಿಯನ್ನು ಭದ್ರವಾಗಿ ಕರೆದುಕೊಂಡು ಹೋಗಿ ತನ್ನ ಭಾರ್ಯೆ ಸ್ವಾಹಾದೇವಿಗೆ ಒಪ್ಪಿಸಿ ಇವಳನ್ನು ನಿನ್ನ ಸ್ವತಃ ಮಗಳಂತೆ ನೋಡಿಕೊಳ್ಳಲು ಹೇಳಿದನು.

ತ್ರೇತಾಯುಗದಲ್ಲಿ ದೇವತೆಗಳ ಪ್ರಾರ್ಥನೆ ನೆರವೇರಿಸಲು, ಭೂಲೋಕದ ರಾಕ್ಷಸರನ್ನು ವಧಿಸಲು, ಅಯೋಧ್ಯೆಯನ್ನು ಪಾಲಿಸುತ್ತಿರುವ ಸೂರ್ಯವಂಶದ ರಾಜನಾದ ದಶರಥ ಮಹಾರಾಜನ ಪಟ್ಟದರಾಣಿ ಕೌಶಲ್ಯೆಯಲ್ಲಿ ಶ್ರೀರಾಮನಾಗಿ ಹುಟ್ಟಿದೆನು. ದಶರಥರಾಜನ ಇನ್ನಿಬ್ಬರು ಪತ್ನಿಯರಾದ ಕೈಕೇಯಿಯಲ್ಲಿ ಭರತ ಮತ್ತು ಸುಮಿತ್ರೆಯರಲ್ಲಿ ಲಕ್ಷ್ಮಣ, ಶತ್ರುಘ್ನರು ಜನಿಸಿದರು. ನಾನು ಜನಕ ಮಹಾರಾಜನ ಪುತ್ರಿಯಾದ ಸೀತೆಯ ವಿವಾಹಕ್ಕೆ ಪಣವಾಗಿಟ್ಟಿದ್ದ ಶಿವಧನುಸ್ಸನ್ನು ಮುರಿದು ಅವಳನ್ನು ಮದುವೆಯಾದೆ. ನಮ್ಮ ತಂದೆ ಕೈಕೇಯಿಗೆ ಕೊಟ್ಟ ಮಾತನ್ನು ನಿಲ್ಲಿಸುವದಕ್ಕಾಗಿ, ಪಿತೃವಾಕ್ಯ ಪರಿಪಾಲನಾರ್ಥವಾಗಿ ಹದಿನಾಲ್ಕು ವರ್ಷ ಸೀತೆಲಕ್ಷ್ಮಣರ ಜೊತೆಗೆ ವನವಾಸಕ್ಕೆ ಹೋಗುವಂತಾಯಿತು. ನಾನು ಅಲ್ಲಿ ದಂಡಕಾರಣ್ಯದಲ್ಲಿ ಇದ್ದಾಗ ರಾವಣನ ತಂಗಿ ಶೂರ್ಪಣಖಿಯ ವರ್ತನೆಗೆ ಲಕ್ಷ್ಮಣನು ಅವಳ ಮೂಗು ಕಿವಿಗಳನ್ನು ಕೊಯ್ದು ಕಳುಹಿಸಿದನು. ಅವಳು ಲಂಕೆಗೆ ಹೋಗಿ ರಾವಣನಿಗೆ ಸೀತಾಪಹರಣೋದ್ಯೋಗಕ್ಕೆ ಹುರಿದುಂಬಿಸಿದಳು. ಆಗ ರಾವಣನು ನನ್ನಿಂದ ಪೆಟ್ಟುತಿಂದು ಓಡಿಹೋದ ತನ್ನ ಸೋದರಮಾವ ಮಾರೀಚನ ಸಹಾಯದಿಂದ ಸೀತೆಯನ್ನು ಅಪಹರಿಸಲು ಯೋಚಿಸಿದನು. ಮಾರೀಚನು ಮಾಯಾಮೃಗವಾಗಿ ಆಶ್ರಮದ ಸುತ್ತ ತಿರುಗುತ್ತಿರುವಾಗ ಸೀತೆ ಅದನ್ನು ನೋಡಿ ಅದು ತನಗೆ ಬೇಕೆಂದು ಕೋರಿದಳು. ನಾನು ಆ ಜಿಂಕೆಯ ಹಿಂದೆ ಹೋಗುತ್ತ ವನಗಳನ್ನು ತಿರುಗುತ್ತ, ಕೊನೆಗೆ ಅದರ ಮಾಯೆ ಗೊತ್ತಾಗಿ ಬಾಣಪ್ರಯೋಗ ಮಾಡಿ ಕೊಂದೆ. ಆ ಮಾಯಮೃಗವು ಸಾಯುವಾಗ 'ಹಾ! ಸೀತಾ! ಲಕ್ಷ್ಮಣಾ!' ಎಂದು ಅರಚಿದ್ದನ್ನು ಸೀತಾ ಕೇಳಿ ಅವಳು ಲಕ್ಷ್ಮಣನನ್ನು ನನ್ನ ಸಲುವಾಗಿ ವನದೊಳಗೆ ಕಳುಹಿದಳು. ಆ ಸಮಯದಲ್ಲಿ ಅತಿಥಿಯಾಗಿ ರಾವಣನು ಬಂದಾಗ ಅವನಿಗೆ ಭಿಕ್ಷೆ ತಂದ

ಸೀತೆಯನ್ನು ಎತ್ತಿಕೊಂಡು ರಥದಲ್ಲಿ ಒಯ್ಯುತ್ತಿರುವಾಗ ಸೀತೆಯ ಆಕ್ರಂದನವನ್ನು ಕೇಳಿದ ಅಗ್ನಿದೇವನು ತನ್ನ ಮನೆಯಲ್ಲಿರುವ ವೇದವತಿಯನ್ನು ಹಿಂದೆ ಕರೆದೊಯ್ದು ರಾವಣನ ಎದುರಿಗೆ ಬಂದು 'ರಾವಣಾ! ಪರಾಮರ್ಶೆ ಮಾಡದೆ ಪಲಾಯನ ಮಂತ್ರ ಪಠಿಸುತ್ತಿರುವೆ. ಓಹೋ! ಕಾಮವಿಷವು ತಲೆಗೇರಿದವನಿಗೆ ಕಣ್ಣುಗಳು ಕಾಣಿಸುವದಿಲ್ಲ. ವ್ಯಕ್ತಿವ್ಯಕ್ತಿಗಳ ತಾರತಮ್ಯಗಳು ಗ್ರಹಿಸರು ಎನ್ನುತ್ತೇನೆ.'

'ಆಂ! ಏನೆಂದೆ! ಅಗ್ನಿದೇವನಾ!'

'ಏನು! ನೀನು ಒಯ್ದದ್ದು ಮಾಯಾಸೀತೆ. ನೀನು ನಿನ್ನ ಸೋದರಮಾವ ಮಾರೀಚನ ಜೊತೆ ಮಾತನಾಡಿದ್ದು ಎಲ್ಲವೂ ಶಬ್ದವೇಧಿಯಾದ ಶ್ರೀರಾಮನು ಕೇಳಿ ನನ್ನನ್ನು ಕರೆದು ನನಗೆ ಈ ನಿಜಸೀತೆಯನ್ನು ತೋರಿಸಿ ಅವಳನ್ನು ನನ್ನ ಮನೆಯಲ್ಲಿ 'ಕಾಪಾಡು' ಎಂದು ಕೋರಿ, ತಾನು ನನ್ನ ಮಾಯಾಸೀತೆಯನ್ನು ಹಿಂದೆ ಕರೆದುಕೊಂಡು ಹೋದನು. ಈಗ ಆ ಮಾಯಾಸೀತೆಯೆ ನಿನ್ನ ರಥದಲ್ಲಿ ಇದ್ದಾಳೆ.'

'ಹಾಗಾ! ಅಗ್ನಿದೇವಾ! ಒಳ್ಳೆಯ ಸಮಯಕ್ಕೆ ಬಂದಿರುವಿ. ನಿಜಸೀತೆಯನ್ನು ನನ್ನ ರಥದಲ್ಲಿ ಕುಳ್ಳಿರಿಸಿ ಈ ಮಾಯಾಸೀತೆಯ ಜೊತೆಗೆ ಬೇಗನೆ ಹೊರಟುಬಿಡು. ರಾಮನು ಬರುವದಕ್ಕಿಂತ ಮುಂಚೆಯೇ ನಾನು ಲಂಕಾ ಸೇರಬೇಕು.' ಎಂದು ಹೇಳಿ ಹಾಗೆ ಆದ ಮೇಲೆ ವೇದವತಿಯ ಸಂಗಡ ರಾವಣನು ಲಂಕೆ ಸೇರಿದನು.

ವೇದವತಿ ಲಂಕೆಯ ಅಶೋಕವನದಲ್ಲಿ ಇದ್ದಳು. ಹನುಮಂತನ ಸಹಾಯದಿಂದ ಸೀತೆ ಅಲ್ಲಿದ್ದಾಳೆ ಎಂದು ತಿಳಿಸಿದ ಮೇಲೆ ನಾನು ಲಂಕೆಗೆ ಸಮುದ್ರಸೇತುವೆ ಕಟ್ಟಿ ವಾನರ ಸೈನ್ಯದ ಸಂಗಡ ವಿಭೀಷಣನ ಸಹಾಯದಿಂದ ರಾವಣ

ಕುಂಭಕರ್ಣರಾದಿಯಾಗಿ ಎಲ್ಲರನ್ನು ಮುಗಿಸಿಬಿಟ್ಟೆನು. ಆದರೆ ಲೋಕದ ಜನರಿಗೆ ಸೀತಾ ಪಾತಿವ್ರತ್ಯವನ್ನು ನಿರೂಪಿಸುವ ಸಲುವಾಗಿ ಮಾಯಾಸೀತೆ ಅಗ್ನಿ ಪ್ರವೇಶಿಸಿದಳು. ಆಗ ಆ ಅಗ್ನಿಯು ವೇದವತಿಯನ್ನು ತಾನು ಗ್ರಹಿಸಿ ನಿಜಸೀತೆಯನ್ನು ಕರೆದು ತಂದು, ಕುಶಧ್ವಜಮಹರ್ಷಿ ವೃತ್ತಾಂತವನ್ನು ಮತ್ತು ವೇದವತಿ ಸಂಕಲ್ಪವನ್ನು ವಿವರಿಸಿ, ಸೀತೆಯ ಜೊತೆಗೆ ವೇದವತಿಯನ್ನು ಭಾರ್ಯೆಯಾಗಿ ಗ್ರಹಿಸಬೇಕು ಎಂದು ಕೋರಿದನು. ಆ ರಾಮಾವತಾರದಲ್ಲಿ 'ಏಕಪತ್ನಿ' ವ್ರತದಿಂದಾಗಿ ನಾನು, ಅಗ್ನಿದೇವನ ಮಾತು ಹಾಗೂ ವೇದವತಿ ಚಿರಕಾಲ ಸಂಕಲ್ಪ ಎರಡನ್ನು ನೆರವೇರಿಸುವದಕ್ಕಾಗಿ ಅಗ್ನಿದೇವನಿಗೆ ಹೀಗೆ ಹೇಳಿದೆನು. 'ಅಗ್ನಿದೇವಾ! ಮುಂಬರುವ ಕಲಿಯುಗದಲ್ಲಿ ಭೂಲೋಕದಲ್ಲಿ ಪ್ರಜೆಗಳು ಪಾಪಕಾರ್ಯ ಕಲಾಪಗಳಲ್ಲಿ ಆಸಕ್ತಿ ಹೊಂದುವರು. ಅವರನ್ನು ಪಾಪಗಳಿಂದ ರಕ್ಷಿಸಲು ನಾನು ಆಗ ವೆಂಕಟಾಚಲದಲ್ಲಿ ವೆಂಕಟೇಶ್ವರನಾಗಿ ಅವತರಿಸುವೆನು. ಆ ವೆಂಕಟಾಚಲ ಪ್ರಾಂತದ ನಾರಾಯಣಪುರದಲ್ಲಿ ಆಕಾಶರಾಜನಿಗೆ ವೇದವತಿ, ಜನಕನಿಗೆ ಸೀತೆ ಲಭಿಸಿದಂತೆ ಪದ್ಮಾವತಿಯಾಗಿ ಲಭಿಸುವಳು. ಆಗ ನಾನು ಪದ್ಮಾವತಿಯನ್ನು ವಿವಾಹ ಆಗುವೆನೆಂದು ಅಗ್ನಿದೇವನಿಗೆ ಹೇಳಿದೆ. ಈಗ ಆಕಾಶರಾಜನ ಮನೆಯಲ್ಲಿ ಪದ್ಮಾವತಿಯಾಗಿ ಬಂದಿದ್ದಾಳೆ. ಅಮ್ಮಾ! ನಾನು ಆ ವೇದವತಿಯನ್ನು ವಿವಾಹ ಆಗುವಂತೆ ಪ್ರಯತ್ನ ಮಾಡು.' ಎಂದು ವೆಂಕಟಾಚಲಪತಿ ಹೇಳಿದನು.

ಪದ್ಮಾವತಿಯ ಜನನ ವೃತ್ತಾಂತವನ್ನು ಕೇಳಿದ ಬಕುಳಾದೇವಿ, 'ದೈವ ವಿಧಿ ಎಲ್ಲವೂ ತನ್ನ ತಾನೇ ಜರುಗುವುದು. ಇತರರು ಕೇವಲ ಉಪಕರಣಗಳು ಮಾತ್ರ. ದೈವದ ನಿರ್ಣಯವನ್ನು ತೊಲಗಿಸಲು ಬ್ರಹ್ಮನೂ ಸಮರ್ಥನಲ್ಲ. ಸ್ವಲ್ಪವನ್ನೂ ತೊಲಗಿಸಲು ಸಾಧ್ಯವಿಲ್ಲ.

ಯಾವ ಕಾಲದಲ್ಲಿ ಏನು ಜರುಗಬೇಕೋ ಅದು ಜರುಗದೇ ನಿಲ್ಲದು. ಆದರೂ ಮಾನವನ ಪ್ರಯತ್ನ ಮಾಡುವುದು ಅವಶ್ಯವೇ. ಫಲವು ಪರಮಾತ್ಮನ ನಿರ್ಣಯವು. ಇನ್ನು ನಾನು ನನ್ನ ಪ್ರಯತ್ನ ಮಾಡಿ ಕಾರ್ಯವು ಫಲಕಾರಿಯಾಗುವಂತೆ ಮಾಡುವೆನು.' ಎಂದು ಹೇಳಿ, 'ಅಪ್ಪಯ್ಯಾ! ನಾನು ನಿನ್ನನ್ನು ಒಬ್ಬ ಸ್ವಂತ ಮನೆಯವಳಂತೆ ಮಾಡುವ ಪ್ರಯತ್ನ ಮಾಡುವೆನು. ನನ್ನ ಹಾದಿಯು ಶುಭವಾಗಿ ಮತ್ತು ಸರಳವಾಗಿ ಮುಗಿಯುವಂತೆ ಹಾರೈಸು.' ಎಂದು ಶ್ರೀನಿವಾಸನನ್ನು ತೃಪ್ತಿಗೊಳಿಸಿದಳು. ಶ್ರೀನಿವಾಸನು ಒಬ್ಬ ಪ್ರಾಕೃತನಂತೆ ಬಕುಳಾದೇವಿಯನ್ನು ಸಂತೋಷಗೊಳಿಸಿದನು.

## 15. ಬಕುಳಾದೇವಿಯು ಪದ್ಮಾವತಿಯ ಸಖಿಗಳ ಮೂಲಕ ಧರಣಿದೇವಿಯನ್ನು ಸಂದರ್ಶಿಸುವುದು

ಉದ್ಯಾನವನದಿಂದ ಮನೆಗೆ ಬಂದ ಪದ್ಮಾವತಿಯು ಸ್ವಲ್ಪ ವಿಚಿತ್ರವಾಗಿ ಇರುತ್ತಿದ್ದಳು. ಯಾವಾಗಲೂ ಏನೋ ಆಲೋಚನ, ಅಲ್ಪನಿದ್ರೆಯೊಳಗೆ ಏನೋ ಕನವರಿಸುವುದು, ಆಹಾರ ಮರೆತು, ತನ್ನ ಮನಸ್ಸಿನಲ್ಲಿ ಏನೋ ನೆನಪಿಸಿಕೊಂಡು ನಾಚುವುದು, ಕ್ಷಣದಲ್ಲಿ ಸಂತೋಷ, ಕ್ಷಣದಲ್ಲಿ ವೇದನೆ ಇವನ್ನೆಲ್ಲ ಆಗಾಗ ಅನುಭವಿಸುತ್ತಿದ್ದಳು. ಈ ವಿಚಿತ್ರ ಪರಿಸ್ಥಿತಿಗಳನ್ನು ತಂದೆ ಆಕಾಶರಾಜನು ಕಂಡುಕೊಂಡನು. ರಾಜನು ತನ್ನ ಮಗಳ ಪರಿಸ್ಥಿತಿಯ ಬಗ್ಗೆ ಏನೂ ತಿಳಿಯದೇ ಬೃಹಸ್ಪತಿಯನ್ನು ಕರೆದು ಪದ್ಮಾವತಿಯ ಪರಿಸ್ಥಿತಿ ಹೇಳಿ ಅದರ ಕಾರಣ ಏನಿರಬಹುದೆಂದು ಕೇಳಿದನು. ಆಗ ಬೃಹಸ್ಪತಿಯು ಸ್ವಲ್ಪ ಹೊತ್ತು ಆಲೋಚಿಸಿ 'ರಾಜಾ! ಪುಷ್ಪಗಳ ಚಯನಕ್ಕೆ ಉದ್ಯಾನವನಕ್ಕೆ ಹೋದಾಗ ನಿನ್ನ ಮಗಳು ಒಬ್ಬ ಪುರುಷನನ್ನು ನೋಡಿ ಮನೋವಿಕಾರ ಹೊಂದಿದ್ದಾಳೆ.

ಮತ್ತೇನು ಭಯವಿಲ್ಲ. ಸ್ವರ್ಣಮುಖಿತೀರದ ಹತ್ತಿರ ಇರುವ ಅಗಸ್ತ್ಯಾಶ್ರಮಕ್ಕೆ ನಿನ್ನ ಪುರೋಹಿತರನ್ನು ಕಳುಹಿಸಿ ಅಗಸ್ತ್ಯಮಹರ್ಷಿಯಿಂದ ಈಶ್ವರನಿಗೆ ಸಹಸ್ರಕುಂಭಾಭಿಷೇಕ ಮಾಡುವ ಏರ್ಪಾಡು ಮಾಡಿರಿ. ನಿನ್ನ ಮಗಳಿಗೆ ಶುಭವಾಗುವುದು.' ಎಂದು ಹೇಳಿ ದೇವಗುರು ಹೋಗಿಬಿಟ್ಟನು. ಪದ್ಮಾವತಿಯ ಈ ವಿಷಯವು ಪೌರರಿಗೆ ಗೊತ್ತಾಗಿ ಬಹಳ ಪರಿತಾಪ ಹೊಂದಿದರು. ಹಿಂದೆಯೇ ಆಕಾಶರಾಜನು ತನ್ನ ಪುರೋಹಿತರ, ವೇದಪಂಡಿತರ, ಶಾಸ್ತ್ರಜ್ಞರನ್ನು ಕರೆಯಿಸಿ ಅವರಿಗೆ ದೇವಗುರುಗಳ ಆದೇಶವನ್ನು ತಿಳಿಸಿ ಆ ಕಾರ್ಯವನ್ನು ಶಾಂತವಾಗಿ ಮುಗಿಸಲು ಅಗಸ್ತ್ಯಾಶ್ರಮಕ್ಕೆ ಕಳಿಸಿದನು. ಪರಿವಾರವು ಆಶ್ರಮದಲ್ಲಿ ಬೇಕಾಗುವ ವಸ್ತುಸಾಮಗ್ರಿಗಳನ್ನು ತೆಗೆದುಕೊಂಡು ಪರಿಜನರೊಂದಿಗೆ ಅಗಸ್ತ್ಯಾಶ್ರಮಕ್ಕೆ ಹೋದರು. ಅವರ ಹಿಂದೆ ಪದ್ಮಾವತಿಯ ಸಖಿಯರೂ ಹೋದರು.

ಉದ್ಯಾನದಲ್ಲಿ ನೂತನ ಪುರುಷನನ್ನು ಕಂಡ ವಿಷಯವನ್ನು ಯಾರಿಗೂ ತಿಳಿಸಬಾರದೆಂದು ಪದ್ಮಾವತಿಯು ತನ್ನ ಎಲ್ಲ ಸ್ನೇಹಿತೆಯರಿಗೆ ಮೊದಲೇ ಆದೇಶ ಮಾಡಿದ್ದ ಕಾರಣ ಅವರು ಆ ವಿಷಯವನ್ನು ಮರೆತು ಬಿಟ್ಟರು.

ಅಗಸ್ತ್ಯಮಹರ್ಷಿ ತಾನು ಸ್ಥಾಪಿಸಿದ ಪರಮೇಶ್ವರನಿಗೆ ಒಂದು ಶುಭಮುಹೂರ್ತದಲ್ಲಿ ಆಕಾಶರಾಜನು ಕೋರಿದಂತೆ ಅಭಿಷೇಕ ಕಾರ್ಯಕ್ರಮವನ್ನು ಪ್ರಾರಂಭಿಸಿದನು. ವೇದಪಂಡಿತರು, ಆಗಮಾದಿ ಶಾಸ್ತ್ರವೇತ್ತರು, ಪುರೋಹಿತರು ಜರುಗಬಹುದಾದ ಕಾರ್ಯಗಳನ್ನು ಬಹಳ ಶ್ರದ್ಧೆಯಿಂದ ನೆರವೇರಿಸುತ್ತಿದ್ದರು. ಆಶ್ರಮವಾಸಿಗಳು ಬಂದವರಿಗೆ ಎಲ್ಲ ರೀತಿಯ ಸಹಾಯ ಮಾಡುತ್ತಿದ್ದರು.

ಪರಮೇಶ್ವರನ ಪ್ರೀತಿಗಾಗಿ ಅಭಿಷೇಕ ನಡೆಯುತ್ತಾ ಇತ್ತು. ಇಡೀ ಆಶ್ರಮವೆಲ್ಲ ಚೇತೋಹಾರಿಯಾಗಿತ್ತು. ಅಲ್ಲಿಗೆ ಬಂದ ಪದ್ಮಾವತಿಯು ಮತ್ತು ಅವಳ ಸಂಗಡಿಗರು ವಿಶ್ರಾಂತಿಗಾಗಿ ಅಲ್ಲಿಯೇ ವನದೊಳಗೆ ಒಂದೆಡೆ ಸೇರಿದ್ದರು.

ಶ್ರೀನಿವಾಸನ ಕೋರಿಕೆ ನೆರವೇರಿಸುವದಕ್ಕಾಗಿ ಬಕುಳಾದೇವಿ ವೆಂಕಟಾಚಲ ಇಳಿದು ದಕ್ಷಿಣದಲ್ಲಿ ಇರುವ ಸ್ವರ್ಣಮುಖಿ ತೀರದಲ್ಲಿ ಜನಸಂದಣಿ ಇದ್ದದ್ದಕ್ಕಾಗಿ ಪದ್ಮಾವತಿ ಮತ್ತು ಸಂಗಡಿಗರಿದ್ದ ವನದೊಳಗೆ ಹೋಗಿ ಅವರ ಹತ್ತಿರ ಬಂದಳು. ಆ ಸಂಗಡಿಗರು ಬಕುಳಮ್ಮ ಕೇಳಿದ್ದಕ್ಕಾಗಿ ತಮ್ಮ ವೃತ್ತಾಂತವೆಲ್ಲವನ್ನು ಹೇಳಿದರು. ಪದ್ಮಾವತಿಯ ಪರಿಸ್ಥಿತಿ ತಿಳಿದು ಶಿವನಿಗೆ ಅಭಿಷೇಕ ಕಾರ್ಯಕ್ರಮಕ್ಕೆ ಬಂದಿದ್ದನ್ನು ವಿವರಿಸಿದರು. ಆಗ ಬಕುಳಮ್ಮಳು ತಾನು ಧರಿಣೀದೇವಿಯನ್ನು ಕಾಣಲು ಬಂದಿದ್ದೇನೆ ಎಂದು ಹೇಳಿದಾಗ ಅವಳನ್ನು ಆ ಪೂಜಾ ನಂತರದಲ್ಲಿ ನಾರಾಯಣಪುರಕ್ಕೆ ಹೋಗಲು ತಿಳಿಸಿದರು.

## 16. ವೆಂಕಟೇಶ್ವರನು ಕೊರವಂಜಿ ನಾರಾಯಣಪುರ ಸೇರಿ ರಾಣಿ ಧರಿಣೀದೇವಿಗೆ ಕಣಿ ಹೇಳುವುದು

ಬಕುಳಮ್ಮಳು ನಾರಾಯಣಪುರ ಸೇರುವದರೊಳಗಾಗಿ ನಾರಾಯಣನು ತಾನೊಬ್ಬ ಕೊರವಂಜಿ ಆಗಲು ಮುಖತುಂಬ ಅರಿಷಿಣ ಮೆತ್ತಿಕೊಂಡು, ದೊಡ್ಡದೊಂದು ಕುಂಕುಮ ಇಟ್ಟುಕೊಂಡು, ಒಳ್ಳೆಯ ಸೀರೆ ಕಟ್ಟಿಕೊಂಡು, ಗುಲಗಂಜಿ, ಕವಡೆ, ಗಜುಗ, ಬಳೆಗಳು ಎಲ್ಲವುಗಳಿಂದ ಸರಿಯಾಗಿ ಅಲಂಕರಿಸಿಕೊಂಡು, ಪಕ್ಕದ ಚೀಲದಲ್ಲಿ ತುಂಬ ಹೂಗಳು ತುಂಬಿಕೊಂಡು, ಹಸುಗುಸೊಂದನ್ನು ಸೆರಗಿನಿಂದ ಬೆನ್ನಿಗೆ ಕಟ್ಟಿ, ಅರಿಷಿಣ ಕುಂಕುಮ

ಹಚ್ಚಿದ ಬುಟ್ಟಿಯಲ್ಲಿ ಸ್ವಲ್ಪ ಕಾಳುಗಳನ್ನು ಹಾಕಿಕೊಂಡು, ಕವಡೆ ಮುಂತಾದವುಗಳನ್ನು ಅರಿಷಿಣ ಕುಂಕುಮ ಹೂಗಳಿಂದ ಪೂಜಿಸಿ ಬುಟ್ಟಿಯಲ್ಲಿ ಇಟ್ಟುಕೊಂಡು ಕೈಯಲ್ಲಿ ಮೊಳ ಉದ್ದದ ಕಟ್ಟಿಗೆ ಹಿಡಿದುಕೊಂಡು, ಆ ಬುಟ್ಟಿಯನ್ನು ತಲೆಯ ಮೆಲೆ ಇಟ್ಟುಕೊಂಡು, ವೀಳ್ಯದ ಎಲೆಗಳನ್ನು ಮೆಲ್ಲುತ್ತ ನಾರಾಯಣಪುರವನ್ನು ಪ್ರವೇಶಿಸಿ ಬೀದಿಯಲ್ಲಿ ತಿರುಗುತ್ತ 'ಕಣಿ ಅಮ್ಮಾ ಕಣಿ ಹೇಳುವೆ! ಚೆನ್ನಾಗಿ ಹೇಳುವೆ! ಆಗುವದನ್ನು ಹೇಳುವೆ! ಆಗಿಹೋದದ್ದನ್ನು ಹೇಳುವೆ! ಮುಂದೆ ಆಗುವದನ್ನೂ ಹೇಳುವೆ! ಕಣಿ ಹೇಳುವೆ ಕಣಿ!' ಎಂದು ಕೂಗುತ್ತ ತಿರುಗುತ್ತಿದ್ದಳು.

ನಾರಾಯಣಪುರದ ಜನರು ಆ ಕೊರವಂಜಿಯನ್ನು ನೋಡಿ, ತಮ್ಮ ರಾಣಿಯು ಮಗಳ ವಿಷಯದ ಬಗ್ಗೆ ಕಣಿ ಕೇಳಬಹುದೆಂದು ಯೋಚಿಸಿ ರಾಣಿವಾಸಕ್ಕೆ ಹೋಗಿ ಧರಣಿದೇವಿಗೆ 'ಆ ಕೊರವಂಜಿಯನ್ನು ಕರೆದು ಕಣಿ ಕೇಳಿ ಪದ್ಮಾವತಿಯ ಪರಿಸ್ಥಿತಿಯನ್ನು ತಿಳಿದುಕೊಳ್ಳಬಹುದು' ಎಂದು ಹೇಳಿದರು. ಹಿಂದೆಯೇ ಧರಿಣೀದೇವಿಯು ಪರಿಚಾರಕರನ್ನು ಕಳಿಸಿ ಆ ಕೊರವಂಜಿಯನ್ನು ಕರೆದುಕೊಂಡು ಬನ್ನಿ ಎಂದು ಆಜ್ಞಾಪಿಸಿದಳು. ಅವರು ಆ ಕೊರವಂಜಿಯನ್ನು ಕರೆದು ತಮ್ಮ ಜೊತೆಗೆ ರಾಜಭವನಕ್ಕೆ ಬರಬೇಕೆಂದು ಕೇಳಿದರು. ಆಗ ಆ ಕೊರವಂಜಿಯು 'ಅಮ್ಮಾ! ನಾನು ಆ ರಾಜಭವನಕ್ಕೆ ಬರುವದಿಲ್ಲ. ನನ್ನ ಈ ಬಡಪರಿಸ್ಥಿತಿ, ನನ್ನ ವೇಷವು, ಊಟಕ್ಕೆ ಏನೂ ಇಲ್ಲದೇ ಸೊರಗಿದ ಈ ಕೂಸನ್ನು ನೋಡಿ ನನ್ನನ್ನು ಬೈಯುವದಿಲ್ಲವೇ? ಅಮ್ಮಾ ಬೇಡಪ್ಪಾ! ನಾನು ಬರುವದಿಲ್ಲ.' ಹೀಗೆ ಹೇಳಿದ್ದನ್ನು ಕೇಳಿ ಆ ಪರಿಚಾರಿಕೆ ಆ ವಿಷಯವನ್ನು ಧರಣೀದೇವಿಗೆ ತಿಳಿಸಿದರು. ಆ ಕೊರವಂಜಿಯಿಂದ ತನ್ನ ಮಗಳ ಪರಿಸ್ಥಿತಿಯನ್ನು ತಿಳಿದುಕೊಳ್ಳಲು

ಕಷ್ಟ ಪಡುತ್ತಿದ್ದ ಧರಣೀದೇವಿಯು ಒಂದು ಮೂಲೆಯಲ್ಲಿ ನಿಂತು ಆ ಕೊರವಂಜಿಗೆ 'ಓ ಕೊರವಂಜಿ ಅಮ್ಮಾ! ಇಲ್ಲಿ ಬಾ. ಭಯಪಡಬೇಡ. ನನ್ನ ಮನಸ್ಸಿನೊಳಗಿನ ಅಭಿಪ್ರಾಯದ ಬಗ್ಗೆ ಹೇಳಿದರೆ ನಿನಗೆ ಒಳ್ಳೆಯ ಬಹುಮಾನಗಳನ್ನು ಕೊಡುತ್ತೇನೆ' ಎಂದು ಅಹ್ವಾನಿಸಿ ಒಳಗೆ ಕರೆದುಕೊಂಡು ಹೋಗಿ ಒಂದು ಸಮುಚಿತ ಆಸನ ತೋರಿಸಿ ಕೂಡಲು ಹೇಳಿದಳು. ಆದರೆ ಆ ಕೊರವಂಜಿಯು ತನಗೆ ಯಾವುದೇ ಆಸನ ಬೇಕಾಗಿಲ್ಲ ಎಂದು ಹೇಳುತ್ತ ನೆಲದ ಮೇಲೆ ಕುಳಿತುಬಿಟ್ಟಳು. 'ಓ ದೊರೆಸಾನಿ, ಮಹಾರಾಣಿ ಅಮ್ಮನವರೇ! ಸ್ನಾನ ಮಾಡಿ, ಪಟ್ಟುಸೀರೆ ಉಟ್ಟುಕೊಂಡು, ಉತ್ತಮ ರವಿಕೆ ತೊಟ್ಟು, ಅರಿಷಿಣ ಕುಂಕುಮ ಗಂಧಗಳಿಂದ ಅಲಂಕರಿಸಿಕೊಂಡು, ಸರ್ವಾಭರಣಗಳನ್ನು ಧರಿಸಿ, ನಿನ್ನ ಕುಲದೇವತೆಗೆ ನಮಸ್ಕರಿಸಿ ಬಾರಮ್ಮಾ. ನಿನ್ನ ಎದೆಯೊಳಗಿನ ನಿಜವಾದ ಮಾತು ಯಾವುದು ನಾನು ಹೇಳುತ್ತೇನೆ.' ಹೀಗೆ ಕೊರವಂಜಿ ಹೇಳಿದ ಕೂಡಲೆ ಅವಳು ಹೇಳಿದ್ದನ್ನೆಲ್ಲ ಮುಗಿಸಿಕೊಂಡು ಬಂದಳು. ಆಗ ಕೊರವಂಜಿಯು 'ಅಮ್ಮಾ! ನನ್ನ ಕುಲದೇವತೆಗೆ ಬಾಗಿಣ ಕೊಡು,' ಎಂದಳು. ರಾಣಿಯು ದಾಸಿಯರನ್ನು ಕರೆದು ಬಂಗಾರದ ತಟ್ಟೆಯಲ್ಲಿ ತುಂಬ ಮುತ್ತುಗಳು, ಹೊಸಕುಪ್ಪಸ, ಲವಂಗಾದಿ ಎಲ್ಲ ಪರಿಮಳ ವಸ್ತುಗಳನ್ನು ಕೂಡಿದ ತಾಂಬೂಲ, ಅರಿಷಿಣ, ಕುಂಕುಮ, ಚಂದನ, ಹೂಗಳು, ಹಣ್ಣುಗಳನ್ನು ತರಿಸಿ ಅವಳ ಎದುರು ಇಟ್ಟಳು. ಕೊರವಂಜಿಯು ಆ ಬಾಗಿನವನ್ನು ತನ್ನೆಡೆಗೆ ಸರಿಸಿಕೊಂಡು 'ತಾಂಬೂಲದ ಮೇಲೆ ದಕ್ಷಿಣ ಇಲ್ಲವಲ್ಲಮ್ಮಾ' ಎಂದಾಗ ಧರಿಣಿದೇವಿಯು ಬೊಗಸೆಯಷ್ಟು ವರಾಹಗಳನ್ನು ತರಿಸಿ ಆ ತಾಂಬೂಲದ ಮೇಲೆ ಇಟ್ಟಳು. 'ಅಮ್ಮಾ! ಬಂಗಾರದ ಆಸನದ ಮೇಲೆ ಕುಳಿತಕೋ' ಎಂದು ಕೂಡಿಸಿ

ಆಮೇಲೆ 'ಅಮ್ಮಾ! ನನ್ನ ಈ ಕೈಕೂಸಿಗೆ ಹಸಿವೆಯಾಗಿದೆ, ಅದಕ್ಕಿಷ್ಟು ಅನ್ನ ಹಾಕಿಸಿ ಬಿಡು ತಾಯಿ' ಎಂದಾಗ ಕೂಡಲೆ ರಾಣಿಯು ದಾಸಿಯಿಂದ ಬಂಗಾರದ ತಟ್ಟೆಯಲ್ಲಿ ಹಾಲನ್ನ ತರಿಸಿದಳು. ಆ ಕೂಸು ಏನೂ ತಿನ್ನದೆ ಗಲಾಟೆ ಮಾಡುತಿದ್ದಾಗ ಅದನ್ನು ಸಿಟ್ಟಿನಿಂದ ಕೂಸಿಗೆ ಬೈದು ಹೊಡೆದು ತಾನೇ ಎಲ್ಲ ಅನ್ನವನ್ನು ತಿಂದು ನೀರು ತರಿಸಿಕೊಂಡು ಕುಡಿದು ಕೈಗಳನ್ನು ತೊಳೆದುಕೊಂಡು ಒಯ್ಯಾರದಿಂದ ರಾಣಿಯನ್ನು ನೋಡುತ್ತ ತಾಂಬೂಲವನ್ನು ಮೆಲೆಯುತ್ತ 'ಅಮ್ಮಾ! ನಾನು ಎಲ್ಲವನ್ನು ಸರಿಯಾಗಿ ಹೇಳುತ್ತೇನೆ! ನಿನ್ನ ಮನಸ್ಸಿನ ಕೋರಿಕೆ ಏನಿದೆ ಹೇಳುತ್ತೇನೆ, ಕೇಳು. ಕೇಳು, ನರನಾರಾಯಣನೇ ನನ್ನ ಗಂಡ. ಈ ಕೂಸು ಆವನಿಗೆ ಹುಟ್ಟಿದವನು. ಆತನು ನಿಮ್ಮ ಊರಿಗೆ ಹೋಗೆಂದು ಹೇಳಿದ್ದಕ್ಕಾಗಿ ಬಂದಿದ್ದೇನೆ. ನೀವು ನನಗೆ ಬಹಳ ಸಂತೋಷಗೊಳಿಸಿದ್ದೀರಿ. ನಾನು ಸುಳ್ಳು ಹೇಳುವದಿಲ್ಲ. ನನ್ನ ಮಾತು ಎಂದೂ ಹುಸಿ ಹೋಗುವದಿಲ್ಲ. ನಿನ್ನ ಮನಸ್ಸು ಪಡುತ್ತಿರುವ ಕಷ್ಟ ಹೋಗುವಂತೆ ಹೇಳುವೆನು ಕೇಳಮ್ಮಾ' ಎಂದಾಗ ಧರಣೀದೇವಿಯು ತುಂಬಾ ಸಂತೋಷಪಟ್ಟಳು. ಕೊರವಂಜಿಯು ರಾಣಿಯನ್ನು ಪೂರ್ವಮುಖಮಾಡಿ ಕೂಡಿಸಲು ಹೇಳಿ ತಾನು ಉತ್ತರಮುಖವಾಗಿ ಅವಳ ಹತ್ತಿರ ಕುಳಿತು ತನ್ನ ಕೂಸನ್ನು ತನ್ನ ಹತ್ತಿರ ಕೂಡಿಸಿಕೊಂಡು ಬಾಗಿನವನ್ನು ತನ್ನ ಬುಟ್ಟಿಯ ಮೇಲೆ ಇಟ್ಟು ಒಳಗಿನ ಕಣಿಹೇಳುವ ಕವಡೆಗಳನ್ನು ಆ ಬಾಗಿಣದಲ್ಲಿ ಇಟ್ಟು ಅಲ್ಲಿ ಅವುಗಳನ್ನು ಅರಿಷಿಣ ಕುಂಕುಮಗಳಿಂದ ಪೂಜಿಸಿ ಕಣಿ ಹೇಳುವದನ್ನು ಪ್ರಾರಂಭಿಸಿದಳು.

**ಕೊರವಂಜಿ :** ಓ ಮಧುರೆ ಮೀನಾಕ್ಷಮ್ಮಾ! ತಾಯಿ, ಕಂಚಿ ಕಾಮಾಕ್ಷಮ್ಮಾ! ಓ ಕಾಶಿ ವಿಶಾಲಾಕ್ಷಮ್ಮಾ! ಮುಕ್ಕೋಟಿ ದೇವತೆಗಳೇ!

ಮೊದಲು ಗಣಪತಿಯೇ ನಿನ್ನನ್ನು ಪೂಜಿಸುವೆ. ವಿಘ್ನಗಳು ಇಲ್ಲದಂತೆ ಶುಭವನ್ನು ನುಡಿಸಿ ನನ್ನ ಮಾತುಗಳನ್ನು ಸತ್ಯ ಮಾಡಿರಿ. ಸರ್ವದೇವತೆಗಳೇ! ಈ ದೊರೆಸಾನಿಯ ಮನಸ್ಸಿನೊಳಗಿನ ಕೋರಿಕೆ ಏನಿದೆ ತಿಳಿಸುವಿರಾ! ನನ್ನ ಮಾತುಗಳಲ್ಲಿ ಓ ಕಾಳಹಸ್ತಿ ಗ್ಯಾನಮ್ಮಾ! ಓ ಕನಕದುರ್ಗಮ್ಮಾ! ಹೇಳಿಸಿರೇ! ಸತ್ಯವಾದ ಮಾತುಗಳನ್ನು ವ್ಯರ್ಥವಾಗದಂತೆ, ನನ್ನ ಮಾತುಗಳು ಬರಲಿ, ಕವಡೆಗಳೇ, (ಎಂದು ನಮಸ್ಕಾರ ಮಾಡಿ) ಹಾಂ, ಓ ಅಮ್ಮಾ ನಿನ್ನ ಮನಸ್ಸಿನಲ್ಲಿ ದೊಡ್ಡದೇನೋ ಆಗಿದೆ. ಅದಕ್ಕಾಗಿ ಹೆದರುತ್ತಿದ್ದಿ. ಅದು ರೋಗವಲ್ಲ, ಅದು ದೆವ್ವ ಅಲ್ಲ, ಭೂತಗಳ ಆಟವೂ ಇಲ್ಲ, ಈ ಬಂಗಾರಗೊಂಬೆಗೆ, ಚಿಕ್ಕಬಾಲೆಗೆ ವನದಲ್ಲಿ ನಾಮಧಾರಿತ ಒಬ್ಬ ಪುರುಷ ಸಿಕ್ಕಿದ್ದಾನೆ, ಅವನ ಮೇಲೆ ಮೋಹ ಬಿದ್ದಿದ್ದಾಳೆ ನಿನ್ನ ಹುಡುಗಿ.

**ರಾಣಿ :** ಯಾರು ಆ ಪುರುಷನು?

**ಕೊರವಂಜಿ :** ಲೋಕಪಾಲಕನಾದ ಸ್ವಾಮಿಯೇ ಆಗಿದ್ದಾನೆ. ನಿನ್ನ ಬಾಲೆಗಾಗಿಯೇ ವೈಕುಂಠದಿಂದ ಭೂಲೋಕಕ್ಕೆ ಬಂದಿದ್ದಾನೆ.

**ರಾಣಿ :** ಎಲ್ಲಿದ್ದಾನೆ? ಎಂಥ ಗುಣಗಳನ್ನು ಹೊಂದಿದ್ದಾನೆ?

**ಕೊರವಂಜಿ :** ಒಂದು ಕಡೆ ಇರುತ್ತಾನೇನು! ಎಲ್ಲಕಡೆ ಇರುತ್ತಾನೆ. ಈಗ ನಿನ್ನ ಬಾಲೆಯ ಹತ್ತಿರದಲ್ಲಿಯೇ ಇದ್ದಾನೆ. ಮೂರು ಗುಣಗಳಲ್ಲಿ ಶ್ರೇಷ್ಠ ಗುಣವಾದ ಸತ್ತ್ವವಾಗಿ ಇದ್ದಾನೆ, ಸರಿಯಾಗಿ ತಿಳಿದುಕೋ. ಅಮ್ಮಾ.

**ರಾಣಿ :** ಹತ್ತಿರವೇ ಎಂದರೆ ಎಲ್ಲಿ?

**ಕೊರವಂಜಿ :** ಇಲ್ಲಿ ಅಲ್ಲಿ ಎಂದು ನೆನೆಸುವದರಲ್ಲಿ ಅಲ್ಲಿ ಇರುತ್ತಾನೆ. ಆಗಲಿ, ನಿನ್ನ ಹುಡುಗ ಆ ಬೆಟ್ಟಮಧ್ಯದಲ್ಲಿ ಇದ್ದಾನೆ. ತಾಯಿ!

**ರಾಣಿ :** ನಿನ್ನ ಮಾತು ನಿಜವೇನಾ?

**ಕೊರವಂಜಿ :** ಉದ್ಯಾನವನದಲ್ಲಿ ಜರುಗಿದ ಪ್ರಸಂಗ ನಿನ್ನ ದಾಸಿಯರಿಗೆ ಕೇಳು, ನಿಜ ವೃತ್ತಾಂತ ಹೇಳುತ್ತಾರೆ. ಇಂದೋ ನಾಳೆಯೋ ನಮ್ಮ ತಾಯಿಯಂಥ ಮುದುಕಿಯೊಬ್ಬಳು ಇಲ್ಲಿಗೆ ತನ್ನ ವಿಷಯ ಹೇಳಲು...

**ರಾಣಿ :** ಯಾರೋ ಕುಲಗೋತ್ರ ಗೊತ್ತಿಲ್ಲದವನಿಗೆ ಮಗಳನ್ನು ಕೊಡು ಅಂತಿಯಾ?

**ಕೊರವಂಜಿ :** ನಿನ್ನ ಮಗಳು ಅವನಿಗಾಗಿಯೇ ಹುಟ್ಟಿ ಬಂದಿದ್ದಾಳೆ. ಅದನ್ನು ತಪ್ಪಿಸಲು ಬ್ರಹ್ಮನಿಂದ ಕೂಡ ಆಗದು ನನ್ನಮ್ಮಾ! ಮೂರು ಲೋಕಗಳಿಗೆ ಸದಾ ಬೆಳಗುವ ನಾಮದ ಒಡೆಯನು ನಿನ್ನ ಅಳಿಯನಾಗುವನು.

**ರಾಣಿ :** ಆದರೆ ನಾವು ಆತನಿಗೆ ಕೊಡದಿದ್ದರೆ?

**ಕೊರವಂಜಿ :** ಆಂ.. ಎಂಥ ಮಾತು, ಎಂಥ ಮಾತು, ತಪ್ಪು ತಪ್ಪು, ಆತನನ್ನು ವಿವಾಹವಾಗಲಿಕ್ಕೇನೆ ನಿನ್ನ ಮಗಳು ಜನಿಸಿದ್ದಾಳೆ. ಹಾಗೆ ಆಗದಿದ್ದರೆ ನಿನ್ನ ಮಗಳು ನಿಮಗೆ ದಕ್ಕುವದಿಲ್ಲ.

**ರಾಣಿ :** (ಸಿಟ್ಟಿನಿಂದ) ಏನದು? ಆ ಮಾತು?

**ಕೊರವಂಜಿ :** ಆಂ ಅಮ್ಮಾ, ಹಾಗಲ್ಲ, ನನ್ನದು ಸತ್ಯವಾಕ್ಯ. ಎಂದೆಂದಿಗೂ ಅದು ಸತ್ಯವೇ. ನಿನ್ನ ಮಗಳಿಗೆ ಕೇಳು, ಸತ್ಯವನ್ನು ತಿಳಿದುಕೋ, ನನ್ನ ಮಾತು ಎಂದೂ ತಪ್ಪುವದಿಲ್ಲ. ಬೇಗನೆ

ರಾಜನಿಗೆ ವಿವಾಹಕ್ಕಾಗಿ ತಯಾರು ಮಾಡು ಎಂದು ಹೇಳು. ಲಕ್ಷಣವಾಗಿ ವಿವಾಹ ಜರುಗುತ್ತದೆ ಅಮ್ಮಾ, ನಿನ್ನ ಮಗಳು ಲಕ್ಷ್ಮೀಗೆ ಸಮಾನಳು ನಿಜವಾಗಿ. ಬರುವ ಸಂಪತ್ತನ್ನು ಹೋಗಲು ಬಿಡಬೇಡ. ಆ ನಾಮಧಾರಿಯಾದ ಆತನಿಗೆ ಮಗಳನ್ನು ಕೊಡುವೆನೆಂದು ಹೇಳಿಬಿಡು. ಮುಡುಪು ತೆಗೆದಿಡು, ನಿನ್ನ ಮಗಳಿಗೆ ಯಾವ ರೋಗ ಅಂಟುವದಿಲ್ಲ.

**ರಾಣಿ :** ನೀನು ಹೇಳಿದಂತೆ ಮಾತಾಡಲು ಬರುವ ವೃದ್ಧೆ ಬಂದರೆ ನೋಡೋಣ.

**ಕೊರವಂಜಿ :** ಇನ್ನು ನೋಡೋದೇನಿದೆ? ಕೊಡುತ್ತೇನೆ ಎಂದು ವಚನ ಕೊಡಮ್ಮಾ.

**ರಾಣಿ :** ಆ ವೃದ್ಧೆಯ ಮಾತು ನಿಜವಾಗಿದ್ದರೆ ನಾಮಧಾರಿಯವನಿಗೆ ನನ್ನ ಮಗಳನ್ನು ಕೊಡುತ್ತೇನೆ.

**ಕೊರವಂಜಿ :** ಶುಭವಾಗಲಿ ತಾಯಿ! ನಿನ್ನ ಮಾತು ಈಡೇರುವುದು. ಮಧುರ ಮೀನಾಕ್ಷಮ್ಮಾ! ಕಂಚಿ ಕಾಮಾಕ್ಷಮ್ಮಾ! ಕಾಶಿ ವಿಶಾಲಾಕ್ಷಮ್ಮಾ, ಜೊತೆಗೆ ನಿನಗೂ ಶುಭವಮ್ಮ. ದೇವತೆಗಳೇ ಮದುವೆಗೆ ಹಿರಿಯರಾಗಿ ಬರುವರು. ಮತ್ತೇ ಬರುವೆನು ತಾಯಿ, ಅದನ್ನು ನಂಬು.

ಇದೆಲ್ಲವನ್ನು ಕೇಳಿ ಧರಣಿದೇವಿ 'ಹೀಗೇ ಬರತಾ ಇರು.' ಎಂದು ಆ ಕೊರವಂಜಿಗೆ ಬೀಳ್ಕೊಟ್ಟು ಅಂತಃಪುರದೊಳಗೆ ಹೋದಳು. ಕೊರವಂಜಿಯು ಬಾಗಿಣವನ್ನು ತನ್ನ ಬುಟ್ಟಿಯಲ್ಲಿ ಇಟ್ಟುಕೊಂಡು ಕೂಸನ್ನು ಎತ್ತಿಕೊಂಡು ನಡೆದಳು.

## 17. ಬಕುಳಾದೇವಿಯು ಧರಣೀದೇವಿಯನ್ನು ಭೇಟ್ಟಿಯಾಗುವುದು

ಮಹಾರಾಣಿಯು ಪದ್ಮಾವತಿಯ ಕೋಣೆಗೆ ಬಂದಳು. ಆವಳು ನೀರಸವಾಗಿ ಮಂಚದ ಮೇಲೆ ಮಲಗಿದ್ದಳು. ದಾಸಿಯರು ಅವಳ ಸೇವೆ ಮಾಡುತ್ತಿದ್ದರು. ರಾಣಿಯು ಪದ್ಮಾವತಿಯ ಪಕ್ಕದಲ್ಲಿ ಕುಳಿತು 'ಅಮ್ಮಾ, ಉದ್ಯಾನವನದಲ್ಲಿ ಒಬ್ಬ ಪುರುಷನನ್ನು ನೋಡಿದಿಯಾ? ಅವನನ್ನು ನೋಡಿ ಪ್ರೀತಿಸಿದೆಯಾ?' ಎಂದು ಕೇಳಿದಾಗ ದಾಸಿಯರಿಗೆ ಅಂದಿನ ವೃತ್ತಾಂತವೆಲ್ಲ ನೆನಪು ಬಂದು ರಾಣಿಗೆ ಆ ಪೂರ್ತಿ ವಿಷಯವನ್ನು ಹೇಳಿದರು. ಪದ್ಮಾವತಿಯು ನಗುಮುಖದಿಂದ ಮೌನವಾಗಿದ್ದಿದ್ದನ್ನು ಗಮನಿಸಿ ಧರಣೀದೇವಿಯು ಕೊರವಂಜಿಯು ಹೇಳಿದುದೆಲ್ಲವೂ ನಿಜವೆಂದು ತಿಳಿದು, ಮನಸ್ಸಿನಲ್ಲಿ ಆ ನಾಮಧಾರಿಯನ್ನು ಪ್ರಾರ್ಥಿಸಿ ಮುಡುಪು ತೆಗೆದು ಇಟ್ಟಳು. ಕ್ಷಣದಲ್ಲಿ ಪದ್ಮಾವತಿಯು ದೊಡ್ಡ ಭಾರ ಇಳಿದಂತಾಗಿ ಮನಸ್ಸಿಗೆ ನೆಮ್ಮದಿ ಸಿಕ್ಕು, ಸಂಪೂರ್ಣ ಆರೋಗ್ಯ ಹೊಂದಿ ನಗುತ್ತ ಎದ್ದು ಕುಳಿತಳು. ತಾಯಿಯ ಆನಂದಕ್ಕೆ ಮೇರೆಯೇ ಇಲ್ಲದಂತಾಯಿತು. ಪದ್ಮಾವತಿಯನ್ನು ಅಪ್ಪಿಕೊಂಡು ಮುದ್ದಾಡಿದಳು. ಅಷ್ಟರಲ್ಲಿ ಅಗಸ್ತ್ಯಾಶ್ರಮದಲ್ಲಿನ ಪರಮೇಶ್ವರನ ಪೂಜೆಗೆ ಹೋಗಿದ್ದ ದಾಸಿಯರ ಜೊತೆಗೆ ಬಕುಳಾದೇವಿಯು ರಾಣಿಯ ದರ್ಶನಕ್ಕೆ ಬಂದಿದ್ದಾಳೆ ಎಂದು ಸುದ್ದಿ ತಿಳಿದ ರಾಣಿಯು ಅವಳನ್ನು ತನ್ನ ಮಂದಿರಕ್ಕೆ ಕರೆದು ತರಲು ದಾಸಿಯರಿಗೆ ಆಜ್ಞೆಮಾಡಿ ತಾನು ಬಕುಳಾದೇವಿ ಬರುವುದಕ್ಕಿಂತ ಮುಂಚೆ ತಾನು ಮಂದಿರದಲ್ಲಿ ಇದ್ದಳು.

ದಾಸಿಯರು ಬಕುಳಾದೇವಿಯನ್ನು ರಾಣಿಮಂದಿರಕ್ಕೆ ಕರೆದುಕೊಂಡು ಬಂದರು. ಕೊರವಂಜಿ ಹೇಳಿದ ಮಾತುಗಳು ಸತ್ಯವಾಗುತ್ತಿರುವಂತೆ ಕಂಡು, ಬಕುಳಾದೇವಿಗೆ ಸ್ವಾಗತಿಸಿ, ಒಳ್ಳೆಯ ಆಸನದಲ್ಲಿ ಕೂಡಿಸಿ, ಉಭಯಕುಶಲೋಪರಿ ಮುಗಿದ ಮೇಲೆ

ಅವಳು ಬಂದ ಕಾರಣವೇನೆಂದು ಕೇಳಿದಳು. ಆಗ ಬಕುಳಾದೇವಿ 'ವೆಂಕಟಾಚಲಪತಿಗೆ ನಿಮ್ಮ ಕನ್ಯೆ ಪದ್ಮಾವತಿಯನ್ನು ಕೇಳಲು ಬಂದಿದ್ದೇನೆ' ಎಂದಳು. ಅದನ್ನು ಕೇಳಿ ಮನಸ್ಸಿನೊಳಗೆ ಸಂತೋಷ ಹೊಂದುತ್ತಿದ್ದು ಅವಳು 'ವರನ ಕುಲಗೋತ್ರಗಳೇನಾದರೂ ತಿಳಿಯದೇ ಯಾರಾದರೂ ಕನ್ಯೆಯನ್ನು ಕೊಡುತ್ತಾರೆಯೇ?' ಎಂದುದ್ದನ್ನು ಕೇಳಿ ಬಕುಳಾದೇವಿಯು ಧರಣಿದೇವಿಗೆ ವೆಂಕಟಾಚಲಪತಿ ಬಗ್ಗೆ ಹೀಗೆ ಹೇಳಿದಳು. 'ನೋಡಮ್ಮಾ! ನಮ್ಮ ವೆಂಕಟಾಚಲಪತಿಯ ತಾಯಿತಂದೆಯರು ದೇವಕಿ ವಸುದೇವರು. ಚಂದ್ರವಂಶ, ವಸಿಷ್ಠ ಗೋತ್ರ, ಜನ್ಮ ನಕ್ಷತ್ರ ಶ್ರವಣ, ನವಯೌವನದ ಪ್ರಾಯ, ಮೊದಲ ಹೆಸರು ಕೃಷ್ಣ, ವೆಂಕಟಾಚಲದಲ್ಲಿ ನೆಲೆಸಿದ್ದಕ್ಕಾಗಿ ವೆಂಕಟಾಚಲಪತಿ ಎಂಬುದು ವ್ಯವಹಾರ ನಾಮ. ಎಲ್ಲ ಒಳ್ಳೆಯ ಶುಭಗುಣಗಳು ಆವನಲ್ಲಿ ಆಶ್ರಯಿಸಿಕೊಂಡಿವೆ. ಶ್ರೀದೇವಿಯ ಬಂದುಹೋಗುವುದು ಇಲ್ಲವೆಂದು ಜನರು ಆಡಿಕೊಳ್ಳುತ್ತಿದ್ದಾರೆ. ಆತನಿಗಿಂತ ಗುಣವಂತನು, ಬುದ್ಧಿವಂತನು, ಭಾಗ್ಯವಂತನು, ಸುಂದರ ಪುರುಷನು ಮತ್ತೊಬ್ಬರು ಇಲ್ಲವೆಂದು ಎಂದರೆ ಅದರಲ್ಲಿ ಅತಿಶಯೋಕ್ತಿಯೇನಲ್ಲ. ನಿಮ್ಮ ಬೀಗಸ್ತನಕ್ಕೆ ತಕ್ಕವನೆಂದೇ ನಾನು ಬಂದೆನು. ಆತನು ಮೊದಲು ಉದ್ಯಾನವನದಲ್ಲಿ ನಿಮ್ಮ ಕನ್ಯೆಯನ್ನು ನೋಡಿದಾಗಿನಿಂದ ಕನ್ಯೆಯ ಮೋಹದಲ್ಲಿ ವಿಚಿತ್ರವಾಗಿ ಬಿಟ್ಟಿದ್ದಾನೆ. ನಾನು ಕನ್ಯಾರ್ಥಿಯಾಗಿ ಬಂದಿದ್ದೇನೆ. ಅವನು ನನ್ನನ್ನು ತಾಯಿಯ ಹಾಗೆ ನೋಡಿಕೊಳ್ಳುತ್ತಾನೆ. ಹಾಗಾಗಿ ನೀವು ಶ್ರೀ ವೆಂಕಟಾಚಲಪತಿಗೆ ಕನ್ಯಾದಾನ ಮಾಡಿದರೆ ತ್ರಿಲೋಕ ಪೂಜ್ಯರಾಗುವಿರಿ.' ಇದನ್ನು ಕೇಳಿ ಸಂತೋಷಗೊಂಡ ಧರಣೀದೇವಿ ಕುಮಾರನಾದ ವಸುನಾಯಕನನ್ನು ಕರೆಯಿಸಿ ರಾಜನನ್ನು ಬೇಗನೆ ಕರೆದುಕೊಂಡು ಬರಲು ಹೇಳಿದಳು. ಬಂದ ಕೂಡಲೆ ಆಕಾಶರಾಜನನ್ನು ಬೇರೊಂದು ಕೋಣೆಗೆ ಕರೆದುಕೊಂಡು ಹೋಗಿ

'ನಾಥಾ! ಮುಂಜಾನೆ ಕಣಿ ಹೇಳಿದ್ದನ್ನು ಕೇಳಿದೆ. ಆ ಕೊರವಂಜಿಯು ಹೇಳಿದುದೆಲ್ಲವೂ ನಿಜವಾಗಿ ನಡೆಯುತ್ತಿದೆ. ಅವಳು ಹೇಳಿದಂತೆ ಮುಡುಪು ಕಟ್ಟಿ ಇಟ್ಟಿದ್ದೇನೆ. ಹಿಂದೆಯೇ ನಮ್ಮ ಪದ್ಮಾವತಿಯು ಸಂಪೂರ್ಣವಾಗಿ ಚೇತರಿಸಿಕೊಂಡಳು. ಪದ್ಮಾವತಿಯು ವನದಲ್ಲಿ ಒಬ್ಬ ಪುರುಷನನ್ನು ನೋಡಿ, ಅತನನ್ನು ಬಿಟ್ಟು ಬೇರೆಯವರನ್ನು ವಿವಾಹವಾಗುವದಿಲ್ಲ ಎಂಬ ವಿಷಯವನ್ನು ನಮ್ಮ ಎದುರಲ್ಲಿ ಹೇಳಲು ಭಯಹೊಂದಿ ಬಾಧೆಯೊಳಗಾಗಿದ್ದಾಳೆ ಎಂದು ಆ ಕೊರವಂಜಿ ಹೇಳಿದ್ದಾಳೆ. ಅದರ ಬಗ್ಗೆ ವಿಚಾರಿಸಿದಾಗ ದಾಸಿಯರು 'ಹೌದು' ಎಂದು ಹೇಳಿದರು. ಪದ್ಮಾವತಿಯು ಮೌನದಿಂದ ಅದನ್ನು ಅಂಗೀಕರಿಸಿದ್ದಾಳೆ. ಆ ಪುರುಷನು ವೆಂಕಟಾಚಲದಲ್ಲಿರುವ ವೆಂಕಟಾಚಲಪತಿ, ಆತನದು ಚಂದ್ರವಂಶ, ವಷಿಸ್ಠ ಗೋತ್ರ, ವಯೋರೂಪಗುಣಗಳಿಗೆ ಆತನಿಗೆ ಈ ಲೋಕದಲ್ಲಿ ಸರಿಸಾಟಿ ಯಾರೂ ಇಲ್ಲವೆಂದು, ಪದ್ಮಾವತಿಗೆ ತಕ್ಕ ಭರ್ತನೆಂದು ವಂಶಗೋತ್ರ ಮರ್ಯಾದೆಗಳಿಂದ ನಮಗೆ ಸಾಟಿಯಾದ ಅಳಿಯನೆಂದು ಬಕುಳಾದೇವಿ ಹೇಳಿದ್ದಾಳೆ. ಆತನನ್ನು ನಾಮಗಳಸ್ವಾಮಿ ಎಂದು ವರ್ಣಿಸಿದ ಕೊರವಂಜಿಯು ಪದ್ಮಾವತಿಯನ್ನು ಆತನಿಗೆ ಕೊಟ್ಟು ಮದುವೆ ಮಾಡದೇ ಇದ್ದರೆ ಪದ್ಮಾವತಿ ನಮಗೆ ದಕ್ಕಳು ಎಂದು ಹೇಳಿದ್ದಾಳೆ. ಇದೆಲ್ಲ ದೈವನಿರ್ಣಯವು, ಆ ದೈವವನ್ನು ನೆನೆದು ಮುಡುಪು ತೆಗೆದಿಟ್ಟ ಕೂಡಲೆ ಪದ್ಮಾವತಿಯು ಪರಿಪೂರ್ಣಆರೋಗ್ಯ ಹೊಂದಿದವಳಂತೆ ಆಗಿದ್ದಾಳೆ. ಬನ್ನಿ ನೋಡುವಿರಿ.' ಎಂದು ಆಕಾಶರಾಜನನ್ನು ಪದ್ಮಾವತಿ ಕೋಣೆಯೊಳಗೆ ಕರೆದು ತಂದಳು. ತಂದೆಯನ್ನು ನೋಡಿ ನಗುತ್ತಾ ಆಸನದಿಂದ ಇಳಿದು ಬಂದು ಅಪ್ಪಿಕೊಂಡಳು. ಆಗ ಆಕಾಶರಾಜನು ಪತ್ನಿಯು ಹೇಳಿದ್ದೆಲ್ಲವೂ ದೈವಾನುಗ್ರಹದಿಂದ ತಮ್ಮ ಒಳ್ಳೆಯದಕ್ಕಾಗಿ ಎಂದು ತಿಳಿದು ಮಗಳನ್ನು ಸಮಾಧಾನ

ಮಾಡಿ 'ಅಮ್ಮಾ! ನೀನು ಕೋರಿದ ಭರ್ತನು ಯಾರು?' ಎಂದು ಕೇಳಿದರೆ ಅವಳು ನಾಚಿಕೆಯಿಂದ ತಲೆ ತಗ್ಗಿಸಿ ಸುಮ್ಮನೆ ನಿಂತುಬಿಟ್ಟಳು. ರಾಜನು 'ಅಮ್ಮಾ! ನಾವು ಧನ್ಯರು, ವರಾನ್ವೇಷಣೆಯ ಶ್ರಮ ಇಲ್ಲದೆಯೇ ಸರಿಯಾದ ಅಳಿಯನನ್ನು ದೇವರು ನಮಗೆ ದಯಪಾಲಿಸಿದ್ದಾನೆ. ನೀನು ಕೋರಿದವನಿಗೆ ನಿನ್ನನ್ನು ಕೊಟ್ಟು ಮದುವೆ ಮಾಡುವೆ. ಸಂತೋಷವಾಗಿ ಇದ್ದುಬಿಡು.' ಎಂದು ಹೇಳಿ ವಸುಕುಮಾರನೊಂದಿಗೆ ಸಭಾಭವನಕ್ಕೆ ಬಂದು ಹಿಂದೆಯೇ ಮಂತ್ರಿ ಪುರೋಹಿತರನ್ನು ಬಂಧು, ಮಿತ್ರ, ಪುರಪ್ರಮುಖರ ಜೊತೆ ಸಮಾಲೋಚನೆ ನಡೆಸಿ, ಅವರಿಗೆ ತನ್ನ ಮಗಳು ಪದ್ಮಾವತಿಯನ್ನು ವೆಂಕಟಾಚಲಪತಿಗೆ ಕೊಟ್ಟು ಮದುವೆ ಮಾಡಬೇಕೆಂದು ಅಂದುಕೊಡಿದ್ದೇವೆ ಎಂದು ತಿಳಿಸಿದಾಗ ಎಲ್ಲರೂ ಏಕಕಂಠದಿಂದ ಸಮ್ಮತಿಸಿ ಸಂತೋಷಗೊಂಡರು.

## 18. ಆಕಾಶರಾಜನು ಬೃಹಸ್ಪತಿಯನ್ನು ಶುಕಮಹರ್ಷಿಯನ್ನು ಕರೆಯಿಸಿ ಅವರಿಗೆ ಪದ್ಮಾವತಿ ಶ್ರೀನಿವಾಸರ ವಿವಾಹ ವಿಷಯವನ್ನು ತಿಳಿಸಿ ಸುಮುಹೂರ್ತವನ್ನು ನಿರ್ಣಯಿಸುವುದು

ಆಕಾಶರಾಜನು ತನ್ನ ಕುಮಾರನಿಗೆ ಬೃಹಸ್ಪತಿಯನ್ನು ಕರೆದು ತರಲು, ತಮ್ಮನಾದ ತೋಂಡಮಾನನಿಗೆ ಶುಕಮಹರ್ಷಿಯನ್ನು ಕರೆದುಕೊಂಡು ಬರಲು ಕಳಿಸಿದನು. ವಸುನಾಯಕನು ದೇವಲೋಕಕ್ಕೆ ಹೋಗಿ ಬೃಹಸ್ಪತಿಗೆ ತನ್ನ ತಂದೆಯ ಸಂದೇಶವನ್ನು ತಿಳಿಸಿದನು. ಹಿಂದೆಯೇ ದೇವಗುರುವು ವೃತ್ತಾಂತವನ್ನು ದಿವ್ಯದೃಷ್ಟಿಯಿಂದ ನೋಡಿ, ಭಗವತ್ಕಾರ್ಯವೆಂದು ಭಾವಿಸಿ ವಸುನಾಯಕನ ಹಿಂದೆಯೇ ಬಂದುಬಿಟ್ಟನು.

ಶುಕಮಹರ್ಷಿಯು ಸುವರ್ಣಮುಖಿನದಿಗೆ ಪೂರ್ವದ ದಕ್ಷಿಣ ಕೈಲಾಸಪರ್ವತಕ್ಕೆ ಪಶ್ಚಿಮದಲ್ಲಿರುವ ಶುಕತೀರ್ಥ ಎಂಬ ಆಶ್ರಮದಲ್ಲಿ ಇರುತ್ತಿದ್ದನು. ತೋಂಡಮಾನನು ಶುಕಮುನಿ ಆಶ್ರಮಕ್ಕೆ ಬಂದು ಅಣ್ಣನ ಆಹ್ವಾನವನ್ನು ಮಹರ್ಷಿಗಳಿಗೆ ತಿಳಿಸಿದನು. ಅವನು ತಮ್ಮ ದಿವ್ಯ ದೃಷ್ಟಿಯಿಂದ ನಿಜವಿಷಯವನ್ನು ತಿಳಿದುಕೊಂಡು ತೋಂಡಮಾನನ ಜೊತೆಗೆ ರಥದಲ್ಲಿ ಕುಳಿತು ನಾರಾಯಣಪುರಕ್ಕೆ ಹೊರಟನು.

(ಶುಕತೀರ್ಥವು ಬಹಳ ಕಾಲದಿಂದ ಪ್ರಸಿದ್ಧಿ ಪಡೆದಿದೆ. ಅದು ದಕ್ಷಿಣ ಕೈಲಾಸಪರ್ವತಕ್ಕೆ ಪಶ್ಚಿಮದಿಕ್ಕಿನ ಪರ್ವತಗಳಲ್ಲಿ ಇರುವ ದಿವ್ಯತೀರ್ಥವು. ಈಗ ಸದ್ಯ ಅದು ಒಬ್ಬ ವ್ಯವಸಾಯಗಾರನ ಸ್ವಾಧೀನದಲ್ಲಿದೆ. ಈಶ್ವರಾಲಯದ ದಕ್ಷಿಣ ದಿಕ್ಕಿಗೆ ಒಂದು ಕಿಲೋಮಿಟರ್ ದೂರದಲ್ಲಿ, ಭರಧ್ವಾಜತೀರ್ಥಕ್ಕೆ ಹೋಗುವ ದಾರಿಯಲ್ಲಿ ಸಮೀಪದಲ್ಲಿ ಇದೆ. ಅಲ್ಲಿ ಕೆಲವು ಮಾವಿನ ಮರಗಳು ಇವೆ. ಶ್ರೀಕಾಳಹಸ್ತಿ ಕ್ಷೇತ್ರದಲ್ಲಿನ ತೀರ್ಥಗಳಲ್ಲಿ ಶ್ರೀಶುಕತೀರ್ಥವು ಕಾಣುವದಿಲ್ಲ. ಈಗ ಅಲ್ಲಿ ಒಂದು ಬಾವಿ ಮಾತ್ರ ಇದೆ.)

ಮೊದಲು ಬೃಹಸ್ಪತಿ ನಾರಾಯಣಪುರ ಸೇರಿದನು. ಬಂದ ದೇವಗುರುವಿಗೆ ಆಕಾಶರಾಜನು ಎದುರುಗೊಂಡು ಗೌರವದಿಂದ ಅಹ್ವಾನಿಸಿ ಅಂತಃಪುರಕ್ಕೆ ಕರೆತಂದು ಉಚಿತ ರೀತಿಯಲ್ಲಿ ಮಾತನಾಡಿ ಸಮುಚಿತ ಆಸನದಲ್ಲಿ ಕುಳ್ಳಿಸಿದನು. ತದನಂತರ ತನ್ನ ಪುತ್ರಿ ಪದ್ಮಾವತಿಯನ್ನು ವೆಂಕಟಾಚಲಪತಿಗೆ ಕೊಟ್ಟು ವಿವಾಹ ಮಾಡಬೇಕೆಂಬ ತನ್ನ ಅಭಿಮತವನ್ನು ದೇವಗುರುವಿಗೆ ವಿಶದ ಪಡಿಸಿದನು. ಈ ಕಾರ್ಯದಲ್ಲಿ ವೆಂಕಟಾಚಲದಿಂದ ಪುಣ್ಯಸಾಧ್ವಿಯೊಬ್ಬಳು ಬಂದಿದ್ದಳೆಂದು ತಿಳಿಸಿದನು. ರಾಜನ ಮಾತುಗಳನ್ನು ಕೇಳಿ ಬೃಹಸ್ಪತಿಯು 'ರಾಜಾ! ವೆಂಕಟಾಚಲಪತಿಯೇ

ವೈಕುಂಠವಾಸನು. ಶುಕಮಹರ್ಷಿಗೆ ಭೂಲೋಕ ವೆಂಕಟಾಚಲಪತಿಯ ವಿಷಯ ಗೊತ್ತಿರಬಹುದು. ಅವರ ಮಧ್ಯಸ್ಥಿಕೆ ಒಳ್ಳೆಯದು.' ಎಂದು ಹೇಳುತ್ತಿರುವಾಗಲೆ ತೋಂಡಮಾನನ ಹಿಂದೆ ಶುಕಮಹರ್ಷಿಯು ರಾಜಮಂದಿರವನ್ನು ಪ್ರವೇಶಿಸಿದನು. ರಾಜನು ಆ ಮಹರ್ಷಿಯನ್ನು ಮರ್ಯಾದೆಯಿಂದ ಆಹ್ವಾನಿಸಿ ಉಚಿತ ಆಸನದಲ್ಲಿ ಕುಳ್ಳಿರಿಸಿ, ಪದ್ಮಾವತಿ ವೆಂಕಟಾಚಲಪತಿಯರ ವಿವಾಹ ವಿಷಯವನ್ನು ತಿಳಿಸಿದನು. ಎಲ್ಲವನ್ನು ಕೇಳಿದ ಶುಕಮಹರ್ಷಿಯು 'ರಾಜಾ! ದೈವಸಂಘಟನದಿಂದ ನೆರವೇರುವ ಕನ್ಯಾದಾನದಿಂದ ನೀನು ಧನ್ಯನಾಗುತ್ತಿರುವಿ. ಅಲ್ಲದೇ ನಿನ್ನ ಪೂರ್ವಪುಣ್ಯದ ಫಲದಿಂದ ವೈಕುಂಠವಾಸನೇ ನಿನಗೆ ಅಳಿಯನಾಗುತ್ತಿದ್ದಾನೆ. ಯಾವುದೇ ಸಂಕೋಚವಿಲ್ಲದೆ ಶುಭಸ್ಯ ಶೀಘ್ರಂ ಎಂದು ಹಿರಿಯರ ವಾಕ್ಯದಂತೆ ಆಚರಿಸು. ದೇವಗುರುವು ನನ್ನ ಮಾತನ್ನು ಬಲಪಡಿಸುವರಾ!' ಎಂಬುದರೊಳಗೆ ದೇವಗುರುವು ಶ್ರೀ ಶುಕಮಹರ್ಷಿಯ ಜೊತೆಗೆ ತಾನು ಏಕಮತವೆಂದು ಹೇಳಿ ಮುಂದಿನ ಕಾರ್ಯದ ಬಗ್ಗೆ ಕೇಳಿದನು.

ಆಗ ಆಕಾಶರಾಜನು 'ಹಿರಿಯರಾದ ತಾವು ಆದೇಶದ ನೆರವೇರಿಕೆಯ ಪ್ರಯತ್ನ ಮಾಡುವದಿಲ್ಲವೆ? ಇನ್ನೂ ತಾವೇ ವಧುವರಗಳ ವಿವಾಹ ಸುಮುಹೂರ್ತವನ್ನು ನಿಶ್ಚಯ ಮಾಡುವುದು', ಎಂದಾಗ ಬೃಹಸ್ಪತಿಯು ವಧುವರರ ವಂಶ, ಗೋತ್ರ, ಜನ್ಮನಕ್ಷತ್ರಗಳ ಅನುಸಾರವಾಗಿ ವಿವಾಹವಿಂಶತಿ ವರ್ಗಗಳನ್ನು ಪರೀಕ್ಷಿಸಿ, ತಿಥಿ ವಾರ ನಕ್ಷತ್ರ ಯೋಗ ಕರಣಗಳಿಗನುಸಾರವಾಗಿ ತಾರಾಬಲ ಚಂದ್ರಬಲಗಳನ್ನು ನೋಡಿ, ಪುಷ್ಕರಾಂಶವನ್ನು ನೋಡಿ ಗ್ರಹಗಳೆಲ್ಲವು ಶುಭರಾಶಿಗಳಲ್ಲಿನ ಶುಭಲಗ್ನ ಸುಮುಹೂರ್ತವನ್ನು ನಿರ್ಣಯಿಸಿದನು.

ಗುರೂಪದೇಶವನ್ನು ಅನುಸರಿಸಿ ಸಮುಚಿತವಾದ ಪತ್ರವನ್ನು ಬರೆದು ಅದರಲ್ಲಿ ಹಿರಿಯರು ನಿಶ್ಚಯಿಸಿದ ಪದ್ಮಾವತಿ ವೆಂಕಟೇಶ್ವರರ ವಿವಾಹಪತ್ರಿಕೆಯನ್ನು ಶುಕಮಹರ್ಷಿಗೆ ಕೊಟ್ಟು ವೆಂಕಟಾಚಲಕ್ಕೆ ಕಳುಹಿಸಿದನು. ಬೃಹಸ್ಪತಿಗೆ ವಿಶೇಷ ಕೃತಜ್ಞತೆ ಹೇಳಿ ವಿವಾಹಕಾರ್ಯವನ್ನು ಇಲ್ಲಿಯೇ ಇದ್ದು ನೆರವೇರಿಸಬೇಕೆಂದು ಕೋರಿದನು. ಅದಕ್ಕೆ ಬೃಹಸ್ಪತಿಯು ಸಮ್ಮತಿಸಿ ದೇವಲೋಕಕ್ಕೆ ಹೊರಟನು.

ಆಕಾಶರಾಜನು ಪದ್ಮಾವತಿಯನ್ನು ಶ್ರೀ ವೆಂಕಟಾಚಲಪತಿಗೆ ಕೊಟ್ಟು ವಿವಾಹ ಮಾಡುವದಕ್ಕೆ ಸಮ್ಮತಿಸಿ ಪ್ರಕಟಿಸಿದ ಹಿಂದೆಯೇ ಬಕುಳಾದೇವಿಯು ಧರಣೀದೇವಿಗೆ ಬೀಳ್ಕೊಟ್ಟು ತಿರುಮಲ ನಿವಾಸಕ್ಕೆ ಬಂದು ತನ್ನ ಬರುವನ್ನೇ ನಿರೀಕ್ಷಿಸುತ್ತಿರುವ ವೆಂಕಟಾಚಲಪತಿಗೆ, ಪದ್ಮಾವತಿ ಹೃದಯವನ್ನು, ಆಕೆ ತಾಯಿತಂದೆಯರ ನಿರ್ಣಯವನ್ನು ಹೇಳಿ ಶ್ರೀನಿವಾಸನಿಗೆ 'ಶೀಘ್ರಮೇವ ಕಲ್ಯಾಣ ಪ್ರಾಪ್ತಿರಸ್ತು' ಎಂದು ಹರಸಿದಳು. ಶ್ರೀನಿವಾಸನು ಮುಸುಮುಸು ನಗುತ್ತ ಸಂಪೂರ್ಣ ಸಂತೋಷ ಹೊಂದಿದನು. ಬಕುಳಾದೇವಿ ತಾನು ಪ್ರಯತ್ನಿಸಿದ ಕಾರ್ಯವು ಸಫಲವಾಗಿದೆ ಎಂದು ಆನಂದಬಾಷ್ಪಗಳನ್ನು ಕಣ್ಣಲ್ಲಿ ತುಂಬಿಕೊಂಡು ಅಮಿತಾನಂದ ಹೊಂದಿದಳು.

## 19. ಶುಕಮಹರ್ಷಿಯು ವೆಂಕಟಾಚಲ ಸೇರಿ ವೆಂಕಟಾಚಲಪತಿಗೆ ಆಕಾಶರಾಜನು ಕಳಿಸಿದ ಪತ್ರವನ್ನು, ಮುಹೂರ್ತಪತ್ರಿಕೆಯನ್ನು ಕೊಡುವುದು

ಆಕಾಶರಾಜನ ಶುಭಲೇಖವನ್ನು ಮತ್ತು ಪತ್ರಿಕೆಯನ್ನು ತೆಗೆದುಕೊಂಡು ಶುಕಮಹರ್ಷಿಯು ಶೇಷಾಚಲಾದಿಯಾಗಿ ಸಪ್ತಗಿರಿಗಳನ್ನು ದಾಟಿ, ಸ್ವಾಮಿ ಪುಷ್ಕರಣಿ ಸಮೀಪದ

ಹುಣಿಸೆಮರದ ಕೆಳಗೆ ವಲ್ಮೀಕಭವನದಲ್ಲಿ ಶ್ರೀನಿವಾಸನನ್ನು ಕಂಡು ಸಾಷ್ಟಾಂಗ ನಮಸ್ಕಾರ ಮಾಡಿದನು. ಸ್ವಾಮಿಯು ಮಹರ್ಷಿಯನ್ನು ಅತ್ಯಾನಂದದಿಂದ ತನ್ನ ಕೈಗಳಿಂದ ಎತ್ತಿ ಅಪ್ಪಿಕೊಂಡು, ಸಂತೋಷದಿಂದ ಮಾತನಾಡುತ್ತ ಒಂದು ಉಚಿತ ಆಸನದಲ್ಲಿ ಕುಳ್ಳಿರಿಸಿ ತಾನು ಒಂದು ಆಸನದಲ್ಲಿ ಕುಳಿತನು. ಉಭಯಕುಶಲೋಪರಿ ಆದನಂತರ ಮಹರ್ಷಿಯು ತಾನು ಬಂದ ಕಾರ್ಯವನ್ನು ಸಾಕಲ್ಯವಾಗಿ ವಿವರಿಸಿ ಆಕಾಶರಾಜನು ಕಳುಹಿಸಿದ ಪತ್ರವನ್ನು, ಸುಮುಹೂರ್ತ ಪತ್ರಿಕೆಯನ್ನು ಕೊಟ್ಟು, 'ಆಕಾಶರಾಜನು ತಮ್ಮ ಪ್ರತ್ಯುತ್ತರ ನಿರೀಕ್ಷಿಸುತ್ತಿದ್ದಾನೆ' ಎಂದು ಹೇಳಿದನು. ಅವುಗಳನ್ನು ಪಡೆದು ಓದಿದ್ದನ್ನೇ ಮತ್ತೆಮತ್ತೆ ಓದಿ ಆನಂದಪರವಶನಾಗಿ 'ಮಹರ್ಷಿಗಳ ಆಶಯಗಳು ಸದ್ಯಃ ಫಲಗಳ ಕೊಡುತ್ತಿವೆ. ತಮ್ಮಂಥ ಮಹರ್ಷಿಗಳ ಸಹಕಾರದಿಂದಲೆ ನಾನೀ ಭೂರಕ್ಷಣ ಕಾರ್ಯವನ್ನು ವಹಿಸಿದ್ದೇನೆ, ತಪೋಧನರೆಂದರೆ ನನಗೆ ಅತ್ಯಂತಾನುರಾಗವಿದೆ. ಅವರ ಆಜ್ಞೆ ಶಿರಸಾ ವಹಿಸುತ್ತೇನೆ.' ಎಂದು ಹೇಳಿದನು.

'ಆಕಾಶರಾಜನು ಸುಧರ್ಮನ ಮಗನು, ಮಹಾ ಪುಣ್ಯವಂತನು, ಧರ್ಮಶೀಲನೂ ಹೌದು. ಸರ್ವಾಧಿಕಾರಿಯಾದ ರಾಜನಲ್ಲದೆ, ಪ್ರಜಾಪ್ರತಿನಿಧಿಯಾಗಿ ಪ್ರಜಾಸಂಕ್ಷೇಮಕ್ಕಾಗಿ ಸದಾ ತುಡಿಯುತ್ತಿರುವ ಭೂಪಾಲನು, ಆತನ ಪೂರ್ವಪುಣ್ಯಗಳಿಂದ ಲಭಿಸಿದ ಪುತ್ರಿ ಪದ್ಮಾವತಿಯನ್ನು ನನಗೆ ಕೊಟ್ಟು ವಿವಾಹ ನಿಶ್ಚಯ ಮಾಡಿದ್ದು ಬಹಳ ಸಂತೋಷ. ಅವರಿಗೆ ಸರಿಯಾದ ಉತ್ತರ ಬರೆಯುವುದು ನನ್ನ ಧರ್ಮ.' ಎಂದು ಹೇಳಿ ಸಂಭಾವ್ಯ ಮಾವನಾದ ಮಹಾರಾಜನಿಗೆ ತಕ್ಕ ಗೌರವದ ರೀತಿಯಲ್ಲಿ ಲೇಖ ಬರೆದು, ತಾನು ಪದ್ಮಾವತಿಯನ್ನು ವಿವಾಹವಾಗಲು ಸಮ್ಮತಿಸಿ,

ನಿರ್ಣಯಿಸಿದ ಮುಹೂರ್ತ ಸಮಯಕ್ಕೆ ಬಂಧು ಮಿತ್ರ ಪರಿವಾರ ಸಮೇತ ಅವತ್ತು ನಾರಾಯಣಪುರಕ್ಕೆ ಬರುವೆವು ಎಂದು ಮರ್ಯಾದೆಪೂರ್ವಕ ಲೇಖ ಬರೆದು ಮುಗಿಸಿ, ಬಕುಳಮ್ಮನನ್ನು ಕರೆದು ಆಕಾಶರಾಜನಿಗೆ ಬರೆದ ಪತ್ರವನ್ನು ಓದಿ, ಬರುವ ವೈಶಾಖ ಶುಕ್ಲ ಗುರುವಾರ ರಾತ್ರಿ ಹದಿಮೂರು ಗಳಿಗೆ ಸಮಯದಲ್ಲಿ ವಿವಾಹ ಮುಹೂರ್ತ ಎಂದು ಹೇಳಿದಾಗ ಬಕುಳಮ್ಮ ಬಹಳಷ್ಟು ಸಂತೋಷಗೊಂಡಳು. ಶುಕಮಹರ್ಷಿಯನ್ನು ಅತಿಶಯದಿಂದ ಸ್ತುತಿಸಿದರು. ವೆಂಕಟಾಚಲಪತಿ ತಾನು ಬರೆದ ಪ್ರತ್ಯುತ್ತರವನ್ನು ಆಕಾಶರಾಜನಿಗೆ ಮುಟ್ಟಿಸಬೇಕೆಂದು ಮಹರ್ಷಿಗೆ ಕೊಟ್ಟನು. ಶುಕಮಹರ್ಷಿಯು ತಮ್ಮ ಕಾರ್ಯವು ಸಂತೋಷದಿಂದ ನೆರವೇರಿತೆಂದು ಶ್ರೀನಿವಾಸನನ್ನು ಪ್ರಶಂಸಿಸಿ ತಾನು ಜಗನ್ನಾಯಕನ ವಿವಾಹಸಂಧಾತನಾಗಿ ಇದ್ದುದ್ದಕ್ಕಾಗಿ ಎಷ್ಟೋ ಧನ್ಯನೆಂದು ಭಾವಿಸಿದನು. ಅಷ್ಟರಲ್ಲಿ ಬಕುಳಮ್ಮ ಶ್ರೀನಿವಾಸನಿಗೆ ಮತ್ತು ಮಹರ್ಷಿಗೆ ಒಳ್ಳೆ ಫಲಗಳನ್ನು ಜೇನುತುಪ್ಪವನ್ನು ಉಪಾಹಾರವಾಗಿ ತಂದು ಕೊಟ್ಟಳು. ಇಬ್ಬರೂ ಸಂತೋಷದಿಂದ ಅವುಗಳನ್ನು ಸೇವಿಸಿದರು. ನಂತರ ಶುಕಮುನಿಯು ಬಕುಳಮ್ಮನನ್ನು ಬೀಳ್ಕೊಟ್ಟು ಶ್ರೀನಿವಾಸನ ಜೊತೆಗೆ ವರಾಹಸ್ವಾಮಿಯನ್ನು ದರ್ಶಿಸಿ ವೆಂಕಟಾಚಲಪತಿಯ ವಿವಾಹದ ಬಗ್ಗೆ ತಿಳಿಸಿದನು. ವರಾಹಸ್ವಾಮಿಯು ಹರ್ಷವ್ಯಕ್ತ ಮಾಡಿದ ಮೇಲೆ, ಶುಕಮಹರ್ಷಿಯು ಆತನ ಅನುಮತಿ ಪಡೆದು ಶ್ರೀನಿವಾಸನಿಗೆ ಸ್ವಸ್ತಿ ನುಡಿದು ನಾರಾಯಣಪುರಕ್ಕೆ ಹೊರಟನು.

ಶುಕಮುನಿಯು ಆಕಾಶರಾಜನ ಅಂತಃಪುರ ಸೇರಿ ತನ್ನ ಕಾರ್ಯವು ಸಫಲವಾಯಿತು ಎಂದು ರಾಜನಿಗೆ ಹೇಳಿ ಶ್ರೀನಿವಾಸನ ಪ್ರತ್ಯುತ್ತರವನ್ನು ಕೊಟ್ಟನು. ಆ ಪತ್ರವನ್ನು ಆಕಾಶರಾಜನು ಓದಿ

ಆನಂದಬಾಷ್ಪಗಳು ಬರುವದನ್ನು ತಡೆಹಿಡಿದು ಶುಕಮಹರ್ಷಿಗೆ ಕೃತಜ್ಞತಾಪೂರ್ವಕವಾಗಿ ನಮಸ್ಕರಿಸಿ, ಇನ್ನು ಮುಂದೆ ಜರುಗುವ ಕಾರ್ಯಕ್ರಮಗಳ ಬಗ್ಗೆ ಶುಕಮಹರ್ಷಿಯಿಂದ ತಿಳಿದು ಆ ವಿಧದಲ್ಲಿ ವಿವಾಹ ಕಾರ್ಯಗಳೆಲ್ಲವೂ ಸಾಕಲ್ಯರೀತಿಯಲ್ಲಿ ಜರುಗಿಸಬೇಕೆಂದು ಅರ್ಹರಾದವರನ್ನು ನಿಯಮಿಸಿದನು. ಮದುವೆಗೆ ಬರುವ, ವರನ ಕಡೆಯವರಿಗೆ ತಕ್ಕುದಾದ, ಬಂಧುಮಿತ್ರರಿಗೆ ಅವರ ಪರಿವಾರದವರಿಗೆ ಸರಿಯಾದ ವಸತಿಗಳು, ಮುಂಚೆಯೇ ಸದುಪಾಯಗಳನ್ನು ಮಾಡಿಕೊಳ್ಳುವದಕ್ಕೆ ತಮ್ಮ ತೋಂಡಮಾನನಿಗೆ, ಕುಮಾರ ವಸುನಾಯಕನಿಗೆ ನೇಮಿಸಿ ವಿವಾಹ ಕಾರ್ಯವನ್ನು ಸಕಲಲಕ್ಷಣಸಹಿತ ಜರುಗಿಸಬೇಕೆಂದು ವೇದಪಂಡಿತರಿಗೆ, ಪುರೋಹಿತರಿಗೆ ಅಂಗೀಕರಿಸಲು ಪ್ರಾರ್ಥಿಸಿದನು.

ಶುಕಮಹರ್ಷಿಗೆ ನಾರಾಯಣಪುರದಲ್ಲಿಯೇ ಇದ್ದು ವಿವಾಹಕರ್ತನಾಗಿ ಸಮಯ ಸಮಯಕ್ಕೆ ಬೇಕಾದ ಸಲಹೆಗಳನ್ನು ಕೊಡುತ್ತ ಕೆಲಸವು ಜಯಪ್ರದವಾಗಿ ಜರುಗಿಸಬೇಕೆಂದು ಪ್ರಾರ್ಥಿಸಿದನು. ರಾಜನ ಪ್ರಾರ್ಥನೆ ಅಂಗೀಕರಿಸಿ ಮಹರ್ಷಿಯು ಅಲ್ಲಿಯೇ ಉಳಿದನು.

## 20. ಶ್ರೀನಿವಾಸನು ವಿವಾಹಕ್ಕಾಗಿ ದೇವತೆಗಳನ್ನು ಮಹರ್ಷಿಗಳನ್ನು ಆಹ್ವಾನಿಸುವುದು

ಶುಕಮಹರ್ಷಿಯನ್ನು ಕಳಿಸಿದ ಬಳಿಕ ಶ್ರೀನಿವಾಸನು ಮತ್ತು ಬಕುಳಮ್ಮಳು ವರಾಹಸ್ವಾಮಿಯ ಭೇಟಿ ಮಾಡಿ ನಂತರ, ತನ್ನ ಬಂಧು, ಮಿತ್ರ, ಶ್ರೇಯೋಭಿಲಾಷಿಗಳಿಗೆ, ಮಹರ್ಷಿಗಳಿಗೆ ಅಹ್ವಾನವನ್ನು ಕಳುಹಿಸಲು ಅವರವರಿಗೆ ತಕ್ಕಂತೆ ಪತ್ರಗಳನ್ನು ಬರೆದು, ಆಯಾ ಪತ್ರಗಳನ್ನು ತನ್ನ ಅತ್ಯಂತ ವಿಶ್ವಾಸಪಾತ್ರರಾದ

ಗರುಡನನ್ನು ಶೇಷನನ್ನು ಕರೆಯಿಸಿ, ಅವರಿಗೆ ತನ್ನ ವಿವಾಹವಿಷಯವನ್ನು ತಿಳಿಸಿ, ಆನಂದದಿಂದ 'ಗರುಡಾ! ನೀನು ಸತ್ಯಲೋಕಕ್ಕೆ ತಪೋಲೋಕಕ್ಕೆ ಹೋಗಿ ಬ್ರಹ್ಮನಿಗೂ, ಮಹಾತ್ಮರಿಗೂ, ತಪೋಧನರಿಗೂ ಈ ಪತ್ರಗಳನ್ನು ಕೊಡಬೇಕು. ಆದಿಶೇಷಾ! ನೀನು ಕೈಲಾಸ ಮತ್ತು ನಾಗಲೋಕಗಳಿಗೆ ಹೋಗಿ ಶಂಕರನಿಗೆ, ವಾಸುಕಿಗೆ ಈ ಆಹ್ವಾನವನ್ನು ಕೊಟ್ಟು ಬರಬೇಕು.' ಎಂದು ಅವರವರಿಗೆ ಪತ್ರಗಳನ್ನು ಕೊಟ್ಟು ಕಳುಹಿಸಿದನು. ದೇವೇಂದ್ರನಿಗೆ, ಬೃಹಸ್ಪತಿಗೆ, ದಿಕ್ಪಾಲಕರಿಗೆ ಅಹ್ವಾನಕ್ಕಾಗಿ ಪ್ರತ್ಯೇಕ ದೂತರನ್ನು ಕಳುಹಿದನು.

ಗರುಡನು ಮೊದಲು ಸತ್ಯಲೋಕಕ್ಕೆ ಹೋದನು. ಅಲ್ಲಿ ಎಲ್ಲಿ ನೋಡಿದರೂ ವೇದಗಳನ್ನು ಸ್ವರಯುಕ್ತವಾಗಿ, ಕರ್ಣಾನಂದವಾಗುವಂತೆ ಕೇಳಿಬರುತ್ತಿತ್ತು. ಗರುಡನು ವೇದಪಾರಾಯಣ ಮುಗಿಯುವವರೆಗೆ ಒಂದು ಕಡೆ ಸುಮ್ಮನೆ ನಿಂತು, ಅದನ್ನು ಕೇಳಿ ತನ್ಮಯನಾಗಿ, ಸ್ವಲ್ಪ ಸಮಯದ ನಂತರ ಬ್ರಹ್ಮಮಂದಿರದ ದ್ವಾರದಲ್ಲಿ ನಿಂತು, ತಾನು ಬಂದುದ್ದನ್ನು ದ್ವಾರಪಾಲಕನಿಂದ ಬ್ರಹ್ಮದೇವನಿಗೆ ತಿಳಿಸಿದನು. ಗರುಡನು ಬಂದದ್ದು ತಿಳಿದ ಕೂಡಲೆ ಅವರನ್ನು ಒಳಗೆ ಕರೆದು ತರಲು ಹೇಳಿದನು. ಗರುಡನು ಸರಸ್ವತಿಸಹಿತ ವಿರಿಂಚಿಯನ್ನು ನೋಡಿ ಸಾಷ್ಟಾಂಗ ನಮಸ್ಕಾರ ಮಾಡಿ ನಿಂತನು. ಬ್ರಹ್ಮನು ಗರುಡನ ಯೋಗಕ್ಷೇಮ ವಿಚಾರಿಸಿದನು. ಆಗ ಗರುಡನು ಶ್ರೀವೆಂಕಟಾಚಲಪತಿಯ ವಿವಾಹ ಆಹ್ವಾನ ಪತ್ರಿಕೆಯನ್ನು ಕೊಟ್ಟನು. ಬ್ರಹ್ಮನು ಪತ್ರಿಕೆಯನ್ನು ಓದಿ ಸಂತೋಷಗೊಂಡು ಅದನ್ನು ಸರಸ್ವತಿಗೆ ಕೊಟ್ಟು ಗರುಡನನ್ನು ಸತ್ಕರಿಸಿ ಕಳುಹಿದನು. ಆನಂತರ ಬ್ರಹ್ಮನು ತನ್ನ ಸೇವಕರನ್ನು ಕರೆಯಿಸಿ, ಭಾರತ ದೇಶದ ದಕ್ಷಿಣ ಭಾಗದಲ್ಲಿನ ವೆಂಕಟಾಚಲದಲ್ಲಿ ಇರುವ ಶ್ರೀನಿವಾಸನ ವಿವಾಹಕ್ಕಾಗಿ ಸತ್ಯಲೋಕದ ಎಲ್ಲರೂ ತಮ್ಮ

ತಮ್ಮ ರೀತಿಯಲ್ಲಿ ಮುಹೂರ್ತಕ್ಕೆ ಒಂದು ದಿನ ಮುಂಚೆಯೇ ಅಲ್ಲಿ ಸೇರಬೇಕೆಂದು ಡಂಗುರ ಸಾರಬೇಕೆಂದು ಹೇಳಿ ಪತ್ರಿಕೆಯನ್ನು ಕೊಟ್ಟು ಕಳಿಸಿದನು. ಅದರಂತೆ ಅವರು ಸಂತೋಷದಿಂದ ಸತ್ಯಲೋಕವೆಲ್ಲ ಸಾರಿದರು.

ಬ್ರಹ್ಮಲೋಕವನ್ನು ಬಿಟ್ಟು ಗರುಡನು ತಪೋಲೋಕಕ್ಕೆ ಹೋಗಿ ಅಲ್ಲಿ ತಪೋಧನರಿಗೆ ಶ್ರೀನಿವಾಸನ ವಿವಾಹ ಪತ್ರಿಕೆಯನ್ನು ಕೊಟ್ಟನು. ಆ ತಪಸ್ವಿಗಳೆಲ್ಲಾ ಅದನ್ನು ಓದಿ ಆ ಪತ್ರಿಕೆಯನ್ನು ಭಕ್ತಿಯಿಂದ ಕಣ್ಣಿಗೆ ಹಚ್ಚಿಕೊಂಡು ಭೂಲೋಕದಲ್ಲಿ ಜರುಗಲಿರುವ ಶ್ರೀನಿವಾಸನ ಪರಿಣಯಕ್ಕೆ ಹೋಗುವ ಸಂಕಲ್ಪ ಮಾಡಿಕೊಂಡರು.

ಶೇಷನು ಮೊದಲು ಕೈಲಾಸಕ್ಕೆ ಹೋಗಿ ಪಾರ್ವತಿಪರಮೇಶ್ವರರನ್ನು ಸಂದರ್ಶಿಸಿ, ನಮಸ್ಕರಿಸಿ ಶ್ರೀನಿವಾಸನು ಕಳಿಸಿರುವ ವಿವಾಹ ಪತ್ರಿಕೆಯನ್ನು ಕೊಟ್ಟನು. ಅವರಿಬ್ಬರು ಪತ್ರಿಕೆಯನ್ನು ಓದಿ ಬಹಳಷ್ಟು ಸಂತೋಷಗೊಂಡು ಸಕುಟುಂಬ ಸಪರಿವಾರ ಭೂಲೋಕದಲ್ಲಿ ಜರುಗುತ್ತಿರುವ ವೆಂಕಟಾಚಲಪತಿಯ ವಿವಾಹಕ್ಕೆ ಹೋಗುವುದು ನಿಶ್ಚಯಿಸಿ, ಭೃಂಗ ನಂದೀಶ್ವರರಿಗೆ ಈ ಸುದ್ದಿಯನ್ನು ತಿಳಿಸಿ ಪ್ರಯಾಣ ಪ್ರಯತ್ನಗಳು ಸಾಗಲಿ ಎಂದು ನಿಯಮಿಸಿದರು. ನಂತರದಲ್ಲಿ ಶೇಷನು ಪಾತಾಳಕ್ಕೆ ಹೋಗಿ ವಾಸುಕಿ ಮುಂತಾದ ನಾಗಲೋಕದ ಇತರ ವಾಸಿಗಳಿಗೆ ವೆಂಕಟಾಚಲಪತಿಯ ಕಲ್ಯಾಣಾಹ್ವಾನ ಪತ್ರಿಕೆಗಳನ್ನು ಕೊಟ್ಟು ವೆಂಕಟಾಚಲಕ್ಕೆ ಬಂದನು. ಅಷ್ಟಕ್ಕೆ ಮೊದಲೇ ಗರುಡನು ವೆಂಕಟಾಚಲಕ್ಕೆ ಸೇರಿದ್ದನು. ಮುಂದೆ ಅವರು ವಿವಾಹೋಚಿತ ಕಾರ್ಯಗಳಲ್ಲಿ ತೊಡಗಿದರು.

## 21. ಬ್ರಹ್ಮಾದಿ ದೇವತೆಗಳು ಮಹರ್ಷಿಗಳು ವಿವಾಹಾರ್ಥ ವೆಂಕಟಾಚಲಕ್ಕೆ ಬರುವುದು

ವಿವಾಹ ಶುಭ ಮುಹೂರ್ತವು ಸಮೀಪಿಸುತ್ತಲೆ ಬ್ರಹ್ಮನು ಸರಸ್ವತಿ, ಸಾವಿತ್ರಿ, ಗಾಯತ್ರಿ ದೇವತೆಗಳು ಕೂಡಿ ಹಂಸವಾಹನನಾಗಿ ಭೂಲೋಕದ ವೆಂಕಟಾಚಲಕ್ಕೆ ಹೊರಟನು. ಅವರ ಹಿಂದೆ ಬ್ರಹ್ಮ ಮಾನಸಪುತ್ರನಾದ ನಾರದನು ಇನ್ನುಳಿದ ಸತ್ಯಲೋಕವಾಸಿಗಳು ಹೊರಟರು. ಮೊದಲು ಬ್ರಹ್ಮನು ಬರುವನೆಂದು ತಿಳಿದು ವೆಂಕಟಾಚಲಪತಿಯು ಗರುಡನನ್ನೇರಿ ಬ್ರಹ್ಮನಿಗೆ ಕರೆತರಲು ಎದುರು ಹೋದನು. ತಂದೆಯು ಬರುವದನ್ನು ನೋಡಿ ಬ್ರಹ್ಮ ಸರಸ್ವತಿಯೊಡನೆ ವಾಹನದ ಕೆಳಗಿಳಿದು ವೆಂಕಟಾಚಲಪತಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು. ವೆಂಕಟಾಚಲಪತಿಯು ವಾಹನದಿಂದ ಇಳಿದು ಆದರದಿಂದ ಉಭಯಕುಶಲ ಪ್ರಶ್ನೆಗಳನ್ನು ಕೇಳಿ, ಬಂದವರೆಲ್ಲರನು ಮಾತನಾಡಿಸಿ ತನ್ನ ನಿವಾಸಕ್ಕೆ ಕರೆದುಕೊಂಡು ಹೋಗಿ ಅವರವರಿಗೆ ತಕ್ಕ ನಿವಾಸಗಳನ್ನು ಏರ್ಪಡಿಸಲು ಗರುಡನನ್ನು ನಿಯಮಿಸಿದನು.

ತಾನು ಬ್ರಹ್ಮನು ಒಂದು ಕಡೆ ಕುಳಿತಿದ್ದರು. ಆಗ ಶ್ರೀನಿವಾಸನು ಆಕಾಶರಾಜನ ಮಗಳು ಪದ್ಮಾವತಿಯ ಪೂರ್ವ ಜನ್ಮವೃತ್ತಾಂತವನ್ನು ಹೇಳಿ, ಮೊದಲು ತಾನು ಕೊಟ್ಟ ಮಾತಿನ ಪ್ರಕಾರ ಪದ್ಮಾವತಿಯಾಗಿ ಇರುವ ವೇದವತಿಯನ್ನು ವಿವಾಹ ಮಾಡಿಕೊಳ್ಳುವಂತೆ, ಮತ್ತು ಆಕಾಶರಾಜನ ವೃತ್ತಾಂತವನ್ನೂ ವಿವರಿಸಿದನು. ಬ್ರಹ್ಮನು ಬಹಳ ಸಂತೋಷಗೊಂಡನು. ಅಲ್ಲಿ ಬಂದವರನ್ನೆಲ್ಲ ಬಕುಳಮ್ಮಳು ತಕ್ಕ ರೀತಿಯಲ್ಲಿ ಆದರಿಸಿದಳು. ಶ್ರೀನಿವಾಸನು ನಾರದರೆಲ್ಲರಿಗೆ ಬಕುಳಮ್ಮನ ಪೂರ್ವಜನ್ಮ ವೃತ್ತಾಂತವನ್ನು ಕೂಡ ಹೇಳಿದನು. ಎಲ್ಲರೂ ವಿಷ್ಣುವಿನ

ತಾಯಿಯಾಗಿರುವ ಬಕುಳಾದೇವಿಗೆ ಬಹಳ ಭಕ್ತಿಭಾವದಿಂದ ವರ್ತಿಸಿದರು. ವೆಂಕಟಾಚಲಪತಿಯು ಮೊದಲು ಬಂದಿರುವ ತನ್ನ ಎಲ್ಲ ಬಳಗವನ್ನು ವಿವಾಹೋಚಿತ ಕಾರ್ಯದಲ್ಲಿ ತೊಡಗುವಂತೆ ಮಾಡಿದನು.

ಆನಂತರ ಪರಮೇಶ್ವರನು ಪಾರ್ವತಿ ಸಹಿತನಾಗಿ ನಂದಿವಾಹನವನ್ನೇರಿ ಬಂದನು. ಆತನ ಹಿಂದೆ ಕೈಲಾಸದಿಂದ ಆಬಾಲಗೋಪಾಲರೆಲ್ಲರು ವೆಂಕಟಾಚಲಪತಿಯ ಕಲ್ಯಾಣನೋಡಲು ಬಂದರು. ವೆಂಕಟಾಚಲಪತಿಯು ಶಿವಪಾರ್ವತಿಯರನ್ನು, ವಿನಾಯಕನನ್ನು, ಕುಮಾರಸ್ವಾಮಿಯನ್ನು ತಕ್ಕ ರೀತಿಯಲ್ಲಿ ಎದುರುಗೊಂಡು ಗರುಡನ ಜೊತೆಗೆ ಅವರಿಗೆ ತಕ್ಕುದಾದ ನಿವಾಸಕ್ಕೆ ಕಳುಹಿಸಿದನು. ಮುಂದೆ ಇಂದ್ರಾದಿ ದಿಕ್ಪಾಲಕರು, ಬೃಹಸ್ಪತಿ, ಚಂದ್ರಸೂರ್ಯಾದಿ ದೇವತೆಗಳೆಲ್ಲರೂ ವೆಂಕಟಾಚಲ ಸೇರಿದರು. ಅವರ ಹಿಂದೆ ಸಪ್ತಮಹರ್ಷಿಗಳು ಮತ್ತು ತಪೋಧನರು ಬಂದರು. ಆಗ ಬಂದವರೆಲ್ಲರಿಗೆ ಸಮುಚಿತ ನಿವಾಸಗಳನ್ನು ಕಲ್ಪಿಸಿದರು. ಆಮೇಲೆ ವೆಂಕಟಾಚಲಪತಿಯು ದೇವೇಂದ್ರನಿಂದ ಹೇಳಿಸಿ, ವಿಶ್ವಕರ್ಮನಿಂದ ವಿವಾಹ ನಿಮಿತ್ತವಾಗಿ ಬಂದವರಿಗೆಲ್ಲಾ ಯೋಗ್ಯವಾದ ಭವನವನ್ನು ನಿರ್ಮಿಸಲು ಕೋರಿದನು. ವಿಶ್ವಕರ್ಮನು ದೇವೇಂದ್ರನ ಆನುಜ್ಞೆಯಂತೆ ಸ್ವಲ್ಪ ಸಮಯದಲ್ಲಿಯೇ ವೆಂಕಟಾಚಲದಲ್ಲಿ ಸರ್ವ ಅನುಕೂಲಗಳಿರುವ ದಿವ್ಯ ಪುರವೊಂದನ್ನು ನಿರ್ಮಿಸಿದನು. ಆಮೇಲೆ ವೆಂಕಟೇಶನ ಯಜ್ಞಪ್ರಾಕಾರ ನಿರ್ಮಾಣವಾಯಿತು. ಇಂದ್ರನು ಮಯನನ್ನು ಕರೆದುಕೊಂಡು ನಾರಾಯಣ ಪುರಕ್ಕೆ ಹೋಗಿ ಆಕಾಶರಾಜನ ನಾರಾಯಣಪುರದಲ್ಲಿ ವಿವಾಹಮಂಟಪ, ಬರುವ ಬಂಧು ಮಿತ್ರ ಪರಿವಾರದವರಿಗೆಲ್ಲಾ ಎಲ್ಲ ಸೌಕರ್ಯಗಳಿರುವ ನಿವಾಸಗಳನ್ನು

ನಿರ್ಮಿಸಿದನು. ಮತ್ತು ಪಾಕಶಾಲೆಗಳು, ಭೋಜನಶಾಲೆಗಳು, ಬಾವಿಕೊಳಗಳು, ಉದ್ಯಾನವನಗಳು ನಿರ್ಮಿಸಿ ಅವರೆಲ್ಲರಿಗೆ ಸೇವೆಗಾಗಿ ಪರಿಚರ್ಯಕರು, ಸೇವಕಸೇವಿಕೆಯರನ್ನು ನಿಯಮಿಸಿದನು.

ಆ ಪಟ್ಟಣದಲ್ಲಿನ ವೇದಿಕೆಗಳು, ಉದ್ಯಾನವನಗಳು ಇವೆಲ್ಲ ಕಣ್ಣಿಗೆ ಹಬ್ಬದಂತೆ ಕಾಣುತ್ತಿದ್ದವು. ವೈಕುಂಠವಾಸನ ಮದುವೆಯು ಭೂಲೋಕದಲ್ಲಿ ಇಂಥ ಅದ್ಭುತವಾಗಿ ಜರುಗುತ್ತಿರುವ ಪ್ರಸಂಗವು ಮೊದಲು ಯಾರೂ ಊಹಿಸಲಿಲ್ಲ ಎಂದು ಆಶ್ಚರ್ಯದಂತೆ ಕಂಡಿತು. ನಾರಾಯಣಪುರವು ದಿವ್ಯಪುರದಂತೆ ಶೋಭಿಸುತ್ತಿತ್ತು.

ಅಲ್ಲಿ ವೆಂಕಟಾಚಲದಲ್ಲಿ ದೇವತೆಗಳು ಮಹರ್ಷಿಗಳು ಎಲ್ಲರೂ ಕೂಡಿದ್ದರು. ಬೃಹಸ್ಪತಿಯು ವೆಂಕಟಾಚಲಪತಿಯ ಆಜ್ಞೆ ಹೊಂದಿ ನಾರಾಯಣಪುರಕ್ಕೆ ಹೋಗಿ ವಿವಾಹಸಂಬಂಧದ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದ್ದನು.

ವೆಂಕಟಾಚಲಪತಿಯ ವಿವಾಹದ ನಿಮಿತ್ತ ಬಂದ ದೇವತೆಗಳನ್ನು ಮಹರ್ಷಿಗಳನ್ನು ಸತ್ಕರಿಸಲು ಪಾರ್ವತಿಯು, ಭೋಜನದ ವ್ಯವಸ್ಥೆಗೆ ಬ್ರಹ್ಮನು, ಗಂಧತಾಂಬೂಲಗಳ ಕೊಡುವುದಕ್ಕೆ ಮನ್ಮಥನು ಮತ್ತು ಕುಮಾರಸ್ವಾಮಿ, ಅಡಿಗೆ ಸಂಬಂಧದ ಕೆಲಸಕ್ಕೆ ಅಗ್ನಿದೇವನು, ನೀರಿನ ಸರಬರಾಜಿಗೆ ವರುಣನು, ಸುಗಂಧಗಳಿಗೆ ವಾಯುವು, ಹೀಗೆ ಆಯಾ ಕಾರ್ಯಗಳಿಗೆ ತಕ್ಕವರನ್ನು ನೇಮಿಸಿದನು. ಸ್ನಾನಾದಿಗಳ, ಸಕಲ ವಸತಿಗಳ, ಊಟೋಪಚಾರಗಳ ಎಲ್ಲ ಕಾರ್ಯಗಳು ಯಾಂತ್ರಿಕವಾಗಿ ಜರುಗುತಿದ್ದವು.

ಮುಹೂರ್ತಕ್ಕೂ ಮುಂಚೆ ಜರುಗುವ ಪುಣ್ಯಾಹವು, ಇಷ್ಟಕುಲದೇವತೆಗಳ ದೇವತಾಪ್ರಾರ್ಥನ, ಮಂಗಳಸ್ನಾನ ಮುಂತಾದ ಕಾರ್ಯಕ್ರಮಗಳು ಹಾಗೂ ಬೇರೆ ನೆರವೇರಿಸುವ ಕೆಲಸಗಳು ಇವೆ ಎಂದು ವಶಿಷ್ಠನು ಶ್ರೀನಿವಾಸನಿಗೆ ತಿಳಿಸಿದನು. ಶ್ರೀನಿವಾಸನು ಲಕ್ಷ್ಮೀ ಇಲ್ಲದೆ ತಾನು ಆ ಕಾರ್ಯಗಳನ್ನು ಜರುಗಿಸಲು ಸಾಧ್ಯವಿಲ್ಲ ಎಂದನು. ಆಗ ಶ್ರೀನಿವಾಸನ ಅನುಮತಿಯಿಂದ ಬ್ರಹ್ಮನು ಸೂರ್ಯನನ್ನು ಲಕ್ಷ್ಮೀಯನ್ನು ಕರೆತರಲು ಕರವೀರಪುರಕ್ಕೆ ಕಳಿಸಿದನು. ಸೂರ್ಯನು ತನ್ನ ಸಪ್ತಾಶ್ವರಥವೇರಿ ಕರವೀರಪುರಕ್ಕೆ ಹೋಗಿ ಲಕ್ಷ್ಮೀದೇವಿಗೆ ಶ್ರೀನಿವಾಸನ ಕಲ್ಯಾಣ ವಿಷಯವನ್ನು ತಿಳಿಸಿದ ಮೇಲೆ ಅವಳು ಹಿಂದೆಯೇ ಸೂರ್ಯನ ರಥವೇರಿ ವೆಂಕಟಾಚಲಕ್ಕೆ ಬಂದಳು. ಬಂದ ಲಕ್ಷ್ಮೀಗೆ ಶ್ರೀನಿವಾಸನು ಗೌರವಯುತವಾಗಿ ಕುಶಲವನ್ನು ಕೇಳಿ, ತಾನು ರಾಮಾವತಾರದಲ್ಲಿ ವೇದವತಿಗೆ ಕೊಟ್ಟ ವಚನದ ಪ್ರಕಾರ, ಆ ವೇದವತಿಯು ಈಗ ಆಕಾಶರಾಜನ ಮಗಳಾಗಿ ಹುಟ್ಟಿಬಂದಿದ್ದಾಳೆಂದು, ಅವಳೇ ಪದ್ಮಾವತಿಯು ಎಂದು ತಿಳಿದು, ಲಕ್ಷ್ಮೀ ತನ್ನ ಸೀತಾವತಾರದಲ್ಲಿ ರಾವಣನಿಗೆ ಸಿಗದಂತೆ, ಅಗ್ನಿದೇವನ ಸಹಾಯದಿಂದ ವೇದವತಿಯನ್ನು ರಾವಣನ ಜೊತೆ ಕಳುಹಿಸಿದಾಗ ಅವನ ಕೈಯಲ್ಲಿ ಸಿಕ್ಕು ಕಷ್ಟಪಟ್ಟ ವಿಷಯವು ತಿಳಿಸಿದ ಮೇಲೆ ಪದ್ಮಾವತಿ ಶ್ರೀನಿವಾಸನ ವಿವಾಹಕ್ಕೆ ಸಮ್ಮತಿಸಿ 'ವೈಕುಂಠವಾಸಾ ತ್ರಿಲೋಕನಾಥಾ! ನಿನ್ನ ಮಾಯೆ ತಿಳಿಯಲು ಯಾರಿಗೆ ಶಕ್ಯ? ನಾನು ವೈಕುಂಠಪುರವನ್ನು ಬಿಟ್ಟು ಹೋದದ್ದು ಲೋಕಕಲ್ಯಾಣಕ್ಕಾಗಿ ಎಂದು ತಿಳಿಯುತ್ತೇನೆ. ಕ್ಷಮಿಸು ಎಂದು ನಿನ್ನಲ್ಲಿ ಪ್ರಾರ್ಥಿಸುತ್ತೇನೆ' ಎಂದಾಗ ಶ್ರೀನಿವಾಸನು ಅವಳನ್ನು ಸಮಾಧಾನ ಮಾಡಿ ನನ್ನ ಜಗನ್ನಾಟಕದಲ್ಲಿ ನಾವು ಇಬ್ಬರೂ ಪಾತ್ರಧಾರಿಗಳು ಅಲ್ಲವೇ! ಎಂದು ಸಂತೋಷದಿಂದ ಹೇಳಿದಾಗ ಲಕ್ಷ್ಮೀಯು ಆನಂದ ಹೊಂದಿದಳು.

ಆಗ ಬ್ರಹ್ಮನು ತಾಯಿ ಲಕ್ಷ್ಮೀಗೆ 'ಅಮ್ಮಾ! ನಾಂದಿ ಜರುಗಬೇಕಾಗಿದೆ. ತಂದೆಗೆ ಮಂಗಳಸ್ನಾನ ಮಾಡಿಸಬೇಕೆಂದು ವಶಿಷ್ಠರ ಆಜ್ಞೆ ಆಗಿದೆ.' ಆಗ ಶ್ರೀದೇವಿಯು ಮಂಗಳದ್ರವ್ಯಗಳನ್ನು ತಟ್ಟೆಯಲ್ಲಿ ತಂದು ಸರಸ್ವತಿ ಪಾರ್ವತಿ ಮತ್ತು ಇತರರಿಂದ ಕೂಡಿ ಅರುಂಧತಿದೇವಿಯನ್ನು ಮುಂದೆ ಮಾಡಿ ಶಾಸ್ತ್ರೋಕ್ತವಾಗಿ ಶ್ರೀನಿವಾಸನಿಗೆ ಮಂಗಳ ವಾದ್ಯಗಳಿಂದ ಮಂಗಳಸ್ನಾನ ಮಾಡಿಸಿದರು. ಸ್ನಾನದ ನಂತರದಲ್ಲಿ ಶ್ರೀನಿವಾಸನು ಪೀತಾಂಬರವನ್ನು ಧರಿಸಿ, ಸ್ವಾಮಿ ಪುಷ್ಕರಿಣಿ ತೀರದಲ್ಲಿ ಹಾಕಿದ ಪ್ರತ್ಯೇಕ ವೇದಿಕೆಯ ಮೇಲೆ ಕುಳಿತು ಊರ್ಧ್ವಪುಂಢ್ರಗಳನ್ನು ಧರಿಸಿ, ಕುಬೇರನಿಂದ ಪಡೆದ ದಿವ್ಯಾಭರಣಗಳಿಂದ ಅಲಂಕರಿಸಿಕೊಂಡು, ಸಂಧ್ಯಾವಂದನೆಗಳನ್ನು ಮುಗಿಸಿ, ಕಶ್ಯಪ ಅಗಸ್ತ್ಯ ವಸಿಷ್ಠಾದಿ ಮಹರ್ಷಿಗಳಿಗೆ ನಮಸ್ಕರಿಸಿದಾಗ ಅವರು ವೇದೋಕ್ತ ಮಂತ್ರಗಳ ಪಠಿಸಿ 'ಶೀಘ್ರಮೇವ ಕಲ್ಯಾಣ ಸಿದ್ಧಿರಸ್ತು' ಎಂದು ಅಲ್ಲಿಯೆ ಸೇರಿರುವ ದೇವತೆಗಳು, ಮಹರ್ಷಿಗಳು 'ತಥಾಸ್ತು' ಎಂದು ಸಂತೋಷಗೊಂಡರು. ಆನಂತರ ನಡೆಯಬೇಕಾದ ಎಲ್ಲ ಕಾರ್ಯಗಳನ್ನು ಹಿರಿಯರ ಅನುಮತಿಯಿಂದ ವಸಿಷ್ಠಮಹರ್ಷಿ ಶ್ರೀನಿವಾಸನಿಗೆ ಪ್ರತ್ಯೇಕ ವೇದಿಕೆಯಲ್ಲಿ ಪೀಠದ ಮೇಲೆ ಕೂಡಲು ಹೇಳಿ, ಮೌಕ್ತಿಕ ವೇದಿಕೆ ರಚಿಸಿ ವಿಧಿವಿಹಿತ ವಿವಾಹ ನಾಂದಿ ಜರುಗಲು ಸಂಕಲ್ಪ ಮುಂತಾದ ಎಲ್ಲ ಕಾರ್ಯಕಲಾಪಗಳನ್ನು ಜರುಗಿಸಿ, ಪುಣ್ಯಾಹ ಕರ್ಮ ಮುಗಿಸಿದರು. ಹೀಗೆ ವಸಿಷ್ಠಮಹರ್ಷಿಯು ಶಾಸ್ತ್ರವಿಹಿತ ಕಾರ್ಯಗಳನ್ನು ಶ್ರೀನಿವಾಸನಿಂದ ಮಾಡಿಸಿದನು.

ಶಮೀಪೂಜೆಗಾಗಿ ಸಕಲ ಪೂಜಾದ್ರವ್ಯಗಳನ್ನು ತಂದು ದೇವತೆಗಳು, ಮಹರ್ಷಿಗಳು ಶ್ರೀನಿವಾಸನ ಹಿಂದೆ ಹೋಗಿ

ಮಂಗಳವಾದ್ಯಗಳ ಮೊಳಗುವದರ ಜೊತೆಗೆ ಕುಮಾರಾಧಾರಾ ತೀರ್ಥಕ್ಕೆ ಹೋಗಿ, ಅಲ್ಲಿ ಸಮೀಪದಲ್ಲಿ ಇದ್ದ ಶಮೀವೃಕ್ಷಕ್ಕೆ ಶ್ರೀನಿವಾಸನು ಪೂಜೆ ಮಾಡಿ, ಧೂಪದೀಪನೇವೇದ್ಯಗಳನ್ನು ಅರ್ಪಿಸಿ, ಮಂಗಳಾರತಿ ಬೆಳಗಿ, ಪೂಜಾಕ್ರಮವನ್ನು ಮುಗಿಸಿ, ಆ ವೃಕ್ಷದ ಒಂದು ಟೊಂಗೆ ತೆಗೆದುಕೊಂಡು ಮತ್ತೇ ಸ್ವಾಮಿಪುಷ್ಕರಿಣಿ ಕಡೆಗೆ ಬಂದು ಆ ಶಮೀಶಾಖೆಯನ್ನು ವರಾಹಸ್ವಾಮಿ ಆಶ್ರಮ ಸಮೀಪದಲ್ಲಿ ಪ್ರತಿಷ್ಠಾಪಿಸಿದರು. ಈ ರೀತಿ ವಿವಾಹ ನಾಂದಿ ಕಾರ್ಯವನ್ನು ವಸಿಷ್ಠನು ಶಾಸ್ತ್ರೋಕ್ತವಾಗಿ ನೆರವೇರಿಸಿದನು.

## 22. ಶ್ರೀನಿವಾಸನು ವಿವಾಹಾರ್ಥ ಕುಬೇರನ ಹತ್ತಿರ ಧನವನ್ನು ಸಾಲವಾಗಿ ಪಡೆಯುವುದು

ಆನಂತರ ಶ್ರೀನಿವಾಸನು ನಿವಾಸಕ್ಕೆ ಬಂದವರಿಗೆಲ್ಲ ನಾರಾಯಣಪುರಕ್ಕೆ ಪ್ರಯಾಣ ಮಾಡಲು ಸಿದ್ಧವಾಗಿರುವಂತೆ ಕೇಳಿಕೊಳ್ಳಬೇಕೆಂದು ಬ್ರಹ್ಮನಿಗೆ ಹೇಳಿದನು. ಆಗ ಬ್ರಹ್ಮನು ಪುಣ್ಯಾಹಕರ್ಮ ಮುಗಿಸಿದ ನಂತರ ಭೋಜನ ಮಾಡದೆ ಉಪವಾಸದಿಂದ ಮದುವೆ ಮನೆಗೆ ಹೋಗಬಾರದೆಂದು ಹಿರಿಯರ ಆಶಯ, ಅದಕ್ಕಾಗಿ ಎಲ್ಲರೂ ಭೋಜನ ಮಾಡಬೇಕು ಎನ್ನಲಾಯಿತು. ಆಗ ವೆಂಕಟಾಚಲಪತಿ ಬಂದವರಿಗೆ ಭೋಜನಕ್ಕೆ ಬೇಕಾಗುವ ವಸ್ತು ಸಾಮಗ್ರಿಗಳನ್ನು ಕ್ರಯಿಸಲು ತನ್ನ ಹತ್ತಿರ ಧನವಿಲ್ಲಾ ಎಂದನು. ಅದನ್ನು ಕೇಳಿ ಶಂಕರನು 'ಶ್ರೀನಿವಾಸಾ! ಹಾಗೆನ್ನಬಾರದು, ಒಂದು ಶುಭಕಾರ್ಯವನ್ನು ಪ್ರಾರಂಭಿಸಿ ಮಧ್ಯ ನಿಲ್ಲಿಸಬಾರದು. ಸಾಲ ತಂದಾದರೂ ಮದುವೆ ಮಾಡಬೇಕು ಎಂದು ನನ್ನ ಮಾತು'. ಎಂದದ್ದು ಕೇಳಿ ವೆಂಕಟಾಚಲಪತಿಯು ಕುಬೇರನನ್ನು ಕರೆಯಿಸಿ ತಾನು, ಬ್ರಹ್ಮ, ಶಂಕರರ ಸಂಗಡ

ಪುಷ್ಕರಿಣಿತೀರದಲ್ಲಿನ ಅಶ್ವತ್ಥವೃಕ್ಷದ ಹತ್ತಿರ ಹೋಗಿ, ಕುಬೇರನಿಗೆ 'ಕುಬೇರಾ! ಕಲಿಯುಗದಲ್ಲಿ ನನ್ನ ಕಲ್ಯಾಣವು ಜರುಗುತ್ತಾ ಇದೆ, ನಾನು ಯುಗ, ಕಾಲ, ದೇಶದ ಪರಿಸ್ಥಿತಿಗಳ ಅನುಸರಿಸಿ ಅವತಾರಗಳೆತ್ತುವೆನು, ಹಾಗಾಗಿ ನನ್ನ ವಿವಾಹಕ್ಕೆ ಯುಗಕಾಲಾನುಸಾರವಾಗಿ ಒಂದಿಷ್ಟು ಧನವನ್ನು ಸಾಲರೂಪದಲ್ಲಿ ಕೊಡು, ನಾನು ಈ ಯುಗಾನುಸಾರ ಬಡ್ಡಿಯಿಂದ ಧನವನ್ನು ತೀರಿಸುವೆನು.' ಅದನ್ನು ಕೇಳಿ ಕುಬೇರನು 'ಯುಗಧರ್ಮವನ್ನು ಅನುಸರಿಸಿ ಸಾಲಪತ್ರ ಬರೆದು ಕೊಟ್ಟರೆ ಧನವನ್ನು ಕೊಡುವೆನು.' ಎಂದನು. ವೆಂಕಟಾಚಲಪತಿಯು ಅದನ್ನು ಅಂಗೀಕರಿಸಿ ಹೀಗೆ ಪತ್ರವನ್ನು ಬರೆದುಕೊಟ್ಟನು.

**ಈ ವಿಳಂಬಿನಾಮ ಸಂವತ್ಸರ ವೈಶಾಖ ಶುಕ್ಲ ದಶಮಿ ದಿನ ನಾರಾಯಣಪುರದಲ್ಲಿ ಆಕಾಶರಾಜನ ಪುತ್ರಿ ಸೌ॥ ಪದ್ಮಾವತಿಯ ಜೊತೆ ನನ್ನ ವಿವಾಹ ಹಿರಿಯರು ನಿಶ್ಚಯಿಸಿದ್ದ ಕಾರಣ ಆ ವಿವಾಹಾರ್ಥ ಲಂಕಾಪುರಾಧಿಪತಿ ಕುಬೇರನಿಂದ ನಾನು ಋಣರೂಪದಲ್ಲಿ ಹದಿನಾಲ್ಕು ಸಂಖ್ಯೆಯ ಶ್ರೀರಾಮಮುದ್ರೆ ನಾಣ್ಯಗಳನ್ನು ತೆಗೆದುಕೊಂಡೆನು. ಯುಗ ದೇಶ ಕಾಲಗಳ ಅನುಸಾರವಾಗಿ ನನ್ನ ಭಕ್ತರು ನನಗೆ ಸಮರ್ಪಿಸುವ ಮುಡುಪುಗಳಿಂದ ನೂರು ಶ್ರೀರಾಮಮುದ್ರಿಕೆಗಳಿಗೆ ಒಂದು ಶ್ರೀರಾಮಮುದ್ರಿಕೆಯನ್ನು ಒಂದು ತಿಂಗಳಿಗೆ ಬಡ್ಡಿ ರೂಪದಲ್ಲಿ ಕೊಡುವುದು ಅಂಗೀಕರಿಸಿ ಬರೆದು ಕೊಟ್ಟ ಸಾಲಪತ್ರವಿದು.**

**ಇತಿ**

**ವೆಂಕಟಾಚಲಪತಿ, ತಿರುಮಲ.**

**ಸಾಕ್ಷಿಗಳು**

**ಬ್ರಹ್ಮ, ಮಹೇಶ್ವರ, ಅಶ್ವತ್ಥ**

ಋಣಪತ್ರವನ್ನು ಪಡೆದುಕೊಂಡು ಕುಬೇರನು ಧನವನ್ನು ಕೊಟ್ಟನು. ಹಿಂದೆಯೇ ವೆಂಕಟಾಚಲಪತಿಯು ಆ ಧನದಿಂದ ಸಕಲಸಂಭಾರ ಸಾಮಗ್ರಿಗಳನ್ನು, ಬೆಲ್ಲ, ಸಕ್ಕರೆ, ತುಪ್ಪ, ಹಾಲು, ಮೊಸರು, ಕಾಯಿಪಲ್ಲೆಗಳು, ಪತ್ರಾವಳಿಗಳು ಹೀಗೆ ಬೇಕಾಗುವ ಎಲ್ಲ ಪದಾರ್ಥಗಳನ್ನು ಅಲ್ಲದೇ ವಿವಾಹಕ್ಕೆ ಅವಶ್ಯವಾದ ಬಟ್ಟೆಗಳನ್ನು, ಮಾಂಗಲ್ಯಾದಿ ಆಭರಣಗಳನ್ನು, ಅಡಿಕೆ, ಏಲಕ್ಕಿ, ಲವಂಗ, ಕರ್ಪೂರ ಮುಂತಾದ ಸುಗಂಧ ದ್ರವ್ಯಗಳನ್ನು, ಹಣ್ಣುಗಳನ್ನು, ಭೋಜನಾನಂತರದ ದಕ್ಷಿಣ, ತಾಂಬೂಲಾದಿಗಳನ್ನು ತಂದು ಇರಿಸುವ ಕಾರ್ಯವನ್ನು ಕುಬೇರನಿಗೆ ನಿಯಮಿಸಿದನು. ಮುಂದೆ, ವೆಂಕಟಾಚಲಪತಿಯ ಆಜ್ಞೆ ಪ್ರಕಾರ ಅಗ್ನಿದೇವನು ಭಕ್ಷ್ಯಾನ್ನಶಾಕಾದಿಗಳು, ಸೂಪಲೇಹ್ಯಗಳು, ಚಿತ್ರಾನ್ನವನ್ನು, ವಿವಿಧ ವ್ಯಂಜನಗಳನ್ನು ಸಿದ್ಧಮಾಡಿ ಭೋಜನಕ್ಕೆ ಎಲ್ಲರನು ಆಹ್ವಾನಿಸಲು ವೆಂಕಟಾಚಲಪತಿಗೆ ಹೇಳಿದನು. ಹಿಂದೆಯೇ ಪಾಂಡವತೀರ್ಥದಿಂದ ಶ್ರೀಶೈಲವರೆಗೆ ದೇವತೆಗಳು, ಮಹರ್ಷಿಗಳು ಆದಿಯಾಗಿ ವಿವಾಹಕ್ಕಾಗಿ ಬಂದವರೆಲ್ಲರು ಸಾಲಾಗಿ ಕುಳಿತುಕೊಂಡರು. ಆ ಪಂಚಭಕ್ಷ್ಯಪರಮಾನ್ನಗಳು ಶ್ರೀನಿವಾಸನ ಅನುಮತಿ ಪ್ರಕಾರ ನೃಸಿಂಹಸ್ವಾಮಿಗೆ ಮೊದಲು ನಿವೇದನ ಮಾಡಿದರು. ಮುಂದೆ 'ವಿಸ್ತೀರ್ಣ ವ್ರತಭೋಜನ' ದಂತೆ ದೊಡ್ಡ ಬಾಳೆಎಲೆಗಳನ್ನು ಹಾಕಿ ಸಾಲಾಗಿ ಕೂಡಿಸಿ ಎಲ್ಲಾ ಪದಾರ್ಥಗಳನ್ನು ಬಡಿಸಿದರು. ಎಲ್ಲರಿಗೂ ಔಪಾಸನ ಮಾಡಿದರು. ಆಗ ವೆಂಕಟಾಚಲಪತಿಯು ಎಲ್ಲರು ಊಟ ಮಾಡುತ್ತಿರುವಾಗ ಅವರಿಗೆ ಭೋಜನವು ತಡವಾದದ್ದಕ್ಕಾಗಿ ಕ್ಷಮಾಪಣೆ ಕೇಳಿ, ತನಗೆ ತಿಳಿದ ಕೆಲವೇ ಪದಾರ್ಥಗಳನ್ನು ಬಡಿಸಿದ್ದೇವೆ, ಭೋಜನ ತೃಪ್ತಿಯಾಗಿ ಮಾಡಬೇಕೆಂದು ಎಲ್ಲರನ್ನು ಪ್ರಾರ್ಥಿಸಿ, ತನ್ನನ್ನು ಕೃತಾರ್ಥನಾಗಿ ಮಾಡಬೇಕೆಂದು ವಿನಯದಿಂದ

ಬೇಡಿಕೊಂಡರೆ, ಎಲ್ಲರು 'ಶ್ರೀ ವೆಂಕಟೇಶ್ವರಾ! ನೀನು ಬಡಿಸಿದ ಭೋಜನವು ಅಮೃತ ಸಮಾನವಾಗಿದೆ, ಈ ಭುಕ್ತಿ ನಮಗೆ ಮುಕ್ತಿ ಸಾಧನವು. ನಾವು ಧನ್ಯರಾದೆವು, ಕೃತಾರ್ಥರಾದೆವು' ಎಂದು ಸಂತೃಪ್ತಿಯಿಂದ ಊಟಮಾಡಿ ಸಂತುಷ್ಟರಾದರು. ಭೋಜನಾನಂತರ ಎಲ್ಲರಿಗೆ ಕುಬೇರನು ದಕ್ಷಿಣ, ಚಂದನ, ತಾಂಬೂಲಗಳನ್ನು ಕೊಟ್ಟನು. ಹೀಗೆ ಎಲ್ಲರೂ ಊಟ ಮಾಡಿದ ನಂತರ ಶ್ರೀ ವೆಂಕಟಾಚಲಪತಿ, ಲಕ್ಷ್ಮೀ, ಬ್ರಹ್ಮ, ಮನ್ಮಥ, ಬಕುಳಮ್ಮ ಭೋಜನ ಮಾಡಿದರು. ಅಷ್ಟಕ್ಕೆ ರಾತ್ರಿಯಾಯಿತು. ಎಲ್ಲರು ರಾತ್ರಿ ಕಳೆದರು.

## 23. ವೆಂಕಟಾಚಲಪತಿ ವಿವಾಹಕ್ಕಾಗಿ ನಾರಾಯಣಪುರಕ್ಕೆ ವಿವಾಹಕ್ಕಾಗಿ ಸಪರಿವಾರ ಹೋಗುವುದು

ಆವತ್ತಿನ ರಾತ್ರಿ ಪದ್ಮಾವತಿ ಶ್ರೀ ವೆಂಕಟೇಶ್ವರರ ವಿವಾಹ ಸುಮೂರ್ತ. ಮುಂಜಾನೆಯೇ ಪಟ್ಟಣವು ಸರ್ವಾಲಂಕಾರದಿಂದ ಶೋಭಾಯಮಾನವಾಗಿ ಕಾಣುತ್ತಿತ್ತು. ಪೌರರು ತಮ್ಮ ಮನೆಗಳು, ಪರಿಸರಗಳನ್ನು ಶುಭ್ರವಾಗಿ ಉಡುಗಿ ಹಿಟ್ಟುರಂಗೋಲಿಗಳಿಂದ, ಹಸಿರುತೋರಣಗಳಿಂದ, ಅರಿಷಿಣಕುಂಕುಮಗಳಿಂದ, ಹೂವಿನಹಂದರಗಳಿಂದ ಅಲಂಕರಿಸಿದ್ದರು. ರಂಗುರಂಗಿನ ಶೋಭೆಯ ಜೊತೆಗೆ ರಂಭಾಸ್ತಂಭಗಳಿಗೆ ಹೂವಿನ ಹಾರಗಳನ್ನು ಕಟ್ಟಿದರು.

ತೋಂಡಮಾನನು ಮಯನಿಂದ ಸಾವಿರ ಸ್ತಂಭದ ವಿವಾಹಮಂಟಪವನ್ನು. ಅದರ ಮಧ್ಯದಲ್ಲಿ ಚತುಃಸ್ತಂಭ ವಿವಾಹ ವೇದಿಕೆಯನ್ನು ನವರತ್ನಗಳಿಂದ ನಿರ್ಮಿಸಿ, ಮುತ್ತಿನ ಸರಗಳು ಅಲ್ಲಾಡುವ ರೀತಿಯಲ್ಲಿ ಕಟ್ಟಿ, ರತ್ನಕಾಂಚನಗಳಿಂದ ಆ ಸಭಾಭವನವು ಪೂರ್ತಿ ಪ್ರಕಾಶಮಾನಗಿರುವಂತೆ ಏರ್ಪಾಟು

ಮಾಡಿದ್ದನು. ಆ ಮಂಟಪದಲ್ಲಿ ದೇವತೆಗಳು, ಮಹರ್ಷಿಗಳು, ಪುರೋಹಿತಾದಿ ಪ್ರಜೆಗಳಿಗೆ ತಕ್ಕಂತೆ ಆಸನಗಳು, ಪುಣ್ಯಸುಮಂಗಲಾಮಣಿಗಳಿಗೆ ಉಚಿತವಾದ ಪ್ರದೇಶಗಳನ್ನು ನಿರ್ಣಯಿಸಿದರು. ದೀಪಗಳಿಲ್ಲದಿದ್ದರೂ ರತ್ನಕಾಂತಿಯಿಂದ ಆ ಸಭಾಭವನವು ರಾತ್ರಿ ಸಮಯದಲ್ಲೂ ಕೂಡ ದಿವ್ಯಕಾಂತಿಯು ಹಗಲಿನಂತೆ ಕಾಣುತ್ತಿತ್ತು. ಮುಂಚಿನ ರಾತ್ರಿ ಮದುವೆಗೆ ಬಂದ ಎಲ್ಲರೂ ತಿರುಮಲದಲ್ಲಿ ಮಯನು ನಿರ್ಮಿಸಿರುವ ದಿವ್ಯಭವನದಲ್ಲಿ ಸುಖವಾಗಿ ನಿದ್ದೆ ಮಾಡಿದರು. ಮುಂಜಾನೆ ಎದ್ದು ಕಾಲಕೃತ್ಯಗಳನ್ನು ಮುಗಿಸಿ ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನಮಾಡಿ ವೈದಿಕ ಕಾರ್ಯಗಳನ್ನು ಮುಗಿಸಿಕೊಂಡು, ಉಪಹಾರ ತೆಗೆದುಕೊಂಡು ನಾರಾಯಣಪುರಕ್ಕೆ ವೆಂಕಟಾಚಲಪತಿ ಹಿಂದೆ ಹೊರಟರು.

ಅಲ್ಲಿ ನಾರಾಯಣಪುರದಲ್ಲಿ ಶುಕಮಹರ್ಷಿಯು ಕಲ್ಯಾಣೋಚಿತ ಕಾರ್ಯಗಳ ತಯಾರಿಗಾಗಿ ಬೃಹಸ್ಪತಿ ಹೇಳಿದಂತೆ ವಸುನಾಯಕ ಮತ್ತು ತೋಂಡಮಾನರಿಗೆ ಹೇಳಿ, ತಾನು ಆಕಾಶರಾಜನ ಆಜ್ಞೆ ಪಡೆದು ಮೊದಲು ಶ್ರೀವೆಂಕಟಾಚಲಪತಿಗೆ ಎದುರುಗೊಳ್ಳಲು ಹೊರಟು ಪದ್ಮ ಸರೋವರದ ಹತ್ತಿರ ನಿರೀಕ್ಷಿಸುತ್ತಿದ್ದನು. ಮದುವೆಯ ಬೀಗರು ತಮ್ಮ ತಮ್ಮ ವಾಹನಗಳ, ರಥ, ಗಜ, ಹಯ, ಪಲ್ಲಕಿಗಳಲ್ಲಿ, ಕೆಲವರು ನಡೆದುಕೊಂಡು ಬರುತ್ತಿದ್ದರು. ಮೊದಲು ಗರುಡನ ಮೇಲೆ ವೆಂಕಟಾಚಲಪತಿ, ಹಿಂದೆ ಬಕುಳಮ್ಮ, ಲಕ್ಷ್ಮೀ, ಮನ್ಮಥನು, ಬ್ರಹ್ಮ ಮುಂತಾದವರೆಲ್ಲರೂ ಅವರನ್ನು ಅನುಸರಿಸಿ ಉಳಿದ ದೇವತೆಗಳು, ಮಹರ್ಷಿಗಳು, ಪರಿವಾರದವರು ಬರುತ್ತಿದ್ದರು. ಮುಂದೆ ಭೇರಿ ಮೃದಂಗ ದುಂದುಭಿವಾದ್ಯಗಳು, ನಾರದ ತುಂಬುರಾದಿ ಗಾಯಕರು, ರಂಭಾದಿ ನರ್ತಕಿಯರು, ಕಿನ್ನರ ಕಿಂಪುರುಷ ಗಂಧರ್ವಾದಿಗಳು ಅತ್ಯುತ್ಸಾಹದಿಂದ ಬರುತ್ತಿದ್ದರು.

ಅಲ್ಲಿ ಬರುವ ಗರುಡವಾಹನನನ್ನು ನೋಡಿ ಶುಕಮಹರ್ಷಿ ಪರಮಾನಂದ ಹೊಂದಿ ಸಾಷ್ಟಾಂಗ ನಮಸ್ಕಾರ ಮಾಡಿದನು. ವೆಂಕಟಾಚಲಪತಿ ಶುಕಮಹರ್ಷಿಯನ್ನು ನೋಡಿದ ಕೂಡಲೆ ಗರುಡನಿಂದ ಇಳಿದು, ಮುನಿಯನ್ನು ಸಮೀಪಿಸಿ ಸಾಷ್ಟಾಂಗ ನಮಸ್ಕಾರ ಮಾಡುತ್ತಿರುವ ಮುನಿಯನ್ನು ಅತ್ಯಾದರದಿಂದ ತನ್ನ ಕೈಗಳಿಂದ ಎತ್ತಿ ಅಪ್ಪಿಕೊಂಡನು. ಶುಕಮಹರ್ಷಿ ವೆಂಕಟಾಚಲಪತಿಯನ್ನು ಬಹಳಷ್ಟು ವಿಧದಲ್ಲಿ ಸ್ತುತಿಸಿ ತನ್ನ ಆತಿಥ್ಯವನ್ನು ಸ್ವೀಕರಿಸಲು ಅವರೆಲ್ಲರನ್ನು ತನ್ನ ಆಶ್ರಮಕ್ಕೆ ಅಹ್ವಾನಿಸಿದನು. ವೆಂಕಟಾಚಲಪತಿಯು ಪ್ರಯಾಣದ ಆಲಸ್ಯದ ಬಗ್ಗೆ ಹೇಳುತ್ತ ಇದ್ದಾಗ ಬಕುಳಮ್ಮ 'ಮಗಾ! ವಿವಾಹಸಂಧಾತರ ಆಹ್ವಾನವನ್ನು ಅಂಗೀಕರಿಸುವುದು ನಮ್ಮ ಧರ್ಮ' ಎನ್ನುತ್ತ ವೆಂಕಟಾಚಲಪತಿ ಪರಿವಾರ ಮತ್ತು ಇತರರು ಶುಕಾಶ್ರಮಕ್ಕೆ ಹೋದರು. ಶುಕನು ಅತಿಸಂತೋಷಗೊಂಡು ತನ್ನಲ್ಲಿ ಇರುವ ಕಂದಮೂಲಗಳನ್ನು ಶ್ರೀನಿವಾಸನಿಗೆ ಆತಿಥ್ಯವಾಗಿ ಅರ್ಪಿಸಿದನು. ಶ್ರೀ ವೆಂಕಟಾಚಲಪತಿ ಮಹಾಮಹಿಮನ ಜೊತೆಗೆ ಬಂದ ದೇವತಾದಿ ಸಕಲ ವರ್ಗಗಳು ಸಂತೃಪ್ತಿಯಿಂದ ಭೋಜನ ಮಾಡಿ ತೇಗಿದರು. ಅವರೆಲ್ಲರೂ ಮಹರ್ಷಿಗಳ ಆತಿಥ್ಯವನ್ನು ಪಡೆದಂತೆ ಭಾವಿಸಿ ಶುಕನನ್ನು ಸ್ತುತಿಸಿದರು. ಅಲ್ಲಿಂದ ಶ್ರೀ ವೆಂಕಟಾಚಲಪತಿ ಶುಕಮಹರ್ಷಿ ಜೊತೆಗೆ ನಾರಾಯಣಪುರಕ್ಕೆ ಹೋದನು, ಆತನ ಹಿಂದೆ ಇತರರೆಲ್ಲರು ಪ್ರಯಾಣಿಸಿ ನಾರಾಯಣಪುರದ ಕಡೆಗೆ ಹೋದರು.

## 24. ಸಪರಿವಾರ ಆಕಾಶರಾಜನು ಶ್ರೀವೆಂಕಟಾಚಲಪತಿಯನ್ನು ಎದುರುಗೊಳ್ಳುವುದು

ನಾರಾಯಣಪುರದ ರಾಜಾಂತಃಪುರದಲ್ಲಿ ಮಂಗಳವಾದ್ಯಗಳು ಮಂದಮಂದವಾಗಿ ಮೊಳಗುತ್ತಿದ್ದವು. ಪುಣ್ಯಾಂಗನೆಯರು

ಲಕ್ಷ್ಮೀಕಲ್ಯಾಣ, ಗೌರಿಕಲ್ಯಾಣ ಶುಭಕೀರ್ತನಗಳನ್ನು ಹಾಡುತ್ತ ಪದ್ಮಾವತಿಗೆ ಮಂಗಳಸ್ನಾನ ಮಾಡಿಸಿ, ರೇಷ್ಮೆಸೀರೆ ಉಡಿಸಿ ಮತ್ತು ರವಿಕೆ ತೊಡಿಸಿ, ಕೂದಲು ಚಿಕ್ಕು ಬಿಡಿಸಿ, ಜಡೆ ಹೆಣೆದು ಹೂಗಳಿಂದ ಶೃಂಗರಿಸಿದರು. ತಾಯಿ ಧರಣೀದೇವಿ ತಂದುಕೊಟ್ಟ ಕನಕರತ್ನಾಭರಣಗಳನ್ನು ಹಾಕಿ ಅಲಂಕರಿಸಿದರು. ಹಿರಿಯ ಮುತ್ತೈದೆಯರು ಕುಂಕುಮ ಬೊಟ್ಟು ಇಟ್ಟರು. ಎಲ್ಲರು ಸೇರಿ ಪದ್ಮಾವತಿದೇವಿಯಿಂದ ಕುಲದೇವತೆಗಳಿಗೆ ನಮಸ್ಕಾರ ಮಾಡಲು ಹೇಳಿ, ದೇವತೆಗಳಿಗೆ ಉಪಾಹಾರ ರೂಪದಲ್ಲಿ ಗಂಧ ತಾಂಬೂಲಗಳನ್ನು ಅರ್ಪಿಸಿ, ಕರ್ಪೂರದಾರತಿ ಎತ್ತಿದರು. ಆನಂತರ ಪದ್ಮಾವತಿಯಿಂದ ಮದುವೆಗೆ ಬಂದ ಹಿರಿಯ ಮುತ್ತೈದೆಯರಿಗೆ, ಬಂಧುಗಳಿಗೆ, ಪುರೋಹಿತರ ಮಡದಿಯರಿಗೆ, ಪುರದ ಸುಮಂಗಲೆಯರಿಗೆ, ಅರಿಷಿಣಕುಂಕುಮ ಮತ್ತು ಹೊಸ ವಸ್ತ್ರಗಳೊಂದಿಗೆ ಪೂಜೆ ಮಾಡಿಸಿದರು. ಅವರೆಲ್ಲ ಪದ್ಮಾವತಿಗೆ ಶುಭಾಶೀರ್ವಾದ ಮಾಡಿದರು.

ಆಮೇಲೆ ಶ್ರೀಮನ್ನಾರಾಯಣನನ್ನು ಷೋಡಶೋಪಚಾರದಿಂದ ಪೂಜಿಸಿ ಅಮೃತ ನೈವೇದ್ಯವನ್ನು ಅರ್ಪಿಸಿ ಮಂಗಳಾರತಿ ಬೆಳಗಿ ಮದುಮಗಳಿಂದ ನಮಸ್ಕಾರ ಮಾಡಿಸಿದರು. ತಾಯಿತಂದೆಯರು, ಪುರೋಹಿತರು, ಬಂಧುಜನರು ಮತ್ತು ಬೃಹಸ್ಪತಿ ಎಲ್ಲರೂ ಪದ್ಮಾವತಿಯನ್ನು ದೀರ್ಘಸುಮಂಗಲಿಯಾಗಿ ಪ್ರಜೆಗಳನ್ನು ತನ್ನ ಹಡೆದ ಮಕ್ಕಳಂತೆ ಪೋಷಿಸಬೇಕೆಂದು ಹರಸಿದರು. ಮುಂದೆ ಇಷ್ಟಮೃಷ್ಟಾನ್ನ ಭೋಜನಗಳನ್ನು ಎಲ್ಲರು ಸಂತೃಪ್ತಿಯಿಂದ ಸವಿದರು. ವಸುನಾಯಕನು ಎಲ್ಲರಿಗೆ ಚಂದನ, ತಾಂಬೂಲ, ದಕ್ಷಿಣಗಳನ್ನು ಕೊಟ್ಟನು. ನಂತರ ಆಕಾಶರಾಜನ ಹೆಂಡತಿ, ಮಕ್ಕಳು, ತಮ್ಮನು, ಕುಟುಂಬದ ಎಲ್ಲರೂ ಭೋಜನ ಮಾಡಿದರು.

ಆ ಸಾಯಂಕಾಲದಲ್ಲಿ ಶ್ರೀ ವೆಂಕಟಾಚಲಪತಿ ಸಬಂಧುಮಿತ್ರ ಪರಿವಾರಸಮೇತ ವಿವಾಹಾರ್ಥವಾಗಿ ನಾರಾಯಣಪುರಕ್ಕೆ ಬರುವುದು ಮುಂಚೆಯೇ ಸುದ್ದಿಗಾರರಿಂದ ತಿಳಿದು ಆಕಾಶರಾಜನು, ಪದ್ಮಾವತಿಗೆ ಶೃಂಗಾರಕ್ಕಾಗಿ ಧರಣಿದೇವಿಗೆ ಹೇಳಿ ಪದ್ಮಾವತಿಗೆ ಎಲ್ಲ ಶೃಂಗಾರ ಮಾಡಿದ ನಂತರ ಕುಟುಂಬ ಪುರೋಹಿತರ ಪರಿವಾರಸಹಿತ ಮಂಗಳ ವಾದ್ಯಗಳೊಂದಿಗೆ ವೆಂಕಟಾಚಲಪತಿಗೆ ನೂತನವಸ್ತ್ರಾಭರಣಗಳು, ಪುಷ್ಪಮಾಲೆಗಳು, ಚಂದನಾದಿ ಪರಿಮಳದ್ರವ್ಯಗಳು, ಎಲೆಅಡಿಕೆ, ಹಣ್ಣುಗಳು, ಪಾನಕಗಳು, ಮುತ್ತೈದೆಯರು ಅಂತಃಪುರದ ಕಾಂತೆಯರು ದಾಸಿಯರು ನಡುವೆ ಐರಾವತವನ್ನು ಮೀರಿಸುವ ಆನೆಯನ್ನು ಸಿಂಗರಿಸಿ, ಬರುತ್ತಲಿರುವ ವೆಂಕಟಾಚಲಪತಿಯನ್ನು ಎದುರುಗೊಂಡನು. ವೆಂಕಟಾಚಲಪತಿ ಮಾವನಾಗುವ ಆಕಾಶರಾಜನನ್ನು ನೋಡಿದ ಕೂಡಲೆ ಗರುಡನಿಂದ ಇಳಿದು ಬಂದನು. ಆಕಾಶರಾಜನು ರಥವನ್ನು ಇಳಿದು ತನ್ನ ಮಗಳನ್ನು ಮಗನನ್ನು ಹೆಂಡತಿಯನ್ನು ಹಿಂದಿಟ್ಟುಕೊಂಡು ಶ್ರೀ ವೆಂಕಟಾಚಲಪತಿಗೆ ಶುಭಾಹ್ವಾನವನ್ನು ಹೇಳಿ 'ಶ್ರೀ ವೆಂಕಟೇಶ್ವರಾ! ನಾನು ಕೃತಾರ್ಥನಾದೆನು, ಧನ್ಯನಾದೆನು, ನನ್ನ ಜನ್ಮ ಸಫಲವಾಯಿತು.' ಎಂದು ಶ್ರೀನಿವಾಸನನ್ನು ನೂತನ ವಸ್ತ್ರಾಭರಣಗಳಿಂದ ಗಂಧಮಾಲ್ಯಾದಿಗಳಿಂದ ಪೂಜಿಸಿ ಪಾನಕ ಕೊಟ್ಟನು. ಪದ್ಮಾವತಿ ಶ್ರೀನಿವಾಸರು ಒಬ್ಬರನೊಬ್ಬರು ಸ್ವಲ್ಪ ಹೊತ್ತು ನೋಡಿಕೊಂಡರು. ಶ್ರೀನಿವಾಸನ ಹಿಂದೆ ಬಂದವರೆಲ್ಲರನ್ನು ಉಚಿತವಾಗಿ ವ್ಯವಹರಿಸಿ ಅವರನ್ನು ಅಹ್ವಾನಿಸಿ ವೆಂಕಟಾಚಲಪತಿಯನ್ನು ಗಜಾರೂಢನಾಗಿಸಿ, ಪದ್ಮಾವತಿಯನ್ನು ಪಲ್ಲಕಿಯಲ್ಲಿ ಕೂಡಿಸಿ ಮಂಗಳವಾದ್ಯಗಳಿಂದ ನರ್ತಕಿಯರ ನರ್ತನ ಗಾಯನಗಳಿಂದ ಮಹೋತ್ಸವದಂತೆ ನಾರಾಯಣಪುರ ವೀಧಿಗಳಲ್ಲಿ

ಮೆರವಣಿಗೆ ನಡೆಸಿ, ಮದುವೆಯ ಜನರಿಗೆ ಪ್ರತ್ಯೇಕವಾಗಿ ನಿರ್ಮಿಸಿದ ದಿವ್ಯ ಮಂದಿರಕ್ಕೆ ಕರೆದುಕೊಂಡು ಹೋದ ಮೇಲೆ ಪುರಜನರು, ಸುಮಂಗಲೆಯರು ಶ್ರೀನಿವಾಸನ ಮೇಲೆ ಸುಗಂಧ ಪರಿಮಳ ಪುಷ್ಪಗಳನ್ನು ಹಾಕಿದರು. ಮಂದಿರ ಪ್ರವೇಶಕ್ಕೆ ಮುಂಚೆ ತೋಂಡಮಾನನ ಪತ್ನಿ ವೆಂಕಟೇಶನಿಗೆ ಮಂಗಳಾರತಿ ಎತ್ತಿದಳು. ತೋಂಡಮಾನನು ತೆಂಗಿನಕಾಯಿಯಿಂದ ದೃಷ್ಟಿ ತೆಗೆದು ಅದನ್ನು ಒಡೆದನು. ಮಂಗಳವಾದ್ಯಗಳು ಸುಸ್ವರವಾಗಿ ನುಡಿಸುತ್ತಿದ್ದಂತೆ ವೆಂಕಟಾಚಲಪತಿಯು ಮೊದಲು ತನ್ನ ಬಲಗಾಲಿನಿಂದ ಮಂದಿರ ಪ್ರವೇಶಿಸಿದನು. ಬಂದವರೆಲ್ಲರು ತೋಂಡಮಾನನು ತೋರಿಸಿದ ವಿಶೇಷ ಭವನದಲ್ಲಿ ಸುಖವಾಗಿ ಕುಳಿತುಕೊಂಡರು.

ವೆಂಕಟಾಚಲಪತಿಯು ಕುಬೇರನನ್ನು ಕರೆದು **'ಕುಬೇರಾ!** ನೀನೀಗ ಆಕಾಶರಾಜನನ್ನು ಕಂಡು ರಾತ್ರಿ ಹದಿಮೂರು ಘಟದ ಸುಮುಹೂರ್ತಕ್ಕೆ ಮೊದಲೆ ಭೋಜನಗಳನ್ನು ಮುಗಿಸುವುದು ಉಚಿತವು' ಎಂದು ಹೇಳಿ ಬರಲು ತಿಳಿಸಿದನು. ಕುಬೇರನು ಆಕಾಶರಾಜನಿಗೆ ಈ ಸುದ್ದಿ ಮುಟ್ಟಿಸಿದನು. ಅದರಂತೆ ಆಕಾಶರಾಜನು ದೇವತೆಗಳಿಗೆ, ಮಹರ್ಷಿಗಳಿಗೆ, ಬ್ರಾಹ್ಮಣರಿಗೆ ಭೋಜನಗಳನ್ನು ಶೀಘ್ರವಾಗಿ ನೆರವೇರಿಸಿ ಅವರೆಲ್ಲರಿಗೂ ದಕ್ಷಿಣ ತಾಂಬೂಲ ಗಂಧಗಳನ್ನು ಕೊಟ್ಟನು.

## 25. ಆಕಾಶರಾಜನು ವಿವಾಹಾರ್ಥ ವೆಂಕಟಾಚಲಪತಿಯನ್ನು ವಿವಾಹ ಮಂಟಪಕ್ಕೆ ಕರೆದುಕೊಂಡು ಬರುವುದು, ಪದ್ಮಾವತಿವೆಂಕಟೇಶ್ವರರ ವಿವಾಹ

ಆ ದಿನ ವೈಶಾಖ ಶುದ್ಧದಶಮಿ. ಪದ್ಮಾವತಿ ವೆಂಕಟೇಶ್ವರರ ವಿವಾಹ ಮುಹೂರ್ತ ಸಮಯ ಹತ್ತಿರ ಬರುತ್ತಿದ್ದಂತೆ,

ಆಕಾಶರಾಜನು ತನ್ನ ಸೋದರನನ್ನು, ಕುಮಾರನನ್ನು ಕರೆದು ವರಪೂಜೆಗೆ ಸಿದ್ಧಪಡಿಸಬೇಕೆಂದು ಆಜ್ಞಾಪಿಸಿದನು. ಅವರು ಬೇಕಾಗುವ ಎಲ್ಲ ವಸ್ತುಗಳನ್ನು ಸಿದ್ಧವಾಗಿವೆ ಎಂದು ತಿಳಿಸಿದರು. ಆಗ ಆಕಾಶರಾಜನು ಬೃಹಸ್ಪತಿ ಶುಕಮಹರ್ಷಿಗಳನ್ನು ಮುಂದು ಮಾಡಿಕೊಂಡು ಪುಣ್ಯಾಂಗನೆಯರು ಮತ್ತು ಸುಮಂಗಲೆಯರು, ಸಕಲ ಬಂಧುಮಿತ್ರ ಪರಿಜನರೊಂದಿಗೆ ಸಿದ್ಧರಾಗಿ, ವರಪೂಜೆಗೆ ಬೇಕಾಗುವ ನೂತನ ವಸ್ತ್ರಗಳು ಆಭರಣಗಳು, ಚಂದನಗಳು, ಹೂವಿನ ಹಾರಗಳು, ಹಣ್ಣುಗಳು, ತಾಂಬೂಲಗಳು ಎಲ್ಲವುಗಳ ತಟ್ಟೆಗಳನ್ನು ಸಿದ್ಧಪಡಿಸಿ ದಾಸಿಯರು ಕೈಯಲ್ಲಿ ಹಿಡಿದುಕೊಂಡಿದ್ದು ಎಲ್ಲರೂ ಬಂದರು. ಸುಂದರವಾಗಿ ಅಲಂಕರಿಸಿದ ಆನೆಯನ್ನು ಮಾವಟಿಗನು ತಂದು ನಿಲ್ಲಿಸಿದನು. ವಂದಿಮಾಗಧರು, ಪುರೋಹಿತರು, ಮಹಾಪೌರರು ಪೂರ್ಣಸಿದ್ಧರಾಗಿ ವರಪೂಜೆಗೆ ಹೊರಟರು. ದೀವಟಿಗೆಗಳು, ಕಾಕಡಾದೀಪಗಳಿಂದ ರಾತ್ರಿಯು ಪೂರ್ತಿಹಗಲಿನಂತೆ ಕಾಣಿಸುತ್ತಿತ್ತು. ಆಕಾಶರಾಜನು ಎಲ್ಲರಿಂದ ಕೂಡಿಕೊಂಡು ವೆಂಕಟಾಚಲಪತಿಯ ವಸತಿಮಂದಿರಕ್ಕೆ ಹೊರಟನು. ಸಾವಕಾಶವಾಗಿ ನಡೆಯುತ್ತ ವಿವಿಧಮಂಗಳವಾದ್ಯಗಳೊಂದಿಗೆ ಎಲ್ಲರು ವೆಂಕಟಾಚಲಪತಿ ಮಂದಿರವನ್ನು ಸೇರಿದರು. ಆಗ ವೆಂಕಟಾಚಲಪತಿಯು ಅಲಂಕೃತನಾಗಿ ಮಂದಿರದ ಮಧ್ಯಭಾಗದಲ್ಲಿನ ವೇದಿಕೆ ಮೇಲೆ ರತ್ನಮಯ ಆಸನದಲ್ಲಿ ಕುಳಿತನು. ಆತನನ್ನು ಸುತ್ತುವರೆದು ಬ್ರಹ್ಮಾದಿ ದೇವತೆಗಳು, ವಸಿಷ್ಠಾದಿಮಹರ್ಷಿಗಳು, ವಿವಾಹಾನ್ವಿತರಾದ ಸುರರು. ಸಿದ್ಧರು ಸಭೆಗೆ ಬಂದರು. ಆ ಸಮಯದಲ್ಲಿ ಸಭಾಮಧ್ಯದಲ್ಲಿರುವ ವೆಂಕಟಾಚಲಪತಿಯು ಹುಣ್ಣಿಮೆಯ ಚಂದ್ರನಂತೆ ಕಂಡನು. ಬರುತ್ತಿರುವ ಮಾವನವರನ್ನು ಕಂಡು ವೆಂಕಟಾಚಲಪತಿ

ಆಸನದಿಂದ ಎದ್ದು ಮುಂದೆ ಹೋಗಿ ನಮಸ್ಕಾರ ಮಾಡಿ ಅಪ್ಪಿಕೊಂಡು 'ವಯೋವೃದ್ಧರಾದ ನೀವು ಏಕೆ ಶ್ರಮ ವಹಿಸುತ್ತಿದ್ದೀರಿ? ಯಾರಾದರೂ ಯುವಕರನ್ನು ಕಳಿಸಬಾರದೇ' ಎಂದು ವಸುನಾಯಕನ ಕಡೆಗೆ ನಸುನಗುತ್ತ ನೋಡಿದನು. ಶ್ರೀ ವೆಂಕಟಾಚಲಪತಿಯ ಆಲಿಂಗನದಿಂದ ಆಕಾಶರಾಜ ತನ್ನ ಜನ್ಮ ಸಾರ್ಥಕವಾಯಿತೆಂದು ಭಾವಿಸಿದನು.

ಆಗ ವಸಿಷ್ಠನು ಆಕಾಶರಾಜನಿಗೆ ವರಪೂಜೆ ಮಾಡಲು ಹೇಳಿದನು. ಆಕಾಶರಾಜನು ಬೃಹಸ್ಪತಿಯನ್ನು ಕರೆದು ತನ್ನ ಭಾರ್ಯೆ ಧರಣಿದೇವಿಗೆ ಈ ವಿಷಯವನ್ನು ತಿಳಿಸಿದನು. ಧರಣಿದೇವಿಯು ಅರುಂಧತಿಯನ್ನು ಮುಂದೆಮಾಡಿ ಉಳಿದ ಸುಮಂಗಲಿಯರು ವಿವಾಹದ ವಿಶೇಷ ಪದಗಳನ್ನು ಹಾಡುತ್ತಿರಲು ಮಂಗಳವಾದ್ಯಗಳು ಶ್ರವಣಾನಂದವಾಗುವಂತೆ ನುಡಿಸುತ್ತಿರಲು, ರತ್ನಾಸನದಲ್ಲಿ ಕುಳಿತಿರುವ ವೆಂಕಟಾಚಲಪತಿಗೆ, ಧರಣಿದೇವಿಯು ನೂತನ ವಸ್ತ್ರಾಭರಣ ಗಳನ್ನು ಕೊಟ್ಟು ಹೂಮಾಲೆ ಮುಂತಾದವುಗಳಿಂದ ಅಲಂಕರಿಸಿ, ಚಂದನವನ್ನು ಹಚ್ಚಿ, ತಾಂಬೂಲಫಲಗಳನ್ನು ಕೈಯಲ್ಲಿ ಕೊಟ್ಟರು. ಧರಣೀದೇವಿಯು ಶ್ರೀನಿವಾಸನನ್ನು ನೋಡಿ ಕಣ್ಣಿಗೆ ಹಬ್ಬದಂತೆ ಕಂಡು ತನ್ನ ಜನ್ಮ ಚರಿತ್ರಾರ್ಥವಾಯಿತೆಂದು ಸಂತೋಷಿಸಿದಳು.

ಆ ಸಮಯದಲ್ಲಿ ಶ್ರೀ ವೆಂಕಟಾಚಲಪತಿಯನ್ನು ದರ್ಶಿಸಿದ ಬೃಹಸ್ಪತಿ. ವಸಿಷ್ಠಾದಿ ಮಹರ್ಷಿಗಳು, ಸಕಲ ದೇವತೆಗಳು, ಪುರೋಹಿತರು ಮತ್ತು ಪೌರರು ಸಹಿತವಾಗಿ ಎಲ್ಲ ಸಭಾಸದರು ತಾವು ವೈಕುಂಠವಾಸನ ದರ್ಶನ ಪಡೆದುಕೊಂಡು ಮಹಾನಂದವನ್ನು ಹೊಂದಿದರು.

ಪುರೋಹಿತರು ಮುಹೂರ್ತವು ಹತ್ತಿರ ಬರುತ್ತಿದೆ ಎಂದು ಹೇಳಿದಾಗ ಅವಸರಪಟ್ಟ ಆಕಾಶರಾಜನು ಶ್ರೀ ವೆಂಕಟೇಶ್ವರನನ್ನು ಕರೆದುಕೊಂಡು ಭದ್ರಗಜದ ಕಡೆಗೆ ಬಂದನು. ವಿವಾಹ್ವಾನಿತರು ಎಲ್ಲರು ಶ್ರೀ ವೆಂಕಟೇಶ್ವರನ ಹಿಂದೆ ಹೊರಟರು. ವೆಂಕಟಾಚಲಪತಿಯು ಗಜಾರೋಹಣ ಮಾಡಿದನು. ಭೂಲೋಕ ದೇವೇಂದ್ರನಂತೆ ಆತನನ್ನು ನಾರಾಯಣಪುರ ಪೌರರು ನೋಡುತ್ತ ಇರುವಂತೆ ಮೆಲ್ಲನೆ ಆನೆಯು ಸಾಗಿತು. ಅದರ ಮುಂದೆ ನರ್ತಕಿಯರ ನಾಟ್ಯವು, ಅವರ ಮುಂದೆ ನಾಟ್ಯಸಂಗೀತವು, ಅವರ ಮುಂದೆ ವಿವಿಧ ಮಂಗಳತೂರ್ಯ ನಾದಗಳು, ಘೂರ್ತಿ ಘೀಳಿಡುತ್ತಿರುವ ಆನೆಯು ನಾರಾಯಣಪುರ ವೀಧಿಯಿಂದ ವಿವಾಹ ಮಂಟಪಕ್ಕೆ ಮೆಲ್ಲಗೆ ಹೋಗುತ್ತಿರುವಾಗ ಆಯಾ ವೀಧಿಗಳಲ್ಲಿನ ಪೌರಕಾಂತೆಯರು ವೆಂಕಟಾಚಲಪತಿಗೆ ಮಂಗಳಾರತಿ ಎತ್ತಿದರು. ಪ್ರತಿವೀಧಿಯಲ್ಲಿ ಅತಿಶಯದಿಂದ ಪಟಾಕಿಗಳನ್ನು ಸಿಡಿಸುತ್ತಿದ್ದರು. ಮಹರ್ಷಿಗಳು ವೇದಪಾರಾಯಣ ಮಾಡುತ್ತ ಸಾಗಿದರು. ಪುರೋಹಿತರು ವೈವಾಹಿಕ ಮಂತ್ರಗಳನ್ನು ಪಠಿಸುತ್ತಿದ್ದರು. ಮುತ್ತೈದೆಯರು ವಿವಾಹೋಚಿತ ಪದಗಳನ್ನು ಹಾಡುತ್ತಿದ್ದರು. ಮದುವೆಯಲ್ಲಿ ಹೀಗೆ ನಡೆಯಬೇಕೆಂದು ತೋರಿಸುತಿದ್ದಂತೆ ಆ ಆನೆಯು ಮೆಲ್ಲನೆ ಹೆಜ್ಜೆಗಳು ಹಾಕುತ್ತ ಕಲ್ಯಾಣಮಂಟಪದ ಹತ್ತಿರ ನಿಂತಿತು. ವೆಂಕಟಾಚಲಪತಿಯು ಗಜಾವರೋಹಣ ಮಾಡಿ ದ್ವಾರದ ಮುಂದೆ ನಿಂತನು. ಆಗ ತೋಂಡಮಾನನ ಬಾರ್ಯೆ ಮುತ್ತೈದೆಯರ ಸಂಗಡ ಬಂದು ವೆಂಕಟಾಚಲಪತಿಗೆ ನೀರಾಜನ ಮಾಡಿದರು. ವಸುಧಾನನು ಭಾವನ ಕೈಹಿಡಿದು ವಿವಾಹ ವೇದಿಕೆಯ ಮೇಲೆ ಇರುವ ರತ್ನಾಸನದಲ್ಲಿ ಕೂಡಿಸಿದನು. ಪುರೋಹಿತರು ಸ್ವಸ್ತಿ ವಚನಗಳು ಪಠಿಸುತ್ತಿದ್ದರು. ವಿವಾಹಮಂಗಳ ವಾದ್ಯಗಳು ಘನವಾಗಿ ಮೊಳಗುತ್ತಿದ್ದವು.

ಬ್ರಹ್ಮಾದಿ ದೇವತೆಗಳು, ಇಂದ್ರಾದಿ ದಿಕ್ಪಾಲಕರು, ನಾರದತುಂಬುರಾದಿ ಸಭಾಗಾಯಕರು, ಗಂಧರ್ವರು, ಕಿನ್ನರರು, ಕಿಂಪುರುಷರು, ನಾಗಪ್ರಮುಖರು ಎಲ್ಲರೂ ಆ ಕಲ್ಯಾಣಸಭೆಯಲ್ಲಿ ಉಚಿತವಾದ ಆಸನದಲ್ಲಿ ಕುಳಿತಿದ್ದರು. ಮಹರ್ಷಿಗಳು ಎಲ್ಲರೂ ವಸಿಷ್ಠ ಬೃಹಸ್ಪತಿಗಳನ್ನು ಅನುಸರಿಸಿ ಕಲ್ಯಾಣವೇದಿಕೆಯ ಹತ್ತಿರದಲ್ಲಿ ಕುಳಿತಿದ್ದರು. ಪುರೋಹಿತರು ಮೊದಲೆ ಸ್ವಾಮಿಪುಷ್ಕರಿಣಿ ತೀರ್ಥವನ್ನು ಬಂಗಾರ ಕಳಶಗಳಿಂದ ತಂದು ವೇದಿಕೆಯ ಮೇಲೆ ಇಟ್ಟಿದ್ದರು. ವಸಿಷ್ಠನು ಮುಹೂರ್ತದ ಆರಂಭದಲ್ಲಿ ಪೂಜೆಗಳನ್ನು ಆಚರಿಸುತ್ತಿದ್ದನು. ಬೇಕಾಗುವ ಎಲ್ಲ ವಸ್ತು ಸಂಗ್ರಹವು, ಹಾಲು, ತುಪ್ಪ, ಸಮಿತ್ತುಗಳು ಎಲ್ಲವನ್ನು ಜೋಡಿಸಿಕೊಂಡನು. ಮಾನವನೆತ್ತರದ ಬೆಳ್ಳಿ ದೀಪಸ್ತಂಭಗಳು ವಿವಾಹ ವೇದಿಕೆಯ ಎರಡು ಕಡೆ ದಿವ್ಯಜ್ಯೋತಿಗಳಿಂದ ಪ್ರಕಾಶಿಸುತ್ತಿದ್ದವು. ವಸಿಷ್ಠ ಬೃಹಸ್ಪತಿಗಳು ವಿವಾಹೋಚಿತ ಮಂತ್ರಗಳನ್ನು ಪಠಿಸುತ್ತ ಕಾರ್ಯಕ್ರಮವನ್ನು ಮುಂದುವರಿಸಿದರು. ಪುರೋಹಿತರು ಸಂಕಲ್ಪವನ್ನು ಹೇಳಿ ಕಾರ್ಯಕ್ರಮವನ್ನು ಜರುಗಿಸಿದರು. ವಸಿಷ್ಠನು ವೆಂಕಟಾಚಲಪತಿಗೆ ಮಧುಪರ್ಕವನ್ನು ಕೊಟ್ಟನು. ಧರಿಣಿದೇವಿಯು ಹೇಮಕುಂಭಗಳಲ್ಲಿ ಸ್ವಾಮಿಪುಷ್ಕರಿಣಿ ತೀರ್ಥವನ್ನು ತುಂಬಿದಳು. ವಸಿಷ್ಠನು ವೇದಗಳನ್ನು ಪಠಿಸುತ್ತಿದ್ದನು. ಬಂಗಾರದ ತಟ್ಟೆಯಲ್ಲಿ ವೆಂಕಟಾಚಲಪತಿಯು ತನ್ನ ಪಾದಪದ್ಮಗಳನ್ನು ಇಟ್ಟನು. ಧರಿಣಿದೇವಿಯು ಪವಿತ್ರ ತೀರ್ಥವನ್ನು ಹೇಮಕುಂಡಗಳಿಂದ ಹಾಕುತ್ತ ಆಕಾಶರಾಜನು ವೆಂಕಟಾಚಲಪತಿಯ ಪಾದದ್ವಂದ್ವಗಳನ್ನು ತೊಳೆಯುತ್ತ ಆ ಜಲವನ್ನು ತಾನು ತನ್ನ ಭಾರ್ಯೆ, ಪುತ್ರನು, ಸೋದರನು ಶಿರದಲ್ಲಿ ಹಾಕಿಕೊಂಡು ಪವಿತ್ರರಾದೆವೆಂದು ಸಂತೋಷಿಸಿದರು. ವಸಿಷ್ಠನು ಮಂತ್ರಗಳನ್ನು ಹೇಳುತ್ತ ಆಕಾಶರಾಜನು ವೆಂಕಟಾಚಲಪತಿಯ ಪಾದಗಳನ್ನು ತೊಳೆದು

ಚಂದನ ಕುಂಕುಮ ಮತ್ತು ಪುಷ್ಪಗಳಿಂದ ಶ್ರೀವಾರಿ ಪಾದಗಳನ್ನು ಪೂಜಿಸಿ ಕರ್ಪೂರ ಆರತಿ ಜೊತೆಗೆ ಸಾಲಂಕೃತ ಕನ್ಯಾದಾನ ಮುಹೂರ್ತಕ್ಕೆ ಸಂಸಿದ್ಧನಾಗಿದ್ದನು.

ಸುಮಂಗಳೆಯರು ಪದ್ಮಾವತಿಗೆ ಬಂಗಾರದ ಕುಸುರಿನಿಂದ ಕೂಡಿದ ಮಲ್ಲಿಗೆ ಮೊಗ್ಗೆಗಳ ಜಡೆ ಹೆಣೆದು, ರತ್ನವೈಢೂರ್ಯಗಳು, ಹಂಸಗಳು ಕೆತ್ತಿದ ಹೆರಳಿನ ಜಡೆಬಿಲ್ಲೆಗಳ ಕಟ್ಟಿ, ಅದಕ್ಕೆ ಹೂಗಳು ಮುಡಿದು, ಹಣೆಗೆ ಬೊಟ್ಟು ಇಟ್ಟು, ಮುತ್ತಿನ ಕೆಂಪುಸರದಿಂದ ಅಲಂಕರಿಸಿ ಬಂಗಾರ ಸರಿಗೆಯನಿಟ್ಟು, ರೇಷ್ಮೆಸೀರೆಯನ್ನು ಉಡಿಸಿ, ಅದಕ್ಕೆ ತಕ್ಕ ರವಿಕೆಯನ್ನು ತೊಡಿಸಿ, ವಿವಿಧ ಆಭರಣಗಳನ್ನು ಹಾಕಿ, ಗಲ್ಲದ ಮೇಲೆ ದೃಷ್ಟಿಬೊಟ್ಟು ಇಟ್ಟು, ಹಣೆಗೆ ತಿಲಕವನ್ನು ತಿದ್ದಿ, ಕಾಲಿನಲ್ಲಿ ಗೆಜ್ಜೆಗಳಿಂದ ಅಲಂಕರಿಸಿ, ನವವಧೂ ಆಲಂಕರಣಗಳಿಂದ ಮದುಮಗಳನ್ನು ಸಿದ್ಧಮಾಡಿದರು. ಅರುಂಧತಿದೇವಿ ಮುಂದಾಗಿ ಪುಣ್ಯಾಂಗನೆಯರು ಮದುಮಗಳು ಪದ್ಮಾವತಿದೇವಿಯನ್ನು ವೆಂಕಟಾಚಲಪತಿಗೆ ಎಡಭಾಗದಲ್ಲಿನ ರತ್ನದಾಸನದಲ್ಲಿ ಮದುವೆ ಹಾಡುಗಳನ್ನು ಹಾಡುತ್ತ ಕೂಡಿಸಿದರು. ಕನ್ಯಾದಾನ ಆಗುವದಕ್ಕಿಂತ ಮುಂಚೆ ಆಕಾಶರಾಜನು ವೆಂಕಟಾಚಲಪತಿಗೆ ಕೋಟಿಸಂಖ್ಯೆಯಲ್ಲಿ ಸುವರ್ಣವರಹಗಳನ್ನು ವರದಕ್ಷಿಣೆ ರೂಪದಲ್ಲಿ ಕೊಟ್ಟನು. ಮತ್ತು ಮಹಾ ಅಪರೂಪವಾದ ಸ್ವರ್ಣಕಿರೀಟ, ಅಮೂಲ್ಯವಾದ ವಜ್ರಹಾರಗಳು, ನವರತ್ನಕರ್ಣಭೂಷಣಗಳು, ಭುಜಕಿರೀಟಗಳು, ಹತ್ತೂ ಬೆರಳಿಗೆ ರತ್ನಾದಿಗಳನ್ನು ಕೂಡಿಸಿದ ಬಂಗಾರದುಂಗುರಗಳು, ವಜ್ರ ಮುಂತಾದ ಮಣಿಗಳ ಯುಕ್ತವಾದ ಬಂಗಾರದ ಟೊಂಕದ ಪಟ್ಟಿ, ರತ್ನಖಚಿತ ಬಂಗಾರದ ಪಾದುಕೆಗಳು, ಅಸಂಖ್ಯೆಯಲ್ಲಿ ಬೆಳ್ಳಿ ಜಲಪಾತ್ರೆಗಳು, ಆಗಿನ ಸಮಯದ ರೀತ್ಯಾ ರಾಜೋಚಿತ ಮರ್ಯಾದೆಯಾಗಿ ಇವೆಲ್ಲವುಗಳನ್ನು ಕೊಟ್ಟು, ಗಜ ತುರಗ

ಗೋಗಳನ್ನು ಸಹಸ್ರ ಸಂಖ್ಯೆಯಲ್ಲಿ ಅಳಿಯನಿಗೆ ಉಡುಗೊರೆಯಾಗಿ ಕೊಟ್ಟನು. ಈ ಎಲ್ಲ ಬಹುಮಾನಗಳಿಂದ, ವಸಿಷ್ಠ ಬೃಹಸ್ಪತಿಗಳು ಸಾಂಗೋಪಾಂಗವಾಗಿ ಮಂತ್ರಗಳನ್ನು ಪಠಿಸುತ್ತಿರುವಾಗ ಪದ್ಮಾವತಿಯನ್ನು ಸ್ವಾಮಿಪುಷ್ಕರಿಣಿತೀರ್ಥವನ್ನು ಸಾಲಂಕೃತ ಕನ್ಯಾದಾನ ಮಾಡಿದನು. ಆನಂತರ ವಸಿಷ್ಠನು ವೆಂಕಟಾಚಲಪತಿಗೆ ಕಂಕಣಾಭರಣ ಕೊಟ್ಟು ವೆಂಕಟಾಚಲಪತಿಯಿಂದ ಪದ್ಮಾವತಿಗೆ ಕಂಕಣಧಾರಣ ಮಾಡಿಸಿದನು. ಆಗ ಬೃಹಸ್ಪತಿಯು ಕನ್ಯಾಪ್ರವರವನ್ನು ಹೇಳಿದನು. 'ಶ್ರೀನಿವಾಸ! ಶ್ರೀ ವೆಂಕಟೇಶ! ಅತ್ರಿಗೋತ್ರೋದ್ಭವಳು, ಸುವೀರ ಮಹಾರಾಜನ ಪ್ರಪೌತ್ರಿ, ಸುಧರ್ಮಮಹಾರಾಜನ ಪೌತ್ರಿಯು, ಆಕಾಶರಾಜನ ಪುತ್ರಿಯಾದ ಸೌಭಾಗ್ಯವತಿ ಪದ್ಮಾವತಿಯನ್ನು ನಿನಗೆ ಸಹಧರ್ಮಚಾರಿಣಿಯಾಗಿ, ಆರ್ಧಾಂಗಿಯಾಗಿ ಮಂತ್ರಪೂರ್ವಕವಾಗಿ ಕೊಟ್ಟು, ಆಕಾಶರಾಜನು ಮಹಾನಂದವನ್ನು ಹೊಂದಿ ಶ್ರೀ ವೆಂಕಟೇಶನಿಗೆ ಸ್ವರ್ಣಾಭರಣಗಳನ್ನು ರತ್ನಾಭರಣಗಳನ್ನು ಕೊಟ್ಟಿದ್ದಾನೆ. ಸ್ವೀಕರಿಸಬೇಕು.' ಮುಂದೆ ವಸಿಷ್ಠಮಹರ್ಷಿಯು ವೆಂಕಟಾಚಲಪತಿಯ ಪ್ರವರಗಳನ್ನು ಹೇಳಿದನು. 'ವಸಿಷ್ಠ ಗೋತ್ರೋದ್ಭವನು, ಯಯಾತಿ ಪ್ರಪೌತ್ರನು, ಶೂರನ ಪೌತ್ರನು, ವಸುದೇವನ ಪುತ್ರನು ಆದ ಶ್ರೀ ವೆಂಕಟೇಶ್ವರನು ಅತ್ರಿಗೋತ್ರೋದ್ಭವಳಾದ ಆಕಾಶರಾಜನ ಪುತ್ರಿಯನ್ನು ತನ್ನ ಸಹಧರ್ಮಿಣಿಯಾಗಿ, ಅರ್ಧಾಂಗಿಯಾಗಿ ಗ್ರಹಿಸುತ್ತಿದ್ದಾನೆ' ಎಂದು ಹೇಳಿದನು. ಭೂಮ್ಯಾಕಾಶಗಳಲ್ಲಿ ಮಂಗಳತೂರ್ಯ ಧ್ವನಿಗಳು ಮೊಳಗುತ್ತಲಿದ್ದಾಗ ಧರಿಣಿದೇವಿಯ ಕೈಯಿಂದ ತೀರ್ಥವನ್ನು ಆಕಾಶರಾಜನು ತನ್ನ ಕೈಹಿಡಿದು ಶ್ರೀ ವೆಂಕಟಾಚಲಪತಿಯ ಎಡಹಸ್ತದಲ್ಲಿ ಕನ್ಯಾದಾನ ಕಾರ್ಯವನ್ನು ನೆರವೇರಿಸಿದನು.

ಅರುಂಧತಿಯ ಜೊತೆಗೆ ಸುಮಂಗಲಿಯರೆಲ್ಲರೂ ಕಲ್ಯಾಣ ಸಮಯದ ಹಾಡುಗಳನ್ನು ಹಾಡುತ್ತ, ವಸಿಷ್ಠಾದಿ ಪುರೋಹಿತರು ಮಾಂಗಲ್ಯಧಾರಣ ಮಂತ್ರಗಳನ್ನು ಪಠಿಸುತ್ತ ಶ್ರೀ ವೆಂಕಟಾಚಲಪತಿಯು ಪದ್ಮಾವತಿಯ ಕೊರಳಿಗೆ ಮಂಗಳಸೂತ್ರವನ್ನು ಕಟ್ಟಿದನು. ಆಗ ದೇವತೆಗಳು ಮಹರ್ಷಿಗಳು ಮತ್ತು ಇತರರೆಲ್ಲರೂ ಆ ನವವಧೂವರರ ಮೇಲೆ ನವರತ್ನಾಕ್ಷತೆಗಳನ್ನು ಹಾಕುತ್ತ ಆಶೀರ್ವದಿಸಿದರು. ವಸಿಷ್ಠನು ಮೂರು ಸಲ ವಸುಧಾನನ ಹಸ್ತಗಳಿಂದ ಪದ್ಮಾವತಿ ಹಸ್ತಗಳಿಗೆ, ಆಮೇಲೆ ಆಕೆಯ ಹಸ್ತದಿಂದ ಶ್ರೀನಿವಾಸನ ಹಸ್ತಗಳ ಮುಖಾಂತರ ಲಾಜಾಹೋಮವನ್ನು ಮಾಡಿಸಿದರು. ನಂತರ ವೈಖಾನಸ ಪುರೋಹಿತನು ಪದ್ಮಾವತಿ ಶ್ರೀನಿವಾಸರ ವೈವಾಹಿಕವಿಧಿಯೆಲ್ಲವನ್ನು ಸಾಂಗೋಪಾಂಗವಾಗಿ ನೆರವೇರಿಸಿದನು.

ಆನಂತರದಲ್ಲಿ ಆಕಾಶರಾಜನು ತಮ್ಮನಿಗೆ ಕರೆದು ವಿವಾಹಾಹ್ವಾನಿತರೆಲ್ಲರಿಗೆ ಹೂ, ಹಣ್ಣು, ಚಂದನ, ತಾಂಬೂಲಗಳ ಜೊತೆಗೆ ದಕ್ಷಿಣವನ್ನು ಕೊಡಿಸಿದನು. ಮುಹೂರ್ತಕ್ಕೆ ಮುಂಚೆ ವಧೂವರರ ಪಕ್ಷದ ಭೋಜನ ಮಾಡದವರು, ವಿವಾಹ ನಂತರ ಪುರೋಹಿತರು, ವಧೂ, ವರನು ಹಾಗು ಅವರ ಸಂಬಂಧಿಕರು ಎಲ್ಲರು ಭೋಜನ ಮಾಡಿದರು.

ಮರುದಿನದ ಉದಯದಲ್ಲಿ ವಧುವರರಿಗೆ ಹಿಟ್ಟು, ಬಣ್ಣಗಳು ಎಲ್ಲ ಅನ್ಯೋನ್ಯವಾಗಿರುವಂತೆ ತಂದುಕೊಟ್ಟು ಸಹಾಯ ಮಾಡಿದರು. ಅವರಿಗೆ ಅಭ್ಯಂಗ ಸ್ನಾನ ಮಾಡಿಸಿದರು. ಆಕಾಶರಾಜನು ಮದುವೆಗೆ ಬಂದವರಿಗೆಲ್ಲರಿಗೆ, ಪುರಜನರಿಗೆ ಪಂಚಭಕ್ಷ್ಯ ಪರಮಾನ್ನದೊಂದಿಗೆ ಸಂತೃಪ್ತಿಯಿಂದ ಭೋಜನ ಮಾಡಿಸಿ, ಅವರೆಲ್ಲರನ್ನು ತನ್ನ ಮನೆಯಲ್ಲಿ ನಾಲ್ಕು ದಿನ ಇರಲು

ಪ್ರಾರ್ಥಿಸಿ ಅವರಿಗೆ ನಿತ್ಯ ನೂತನ ಸಂತರ್ಪಣಗಳನ್ನು ಮಾಡಿದನು. ಐದನೆ ದಿನ ಅವರಿಗೊಪ್ಪುವ ವಿಧಿನಿಯಮಗಳಂತೆ ಕಂಕಣ ವಿಸರ್ಜನ ಮಾಡಿಸಿ, ವಧೂವರರನ್ನು ರತ್ನದಾಸನದಲ್ಲಿ ಕೂಡಿಸಿ ನೂತನ ವಸ್ತ್ರಾಭರಣಗಳನ್ನು ಕೊಟ್ಟನು. ಆ ದಿನ ಸಾಯಂಕಾಲದಲ್ಲಿ ಆಕಾಶರಾಜ ಮತ್ತು ಧರಿಣಿದೇವಿಯು ಪದ್ಮಾವತಿಯನ್ನು ಶ್ರೀವೆಂಕಟಾಚಲಪತಿಗೆ ಬಕುಳಾದೇವಿಗೆ ಶ್ರೀಲಕ್ಷ್ಮೀದೇವಿಗೆ ಒಪ್ಪುವ ಹಾಡುಗಳೊಂದಿಗೆ ಸಂತೋಷಗೊಳಿಸಿದರು. ಹಿಂದೆಯೇ ವಧೂವರರಿಗೆ ಅಲ್ಲಿವರೆಗೆ ಸಿಧ್ಧವಾಗಿದ್ದ ಅಲಂಕರಿಸಿದ್ದ ಐರಾವತ ಸದೃಶವಾದ ಆನೆಯ ಮೇಲೆ ಕೂಡಿಸಿ ತಾಳಮೇಳಗಳೊಂದಿಗೆ ವರನ ಬಂಧುಮಿತ್ರರಾದಿಯಾಗಿ ಎಲ್ಲರಿಗೆ ಸಮುಚಿತ ಮರ್ಯಾದೆಗಳೊಂದಿಗೆ ವರನ ಮನೆಗೆ ಕಳಿಸಿಕೊಟ್ಟನು. ಪರಕೀಯವಾಗುವ ಕನ್ಯೆಯು ಪರರ ಧನವು, ತಾನು ವರನಿಗೆ ಗೃಹಿಣಿಯನ್ನು ಸುರಕ್ಷಿತವಾಗಿ ಒಪ್ಪಿಸುತ್ತಿದ್ದೇನೆ ಎಂದು ಸಂತೋಷಗೊಂಡನು.

## 26. ವೆಂಕಟಾಚಲಪತಿ ಆರು ತಿಂಗಳು ಅಗಸ್ತ್ಯಾಶ್ರಮ ಸಮೀಪ ಉಳಿದು ನಂತರ ಪದ್ಮಾವತಿಯ ಸಂಗಡ ವೆಂಕಟಾಚಲ ಸೇರುವುದು

ಮೂರು ನಿದ್ರೆಯಾದ ಮೇಲೆ ಶ್ರೀವೆಂಕಟಾಚಲಪತಿ ಪದ್ಮಾವತಿ ದೇವಿಯ ಜೊತೆ ಗರುಡನನ್ನು ಏರಿ 'ಅತ್ತೆಮನೆ' ವೆಂಕಟಾಚಲಕ್ಕೆ ಹೋಗಲು ಆಜ್ಞೆ ಕೇಳಿದನು. ಆಗ ಧರಿಣೀದೇವಿಯು ಮಗಳನ್ನು ಬಿಗಿದಪ್ಪಿಕೊಂಡು ಬಾಯಿಯಲ್ಲಿ ಮಾತು ಬರದೇ ಆನಂದಬಾಷ್ಪಗಳು ಕಣ್ಣು ತುಂಬಿಕೊಂಡವು. ಆಕಾಶರಾಜನು ತನ್ನ ಮೇಲಹೊದಿಕೆಯಿಂದ ಕಣ್ಣೀರು

ಒರೆಸಿಕೊಂಡು ಅಳಿಯನಿಗೆ ಮತ್ತು ಮಗಳಿಗೆ ಆಶಿರ್ವದಿಸಿದನು. ವೆಂಕಟಾಚಲಪತಿಯು ಅತ್ತೆಮಾವಂದಿರಿಗೆ ಚಿಕ್ಕ ಮಾವನಾದ ತೋಂಡಮಾನ ದಂಪತಿಗಳಿಗೆ ನಮಸ್ಕರಿಸಿ, ಅವರ ಅನುಮತಿ ಪಡೆದು, ಭಾವಮೈದುನ ವಸುಧಾನನಿಗೆ ಸಂತೋಷದಿಂದ ಸರಸೋಕ್ತಿಗಳನ್ನಾಡುತ್ತ ಅವರೆಲ್ಲರ ಅನುಮತಿ ಪಡೆದು, ಸತಿಸಹಿತನಾಗಿ ಬ್ರಹ್ಮಾದಿ ದೇವತೆಗಳೊಂದಿಗೆ, ಮಹರ್ಷಿಗಳೊಂದಿಗೆ ಪಯಣಿಸಿ ಸುವರ್ಣಮುಖಿತೀರದಲ್ಲಿರುವ ಅಗಸ್ತ್ಯಾಶ್ರಮಕ್ಕೆ ಹೋದನು. ಆಗ ಅಗಸ್ತ್ಯ ಮಹರ್ಷಿಯು ಅವರೆಲ್ಲರನ್ನು ತನ್ನ ಆಶ್ರಮದಲ್ಲಿ ಒಂದು ದಿನ ಇರಲು ಹೇಳಿ, ವಿವಾಹವಾದ ನೂತನ ದಂಪತಿಗಳು ಪರ್ವತಾರೋಹಣ ಮಾಡಬಾರದೆಂದು ವೆಂಕಟೇಶ್ವರನಿಗೆ ಹೇಳಿದನು. ವೆಂಕಟೇಶ್ವರನು ಕಲ್ಯಾಣಿ ಸ್ವರ್ಣಮುಖಿನದಿಯ ಈಶಾನ್ಯ ದಿಕ್ಕಿಗೆ ಅಗಸ್ತ್ಯಾಶ್ರಮಕ್ಕೆ ಸ್ವಲ್ಪ ದೂರದಲ್ಲಿ ಒಂದು ಆಶ್ರಮ ನಿರ್ಮಿಸಿಕೊಂಡು, ಬಂದಿದ್ದ ದೇವತೆಗಳಾದಿಯಾಗಿ ಎಲ್ಲರನ್ನು ತಕ್ಕುದಾದ ರೀತಿಯಲ್ಲಿ ಸತ್ಕಾರಗಳ ಮಾಡಿ ಅವರನ್ನು ತೃಪ್ತಿಪಡಿಸಿ ಬೀಳ್ಕೊಟ್ಟನು. ಬೃಹಸ್ಪತಿ, ವಸಿಷ್ಠನು, ಶುಕನು ಎಲ್ಲರೂ ವೆಂಕಟೇಶ್ವರನ ಅನುಮತಿ ಪಡೆದು ತಮ್ಮ ತಮ್ಮ ನಿವಾಸಗಳಿಗೆ ಸೇರಿದರು. ಲಕ್ಷ್ಮೀಯು ಕರವೀರಪುರಕ್ಕೆ ಹೋದಳು. ನೂತನ ದಂಪತಿಗಳು ತಮ್ಮ ಆಶ್ರಮದಲ್ಲಿ ಆರು ತಿಂಗಳು ಇದ್ದರು. ಹೀಗೆ ಮದುವೆಯಾದ ಶ್ರೀನಿವಾಸನು ಪತ್ನಿಯೊಂದಿಗೆ ಇದ್ದ ಆ ಪ್ರದೇಶವೇ ಇಂದು ಶ್ರೀನಿವಾಸ ಮಂಗಾಪುರ ಎಂದು ಕರೆಯಲ್ಪಡುತ್ತದೆ. ಅಲ್ಲಿಯೇ ಇರುವ ಕಲ್ಯಾಣ ವೆಂಕಟೇಶ್ವರ ದೇವಾಲಯವು ಬಹಳ ಪ್ರಸಿದ್ಧಿ ಹೊಂದಿದೆ.

ವೆಂಕಟಾಚಲಕ್ಕೆ ಹೋಗುವದಕ್ಕೆ ಮುಂಚೆ ಒಂದು ದಿನ ವೆಂಕಟಾಚಲಪತಿ ಪದ್ಮಾವತಿಯೊಂದಿಗೆ ನಾರಾಯಣಪುರಕ್ಕೆ

ಹೋಗಿ, ಬಕುಳಾದೇವಿಯು ವೆಂಕಟಾಚಲ ಹೋಗಿದ್ದಾಳೆಂದು, ನಾವಿನ್ನು ತಡಮಾಡಬಾರದೆಂದು ವೆಂಕಟಾಚಲಕ್ಕೆ ಹೋಗಬೇಕೆಂದು ಹೇಳಿದ್ದಕ್ಕಾಗಿ, ಆಕಾಶರಾಜನು ಅತ್ತೆಯವರ ಮನೆಗೆ ಹೋಗುವ ಮಗಳಿಗೆ ಸೀರೆಕುಪ್ಪುಸಗಳನ್ನು ಕೊಟ್ಟು ಭತ್ತಧಾನ್ಯಗಳನ್ನು, ವಿವಿಧ ಕಾಯಿಧಾನ್ಯಗಳನ್ನು, ಹುಣಿಸೆ ಹಣ್ಣು, ಬೆಲ್ಲ, ಸಕ್ಕರೆ, ತುಪ್ಪದ ಪಾತ್ರೆಗಳು, ಮೊಸರಿನ ಮತ್ತು ಹಾಲಿನ ಗಡಿಗೆಗಳು, ಮೆಣಸಿನಕಾಯಿ, ಸಾಸಿವೆಗಳು ಮುಂತಾದ ಸಂಭಾರ ವಸ್ತುಗಳು, ತರಕಾರಿಗಳು, ಗೆಡ್ಡೆಗೆಣಸುಗಳು, ಹಸಿಸುಂಠಿ, ಪುದೀನ, ಕೋತಂಬರಿ, ನಿಂಬೆಹಣ್ಣು, ವಿವಿಧ ಇತರ ಹಣ್ಣುಗಳು, ಲಡ್ಡು, ವಡೆ, ಅತಿರಸಗಳು ಮುಂತಾದ ಖಾದ್ಯ ಪದಾರ್ಥಗಳು, ಇವುಗಳನ್ನು ಬುಟ್ಟಿಗಳಲ್ಲಿ ತುಂಬಿ, ದಾಸದಾಸಿಗಳೊಂದಿಗೆ ಮೂಟೆಗಳು, ಪೆಟ್ಟಿಗೆಗಳು ಎಲ್ಲವನ್ನು ವೆಂಕಟಾಚಲಕ್ಕೆ ತನ್ನ ಮಗನ ಜೊತೆಗೆ ಕಳುಹಿಸಿದನು. ಶ್ರೀನಿವಾಸನು ಪುಷ್ಕರಿಣಿತೀರದಲ್ಲಿನ ಹುಣಿಸೆಮರದ ಕೆಳಗೆ ಇದ್ದ ಹುತ್ತಿನಭವನದಲ್ಲಿ ಪದ್ಮಾವತಿಯೊಂದಿಗೆ ಪ್ರವೇಶಿಸಿದನು. ಬಕುಳಮ್ಮಳು ಆ ನೂತನ ದಂಪತಿಗೆ ಮೊದಲು ಆರತಿ ಮಾಡಿ ಹಾಲುಹಣ್ಣುಗಳನ್ನು ಕೊಟ್ಟು ಉಚಿತ ರೀತಿಯಲ್ಲಿ ನಿರ್ವಹಿಸಿದಳು. ಅವರ ಹಿಂದೆ ಆಕಾಶರಾಜನು ಕಳುಹಿಸಿದ ಎಲ್ಲ ಸಾಮಗ್ರಿಯನ್ನು ಒಳಗಿಡಿಸಿದಳು. ವೆಂಕಟಾಚಲದಲ್ಲಿ ಪದ್ಮಾವತಿಯೊಂದಿಗೆ ಶ್ರೀನಿವಾಸನು ಅತ್ಯಂತ ಹರುಷದಿಂದ ಇರಹತ್ತಿದನು.

## 27. ಆಕಾಶರಾಜನ ನಿರ್ವಾಣ, ತೋಂಡಮಾನ ವಸುನಾಯಕರಿಗೆ ರಾಜ್ಯಭೇದ ಬಿಡಿಸಿ, ಶ್ರೀನಿವಾಸನು ಅವರನ್ನು ಸಂತೋಷಪಡಿಸಿದ್ದು

ಹೀಗಿರುವಾಗ ಒಂದು ದಿನ ನಾರಾಯಣಪುರದಿಂದ ರಾಜಪುರೋಹಿತನು ಶ್ರೀನಿವಾಸನ ನಿವಾಸಕ್ಕೆ ಬಂದು,

ಆಕಾಶರಾಜನು ಅಂತಿಮ ಅವಸ್ಥೆಯಲ್ಲಿ ಇದ್ದಾನೆ ಎಂಬ ಸುದ್ದಿಯನ್ನು ತಿಳಿಸಿದನು. ಅದನ್ನು ಕೇಳಿ ಪದ್ಮಾವತಿಯು ಬಹಳ ದುಃಖಿತಳಾದಳು. ಶ್ರೀನಿವಾಸನು ಅವಳಿಗೆ ಸಮಾಧಾನ ಹೇಳಿ ಬಕುಳಮ್ಮ, ಪದ್ಮಾವತಿದೇವಿಯರ ಜೊತೆ ಪುರೋಹಿತಸಮೇತನಾಗಿ ಸಕಲ ಪರಿವಾರದೊಂದಿಗೆ ಹೊರಟು, ಅಗಸ್ತ್ಯಾಶ್ರಮಕ್ಕೆ ಹೋಗಿ, ಆ ಮುನಿಗೆ ಆಕಾಶರಾಜನ ಪರಿಸ್ಥಿತಿಯನ್ನು ವಿವರಿಸಿ, ಎಲ್ಲರೂ ಕಲೆತು ನಾರಾಯಣಪುರಕ್ಕೆ ಹೋದರು. ಪದ್ಮಾವತಿ ವಿಷಾದವದನದಿಂದ ಅಂತಃಪುರದೊಳಗೆ ಹೋಗಿ, ತಂದೆಯ ಪರಿಸ್ಥಿತಿಯನ್ನು ನೋಡಿ ದುಃಖದಲ್ಲಿದ್ದ ತಾಯಿಯನ್ನು ಆಲಿಂಗನ ಮಾಡಿಕೊಂಡು ಅಳುತ್ತಿದ್ದಳು. ಬಕುಳಮ್ಮನು ತಾಯಿಮಗಳ ಪರಿಸ್ಥಿತಿ ಕಂಡು ಸಮಯೋಚಿತವಾಗಿ ನಡೆದುಕೊಂಡು ಪದ್ಮಾವತಿಯನ್ನು ಬೇರೊಂದು ಕೋಣೆಗೆ ಕರೆದುಕೊಂಡು ಹೋದಳು.

ಅಗಸ್ತ್ಯಮಹರ್ಷಿಯು ಆಕಾಶರಾಜನ ಸಮೀಪದಲ್ಲಿ ಕುಳಿತು ಆತನಿಗೆ ಶ್ರೀನಿವಾಸನ ಬರುವನ್ನು ಸೂಚಿಸಿದನು. ಆಗ ಉಚ್ಛ್ವಾಸನಿಶ್ವಾಸಗಳು ಇದ್ದರೂ ಆಕಾಶರಾಜನ ಕಣ್ಣುಗಳು ಮಾತ್ರ ಮುಚ್ಚಿದ್ದವು. ಅದನ್ನು ನೋಡಿ ಶ್ರೀನಿವಾಸನು ಲೌಕಿಕದಂತೆ ವಸುಧಾನನನ್ನು ತೋಂಡಮಾನನನ್ನು ಅಪ್ಪಿಕೊಂಡು ಧ್ವನಿಯಿಂದ ಅಳಹತ್ತಿದನು. ಆಗ ಎಲ್ಲರೂ ಬಹಳ ದುಃಖಗೊಂಡರು. ಆಗ ಮತ್ತೆ ಆಕಾಶರಾಜನು ಕಣ್ಣು ತೆರೆದನು. ಎಲ್ಲರನ್ನು ಒಂದು ಸಾರಿ ನೋಡಿ ಆಗಸ್ತ್ಯನಿಗೆ ಬಹಳ ಪ್ರಯಾಸದಿಂದ ನಮಸ್ಕರಿಸಿದನು. ಅಗಸ್ತ್ಯನು ಶ್ರೀನಿವಾಸನಿಗೆ ನೋಡಿದನು. ಶ್ರೀನಿವಾಸನು ಆತನನ್ನು ಸಮೀಪಿಸಿದನು. ಆಕಾಶರಾಜನು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಮಗನನ್ನು ತಮ್ಮನನ್ನು ಸಮೀಪಕ್ಕೆ ಕರೆದು ಅವರ ಎಡಗೈಯನ್ನು ತನ್ನ ಎಡಗೈಯಿಂದ ಹಿಡಿದುಕೊಂಡು ತನ್ನ ಹತ್ತಿರ

ನಿಂತ ಶ್ರೀನಿವಾಸನ ಎಡಗೈಯಲ್ಲಿ ಇಟ್ಟು ಮೆಲ್ಲನೆ 'ಪುರುಷೋತ್ತಮಾ! ದೇವದೇವ! ಇವರನ್ನು ರಕ್ಷಿಸು.' ಎಂದನು. ಅಷ್ಟರಲ್ಲಿ ಬಕುಳಮ್ಮಳು ಪದ್ಮಾವತಿ ಮತ್ತು ಧರಿಣೀದೇವಿಯು ಇದ್ದಲ್ಲಿಗೆ ಬಂದಳು. ಅವರನ್ನು ಹತ್ತಿರ ಕರೆದು ಪದ್ಮಾವತಿಯ ತಲೆಯ ಮೇಲೆ ಕೈಸವರಿ, ಧರಿಣಿದೇವಿಯ ಸಹಗಮನಕ್ಕೆ ಅನುಮತಿ ಕೊಟ್ಟು, ಶ್ರೀನಿವಾಸನನ್ನು ಅಗಸ್ತ್ಯಮುನಿಯನ್ನು ನೋಡಿ ಬಕುಳಮ್ಮಳು 'ವೈಕುಂಠವಾಸಾ! ತವ ಚರಣಂ ಶರಣಂ' ಎಂದು ಹೇಳುತ್ತಿರುವಾಗ ಆಕಾಶರಾಜನು ಮುಚ್ಚಿದ ಕಣ್ಣುಗಳಿಂದ ಮೆಲ್ಲನೆ ಉಚ್ಚರಿಸುತ್ತ ಕೊನೆಯುಸಿರೆಳೆದನು. ಎಲ್ಲರೂ ಒಂದೇ ಸಮಯದಲ್ಲಿ ದುಃಖದಿಂದ ಅಳಲು ಪ್ರಾರಂಭಿಸಿದರು. ಪುರೋಹಿತರು ಮತ್ತು ಮಂತ್ರಿಗಳು ಅಂತ್ಯಸಂಸ್ಕಾರಕ್ಕೆ ಸಿದ್ಧತೆ ನಡೆಸಿದರು. ಇಡೀ ಪಟ್ಟಣವು ವಿಷಾದಛಾಯೆಯಿಂದ ತುಂಬಿಹೋಯಿತು. ಪುರಜನರು ರಾಜಪ್ರಾಸಾದವನ್ನು ಸೇರಿ ರೋದಿಸಹತ್ತಿದರು. ವಸುನಾಯಕನು ತನ್ನ ಚಿಕ್ಕಪ್ಪನ ಜೊತೆ ಕೂಡಿ ಪುರೋಹಿತರ ಅನುಜ್ಞೆಯ ಪ್ರಕಾರ ಕರ್ಮಕಾಂಡ ನಿರ್ವಹಿಸುತ್ತಿದ್ದನು. ಎಲ್ಲರೂ ಪ್ರೇತ ಸಂಸ್ಕಾರದ ಆ ಸ್ಥಳಕ್ಕೆ ಹೊರಟರು. ಅವರ ಹಿಂದೆ ಮುತ್ತೈದೆಯರು ಅವರ ಮಧ್ಯ ಮದುಮಗಳಂತೆ ಶೃಂಗರಿಸಲ್ಪಟ್ಟ ಧರಿಣೀದೇವಿಯು ತಲೆತಗ್ಗಿಸಿ ನಡೆದು ಬರುತ್ತಿದ್ದಳು. ಸ್ಮಶಾನ ಸ್ಥಳ ಸೇರಿದ ಮೇಲೆ ಪುರೋಹಿತರು ಸಮಗ್ರ ಕರ್ಮಕಾಂಡವನ್ನು ನೆರವೇರಿಸಿ ಗಂಧದ ಕಟ್ಟಿಗೆಗಳ ಚಿತೆಯ ಮೇಲೆ ಆಕಾಶರಾಜನ ಕಳೇಬರವನ್ನು ಇಟ್ಟರು. ತುಪ್ಪದ ಕೊಡಗಳನ್ನು ಸುರಿದರು. ವಸುನಾಯಕನು ದಕ್ಷಿಣಾಗ್ನಿ ಸ್ಪರ್ಷಿಸಿದನು. ಚಿತೆಯು ತೇಜೋಮಯವಾಗಿ ಪ್ರಜ್ವಲಿಸಹತ್ತಿತು. ಧರಿಣಿದೇವಿಯು ಚಿತೆಗೆ ಮೂರು ಪ್ರದಕ್ಷಿಣೆ ಹಾಕಿ ಪತಿಯನ್ನು ಮನಸ್ಸಿನಲ್ಲಿ ನೆನೆಯುತ್ತ ಆ ಚಿತೆಯೊಳಗೆ ಪ್ರವೇಶಿಸಿದಳು. ನಿಮಿಷಗಳಲ್ಲಿ ಆ ದಂಪತಿಗಳನ್ನು ವೈಕುಂಠಲೋಕಕ್ಕೆ

ಕರೆದುಕೊಂಡು ಹೋಗುತ್ತಿರುವಂತೆ ಬೆಂಕಿಯು ಮೇಲ್ಕಡೆಗೆ ನಾಲಿಗೆ ಚಾಚುತ್ತ ಉರಿಯುತ್ತಿತ್ತು. ಅಷ್ಟರಲ್ಲಿ ಸ್ವರ್ಗಲೋಕದಿಂದ ದಿವ್ಯ ವಿಮಾನ ಆಕಾಶದಿಂದ ಬಂದು ಇಳಿಯಿತು. ಮೆಲ್ಲನೆ ಆಕಾಶರಾಜನು ಸತಿಸಮೇತನಾಗಿ ಅದರಲ್ಲಿ ಕುಳಿತನು. ಹಿಂದೆಯೇ ವಿಮಾನವು ಅವರನ್ನು ಸ್ವರ್ಗಕ್ಕೆ ತೆಗೆದುಕೊಂಡು ಹೋಯಿತು. ಇಲ್ಲಿ ಎಲ್ಲರೂಅವತ್ತಿನ ಪಿತೃಕರ್ಮವನ್ನು ಮುಗಿಸಿ ಗೃಹೋನ್ಮುಖರಾದರು. ಮುಂದೆ ಆಗಬೇಕಾಗಿರುವ ಪಿತೃಕಾರ್ಯಗಳನ್ನು ವಸುಧಾನನು ವಸಿಷ್ಠಾದಿ ಮಹರ್ಷಿಗಳ, ಪುರೋಹಿತರ, ಬಂಧುಮಿತ್ರರ ಪರಿವಾರಗಳೊಂದಿಗೆ ಶಾಸ್ತ್ರೋಕ್ತವಾಗಿ ಸರ್ವಕಾರ್ಯಗಳನ್ನು ಸಮಾಪ್ತಗೊಳಿಸಿದರು. ಹೀಗೆ ವಸುಧಾನನು ತೋಂಡಮಾನನು ಆಕಾಶರಾಜನ ಕರ್ಮಕಾಂಡವನ್ನು ನಿರ್ವಹಿಸಿ ಮಹರ್ಷಿಗಳಿಗೆ, ವೇದವೇದಾಂಗ ಪಂಡಿತರುಗಳಿಗೆ, ಪುರೋಹಿತರಿಗೆ ಉಚಿತವೆನಿಸಿದ ದಾನ ಮುಂತಾದ ಕಾರ್ಯಗಳನ್ನು ನೆರವೇರಿಸಿ ಬಡಜನರಿಗೆ ತೃಪ್ತಿಯಾಗುವಂತೆ ಅನ್ನದಾನ ಮಾಡಿದರು. ಹೀಗೆ ಆಕಾಶರಾಜನ ಪರಲೋಕಕ್ರಿಯೆಗಳನ್ನು ಮುಗಿಯಿಸಿ, ಬಕುಳಮ್ಮ ಪದ್ಮಾವತಿಯ ಜೊತೆಗೆ ಶ್ರೀನಿವಾಸನು, ವಸಿಷ್ಠಾದಿಮಹರ್ಷಿಗಳು, ಬಂಧುಮಿತ್ರರು ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಹೊರಟುಹೋದರು.

ಹೀಗೆ ಸ್ವಲ್ಪ ಕಾಲಗತಿಸಿದ ನಂತರ, ತೋಂಡಮಾನನು ಮೊದಲು ತಂದೆ ಹಂಚಿಕೊಟ್ಟ ತನ್ನ ರಾಜ್ಯವನ್ನು, ಅಣ್ಣನ ರಾಜ್ಯವನ್ನು ಪೂರ್ತಿಯಾಗಿ ಅಣ್ಣನವರ ಅನುಮತಿಯಂತೆ ಪಾಲಿಸುತ್ತಿದ್ದನು. ಆಕಾಶರಾಜನ ನಂತರದಲ್ಲಿ ತಾನು ಪ್ರತ್ಯೇಕವಾಗಿ ಇರಬೇಕೆಂದು ಎಲ್ಲ ಚರಾಸ್ತಿ ಕಳಿಸುವ ವಿಷಯವನ್ನು ವಸುಧಾನನ ಜೊತೆಗೆ ಭೇದಾಭಿಪ್ರಾಯಗಳು ಇದ್ದ ಕಾರಣ ಕಲಹ ಶುರುವಾಯ್ತು. ಅದಕ್ಕಾಗಿ ಇಬ್ಬರೂ ಶ್ರೀನಿವಾಸನ ಹತ್ತಿರ ಹೋಗಿ ತಮ್ಮ

ವಿವಾದವನ್ನು ಪರಿಷ್ಕರಿಸಬೇಕೆಂದು ಕೋರಿದರು. ಪದ್ಮಾವತಿಯು ತನ್ನ ಸೋದರನಿಗೆ ಮತ್ತು ಚಿಕ್ಕಪ್ಪನಿಗೆ ಸರಿಯಾದ ವಿಧದಲ್ಲಿ ಭಾಗವಿಚಾರಗಳ ಮಾಡಲು ಶ್ರೀನಿವಾಸನನ್ನು ಪ್ರಾರ್ಥಿಸಿದರು. ಅದರಲ್ಲಿ ವಸುಧಾನನ ತೋಂಡಮಾನನ ರಾಜ್ಯಾಕಾಂಕ್ಷೆಯು, ಮುಂದೆ ಆಗುವ ಪರಿಣಾಮಗಳು ಅವುಗಳನ್ನು ಪರೀಕ್ಷಿಸಿ ನೋಡಿದ ಅಗಸ್ತ್ಯನು ಅವರಿಬ್ಬರಿಗೂ ಕ್ಷೇಮಕರವಾದ ಸಂಧಿ ಮಾಡಬೇಕೆಂದು ಯುಕ್ತವೆಂದು, ಅದಕ್ಕಾಗಿಯೇ ಶ್ರೀನಿವಾಸನ ಸಹಕಾರದಿಂದ ಅನ್ಯೋನ್ಯ ಭಾವದಿಂದ ಕಲೆತು ಇರುವುದು ಸುಖವೆಂದು ಹಿತಬೋಧ ಹೇಳಿದನು.

ಶ್ರೀನಿವಾಸನು ಪರೋಕ್ಷವಾಗಿ ಒಬ್ಬರೊಬ್ಬರೊಡನೆ ಸಮಾಲೋಚನೆ ನಡೆಸಿ ಅವರವರ ಅಭಿಪ್ರಾಯಗಳನ್ನು ತಿಳಿದುಕೊಂಡು ಕೊನೆಯ ನಿರ್ಣಯ ಹೇಗಿರಬೇಕೆಂದು ಅವರಿಗೆ ಕೇಳಿದನು. ಆಗ ಅವರಿಬ್ಬರೂ ಶ್ರೀನಿವಾಸನು ಇದ್ದು ಏನು ನಿರ್ಣಯ ಮಾಡುವನೋ ಅದು ತಮಗೆ ಸಂತೋಷವೇ, ಆ ನಿರ್ಣಯಕ್ಕೆ ಬದ್ಧರಾಗಿರುವೆವೆಂದು, ಆ ಮಧ್ಯವರ್ತಿ ತೀರ್ಮಾನಕ್ಕೆ ಬದ್ಧರಾಗಿ ವರ್ತಿಸುವೆವೆಂದು ಹೇಳಿದರು.

ಅವರ ಮಾತುಗಳ ವಿಶ್ವಾಸದಿಂದ ಶ್ರೀನಿವಾಸನು ಅಗಸ್ತ್ಯಮಹರ್ಷಿಗೆ ಕರೆದು ಆತನ ಎದುರು ತನ್ನ ಸಂಧಿ ಸೂಚನೆಗಳನ್ನು ವಸುಧಾನನಿಗೆ ತೋಂಡಮಾನನಿಗೆ ಹೀಗೆ ತಿಳಿಸಿದರು.

ಆಕಾಶರಾಜ ಮತ್ತು ತೋಂಡಮಾನರಿಗೆ ಮೊದಲು ತಂದೆಯು ಹಂಚಿದ ಭಾಗಪದ್ಧತಿಯ ಪ್ರಕಾರ ತೋಂಡಮಾನನು ತೋಂಡಮನಾಡು ರಾಜ್ಯವನ್ನು, ವಸುಧಾನನು ಆಕಾಶರಾಜನ

ರಾಜ್ಯಭಾಗವನ್ನು ನಾರಾಯಣಪುರ ರಾಜಧಾನಿಯಾಗಿ ಪುತ್ರಪೌತ್ರಾದಿಗಳವರೆಗೆ ಪಾಲಿಸಬೇಕು ಎಂದಾಯಿತು.

ತೋಂಡಮಾನನು ಅಣ್ಣ ಆಕಾಶರಾಜನ ಸಹಿತ, ಅಣ್ಣನಿಗೆ ಸರಿಜೋಡಿಯಾಗಿ ಇದ್ದು ಇಲ್ಲಿಯವರೆಗೆ ಪಾಲಿಸಿದ ಚರಾಸ್ತಿ ಸಮಭಾಗಗಳಾಗಿ ಹಂಚಿಕೊಳ್ಳುವುದು. ಧನಾಗಾರದಲ್ಲಿನ ಮೂಲಧನವನ್ನು, ಬಂಗಾರವನ್ನು, ಬೆಳ್ಳಿ, ನವರತ್ನಗಳು, ಮುತ್ತುಗಳು, ಪದಕಗಳು ಎಲ್ಲವೂ ಸಮಭಾಗವಾಗಿ ಮಾಡಬೇಕು. ಇನ್ನು ರಥ, ಗಜ, ತುರಗ, ಗೋಧನವನ್ನು ಸಮಭಾಗವಾಗಬೇಕು. ಸೈನಿಕರು ಬಲಶೌರ್ಯಬುದ್ಧಿಶೀಲಯುಕ್ತ ಪ್ರಕಾರ ಸಮಭಾಗಗಳು. ಉಳಿದ ದಾಸದಾಸಿಯರು ಅವರವರ ಇಷ್ಟದಂತೆ ನಿಯಮಿಸಿಕೊಳ್ಳಬೇಕೆಂದು ಸೂಚಿಸಿದನು.

ಇನ್ನು ಪಾತ್ರೆಗಳು, ಪರಿಕರಗಳು ಇತ್ಯಾದಿಯಾಗಿ ಮೊದಲು ವಸ್ತುಗಳನ್ನು ಸಮಭಾಗ ಮಾಡಿ ಮೊದಲು ಸಣ್ಣವನು ವಸುಧಾನನು ತೆಗೆದುಕೊಳ್ಳುವುದು ಉಚಿತವೆಂದು ಹೇಳಿದನು. ಅದು ಧರ್ಮಪದ್ಧತಿ ಎಂದು ಅಗಸ್ತ್ಯನು ಹೇಳಿದನು. ಆದರೆ ವಸುಧಾನನು, ನಮ್ಮ ಚಿಕ್ಕಪ್ಪ ಮತ್ತು ತಾತನವರು ಹಂಚಿದ ರಾಜ್ಯವನ್ನು ಅವಿಭಕ್ತ ರಾಜ್ಯವಾಗಿ ನಮ್ಮ ತಂದೆಯವರ ಜೊತೆಗೆ ಕಲೆತುಮೆಲೆತು ಇದ್ದು, ಕೂಡಿಯೇ ಪಾಲಸಿದರು ಎಂಬುದಕ್ಕಾಗಿ, ಮೊದಲು ಅವರವರೇ ಬೇಕಾಗುವ ಚರಾಸ್ತಿ ತೆಗೆದುಕೊಳ್ಳುವುದು ಎಂಬುದು ನನ್ನ ಅಭಿಮತ ಎಂದು ಹೇಳಿದನು. ಬಾಲಕನಾದರೂ ವಸುಧಾನನ ಈ ಉತ್ತಮ ಆಶಯಕ್ಕೆ ಅಗಸ್ತ್ಯನು ಬಹು ಸಂತೋಷಿಸಿದನು.

ಆಗ ತೋಂಡಮಾನನು, ಆಸ್ತಿಯೆಲ್ಲ ಪಶ್ಚಿಮ ಪೂರ್ವ ಎಂದು ಎರಡು ಸಮ ಗುಂಪಾಗಿ ಮಾಡಿ ಅವನ್ನು ಭಾಗ 1, ಭಾಗ 2 ಎಂದು ತಿಳಿದು, ಅದರಂತೆ ಎರಡು ಚಿಟ್ಟಿ ಬರೆದು ಸರಿಯಾಗಿ ಮಡಚಿ ಅವುಗಳನ್ನು ಪದ್ಮಾವತಿ ಕೈಗೆ ಕೊಟ್ಟು, ಒಂದು ನನಗೆ ಇನ್ನೊಂದು ವಸುಧಾನನಿಗೆ ಕೊಡಬೇಕೆಂದು ಕೋರಿದನು. ಆಗ ಶ್ರೀನಿವಾಸನು ಅವರ ಸತ್ಯ ಧರ್ಮ ನ್ಯಾಯಗಳಿಗೆ ಮೆಚ್ಚಿ ಸಂತೋಷಗೊಂಡು ನಸುನಗುತ್ತಿದ್ದನು. ಪದ್ಮಾವತಿ ತನ್ನ ಎದುರು ನೆಲದ ಮೇಲೆ ಕೈಯಲ್ಲಿ ಕುಳುಕುಳಿಸಿ ನೆಲಕ್ಕೆ ಹಾಕಿದಳು. ಆ ಚಿಟ್ಟಿಗಳಲ್ಲಿ ಒಂದನ್ನು ಚಿಕ್ಕಪ್ಪನಿಗೆ ಮತ್ತೊಂದು ವಸುಧಾನನಿಗೆ ಕೊಟ್ಟಳು. ಅಗಸ್ತ್ಯನು ಆ ಚಿಟ್ಟಿಗಳನ್ನು ತೆಗೆದುಕೊಂಡು ಬಿಚ್ಚಿ ನೋಡಿ, 'ಅಮ್ಮನವರು ಲೋಕಧರ್ಮವನ್ನು ಚೊಕ್ಕವಾಗಿ ಧರ್ಮದೇವತೆಯಂತೆ ನಿರೂಪಿಸಿದ್ದಾಳೆ. ದೊಡ್ಡವರು ಮೇಲಿನ ಭಾಗದಲ್ಲಿ, ಚಿಕ್ಕವರು ಕೆಳಗಿನ ಭಾಗದಲ್ಲಿ ಇರುವುದು ಸಕಲ ಶ್ರೇಯಸ್ಕರವು. ಹೀಗೆ ಎಲ್ಲರೂ ತಮ್ಮ ತಮ್ಮ ಧರ್ಮವನ್ನು ನೆರವೇರಿಸುತಾರೆ. ಶ್ರೀನಿವಾಸನ ಈ ಸಂಧಿ ಶುಭವಾಯಿತು. ಈ ರೀತಿ ಕಲಿಕಾಲದ ಪ್ರಜೆಗಳಲ್ಲಿ ಅನ್ಯೋನ್ಯ ಭಾವದಿಂದ ಪಿತ್ರಾರ್ಜಿತವನ್ನು ಭಾಗ ಮಾಡಿಕೊಳ್ಳಬೇಕು, ಅಲ್ಲವೇ!' ಎಂದಾಗ ತೋಂಡಮಾನನು ವಸುಧಾನನು ಶ್ರೀನಿವಾಸನನಿಗೆ ಅಗಸ್ತ್ಯನಿಗೆ ಸಾಷ್ಟಾಂಗ ನಮಸ್ಕರಿಸಿದರು. ಆ ಸಂಧಿ ತೀರ್ಪಿಗೆ ಇಬ್ಬರೂ ಸಂತೋಷಗೊಂಡರು. ತೋಂಡಮಾನನು ವಸುಧಾನನು ಸಂತೋಷದಿಂದ ಅಯಾಚಿತವಾಗಿ ಬಂದ ಪದ್ಮಾವತಿಗೆ ಒಳ್ಳೆಯ ಹದಿನಾರು ಗ್ರಾಮಗಳನ್ನು 'ಹೆಣ್ಣುಮಗಳು' ಎಂದು ಕಾಣಿಕೆಯಾಗಿ ಕೊಟ್ಟರು. (ಹೆಣ್ಣುಮಕ್ಕಳಿಗೆ ಮಡಿಮಾನ್ಯಗಳು, ಗ್ರಾಮಗಳು ಬಹುಮಾನವಾಗಿ ಕೊಡುವುದು ಆಗಿನಿಂದ ಆಚರಣೆಯಲ್ಲಿದೆ.) ಈ

ರೀತಿಯಲ್ಲಿ ತೋಂಡಮಾನ ಮತ್ತು ವಸುಧಾನರಲ್ಲಿ ಭೇದಭಾವವು ಕರಗಿ ಹೋಗಿ ಅವರು ಐಕಮತ್ಯದಿಂದ ಇದ್ದರು. ಶ್ರೀನಿವಾಸನು ತೋಂಡಮನಾಡಿಗೆ ತೋಂಡಮಾನನನ್ನು ಪ್ರತಿಷ್ಠಿಸಿದನು. ನಾರಾಯಣಪುರ ರಾಜ್ಯಕ್ಕೆ ವಸುಧಾನನನ್ನು ರಾಜ್ಯಾಭಿಷೇಕಮಾಡಿದನು. ಕೆಲವು ದಿನ ಭಾವಮೈದುನನ ಮನೆಯಲ್ಲಿ ಹಾಗೂ ಕೆಲವು ದಿನ ಚಿಕ್ಕ ಮಾವನ ಮನೆಯಲ್ಲಿ ಇದ್ದು ಇಷ್ಟಮೃಷ್ಟಾನ್ನಗಳೊಂದಿಗೆ ಸಂತೃಪ್ತಿ ಹೊಂದಿದನು. ಶ್ರೀನಿವಾಸನು ಪದ್ಮಾವತಿ ಮತ್ತು ಬಕುಳಮ್ಮನೊಂದಿಗೆ ಒಂದು ಶುಭದಿನದಂದು ನಾರಾಯಣಪುರದಿಂದ ವೆಂಕಟಾಚಲದ ನಿವಾಸಕ್ಕೆ ಹೊರಟರು.

ತೋಂಡಮಾನನು ತೋಂಡಮನಾಡು ರಾಜಧಾನಿಯಾಗಿ ಒಳ್ಳೆಯ ಆದರ್ಶಪ್ರಾಯವಾದ ರಾಜ್ಯಪಾಲನ ಮಾಡುತ್ತಿದ್ದನು. ಪ್ರಜೆಗಳಿಗೆ ಸಾಕಷ್ಟು ಸೌಕರ್ಯಗಳನ್ನು ಒದಗಿಸಿದನು. ತನ್ನ ಕೋಟೆಯೊಳಗೆ ಜನರ ಭಕ್ತಿಭಾವಗಳ ಅಭಿವೃದ್ಧಿಗೆ ಶ್ರೀ ವೆಂಕಟೇಶ್ವರ ದೇವಾಲಯವನ್ನು ನಿರ್ಮಿಸಿದನು.

ನಾರಾಯಣಪುರ ರಾಜಧಾನಿಯಾಗಿ ವಸುಧಾನನು ಪ್ರಜೆಗಳ ಮನಸ್ಸಿಗೆ ಅನುಗುಣವಾಗಿ ಪಾಲಿಸುತ್ತಿದ್ದನು. ರಾಜನಲ್ಲಿ ಪ್ರಜೆಗಳಿಗೆ ಭಕ್ತಿಶ್ರದ್ಧೆಗಳು ಹುಟ್ಟಿ, ವಿಧೇಯರಾಗಿ ರಾಜಭಕ್ತಿಯಿಂದ ನಡೆದುಕೊಂಡು ಕೀರ್ತಿಗೆ ಪಾತ್ರರಾದರು.

## 28. ತೋಂಡಮಾನನು ಶ್ರೀನಿವಾಸ ಮತ್ತು ಪದ್ಮಾವತಿಗೆ ನೋಡಲಿಕ್ಕೆ ವೆಂಕಟಾಚಲಕ್ಕೆ ಹೋಗುವುದು

ಕೆಲವು ದಿನಗಳ ನಂತರ ತೋಂಡಮಾನ ಚಕ್ರವರ್ತಿಯು ಶ್ರೀನಿವಾಸನನ್ನು ಪದ್ಮಾವತಿಯನ್ನು ನೋಡಲು ಬಂದನು. ಹೀಗೆ

ಬಂದ ತೋಂಡಮಾನನನ್ನು ಶ್ರೀನಿವಾಸನು ಮತ್ತು ಪದ್ಮಾವತಿಯು ಬಹಳ ಆದರಪೂರ್ವಕವಾಗಿ ಸ್ವಾಗತಿಸಿ ಉಭಯಕುಶಲ ಪ್ರಶ್ನಾನಂತರ ಮತ್ತು ಸ್ನಾನ ಮುಗಿದ ನಂತರ ಎಲ್ಲರೂ ಭೋಜನ ಮಾಡಿದರು. ಆಮೇಲೆ ಶ್ರೀನಿವಾಸನು ತೋಂಡಮಾನನನ್ನು ತನ್ನ ಪಕ್ಕದಲ್ಲಿ ಕೂಡಿಸಿಕೊಂಡು ತಾಂಬೂಲ ಸೇವನೆ ಮಾಡುತ್ತ ಆತನು ಬಂದ ಕಾರಣ ಏನೆಂದು ಕೇಳಿದನು. ಆಗ ಆತನು 'ಲೋಕೇಶ್ವರಾ! ಲೋಕಜ್ಞರೆಲ್ಲರೂ ತಮ್ಮನ್ನು ಭಗವಂತನೆಂದು, ಪುರುಷೋತ್ತಮನೆಂದು, ಭಕ್ತರಕ್ಷಕನೆಂದು, ಧರ್ಮಸಂಸ್ಥಾಪಕನೆಂದು ಎಷ್ಟೋ ರೀತಿಯಲ್ಲಿ ಹೊಗಳುತ್ತಿದ್ದಾರೆ. ನನಗೆ ತಿಳಿದಿರುವಂತೆ ತಮ್ಮ ಸಂಸ್ತುತಿಯು ಸತ್ಯಸಮ್ಮತವಾಗಿಯೇ ಇದೆಯೆಂದು ತಮ್ಮ ದಿವ್ಯದರ್ಶನ ಪಡೆಯುವ ಇಚ್ಛೆಯಿಂದ ಬಂದೆನು.' ಹೇಳಿದ್ದನ್ನು ಕೇಳಿ ಶ್ರೀನಿವಾಸನು ಆ ರಾಜನ ಭಕ್ತಿಗೆ ಮೆಚ್ಚಿ 'ರಾಜಾ, ನಿಮ್ಮ ಅಣ್ಣ ಆಕಾಶರಾಜನು ವೆಂಕಟಾಚಲದಲ್ಲಿ ಇರುವ ನನ್ನನ್ನು ಕೇವಲ ಗೃಹಸ್ಥನೆಂದು ಭಾವಿಸಿದನು. ಈಗ ನೀನೊಂದು ಮಹಾಕಾರ್ಯವೊಂದು ಮಾಡಿ ಚರಿತ್ರಾರ್ಹನಾಗು,'

'ಸ್ವಾಮಿ, ನಿನ್ನ ಆಜ್ಞೆಯನ್ನು ಭಕ್ತಿಶ್ರದ್ಧೆಗಳಿಂದ ನಿರ್ವಹಿಸುವೆನು. ಇಷ್ಟಾಗಿ ಜಗದ್ರಕ್ಷಕರಾದ ನಿಮ್ಮ ಅನುಗ್ರಹದಿಂದ ನೆರವೇರಿಸುವೆನೆಂಬ ನಂಬಿಕೆ ನನಗಿದೆ.'

'ನೀನು ಮಾಡುವಿ ಎಂಬ ನಂಬಿಕೆಯಿಂದಲೇ ಹೇಳುತ್ತಿದ್ದೇನೆ. ಈ ಕಾರ್ಯವು ನಿನ್ನಿಂದ ಜರುಗಿದರೆ ನಾನು ಸಂಪೂರ್ಣ ಗೃಹಸ್ಥನಾಗುವೆನು. ಪ್ರಸ್ತುತ ನನಗೆ ತಕ್ಕುದಾದ ನಿವಾಸವೊಂದು ಇಲ್ಲ. ಈಗ ಈ ಹುಣಿಸೆಮರದ ಕೆಳಗಡೆ ಇರುವ ಹುತ್ತಿನಲ್ಲಿ

ನಿವಾಸಿಸುತ್ತಿದ್ದೇನೆ. ಅದಕ್ಕಾಗಿ ನನಗೊಂದು ಮನೆಯು ಅವಶ್ಯವಾಗಿದೆ.'

'ಸ್ವಾಮಿ, ಸ್ಥಳನಿರ್ಣಯವಾದ ಮೇಲೆ ನಾನು ಆ ಕಾರ್ಯವನ್ನು ಪ್ರಾರಂಭಿಸುತ್ತೇನೆ.'

'ಸಂತೋಷ, ಆ ಕಟ್ಟಡಕ್ಕಾಗಿ ಸ್ಥಳವನ್ನು ನೋಡೋಣ ಬಾ' ಎಂದು ಹೇಳಿ ತಾನು, ಪದ್ಮಾವತಿ ಮತ್ತು ಬಕುಳಮ್ಮ ಎಲ್ಲರೂ ತೋಂಡಮಾನನ ಹಿಂದೆ ಹೋಗಿ, ವರಾಹಸ್ವಾಮಿಯ ದರ್ಶನ ಪಡೆದು, ತನ್ನ ಮನೆ ಕಟ್ಟಲು ನಿವೇಶದ ಬಗ್ಗೆ ಹೇಳಿದಾಗ, ವರಾಹಸ್ವಾಮಿಯು ತನ್ನ ದಕ್ಷಿಣಕ್ಕೆ ಸ್ವಾಮಿಪುಷ್ಕರಿಣಿಗೆ ಹತ್ತಿರವೇ ಆಲಯನಿರ್ಮಾಣಕ್ಕೆ ಒಳ್ಳೆಯ ಸ್ಥಳವೆಂದು ಹೇಳಿದಾಗ, ಶ್ರೀನಿವಾಸನು ತೋಂಡಮಾನನಿಗೆ ಆ ಸ್ಥಳವನ್ನು ತೋರಿಸಿ 'ಇಲ್ಲಿ ಪೂರ್ವಕ್ಕೆ ಮುಖವಾಗಿ ಆಲಯವು, ಎರಡು ಗೋಪುರಗಳು, ಮೂರು ಪ್ರಾಕಾರಗಳು, ಸಪ್ತದ್ವಾರಗಳು, ಆಲಯದಲ್ಲಿ ಆಸ್ಥಾನಮಂಟಪವು, ಯಜ್ಞಶಾಲೆ, ಗೋಶಾಲೆಗಳು ಇರುವ ವಲಯವು ಮತ್ತು ಧಾನ್ಯಾಗಾರಗಳು, ಇತರ ಸಂಭಾರಗಳಿಗೆ ಬೇಕಾಗುವ ಕೋಣೆಗಳು, ಮಾಲಾಗೃಹಗಳು, ವಿವಿಧ ಸಾಮಗ್ರಿಗಳನ್ನು ಹಾಕಲು ಮತ್ತೊಂದು ಕೋಣೆ, ಆಗ್ನೇಯಕ್ಕೆ ಸಕಲ ಸೌಕರ್ಯಗಳಿಂದ ಪಾಕಶಾಲೆ, ಅದರ ಎದುರು ನೀರಿಗಾಗಿ ಒಂದು ಬಾವಿ ಇರಬೇಕು, ಆಲಯದ್ವಾರಗಳು, ಅಂತಃಪುರದ ದ್ವಾರಗಳು, ತಾಮ್ರದ ಪಟ್ಟಿಗಳನ್ನು ಬಂಗಾರ ಲೇಪ ಮಾಡಿದ ಬಂಗಾರದ ಬಾಗಿಲು ಇರಬೇಕು. ನನ್ನ ಎದುರು ಗರುಡನ ಮನೆಯು ಇರಬೇಕು,' ಎಂದುದ್ದನ್ನು ಕೇಳಿ ತೋಂಡಮಾನನು ಅತಿಶಯ ಸಂತೋಷಗೊಂಡು, ಸ್ವಾಮಿಗಳ ಆಜ್ಞೆ ನೆರವೇರಿಸುವೆನು ಎಂದಾಗ ಶ್ರೀನಿವಾಸನು 'ಮುಂಚೆ ನೀನು ನನಗೆ ತೀರ್ಥನಿರ್ಮಾಣ

ಮಾಡಿದ್ದೀಯೆಂದು ಅದಕ್ಕೆ ನಿನ್ನಿಂದಲೇ ಈ ಕಾರ್ಯ ಸಾಧ್ಯವೆಂದು ತಿಳಿದು ನಿನಗೆ ಕೇಳಿಕೊಂಡೆನು.'

'ಸ್ವಾಮಿ! ಎಲ್ಲವೂ ತಮ್ಮ ಅನುಗ್ರಹವು, ನಾನು ಕೇವಲ ನಿಮಿತ್ತ ಮಾತ್ರನು. ತಮ್ಮ ಸಂಕಲ್ಪವಿಲ್ಲದೇ ಯಾರೂ ಯಾವ ಕೆಲಸವನ್ನು ಮಾಡಲಾರರು, ಎಲ್ಲದಕ್ಕೂ ತಮ್ಮ ಅನುಗ್ರಹವೇ ಕಾರಣವು. ಆದರೂ ಸ್ವಾಮಿ! ತಮಗೊಂದು ಮನವಿ, ಇಲ್ಲಿಯವರೆಗೆ ನಾನು ಯಾವಾಗ ಹೇಗೆ ತೀರ್ಥಸೇವೆ ಮಾಡಿದೆನೋ ಅದನ್ನು ತಿಳಿಯಬೇಕೆಂದಿದ್ದೇನೆ.' ಎಂದಾಗ ಸ್ವಾಮಿಯು ಆತನಿಗೆ ಹೀಗೆ ಪೂರ್ವವೃತ್ತಾಂತವನ್ನು ಹೇಳತೊಡಗಿದನು.

## 29. ರಂಗದಾಸನ ವೃತ್ತಾಂತ

'ಪೂರ್ವದಲ್ಲಿ ನಾನು ಹುತ್ತಿನಲ್ಲಿ ತಪೋನಿಷ್ಠನಾಗಿರುವ ಸಮಯದಲ್ಲಿ ವೈಖಾನಸ ಎಂಬ ಮಹರ್ಷಿಯು ನನ್ನ ಕೃಷ್ಣಾವತಾರದ ಕಥೆ ಕೇಳಿ, ದ್ವಾಪರಯುಗದಲ್ಲಿನ ಶ್ರೀಕೃಷ್ಣನ ರೂಪವನ್ನು ನೋಡಲು ಇಚ್ಛಿಸಿ, ತಪವನ್ನು ಆಚರಿಸುತ್ತಿದ್ದನು. ಆ ತಪಸ್ಸು ಫಲಿಸಿ ಬ್ರಹ್ಮನು ಪ್ರತ್ಯಕ್ಷನಾದನು. ಆತನ ಕೋರಿಕೆ ಏನೆಂದು ವಿಚಾರಿಸಿ ತಿಳಿದುಕೊಂಡು, ಇನ್ನು ನೀನು ಶ್ರೀಕೃಷ್ಣನ ರೂಪವನ್ನು ಆಶಿಸಬಾರದು. ಈ ಕಲಿಯುಗದಲ್ಲಿ ಆ ಶ್ರೀಕೃಷ್ಣನು ವೆಂಕಟಾಚಲಪತಿಯಾಗಿ ಬಂದಿದ್ದಾನೆ. ಅದಕ್ಕಾಗಿ ನೀನು ಆ ವೆಂಕಟಾಚಲಪತಿಯನ್ನು ಪೂಜಿಸಿ ಧನ್ಯನಾಗು, ನೀನು ವೆಂಕಟಾಚಲಕ್ಕೆ ಹೋಗಿ, ಅಲ್ಲಿ ಸ್ವಾಮಿಪುಷ್ಕರಿಣಿಗೆ ದಕ್ಷಿಣಕ್ಕೆ ಇರುವ ಹುಣಿಸೆಮರದ ಬುಡದಲ್ಲಿ ವಲ್ಮಿಕದಲ್ಲಿರುವ ವೈಕುಂಠವಾಸನನ್ನು ಪೂಜಿಸು. ನೀನು ವೆಂಕಟಾಚಲಕ್ಕೆ ಹೋಗುವ ಮಾರ್ಗದಲ್ಲಿ ರಂಗದಾಸನೆಂಬ ಒಬ್ಬ ಭಕ್ತನು ಕಾಣಿಸುತ್ತಾನೆ. ಆತನು ನಿನಗೆ

ಸರಿಯಾದ ವ್ಯಕ್ತಿ. ನಿನ್ನ ಪೂಜಿಸುವ ವೈಕುಂಠನಾಥನಾದ ವೆಂಕಟಾಚಲಪತಿಗೆ ಬಹಳ ಪ್ರೀತಿಪಾತ್ರನಾದವನು. ನಿನಗೆ ಆತನು ದಿವ್ಯದರ್ಶನ ಸೇವೆ ಮಾಡಿಸಿದಾಗ ಸುಖಪ್ರಾಪ್ತಿ ಹೊಂದುವಿ.' ಎಂದು ಹೇಳಿದಾಗ ಆ ವೈಖಾನಸಭಕ್ತನು ವೆಂಕಟಾಚಲಕ್ಕೆ ಪ್ರಯಾಣ ಮಾಡುವಾಗ ರಂಗದಾಸನೆಂಬ ಭಕ್ತನು ಸಿಕ್ಕನು. ವೈಖಾನಸ ಮಹರ್ಷಿಯು ಅತೀವ ಸಂತೋಷಗೊಂಡು ಆ ರಂಗದಾಸನ ಸ್ನೇಹವನ್ನು ಗಳಿಸಿ, ವೆಂಕಟಾಚಲಕ್ಕೆ ಹೋಗಿ, ಸ್ವಾಮಿ ಪುಷ್ಕರಿಣಿ ಹತ್ತಿರದ ಹುಣಿಸೆಮರದ ಕೆಳಗೆ ಒಂದು ದೊಡ್ಡ ಹುತ್ತನ್ನು ನೋಡಿ, ಮಹದಾನಂದವಾಗಿ ಆ ಹುತ್ತದ ಸಮೀಪಕ್ಕೆ ಹೋಗಿ ನೋಡಿದಾಗ ಅದರಲ್ಲಿ ಒಬ್ಬ ದಿವ್ಯಪುರುಷನು ತಪಸ್ಸಿನಲ್ಲಿರುವದನ್ನು ಕಂಡು ಆತನೇ ವೆಂಕಟಾಚಲಪತಿ ಎಂದು ಗ್ರಹಿಸಿ, ನಮಸ್ಕರಿಸಿ, ತನ್ನ ವೃತ್ತಾಂತವನ್ನು ರಂಗದಾಸನಿಗೆ ಹೇಳಿದನು. ರಂಗದಾಸನು ನಿತ್ಯದಲ್ಲಿ ಸ್ವಾಮಿಪೂಜೆಗೆ ಬೇಕಾದ ಹೂಹಣ್ಣುಗಳನ್ನು ಸಮಿಪದ ವನದಲ್ಲಿ ತಿರುಗಿ ಸಂಗ್ರಹಿಸಿದ್ದನ್ನು ಪಡೆದು ವೈಖಾನಸಮಹರ್ಷಿಯು ವಲ್ಮಿಕದಲ್ಲಿನ ನನ್ನನ್ನು ಪೂಜಿಸುತ್ತಿದ್ದನು.

ರಂಗದಾಸನು ಆ ಪುಷ್ಕರಿಣಿ ಪ್ರಾಂತದಲ್ಲಿ ಪೂಜೆಗೆ ಬೇಕಾಗುವ ಹೂಗಳ ಗಿಡಗಳನ್ನು ನಾಟಿಸಿ, ತುಳಸಿ ವೃಕ್ಷಗಳೊಂದಿಗೆ ಬೆಳೆಸಹತ್ತಿದನು. ನಿತ್ಯವೂ ಪುಷ್ಕರಿಣಿಯ ನೀರನ್ನು ತಂದು ಹಾಕಿ ಅಲ್ಲಿ ಹೂದೋಟವನ್ನು ಸರಿಯಾಗಿ ಬೆಳಸಿದನು. ಆ ತೋಟದಲ್ಲಿ ಒಂದು ಬಾವಿ ಇದ್ದರೆ ತನಗೆ ಶ್ರಮ ಕಡಿಮೆಯಾಗುವುದೆಂದು ತಿಳಿದು ಉತ್ತಮ ಬಾವಿಯೊಂದನ್ನು ನಿರ್ಮಿಸಿದನು. ಹೀಗೆ ರಂಗದಾಸನ ಹೂದೋಟವು ಬಾವಿಯ ನೀರಿನಿಂದ ಪೋಷಿಸುತ್ತಲೇ ಸುತ್ತ ಮುತ್ತ ಫಲವೃಕ್ಷಗಳನ್ನು ಹಚ್ಚಿದನು. ಆ ಹೂದೋಟದಲ್ಲಿ ವಿವಿಧ ಪುಷ್ಪಗಳು ಮತ್ತು ಅವುಗಳ ಸುವಾಸನೆಗಳು ಕೂಡಿ ಬಾಡದೇ ಇದ್ದವು.

ಒಂದು ದಿನ ಗಂಧರ್ವನು ತನ್ನ ಪತ್ನಿಯೊಂದಿಗೆ ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನ ಮಾಡುತ್ತಿದ್ದನು. ಸುತ್ತಲಿನ ಹುಲ್ಲಿನಲ್ಲಿ ಕಾಣದಿದ್ದರೂ ರಂಗದಾಸನು ಅವರ ಮಿಥುನವನ್ನು ನೋಡಿ ಅವರ ಜಲಕೇಳಿ ವಿಲಾಸವನ್ನು ನೋಡಿ ತನ್ನ ಕಾರ್ಯವನ್ನು ಮರೆತು ಹಾಗೆಯೇ ನಿಂತುಕೊಂಡು ಆ ಗಂಧರ್ವರ ಜೋಡಿಯ ರೂಪಲಾವಣ್ಯಗಳನ್ನು ನೋಡಿ, ಜಲಕೇಳಿ ವಿನೋದಗಳನ್ನು ಕೇಳಿ ಮತಿಭ್ರಮೆಗೊಂಡು ತಾನು ಪೂಜೆಯ ಸಮಯವನ್ನು ಮರೆತು ಬಿಟ್ಟನು. ಸಕಾಲದಲ್ಲಿ ಸ್ವಾಮಿ ಪೂಜೆಗೆ ಬೇಕಾಗುವ ಪುಷ್ಪಫಲಗಳು ಬಾರದಿದ್ದಕ್ಕಾಗಿ ವೈಖಾನಸಮಹರ್ಷಿಯು ಕೋಪೋದ್ರೇಕನಾದನು. ಆಗ ಆ ರಂಗದಾಸನು ಪುಷ್ಪಫಲಗಳಿಂದ ಬಂದು, ಮಹರ್ಷಿಯು ಕೋಪದಲ್ಲಿದ್ದುದ್ದನ್ನು ನೋಡಿ, ತನ್ನಿಂದ ತಡವಾಗಿದ್ದು ತಪ್ಪು ಆದದ್ದನ್ನು ತಿಳಿದು, ಭಯಭ್ರಾಂತನಾಗಿ ಮುಂದೆ ಕಣ್ಣಿರು ಸುರಿಸುತ್ತ, ಭಗವಂತನನ್ನು ಮನಸಾ ನೆನೆದು ಪ್ರಾರ್ಥಿಸಿ ತನ್ನ ತಪ್ಪನ್ನು ಮನ್ನಿಸಬೇಕೆಂದು ಕೇಳಿಕೊಂಡನು. ಅನುತಾಪ ಹೊಂದಿದ ರಂಗದಾಸನ ಮೇಲೆ ನನಗೆ ಕನಿಕರ ಬಂದು ಸಮಾಧಾನ ಮಾಡಿ, ತನ್ನ ಮಾಯೆಯಿಂದ ರಂಗದಾಸನಿಗೆ ಮತಿಭ್ರಮಣ ಆಗಿತ್ತೆಂದು, ಕೊನೆಗೆ ಆತನು ಪಶ್ಚಾತ್ತಾಪದಿಂದ ಪಾಪವು ಪರಿಹಾರವಾಯಿತೆಂದು, ಪರಿಶುದ್ಧನಾದನೆಂದು, ಆ ಸುಕೃತ ಫಲದಿಂದ ಪುಷ್ಕರಿಣಿ ತೀರದಲ್ಲಿ ಮೃತನಾಗಿ, ಮರುಜನ್ಮದಲ್ಲಿ ಚೋಳರಾಜನಿಗೆ ಮತ್ತು ನಾಗಕನ್ಯೆಗೆ ಮಗನಾಗಿ ಹುಟ್ಟಿ ಬಂದು, ತೊಂಡೆಬಳ್ಳಿಗಳ ಸಂಬಂಧದಿಂದ ಆ ರಂಗದಾಸನೇ ಈ ತೋಂಡಮಾನನು ಎಂದು ಪೂರ್ವವೃತ್ತಾಂತವನ್ನು ತಿಳಿಸಿ 'ನೀನು ಧನ್ಯನು, ವೈಖಾನಸ ಪೂಜೆಗೆ ನೀನು ಪುಷ್ಪವನವನ್ನು ಬೆಳೆಸಿ, ಅಲ್ಲಿ ಒಂದು ಬಾವಿ ತೋಡಿಸಿದಿ. ಹೀಗೆ ನೀನು ಶ್ರೀಕರಪುಷ್ಪ ಫಲ ತೀರ್ಥ ಸೇವೆ ಮಾಡಿದವನು. ಅಲ್ಲದೇ ನನಗೂ ಅತಿಪ್ರೀತಿಪಾತ್ರನು'

ಎಂದು ಹೇಳಿದಾಗ ತೋಂಡಮಾನನು ಅತ್ಯಧಿಕ ಭಕ್ತಿಭಾವಗಳಿಂದ ಸ್ವಾಮಿ ಪಾದಗಳಿಗೆ ನಮಸ್ಕರಿಸಿ, ಕಣ್ಣಲ್ಲಿ ಆನಂದಭಾಷ್ಪ ಹರಿಯುತ್ತಿರುವಂತೆ, ಬಾಯಿಯಲ್ಲಿ ಮಾತು ಬರದೇ, ಹೇಗೋ ಗಂಟಲು ಸರಿಪಡಿಸಿಕೊಂಡು 'ಸ್ವಾಮಿ! ದಯಾಳು, ತಾವು ಕೋರಿದ ದೇವಾಲಯವನ್ನು ಶೀಘ್ರವೇ ನಿರ್ಮಿಸಿ ತಮಗೆ ಸಂತೋಷವನ್ನುಂಟು ಮಾಡುವೆನು' ಎಂದು ಹೇಳಿ ಪದ್ಮಾವತಿ ಶ್ರೀನಿವಾಸರ ಅನುಮತಿ ಪಡೆದು ತೋಂಡಮನಾಡಿಗೆ ಹೋದನು.

ಭಕ್ತಿಶ್ರದ್ಧೆಗಳಿಂದ ಅತ್ಯಂತ ಸಂಪೂರ್ಣಭಾವದಿಂದ ತನ್ನನ್ನು ಪೂಜಿಸಿದ ವೈಖಾನಸ ಮಹರ್ಷಿಗೆ ದರ್ಶನ ಕೊಟ್ಟು ವೆಂಕಟಾಚಲಪತಿಯು ಆತನ ಪೂಜೆಯು ತನಗೆ ಬಹಳ ಪ್ರೀತಿಪಾತ್ರವಾಗಿದೆ ಎಂದು ನಿತ್ಯವೂ ವೈಖಾನಸ ಪರಂಪರೆಯಿಂದಲೇ ತನಗೆ ಪೂಜೆಗೈಯಬೇಕೆಂದು ಆ ವೈಖಾನಸ ಮಹರ್ಷಿಗಳಿಗೆ ಹೇಳಿ ಆತನನ್ನು ಸಂತೋಷಗೊಳಿಸಿದನು. ಇಲ್ಲಿಯವರೆಗೆ ಸ್ವಾಮಿವಾರಿಗಳಿಗೆ ವೈಖಾನಸ ಭಕ್ತರೇ ಹೆಚ್ಚಿನ ದೀಕ್ಷೆಯಿಂದ ಪೂಜೆಗಳನ್ನು ನಿರ್ವಹಿಸುತ್ತಿದ್ದಾರೆ. ರಂಗದಾಸನು ತೋಡಿದ ಬಾವಿ ಇನ್ನೂ ಅಲ್ಲಿ ನೋಡಬಹುದು. ಆಲಯದೊಳಗೆ ಧ್ವಜಸ್ತಂಭದ ಉತ್ತರಕ್ಕೆ ಆ ಬಾವಿ ಇದೆ. ಇದೀಗ ಆ ಬಾವಿ ಪಾಕಶಾಲೆಯ ಎದುರಿಗೆ ಕಾಣಬಹುದು.

## 30. ತೋಂಡಮಾನನು ಶ್ರೀನಿವಾಸನ ಆಜ್ಞೆ ಪ್ರಕಾರ ಶ್ರೀವಾರಿಗೆ ಆಲಯ ನಿರ್ಮಾಣ ಮಾಡುವುದು

ತೋಂಡಮಾನ ಚಕ್ರವರ್ತಿಯು ಸ್ವರಾಷ್ಟ್ರಕ್ಕೆ ಬಂದು ವಾಸ್ತುಶಾಸ್ತ್ರಜ್ಞರನ್ನು ಕರೆಯಿಸಿ ಶ್ರೀನಿವಾಸನು ಕೇಳಿರುವ ಆಲಯನಿರ್ಮಾಣಕ್ಕೆ ಬೇಕಾಗುವ ಯೋಜನೆ ಮತ್ತು ಅದರ

ನಕ್ಷೆಯನ್ನು ಮಾಡಿಸಿದನು. ಅದನ್ನು ತನ್ನ ಪುರೋಹಿತರ ಕೈಯಿಂದ ಶ್ರೀನಿವಾಸನಿಗೆ ಕಳುಹಿಸಿದನು. ಶ್ರೀನಿವಾಸನು ಆ ನಕ್ಷೆಯನ್ನು ಅನುಮೋದಿಸಿದನು. ಮುಂದೆ ತೋಂಡಮಾನನು ಶಿಲ್ಪಪ್ರಧಾನರನ್ನು ಕರೆಯಿಸಿ, ಆ ನಕ್ಷೆಯ ಪ್ರಕಾರ ತಿರುಮಲದಲ್ಲಿ ಆಲಯನಿರ್ಮಾಣ ಆಗಬೇಕೆಂದು ಆಜ್ಞೆ ಮಾಡಿದನು. ಆ ಶಿಲ್ಪಿಗಳು ನುರಿತ ಕೆಲಸಗಾರರನ್ನು ಕರೆದು, ಆಲಯನಿರ್ಮಾಣಕ್ಕೆ ಬೇಕಾಗುವ ವಸ್ತುಸಾಮಗ್ರಿಗಳನ್ನು ಸಂಗ್ರಹಿಸಿದರು. ಒಂದು ಶುಭಮುಹೂರ್ತದಲ್ಲಿ ಶಂಕುಸ್ಥಾಪನೆ ನೆರವೇರಿಸಿದರು. ರಾತ್ರಿಕೆಲಸದವರು, ಹಗಲು ಕೆಲಸದವರು ತಮ್ಮ ತಮ್ಮ ಕೆಲಸವನ್ನು ಪ್ರಾರಂಭಿಸಿದರು. ಆಲಯನಿರ್ಮಾಣಕ್ಕೆ ಬೇಕಾಗುವ ದೊಡ್ಡಬಂಡೆಗಳನ್ನು, ಸ್ತಂಭಗಳನ್ನು, ಉದ್ದನೆಯ ಹೊಸ್ತಿಲು ಕಲ್ಲುಗಳು, ಚೌಕದ ಕಲ್ಲುಗಳು, ದ್ವಾರಬಂಡೆಗಳನ್ನು ಮೊದಲೇ ತರಿಸಿ ಶಿಲ್ಪಿಗಳು ತಮ್ಮ ಶಿಲ್ಪವಿದ್ಯೆಯ ಪ್ರವೀಣತೆಯ ಪ್ರಕಾರ ಕೆತ್ತಲಿಕ್ಕೆ ಪ್ರಾರಂಭಿಸಿದರು. ಕೆಲಸದವರು ಈಶಾನ್ಯ ಭಾಗದಿಂದ ಆಲಯ, ಪ್ರಾಕಾರಗಳನ್ನು ನಿರ್ಮಾಣ ಪ್ರಾರಂಭ ಮಾಡಿದರು. ಆಗಾಗ ತೋಂಡಮಾನನು ವೆಂಕಟಾಚಲಕ್ಕೆ ಹೋಗಿ ಕೆಲಸದವರನ್ನು ಪ್ರೋತ್ಸಾಹಿಸುತ್ತ, ಬೇಕಾದ ಬೇಡಾದ ಮಾರ್ಪಾಟುಗಳನ್ನು ಮಾಡಿಸುತ್ತಿದ್ದನು. ಶ್ರೀನಿವಾಸನೂ ಕೂಡ ಮೇಲ್ವಿಚಾರಕ್ಕಾಗಿ ಬಂದು ಹೋಗುತ್ತಿದ್ದನು. ಸ್ವಾಮಿಯ ಅಭಿಮತದಂತೆ ಮಹೋನ್ನತವಾಗಿ, ಉಜ್ವಲವಾಗಿ ಎಲ್ಲ ಕಟ್ಟಡಗಳಿಂದ ದೇವಾಲಯ ಮುಂತಾಗಿ ನಿರ್ಮಾಣವು ಚುರುಕಾಗಿ ನಡೆಯುತ್ತಿತ್ತು. ಚತುರ್ಮೂರ್ತಿ ಸಹಿತವಾಗಿ, ವೈನತೇಯ ವಿಭೂಷಿತವಾಗಿ, ಸುವರ್ಣಕಳಶಯುತವಾಗಿ ಹೀಗೆ ವಿವಿಧ ಪ್ರತಿಮೆಗಳಿಂದ ವಿಮಾನ ನಿರ್ಮಾಣ ಸಾಗುತ್ತಿತ್ತು. ಕೆಲವು ದಿನಗಳಲ್ಲಿ ಶ್ರೀವಾರಿ ಅಪೇಕ್ಷೆ ಮೇರೆಗೆ ಆಲಯಾದಿಗಳು ಎಲ್ಲ

ರೀತಿಯಲ್ಲಿ ಸಿದ್ಧವಾಯಿತು. ಬಕುಳಮ್ಮ ಹತ್ತಿರವಿದ್ದು ತನಗೆ ಬೇಕಾದಂತೆ ಪಾಕಶಾಲೆಯ ಎಲ್ಲ ಮಾರ್ಪಾಟುಗಳನ್ನು ಮಾಡಿಸಿಕೊಂಡಳು. ಅವಳ ಶಿಲಾವಿಗ್ರಹವು ಇಂದಿಗೂ ಅಲ್ಲಿದೆ. ಗರ್ಭಾಲಯದ ಸುತ್ತ ವೈಕುಂಠ ಬಾಗಿಲು ತಯಾರಾಯಿತು. ಗರ್ಭಾಲಯದ ವಿಮಾನವನ್ನು ಅವಶ್ಯ ಅಲಂಕಾರಗಳೊಂದಿಗೆ, ಕನಕಕಳಶಗಳೊಂದಿಗೆ ನಿರ್ಮಾಣ ಮಾಡಲಾಯಿತು. ಬಂಗಾರದ ವಿಮಾನ, ಬಂಗಾರದ ಬಾಗಿಲು ಸಿದ್ಧವಾದವು.

ಬೆಟ್ಟ ಏರಿ ಸ್ವಾಮಿ ಸೇವೆಗೆ ಬರುವ ಭಕ್ತಜನರಿಗೆ ಮೆಟ್ಟಿಲುಗಳು, ಆಕಡೆ ಈಕಡೆ ಮಂಟಪಗಳು, ಶೇಷಾಚಲದ ತುದಿಯಲ್ಲಿ ದಿವ್ಯ ಗೋಪುರಗಳು ಕೂಡ ನಿರ್ಮಾಣವಾದುವು. ಒಂದು ಶುಭ ಸಮಯದಲ್ಲಿ ತೋಂಡಮಾನನು ಶ್ರೀನಿವಾಸನನ್ನು ಭೆಟ್ಟಿಯಾಗಿ ನಮಸ್ಕರಿಸಿ "ಲೋಕೇಶ! ವರದಾ! ತಮ್ಮ ಸೇವಕನು ತಮ್ಮ ಆಜ್ಞೆಯನ್ನು ನೆರವೇರಿಸಿದೆನೆಂದು ಹೇಳಲು ಬಹಳ ಸಂತೋಷವಾಗುತ್ತಿದೆ.' ಎಂದು ಹೇಳಿದ ತೋಂಡಮಾನನ ವಿನಯವನ್ನು ಕಂಡು ಶ್ರೀನಿವಾಸನು ಅತೀವ ಸಂತೋಷಗೊಂಡು ಅವನನ್ನು ಆಲಂಗಿಸಿ 'ತೋಂಡಮಂಡಲ ರಾಜಾ! ನನ್ನ ಮುಖ್ಯಬಂಧುವರ್ಗದ ಎಲ್ಲರನ್ನು ಸೇರಿಸಿ ನೋಡಿದರೆ ನಿನ್ನ ವಿನಯವಿಧೇಯಗಳಿಗೆ ನಾನು ಸೋತುಹೋಗಿದ್ದೇನೆ. ನೀನು ನನ್ನ ಆಪ್ತಬಂಧುವಾಗಿರುವೆ. ನಿನ್ನನ್ನು ಹೃದಯ ಪೂರ್ವಕವಾಗಿ ಅಭಿನಂದಿಸುತ್ತಿದ್ದೇನೆ' ಎಂದನು. ಅದನ್ನು ಕೇಳಿ ತೋಂಡಮಾನನು ಆನಂದಬಾಷ್ಪಗಳಿಂದ ಬಹಳ ಸಂತೋಷಗೊಂಡನು. ಅದೇ ಬ್ರಹ್ಮಾನಂದವು. 'ಆನಂದೋ ಖಲ್ವಿದಂ ಬ್ರಹ್ಮ' ಎಂಬ ವೇದವಚನಗಳನ್ನು ತೋಂಡಮಾನ ಚಕ್ರವರ್ತಿ ಸರಿಯಾಗಿ ಗ್ರಹಿಸಿದಂತೆ ಮುಖದ ವೈಖರಿ ಬೆಳಗುತ್ತಿತ್ತು.

ಶ್ರೀನಿವಾಸನು ಬೃಹಸ್ಪತಿಯನ್ನು ಕರೆಯಿಸಿ ಗೃಹಪ್ರವೇಶಕ್ಕೆ ಒಳ್ಳೆಯ ಮುಹೂರ್ತ ನಿರ್ಣಯಿಸಬೇಕೆಂದು ಕೋರಿದನು. ದೇವಗುರುವು ತಿಥಿ, ವಾರ, ನಕ್ಷತ್ರ, ಯೋಗ, ಕರಣಗಳನ್ನು ಒಳ್ಳೆಯಲಗ್ನದಲ್ಲಿ, ಶುಭಗ್ರಹಗಳು ಉಚ್ಚಸ್ಥಿತಿಯಲ್ಲಿ ಇರುವಂತೆ ಸುಮುಹೂರ್ತವನ್ನು ನಿರ್ಣಯಿಸಿದನು. ಇನ್ನು ಆಲಯಪ್ರವೇಶ ಮಹೋತ್ಸವಕ್ಕೆ ಇಂದ್ರಾದಿ ದಿಕ್ಪಾಲಕರಿಗೆ, ಬ್ರಹ್ಮಾದಿದೇವತೆಗಳಿಗೆ, ಮಹರ್ಷಿಗಳಿಗೆ, ಯೋಗಿಗಳಿಗೆ, ಸಕಲ ಭಕ್ತಜನರಿಗೆ ಆಹ್ವಾನ ಕಳುಹಿಸಲಾಯಿತು. ಬ್ರಹ್ಮಮಹೋತ್ಸವವನ್ನು ಜರುಗಿಸಲು ಬೇಕಾಗುವ ಪ್ರಯತ್ನಗಳನ್ನು ಮಾಡುತ್ತಿದ್ದನು. ವೆಂಕಟಾಚಲವು ಭೂಲೋಕವೈಕುಂಠವಾಗಿ ತೋರಹತ್ತಿತು. ಆದರೆ ವೈಕುಂಠವಾಸನು ಮಾತ್ರ ಆನಂದದಿಂದ ಇದ್ದಾನೆ ಎಂಬಂತೆ ಇರಲಿಲ್ಲ. ಮುಖವು ಸಣ್ಣದಾಗಿತ್ತು. ದೇವೇಂದ್ರನು ಆತನ ಪರಿಸ್ಥಿತಿ ಗಮನಿಸಿ 'ಸ್ವಾಮೀ! ದೀರ್ಘಾಲೋಚನದಲ್ಲಿ ಮಗ್ನನಾಗಿರುವಂತೆ ಕಾಣುತ್ತಿದೆ. ವಿಷಯವೇನೆಂದು ತಿಳಿಸಿ ನನ್ನನ್ನು ಅದಕ್ಕಾಗಿ ಉಪಯೋಗಿಸಿಕೊಳ್ಳಬೇಕೆಂದು ಮನವಿ' ಅಂದಾಗ ಶ್ರೀನಿವಾಸನು ಒಂದು ದೊಡ್ಡ ನಿಟ್ಟುಸಿರು ಬಿಟ್ಟು 'ದೇವೇಂದ್ರಾ! ಹಾಗೇನಿಲ್ಲ. ಈ ಶುಭಸಮಯದಲ್ಲಿ ಲಕ್ಷ್ಮೀ ಇಲ್ಲವೆಂದು ನನ್ನ ಮನಸ್ಸು ಪರಿಪರಿ ವಿಧದಲ್ಲಿ ಬಾಧೆ ಪಡುತ್ತಿದೆ' ಎಂದಾಗ 'ಸ್ವಾಮಿ! ಆಜ್ಞೆ ಆಗಲಿ, ನಾನು ದೇವೇಂದ್ರನು ಸಂಸಿದ್ಧನೇ' ಎಂದನು. 'ಇದನ್ನು ನಾನು ಆಜ್ಞಾಪಿಸಬೇಕಾ?' ಎಂದು ಸ್ವಾಮಿಯು ಅವನನ್ನು ಬೀಳ್ಕೊಟ್ಟನು.

'ಸಂತೋಷ. ಈಗಲೇ ಜಗಜ್ಜನನಿಯನ್ನು ಕರೆದುಕೊಂಡು ಬರುವೆನು.' ಎಂದು ಹೇಳಿ, ತನ್ನ ಸಾರಥಿ ಮಾತಲಿಯನ್ನು ಕರೆದು ರಥವನ್ನು ಸಿದ್ಧಮಾಡಿಸಿಕೊಂಡು ಇಂದ್ರನು ಕೋಲ್ಹಾಪುರಕ್ಕೆ

ಹೋಗಲು ಶ್ರೀನಿವಾಸನ ಆಲಯ ಪ್ರವೇಶ ಮಹೋತ್ಸವದ ಸುದ್ದಿ ಲಕ್ಷ್ಮೀದೇವಿಗೆ ತಿಳಿಸಿದಾಗ ಆಕೆಯು ಹೆಚ್ಚಿನ ಸಂತೋಷಗೊಂಡು, ದೇವೇಂದ್ರನ ಜೊತೆಗೆ ಪುಷ್ಪಕ ವಿಮಾನದಿಂದ ವೆಂಕಟಾದ್ರಿ ಸೇರಿದಳು. ಶ್ರೀನಿವಾಸನು ಆ ಲಕ್ಷ್ಮೀದೇವಿಗೆ ಎದುರು ಹೋಗಿ ಕರೆದುಕೊಂಡು ಬಂದನು. ಪದ್ಮಾವತಿ ದೇವಿಯು ಆವಳ ಪಾದಗಳಿಗೆ ಎರಗಿದಾಗ, ಅವಳನ್ನು ಲಕ್ಷ್ಮೀದೇವಿಯು ತನ್ನ ಎರಡೂ ಕೈಗಳಿಂದ ಎತ್ತಿ ಅಪ್ಪಿಕೊಂಡಳು. ಆಗ ಬಕುಳಮ್ಮಳು ಅವರನ್ನು ನೋಡಿ ಬಹಳ ಆನಂದ ಹೊಂದಿದಳು. ಅಲ್ಲಿಯ ಶ್ರೀನಿವಾಸನ ಮಹಿಮೆ ವರ್ಣಿಸಲು ಆದಿಶೇಷನಿಗೂ ಸಾಧ್ಯವಿಲ್ಲ ಎಂಬಂತಿತ್ತು.

ಆಲಯಪ್ರವೇಶದ ಸುಮುಹೂರ್ತವು ಸಮೀಪಿಸುತ್ತಿದ್ದಂತೆ ಆಲಯವನ್ನು ಅತ್ಯದ್ಭುತ ರೀತಿಯಲ್ಲಿ ಅಲಂಕರಿಸಲಾಯಿತು. ರಂಭಾಸ್ತಂಭಗಳಿಗೆ ಮಾವಿನತೋರಣದಿಂದ, ವಿವಿಧ ಹೂಹಾರಗಳಿಂದ ಕಾಂತಿಯುತ ಮಣಿಗಳಿಂದ ಪ್ರಕಾಶಿಸುತ್ತಿತ್ತು.

ಶ್ರೀನಿವಾಸನು, ಲಕ್ಷ್ಮೀದೇವಿ, ಪದ್ಮಾವತಿ, ಬಕುಳಮ್ಮ ಎಲ್ಲರೂ ಮಂಗಳ ಸ್ನಾನವನ್ನು ಮುಗಿಸಿ, ಪಿತಾಂಬರಗಳನ್ನು ಧರಿಸಿ, ನವರತ್ನಭೂಷಣಗಳಿಂದ ಅಲಂಕರಿಸಿಕೊಂಡು ಪುಷ್ಪಮಾಲೆಗಳನ್ನು ಹಿಡಿದು ಜೊತೆಯಲ್ಲಿ ಬರುತ್ತಿದ್ದರು. ಶುಭಕಳಶವನ್ನು ಶ್ರೀನಿವಾಸನು ತೆಗೆದುಕೊಂಡು ಬರುತ್ತಿದ್ದ ಹಾಗೆ, ಪತ್ನಿಯರು ಆತನ ಪಕ್ಕದಲ್ಲಿ ಜೊತೆಯಲ್ಲಿ ಬರುತ್ತಿದ್ದರು. ಅವರ ಹಿಂದೆ ತೋಂಡಮಾನನ ಕುಟುಂಬವು, ಇಂದ್ರಾದಿ ದೇವತೆಗಳು, ಬ್ರಹ್ಮಾದಿಗಳು ಇದ್ದು ಎಲ್ಲರಿಗಿಂತ ಮುಂದೆ ವೇದಮಂತ್ರಗಳನ್ನು ಪಠಿಸುತ್ತಿರುವ ಬೃಹಸ್ಪತಿ, ವಸಿಷ್ಠ ಮತ್ತಿತರರು ನಡೆದುಕೊಂಡು ಬರುತ್ತಿದ್ದು, ಮಂಗಳತೂರ್ಯರಾಗಗಳನ್ನು ನುಡಿಸುತ್ತಿದ್ದು ಲಗ್ನಕಾಲಕ್ಕೆ

ಸರಿಯಾಗಿ ಶ್ರೀನಿವಾಸನು ಆಲಯದ ದ್ವಾರದಲ್ಲಿ ಗೋಪೂಜೆ ಮಾಡಿ ಆಲಯಪ್ರವೇಶ ಮಾಡಿದನು. ಶಾಸ್ತ್ರಸಮ್ಮತವಾಗಿ ಗೃಹಪ್ರವೇಶವು ನೆರವೇರಿತು. ಆನಂದಮಯವಾದ ಆ ಆಲಯವನ್ನು ದೇವತೆಗಳು 'ಆನಂದ ನಿಲಯ' ಎಂದು ಹೊಗಳಿದರು. ದಿವ್ಯಸುವರ್ಣ ವಿಮಾನದ ಕೆಳಗೆ ಶ್ರೀನಿವಾಸನು ಲಕ್ಷ್ಮೀ ಪದ್ಮಾವತಿಯರನ್ನು ತನ್ನ ವಕ್ಷಸ್ಥಳದಲ್ಲಿ ಶಾಶ್ವತವಾಗಿ ಧರಿಸಿ 'ಈ ಕಲಿಯುಗ ಅಂತ್ಯದವರೆಗೆ ಈ ಆನಂದನಿಲಯದಲ್ಲಿ ಅರ್ಚಾವತಾರದಲ್ಲಿ ಹೀಗೆ ಇದ್ದು ದೇವತೆಗಳಿಗೆ ಮಹರ್ಷಿಗಳಿಗೆ ಆತ್ಮೀಯ ಭಕ್ತರಿಗೆ ಸದಾ ದರ್ಶನ ನೀಡುತ್ತಲಿರು.' ಎಂದು ಹೇಳಿದಾಗ ಎಲ್ಲರೂ ಶ್ರೀನಿವಾಸನನ್ನು ಬಹಳ ವಿಧದಲ್ಲಿ ಸ್ತುತಿಸಿದರು. ನಾರದಾದಿಗಳು ಹಾಡಿ ಹೊಗಳಿದರು. ಗಂಧರ್ವರು ನಾಟ್ಯವಾಡಿದರು. ಎಲ್ಲರೂ ಭೋಜನದ ನಂತರ ಶ್ರೀನಿವಾಸನ ಅನುಮತಿ ಪಡೆದು ತಮ್ಮ ತಮ್ಮ ನಿವಾಸಗಳಿಗೆ ಹೋದರು. ಬ್ರಹ್ಮನು ಶ್ರೀನಿವಾಸನ ಅಪ್ಪಣೆ ಪಡೆದು ಪ್ರತೀವರ್ಷವು ಭಗವಂತನ ಮಹೋತ್ಸವವನ್ನು ಜರುಗುವದಕ್ಕೆ ನಿಶ್ಚಯಿಸಿದನು. ಅದರಂತೆ ಇಲ್ಲಿಯವರೆಗೆ ಪ್ರತಿ ಸಂವತ್ಸರವು ಬ್ರಹ್ಮೋತ್ಸವವು ಅತಿ ವೈಭವದಿಂದ ಜರುಗುತ್ತದೆ.

ಶ್ರೀನಿವಾಸನು ಲಕ್ಷ್ಮಿಪದ್ಮಾವತಿಯರ ಸಹಿತನಾಗಿ ಅಲ್ಲಿಯೇ ಇದ್ದು ಅರ್ಚಾವತಾರ ಮೂರ್ತಿಯಾಗಿ ಕಲಿಯುಗದಲ್ಲಿ ಭಕ್ತರ ಕೋರಿಕೆಗಳನ್ನು ಈಡೇರಿಸುತ್ತ ಕಲಿಬಾಧೆಗಳನ್ನು ನಿವಾರಿಸುತ್ತಿದ್ದಾನೆ ಎಂಬುದು ಲೋಕಪ್ರಸಿದ್ಧ.

ವೆಂಕಟಾಚಲದಲ್ಲಿ ಇರುವ ಶ್ರೀನಿವಾಸನ ಆನಂದನಿಲಯವೇ ಭೂಲೋಕವೈಕುಂಠವು. ಆ ವೈಕುಂಠ ದರ್ಶನಾರ್ಥಿಯಾಗಿ ಭಕ್ತರು

ನಿತ್ಯವೂ ತಂಡೋಪತಂಡವಾಗಿ ಬಂದು ದರ್ಶನ ಪಡೆದು ತಮ್ಮ ಕೋರಿಕೆಗಳನ್ನು ಪೂರೈಸಿಕೊಳ್ಳುತ್ತಾರೆ.

## 31. ಕೂರ್ಮನೇ ಭೀಮನು ಎಂಬ ವೃತ್ತಾಂತ

ಶ್ರೀವೆಂಕಟೇಶ್ವರನು ಅರ್ಚನಾಮೂರ್ತಿಯಾಗಿ ಆನಂದನಿಲಯದಲ್ಲಿ ನಿಂತಿರುವ ಕಾಲದಲ್ಲಿ ದಕ್ಷಿಣದೇಶದಲ್ಲಿ ಕೂರ್ಮನೆಂಬ ಪಿತೃಭಕ್ತಿಪರನು ಇದ್ದನು. ಆತನ ತಂದೆ ಮರಣ ಹೊಂದಿದ ಮೇಲೆ ಆತನ ಅಸ್ಥಿಗಳನ್ನು ತೆಗೆದುಕೊಂಡು ಗಂಗೆಯಲ್ಲಿ ವಿಸರ್ಜನೆ ಮಾಡಲು ಕುಟುಂಬ ಸಮೇತನಾಗಿ ಹೋಗುವಾಗ ಮಾರ್ಗಮಧ್ಯದಲ್ಲಿ ತೋಂಡಮಾನನ ಘನಕೀರ್ತಿ ಕೇಳಿ ಆತನ ದರ್ಶನ ಪಡೆಯಲು ತೋಂಡಮನಾಡಿಗೆ ಹೋದನು. ಅಲ್ಲಿಗೆ ಹೋಗುವಾಗ ಹೆಂಡತಿ ಮಗನನ್ನು ಬಿಟ್ಟು ತಾನೊಬ್ಬನೆ ರಾಜಾಸ್ಥಾನಕ್ಕೆ ಹೋದನು. ಆ ಸಮಯದಲ್ಲಿ ರಾಜನು ತುಂಬಿದ ಸಭೆಯಲ್ಲಿ ಪಂಡಿತರ ಶಾಸ್ತ್ರವಾದಗಳನ್ನು ಕೇಳುತ್ತಿದ್ದನು. ಆವತ್ತಿನ ಶಾಸ್ತ್ರವಾದದಂತೆ ಕೂರ್ಮನು 'ಪರೋಪಕಾರ ಪಾಂಡಿತ್ಯವು ನರೋಪದೇಶ ಪಾಂಡಿತ್ಯಕ್ಕಿಂತ ಹೆಚ್ಚಿನದು ಎಂದು ಅವುಗಳಲ್ಲಿ ದ್ವಿತೀಯದ್ದು ನ್ಯೂನತೆಯಿಂದ ಕೂಡಿದೆ, ಅದಕ್ಕಾಗಿ ಕಂಠಶೋಷ ತಪ್ಪು ಮತ್ತು ಫಲಕೊಡುವದಿಲ್ಲ' ಎಂದು ನಿರೂಪಿಸಿದ ನಂತರ ರಾಜನು ಆ ಕೂರ್ಮಪಂಡಿತನಿಗೆ ಉಚಿತರೀತಿಯಲ್ಲಿ ಸನ್ಮಾನಿಸಿ ಅಂತಃಪುರದೊಳಗೆ ಹೋಗುವಾಗ ಕೂರ್ಮನು ರಾಜನ ಹತ್ತಿರ ಹೋಗಿ ವೇದೋಕ್ತ ಮಂತ್ರಗಳಿಂದ ರಾಜನನ್ನು ಆಶೀರ್ವದಿಸಿದನು. ಆಗ ರಾಜನು ಆ ಕೂರ್ಮನನ್ನು ಆದರಪೂರ್ವಕ ಮಾತನಾಡಿಸಿ ಬಂದ ಕಾರ್ಯವೇನು ಎಂದು ಕೇಳಿದನು. ಆಗ ಕೂರ್ಮನು 'ರಾಜಾ, ನಿನ್ನ ಕೀರ್ತಿ ಕೇಳಿ ನಿನ್ನನ್ನು ನೋಡುವ ಕುತೂಹಲದಿಂದ ಬಂದೆನು. ಸದ್ಯ ನಾನು ನಮ್ಮ ತಂದೆಯ ಅಸ್ಥಿಗಳನ್ನು ಗಂಗೆಯಲ್ಲಿ

ವಿಸರ್ಜಿಸಲು ಹೋಗುತ್ತಿದ್ದೇನೆ. ಗರ್ಭವತಿಯಾದ ನನ್ನ ಹೆಂಡತಿ, ಐದು ವರ್ಷದ ಮಗನಿಗೆ ಅಷ್ಟು ನಡೆಯಲು ಆಗುತ್ತಿಲ್ಲ. ಅದಕ್ಕಾಗಿ ನಾನೊಬ್ಬನೆ ಕಾಶಿಗೆ ಹೋಗಿ ಗಂಗಾಸ್ನಾನ ಮಾಡಿ ತಂದೆಯ ಅಸ್ಥಿಗಳನ್ನು ಗಂಗೆಯಲ್ಲಿ ವಿಸರ್ಜಿಸಿ ಬರುವತನಕ ಅವರನ್ನು ನೀನು ಕಾಪಾಡಬೇಕೆಂದು ಪ್ರಾರ್ಥಿಸಲು ಬಂದಿದ್ದೇನೆ.' ಎಂದು ಹೇಳಿದ್ದನ್ನು ಕೇಳಿ ಸಂತೋಷಗೊಂಡು ನಿನ್ನಂಥ ಉತ್ತಮನಿಗೆ ಸಹಾಯ ಮಾಡುವುದು ನನ್ನ ಅದೃಷ್ಟ ಎಂದುಕೊಳ್ಳುತ್ತೇನೆ. ಕಾರಣ ನಿನ್ನ ಹೆಂಡತಿ ಮಗನನ್ನು ನಮ್ಮ ರಾಣಿವಾಸದಲ್ಲಿ ಬಿಟ್ಟು ಸಂತೋಷದಿಂದ ಹೋಗಿಬರಬಹುದು.' ಎಂದು ರಾಜನು ಹೇಳಿದಾಗ ಕೂರ್ಮನು ಅತಿ ಸಂತೋಷ ಹೊಂದಿ ರಾಜನಿಗೆ ಕೃತಜ್ಞತೆ ಹೇಳಿ ಅವರನ್ನು ಅಲ್ಲಿ ಬಿಟ್ಟು ಕಾಶಿಗೆ ಪ್ರಯಾಣ ಬೆಳೆಸಿದನು.

ತೋಂಡಮಾನನು ಆ ಯಾತ್ರಿಕನ ಹೆಂಡತಿ ಮಗನಿಗೆ ಒಂದು ಸುರಕ್ಷಿತ ವಸತಿ ಕೊಟ್ಟು ಅಲ್ಲಿ ಎಲ್ಲ ಸೌಕರ್ಯಗಳನ್ನು ಕಲ್ಪಿಸಿ ಮತ್ತು ಒಳ್ಳೆಯ ಗೃಹರಕ್ಷಕರನ್ನು ನೇಮಿಸಿದನು. ಆ ಹೆಣ್ಣುಮಗಳು ತನ್ನ ಮಗನೊಂದಿಗೆ ಆ ಭವನದಲ್ಲಿ ಸುಖವಾಗಿ ಇದ್ದಳು. ಆ ಭವನದೊಳಗೆ ಒಂದು ನೊಣವೂ ಬರದಂತೆ ಭಟರು ಕಾಯುತ್ತಿದ್ದರು. ತೋಂಡಮಾನನು ಬರುಬರುತ್ತ ಆ ವೃತ್ತಾಂತವನ್ನು ಮರೆತುಬಿಟ್ಟನು. ಹೀಗೆ ಆರು ತಿಂಗಳು ಕಳೆದಿವೆ. ಮುಂದೆ ಅವರ ಯೋಗಕ್ಷೇಮ ಯಾರೂ ಕೇಳದಂತಾದರು.

ಒಂದು ಸಂವತ್ಸರ ಮುಗಿದ ಬಳಿಕ ಕೂರ್ಮನು ತನ್ನ ತೀರ್ಥಯಾತ್ರೆ ಕಾರ್ಯಗಳನ್ನು ಮುಗಿಸಿಕೊಂಡು, ತೋಂಡಮಾನನನ್ನು ಕಂಡು, ತನ್ನ ಭಾರ್ಯೆಪುತ್ರರ ಬಗ್ಗೆ ಕೇಳಿದಾಗ ಕೂರ್ಮನ ವೃತ್ತಾಂತ ನೆನಪಿಗೆ ಬಂದು ಆತನಿಗೆ ಏನು

ಹೇಳಲು ತಿಳಿಯದೆ, ಸ್ವಲ್ಪ ಆಲೋಚಿಸಿ 'ಅಯ್ಯಾ, ನಿನ್ನ ಭಾರ್ಯೆ ಸಕಾಲದಲ್ಲಿ ಒಂದು ಹೆಣ್ಣುಮಗುವಿಗೆ ಜನ್ಮ ಕೊಟ್ಟಿದ್ದಾಳೆ. ಸದ್ಯ ನಿನ್ನ ಹೆಂಡತಿ ಮಕ್ಕಳು ನಮ್ಮವರ ಜೊತೆಗೆ ನಿನ್ನೆಯೇ ವೆಂಕಟಾಚಲಪತಿಯ ದರ್ಶನಕ್ಕಾಗಿ ವೆಂಕಟಾಚಲಕ್ಕೆ ಹೋಗಿದ್ದಾರೆ. ಈಗಿನ್ನೇನು ಬರಬಹುದು. ಬಂದ ಕೂಡಲೆ ನಿನಗೆ ಸುದ್ದಿ ತಿಳಿಸಲಾಗುವುದು. ಅಲ್ಲಿಯವರೆಗೆ ತಾವು ನಮ್ಮ ಸತ್ರದಲ್ಲಿ ಇದ್ದು, ನಾವು ಪದಾರ್ಥಗಳನ್ನು ಕಳಿಸಿಕೊಡುತ್ತೇವೆ ಅದರಿಂದ ತಮಗಿಷ್ಟವಾದ ಅಡಿಗೆ ಮಾಡಿಕೊಂಡು ಭುಂಜಿಸಿ ಸುಖವಾಗಿ ಇರಬಹುದು', ಎಂದು ಸೇವಕರ ಜೊತೆಗೆ ಅವರನ್ನು ಸತ್ರಕ್ಕೆ ಕಳಿಸಿದನು.

ಕೂರ್ಮನು ಹೋದ ತರುವಾಯ ತೋಂಡಮಾನನು ತನ್ನ ಮಗನನ್ನು ಕರೆದು, ಪ್ರತ್ಯೇಕ ಭವನದಲ್ಲಿ ಇರುವ ಕೂರ್ಮನ ಕುಟುಂಬದ ಬಗ್ಗೆ ನೋಡಿಕೊಂಡು ಬರಲು ಕಳಿಸಿದನು. ರಾಜಪುತ್ರನು ಅಲ್ಲಿ ಹೋಗಿ ನೋಡಿದಾಗ, ಅಲ್ಲಿ ಯಾರೂ ಕಾಣಲಿಲ್ಲ. ಅವರ ಅಸ್ಥಿಗಳು ಮಾತ್ರ ಕಂಡದ್ದನ್ನು ತಂದೆಗೆ ಬಂದು ಹೇಳಿದನು. ಅದನ್ನು ಕೇಳಿ ಆತನು ಅತಿಭೀತಿ ಹೊಂದಿ ಮಗನ ಜೊತೆಗೆ ವೆಂಕಟಾಚಲಕ್ಕೆ ಹೋಗಿ ಶ್ರೀವೆಂಕಟೇಶ್ವರನನ್ನು ಕಂಡು, ಪಾದಗಳಿಗೆರಗಿ ತನ್ನ ದುಖವನ್ನು ತೋಡಿಕೊಂಡನು. ವೆಂಕಟಾಚಲಪತಿಯು ಆತನ ದುಃಖದ ಕಾರಣವನ್ನು ತಿಳಿದು 'ರಾಜಾ, ಎಂಥ ಪಾಪದ ಕೆಲಸ ಮಾಡಿದಿಯಲ್ಲ, ನಿನ್ನ ವಿವೇಕಕ್ಕೆ ಏನಾಗಿತ್ತು? ಆಶ್ರಯ ಕೊಟ್ಟು ಅವರಿಗೆ ಅನಾಥನನ್ನಾಗಿ ಮಾಡಿದಿಯಲ್ಲ, ನಿನಗಿಂತ ಕ್ರೂರಕರ್ಮಿಯು ಇನ್ನೊಬ್ಬರಿದ್ದಾರೆಯೇ? ಎಂತಹ ಕಾರ್ಯಲೋಪ, ಆದರೂ ನಾನು

ನನ್ನ ಭಕ್ತನು ದಾರಿದ್ರ್ಯ ದೌರ್ಭಾಗ್ಯಗಳ ಅನಿಭವಿಸುವದನ್ನು ನಾನು ಸಹಿಸುವದಿಲ್ಲ. ನಿನಗೆ ನನ್ನ ಮೇಲೆ ಅತೀವ ಭಕ್ತಿಯಿದ್ದರೂ ಮಹಾಪಾತಕ ಜರುಗಿ ಹೋಯಿತಲ್ಲ. ನಿಮ್ಮ ಅಣ್ಣನು ನನಗೆಷ್ಟೋ ಮಹೋಪಕಾರ ಮಾಡಿದ್ದಾನೆ. ನೀನು ನನಗೆ ತಕ್ಕುದಾದ ಆಲಯವನ್ನು ನಿರ್ಮಿಸಿದಿ. ಹಾಗಾಗಿ ನಿಮ್ಮ ಸಲುವಾಗಿ ನಿಮ್ಮ ಬಂಧುವಾತ್ಸಲ್ಯಕ್ಕಾಗಿ ಆ ಮೃತರನ್ನು ಬದುಕಿಸುವೆನು. ಈ ಕಲಿಯುಗದಲ್ಲಿ ನನಗೆ 'ಮಹಾಪಾತಕಿಯಾದವರನ್ನೂ ಪಾಪ ವಿಮೋಚನೆ ಮಾಡುವೆನು' ಎಂಬ ನನ್ನ ಕೀರ್ತಿ ಉಳಿಯಬೇಕಾಗಿದೆ. ಹಾಗಾಗಿ 'ರಾಜಾ, ನಿನ್ನ ಮಗನನ್ನು ಕಳಿಸಿ ಮೃತರ ಆ ಅಸ್ಥಿಗಳನ್ನು ಬೇಗನೆ ತರಿಸಿಬಿಡು,' ಎಂಬುದು ಕೇಳಿ ತೋಂಡಮಾನನು ಮಗನನ್ನು ಕಳಿಸಿದನು. ಆತನು ಕ್ಷಣಗಳಲ್ಲಿ ಆ ಅಸ್ಥಿಗಳನ್ನು ಒಂದು ವಸ್ತ್ರದಲ್ಲಿ ಕಟ್ಟಿ ಪಲ್ಲಕಿಯಲ್ಲಿ ಇಟ್ಟು ಬೋವಿಗಳಿಂದ ವೆಂಕಟಾಚಲಕ್ಕೆ ತಂದು ತಂದೆಗೆ ಕೊಟ್ಟನು. ತೋಂಡಮಾನನು ಈ ವಿಷಯವನ್ನು ವೆಂಕಟಾಚಲಪತಿಗೆ ತಿಳಿಸಿದಾಗ, ಹಿಂದೆಯೇ ಆ ಅಸ್ಥಿಗಳ ಮೂಟೆಯನ್ನು ಸ್ವಾಮಿಪುಷ್ಕರಿಣಿಗೆ ಪೂರ್ವದಲ್ಲಿನ ಪಾಂಡವತೀರ್ಥದ ಒಂದು ಮಡುವಿನಲ್ಲಿ ಕಂಠದವರೆಗೆ ನೀರಲ್ಲಿ ನಿಂತು ಸಮೀಪದ ಒಂದು ಕಲ್ಲಿನ ಮೇಲೆ ಆ ಗಂಟನ್ನು ಇಟ್ಟು ಶ್ರೀನಿವಾಸನು ತನ್ನ ಕೈಯಿಂದ ಆ ಅಸ್ಥಿಯ ಗಂಟಿನ ಮೇಲೆ ನೀರು ಸಿಂಪಡಿಸಿದನು. ಹಿಂದೆಯೇ ಕೂರ್ಮನ ಪತ್ನಿ ಪುತ್ರರು ಸಜೀವರಾಗಿ ಎದ್ದು ಬಂದರು. ಆಗ ಮೇಲಿನಿಂದ ಪುಷ್ಪವೃಷ್ಟಿಯಾಯಿತು. ಆಗಿನಿಂದ ಪಾಂಡವತೀರ್ಥವು ಅಸ್ಥಿತೀರ್ಥ ಎಂದು ಪ್ರಸಿದ್ಧವಾಯಿತು. ದೇವತೆಗಳೂ ಕೂಡ ಆ ತೀರ್ಥಮಹಿಮೆಯನ್ನು ತಿಳಿದು ಕೊಂಡಾಡಿದರು.

ಆನಂತರ ಶ್ರೀನಿವಾಸನು ತೋಂಡಮಾನನಿಗೆ 'ರಾಜಾ, ನಿನಗೆ ಸಮಯೋಚಿತವಾದ ಪ್ರತ್ಯುಪಕಾರ ತೋರಿದೆನು. ಮೊದಲು ನಾನು ಅರ್ಚಾಮೂರ್ತಿಯಾಗಿ ಕಲಿಕಾಲಪರ್ಯಂತ ಇಲ್ಲಿಯೇ ನಿಂತಿದ್ದು ನಾನು ಬೇರೆಯವರ ಮಾತಿನಲ್ಲಿ ಹೇಳಿಸುತ್ತ, ಭಕ್ತರನ್ನು ರಕ್ಷಿಸುತ್ತ ಇರುವೆನು. ಅದನ್ನು ನೀನೂ ಕೂಡ ಕೂರ್ಮನಿಗೆ ಒಪ್ಪುವಂತೆ ಹೇಳಬೇಕು. ಇನ್ನು ನೀನು ರಾಜ್ಯವನ್ನು ಸುಖವಾಗಿ ಪಾಲಿಸುತ್ತಿರು.' ಎಂದು ಹೇಳಿ ಅವನನ್ನು ಕಳಿಸಿ ತಾನು ಆನಂದನಿಲಯದಲ್ಲಿ ಪ್ರವೇಶಿಸಿದನು.

ತೋಂಡಮಾನನು ಕೂರ್ಮನಿಗೆ ಎಲ್ಲವನ್ನು ಒಪ್ಪುವಂತೆ ಹೇಳಿದನು. ಕೂರ್ಮನು ಬಹಳ ಸಂತೋಷಗೊಂಡು ತನ್ನ ಹೆಂಡತಿಯನ್ನು 'ಇಷ್ಟು ಕಾಲದವರೆಗೆ ಹೇಗೆ ಇದ್ದೀ' ಎಂದು ರಾಜನ ಎದುರೇ ಕೇಳಿದನು. ಅದಕ್ಕೆ ಅವಳು. 'ದೇವಮಾಯೆಯಿಂದ ಶ್ರೀ ವೆಂಕಟಾಚಲಪತಿ ಉದರದಲ್ಲಿ ಇದ್ದು, ಚಿತ್ರಾತಿವಿಚಿತ್ರ ಲೋಕವಿಸ್ತರಣಗಳನ್ನು, ಬ್ರಹ್ಮಾದಿ ದೇವತೆಗಳನ್ನು, ಲೋಕಲೋಕಗಳನ್ನು, ಸಪ್ತಸಾಗರಗಳನ್ನು, ಕುಲಪರ್ವತಗಳನ್ನು, ಮಹಾನದಿ ನದಗಳನ್ನು, ಮಹಾರಣ್ಯಗಳನ್ನು ನೋಡಿದೆನು' ಎಂದರೆ ಕೂರ್ಮನು ತನಗಿಂತ ತನ್ನ ಹೆಂಡತಿಯೇ ಧನ್ಯಳು ಎಂದು ಭಾವಿಸಿದನು. ತೋಂಡಮಾನನ ವೆಂಕಟೇಶ್ವರನಲ್ಲಿರುವ ಭಕ್ತಿಯನ್ನು ಸಂಸ್ತುತಿಸಿ, ತನ್ನವರೊಂದಿಗೆ ತನ್ನ ದೇಶಕ್ಕೆ ಬಂದು ಸುಖವಾಗಿ ಇರುತ್ತಿದ್ದನು.

## 32. ತೋಂಡಮಾನ ಮೋಕ್ಷ ಪಡೆಯುವುದು

ತೋಂಡಮಾನನು ಶ್ರೀನಿವಾಸನ ಅನುಗ್ರಹಕ್ಕೂ, ಮಹಾತ್ಮೆಗೂ ಅತಿಶಯ ಸಂತುಷ್ಟನಾಗಿ ತನ್ನ ದೂರದೃಷ್ಟಿಯಿಂದ ಶ್ರೀನಿವಾಸನ

ಆಗ್ರಹಕ್ಕೆ ಪಾತ್ರನಾಗಬೇಕೆಂದು ಬಹಳಷ್ಟು ಚಿಂತನ ಮಾಡಿ, ಹೇಗಾದರೂ ಶ್ರೀನಿವಾಸನ ವಿಶೇಷ ಅನುಗ್ರಹವನ್ನು ಸಂಪಾದಿಸಬೇಕೆಂದು ಇಚ್ಛೆ ಹೊಂದಿ, ಅಂಗೀರಸಾದಿ ಮಹರ್ಷಿಗಳನ್ನು ಕರೆಯಿಸಿ, ಶ್ರೀನಿವಾಸನ ಅನುಗ್ರಹವನ್ನು ಪಡೆಯಲು ತಾನು ಏನು ಮಾಡಬೇಕೆಂದು ತಿಳಿಸಬೇಕೆಂದು ಕೋರಿದನು. ಆಗ ಮಹರ್ಷಿಗಳು ಆಲೋಚಿಸಿ, ವಿಷ್ಣುವಿಗೆ ಅತೀವ ಪ್ರೀಯವಾಗಿರುವ ತುಲಸಿಯಿಂದ ನಿತ್ಯವೂ ವೈಕುಂಠವಾಸನಿಗೆ ಸಹಸ್ರ ನಾಮಾರ್ಚನೆ ಮಾಡಿದರೆ ಶ್ರೀನಿವಾಸನ ಅನುಗ್ರಹವನ್ನು ತಪ್ಪದೆ ಪಡೆಯುವಿ ಎಂದು ಹೇಳಿದಾಗ, ತೋಂಡಮಾನನು ನಿತ್ಯವೂ ಸುವರ್ಣ ತುಲಸೀದಳಗಳಿಂದ ಸಹಸ್ರ ನಾಮಾರ್ಚನೆಯನ್ನು ವೈಖಾನಸನಿಂದ ಶ್ರೀವೆಂಕಟೇಶ್ವರನಿಗೆ ಮಾಡಿಸುತ್ತಿದ್ದನು. ಹೀಗೆ ಕೆಲವು ಮಾಸಗಳು ಕಳೆದ ನಂತರವೂ ವೆಂಕಟೇಶ್ವರನು ಪ್ರಸನ್ನನಾಗಲಿಲ್ಲ. ಅದಕ್ಕೆ ತೋಂಡಮಾನನು ಒಂದು ದಿನ ಶ್ರೀನಿವಾಸನಿಗೆ 'ಸ್ವಾಮಿ, ನನ್ನ ತಪ್ಪುಗಳನ್ನು ಕ್ಷಮಿಸು. ವರದಾತರಲ್ಲಿ ನೀನು ಸರ್ವಶ್ರೇಷ್ಠನು. ಅದಕ್ಕೆ ನನ್ನಲ್ಲಿ ಕರುಣೆಸಬೇಕು.' ಎಂದಾಗ ಆಕಾಶವಾಣಿ ಹೀಗೆ ಹೇಳಿತು. 'ನನ್ನ ಅತ್ಯಂತ ಭಕ್ತಿಪರರು ಎಷ್ಟೋ ಜನರು ಇರಬಹುದು, ಆದರೆ ನಿನ್ನಂಥ ಘೋರಘಾತುಕರು ಯಾರೂ ಇಲ್ಲ. ನಿನ್ನ ಪಾಪವು ನಿನ್ನನ್ನು ಬಿಡುವದಿಲ್ಲ. ಆದರೆ ಆಕಾಶರಾಜನ ಮೇಲೆ ನನಗೆ ಇರುವ ಕೃತಜ್ಞತಾಭಾವದ ಸಲುವಾಗಿ ಅವರನ್ನು ಬದುಕಿಸಿದೆನು. ಇಲ್ಲವಾದರೆ...' ಎನ್ನುವಷ್ಟರಲ್ಲಿ ರಾಜನಲ್ಲಿನ ರಾಜಸವು ಎದ್ದು ಬಂದು 'ಶ್ರೀನಿವಾಸಾ! ತಾನು ಎಂಥವನಾದರೂ ಪರರಿಗೆ ಮಾಡಿದ ಉಪಕಾರವನ್ನು ಎಂಥಾ ಮೂಢನಾದರೂ ಹೇಳಿಕೊಳ್ಳುವದಿಲ್ಲ. ನಿನ್ನ ಮೇಲೆ ಭಕ್ತಿಭಾವಗಳು ಇರುವ ನನ್ನಂಥವರು ಮೂರು

ಲೋಕದಲ್ಲಿ ಯಾರೂ ಇಲ್ಲ. ನಿನ್ನ ಎಲ್ಲ ಭಕ್ತರಲ್ಲಿ ನಾನೇ ಅಗ್ರಗಣ್ಯನು ಎಂಬ ವಿಷಯ ನೀನು ಮರೆಯಬಾರದು. ಭಕ್ತರನ್ನು ಆದರಿಸುವಲ್ಲಿ ನೀನೇ ಅಗ್ರಗಣ್ಯನೆಂಬುದು ಲೋಕವಿದಿತವು.' ಎಂದು ಬಹಳ ದರ್ಪದಿಂದ ಹೇಳಿ, ತನ್ನ ಸುವರ್ಣ ತುಲಸಿ ಅರ್ಚನೆ ಮಾಡುತ್ತಲಿದ್ದನು.

ಶ್ರೀನಿವಾಸನು ಆತನ ಅಹಂಕಾರ ಮಂಡನಕ್ಕಾಗಿ ಯತ್ನಿಸುತ್ತಿದ್ದನು. ಒಂದು ದಿವಸ ತೋಂಡಮಾನನು ತೋಂಡಮನಾಡಿನಲ್ಲಿ ನಿರ್ಮಿಸಿದ ಶ್ರೀ ವೆಂಕಟೇಶ್ವರ ಆಲಯದಲ್ಲಿ ಸುವರ್ಣ ದಳಗಳಿಂದ ಅರ್ಚನೆ ಮಾಡುತ್ತಿರುವಾಗ, ಆ ಸುವರ್ಣ ತುಲಸಿದಳಗಳ ಮಧ್ಯ ಅತ್ಯಂತ ಆಕರ್ಷಣೀಯವಾದ ಮಣ್ಣಿನ ತುಲಸಿ ದಳವು ಆ ಶ್ರೀನಿವಾಸನ ಪಾದಕಮಲಗಳಿಗೆ ಅಂಟಿದೆ ಎಂದು ಕಂಡು ಆತನು ಶ್ರೀನಿವಾಸನಿಗೆ ತನ್ನ ಮೇಲಿನ ಕೋಪ ಇನ್ನು ಉಪಶಾಂತಿ ಆಗಿಲ್ಲವೆಂದು ಭಾವಿಸಿ, ತನ್ನಲ್ಲಿ ಇರುವ ತಾಮಸ ಗುಣವನ್ನು ತ್ಯಜಿಸಿ, ಪರಿಶುದ್ಧನಾಗಿ 'ತ್ರಿಲೋಕವಾಸಾ! ವೈಕುಂಠನಾಥಾ! ಶ್ರೀ ವೆಂಕಟಾಚಲಪತಿ! ಭಕ್ತ ಸಂರಕ್ಷಕ! ಪಾಪವಿದೂರ! ಅನಾಥನಾಥಾ! ಶ್ರೀನಿವಾಸಾ! ನಿನ್ನ ಪಾದಸೇವಕನು, ನಿನ್ನ ಚರಣಗಳಿಗೆ ಶರಣು ಶರಣು, ಅನ್ಯಥಾ ಶರಣಂ ನಾಸ್ತಿ, ತ್ವಮೇವ ಶರಣಂ ಮಮ, ನಿನ್ನನ್ನೇ ನಂಬಿದ ನನ್ನನ್ನು ಉಪೇಕ್ಷೆ ಮಾಡುತ್ತಿರುವುದು ಸರಿಯೇ, ಸ್ವಾಮಿ, ನನ್ನನ್ನು ತೃಣೀಕರಿಸದೆ ಪೂರ್ವಾನುಗ್ರಹದಿಂದ ಪರಿಪೂರ್ಣವಾಗಿ ನೋಡಿ, ನನ್ನ ಸುವರ್ಣ ತುಲಸಿದಳಗಳನ್ನು ತೃಣೀಕರಿಸಿ ಕನಿಷ್ಠವಾದ ಮಣ್ಣಿನ ತುಲಸಿದಳಗಳಿಂದ ಪೂಜಿಸಿದ ಆ ಭಕ್ತ ಶಿಖಾಮಣಿ ಯಾರು? ಎಲ್ಲಿದ್ದಾನೆ? ತಿಳಿಸಿ ಹೇಳಿ ನನ್ನನ್ನು ಅನುಗ್ರಹಬೇಕೆಂದು

ಪ್ರಾರ್ಥಿಸುತ್ತಿದ್ದಾನೆ' ಎಂಬುದನ್ನು ಕೇಳಿ ಶ್ರೀನಿವಾಸನು 'ರಾಜಾ! ನೀನು ಇಲ್ಲಿಯತನಕ ತಿಳಿದೂ ತಿಳಿಯದಂತೆ ನನ್ನನ್ನು ಸರಿಯಾಗಿ ಗ್ರಹಿಸಲಿಲ್ಲ. ರಾಗದ್ವೇಷಗಳಿಲ್ಲದ ವ್ಯಕ್ತಿಯೇ ನನಗೆ ಅತ್ಯಂತ ಪ್ರಿಯನು. ರಾಜನಾಗಿದ್ದರೂ, ಭಿಕ್ಷುಕನಾಗಿದ್ದರೂ ಎಲ್ಲ ಜೀವಿಗಳನ್ನು ಸಮತ್ವಗೊಳಿಸಿ, ಮನೋವಾಕ್ಕಾಯ ಕರ್ಮಗಳಲ್ಲಿ ದೋಷಗಳಿಲ್ಲದೆ, ಇದ್ದುದ್ದರಲ್ಲಿಯೇ ಸಂತೃಪ್ತಿ ಹೊಂದಿ ನನ್ನನ್ನೇ ನಂಬಿಕೊಂಡು ಸೇವಿಸುವ ಭಕ್ತನೇ ನನಗೆ ಅತ್ಯಂತ ಮುಖ್ಯನು. ಆತನು ಏನು ಸಮರ್ಪಿಸಿದರೂ ಅದನ್ನು ನಾನು ಪ್ರೀತಿಯಿಂದ ಸ್ವೀಕರಿಸುವೆನು. ಇಂಥ ಎಷ್ಟೋ ಭಕ್ತರಿದ್ದಾರೆ.'

'ಈ ತೋಂಡಮನಾಡಿಗೆ ಉತ್ತರಕ್ಕೆ ಒಂದು ಯೋಜನ ದೂರದಲ್ಲಿ ಒಂದು ಕುಗ್ರಾಮದಲ್ಲಿ ಭೀಮನೆಂಬ ಒಬ್ಬ ಕುಲಾಲ ಇದ್ದಾನೆ. ಅತನ ಹೆಂಡತಿ ತಮಾಲಿನಿ. ಈ ಬಡದಂಪತಿಗಳು ಎಂದಿಗೂ ಐಶ್ವರ್ಯ ಆನಂದಗಳನ್ನು ಕೋರಿದವರಲ್ಲ. ಕಾಯಕಷ್ಟದಿಂದ ದೊರೆಯುವ ಗಂಜಿಯನ್ನು ಮಹಾಪ್ರಸಾದವೆಂದು ಅತ್ಯಂತ ಭಕ್ತಿಯಿಂದ ನನಗೆ ಅರ್ಪಿಸದೆ ಅವರು ಸೇವಿಸುವದಿಲ್ಲ. ಆ ಭಕ್ತನು ತನ್ನ ಕೈಯಿಂದ ಅಂದಂದಿನ ಶುದ್ಧವಾದ ಮೃಣ್ಮಯ ತುಲಸಿದಳಗಳನ್ನು ನಿತ್ಯವೂ ನನ್ನನ್ನು ಪೂಜಿಸುತ್ತಾನೆ. ಆತನು ಅರ್ಪಿಸಿದ ಮೃಣ್ಮಯ ತುಲಸಿದಳಗಳನ್ನು ನಾನು ಅಪ್ಯಾಯಮಾನದಿಂದ ಗ್ರಹಿಸುವದನ್ನು ನೀನು ಒಮ್ಮೆ ನೋಡಬೇಕು.' ಎಂದು ಹೇಳಿದನು.

ಇಷ್ಟು ಕೇಳಿದ ನಂತರ ತೋಂಡಮಾನನು ಅಂದಿನ ಪೂಜೆ ಸಮಾಪ್ತ ಮಾಡಿ ಭೀಮನನ್ನು ನೋಡುವ ಅಭಿಲಾಷೆಯಿಂದ, ರಾಜಲಾಂಛನಾದಿಗಳನ್ನು ಬಿಟ್ಟು ಒಬ್ಬ ಸಾಮಾನ್ಯನಂತೆ

ಪಾದಚಾರಿಯಾಗಿ ಕುಲಾಲನಿರುವ ಗ್ರಾಮಕ್ಕೆ ಹೊರಟನು. ಆ ಗ್ರಾಮವು ಬಗ್ಗೆ ತಿಳಿದು ಭೀಮನ ಕುರಿತು ವಿಚಾರ ಮಾಡಿ ಹೊಲಸು ಸ್ಥಳದಲ್ಲಿ ಒಂದು ಮೂಲೆಯಲ್ಲಿ ಇರುವ ಭೀಮನ ನಿವಾಸವನ್ನು ಸೇರುವದರೊಳಗಾಗಿ ಆತನಿಗೆ ಮೂರ್ಛೆಬಂದು ಕೆಳಗೆ ಬಿದ್ದನು. ಅಲ್ಲಿಯೇ ಹತ್ತಿರದಲ್ಲಿ ಇದ್ದ ಭೀಮನು ಓಡುತ್ತ ಬಂದು ರಾಜನನ್ನು ನೋಡಿ, ಹೆಂಡತಿಯಿಂದ ತಣ್ಣನೆಯ ನೀರನ್ನು ತರಿಸಿ ರಾಜನ ಮುಖವನ್ನು ಸಾವಕಾಶವಾಗಿ ತೊಳೆದು, ಸ್ವಲ್ಪ ನೀರನ್ನು ಕುಡಿಸಿದನು. ಸ್ವಲ್ಪ ಅರಿವು ಬಂದ ಮೇಲೆ ರಾಜನು 'ಭೀಮನೆಂದರೆ ಯಾರು? ಆ ಪರಮ ಭಾಗವತನ ಪಾದಗಳಿಗೆ ನಮಸ್ಕರಿಸುವೆನು.' ಎನ್ನುತ್ತಲೆ ಅಲ್ಲಿಯೇ ವೆಂಕಟಾಚಲಪತಿ ಅವರೆದುರು ಪ್ರತ್ಯಕ್ಷ ಬಂದು ನಿಂತನು.

ಆಗ ಭೀಮನು 'ಸ್ವಾಮಿ! ಶ್ರೀನಿವಾಸಾ! ಇದೋ ನನ್ನ ನಮಸ್ಕಾರವು. ತಮಗೆ ಈಗ ಏನೂ ಸಮರ್ಪಣೆ ಮಾಡುವಂತಿಲ್ಲ. ಗಜೇಂದ್ರನ ಹಾಗೆ ನಿನ್ನ ಬಿಟ್ಟು ನನಗೆ ಯಾರು ಇಲ್ಲ. ನನ್ನ ಮೂಢಭಕ್ತಿ ತಮಗಿಷ್ಟು ಆನಂದದಾಯಕವಾಗಿದೆಯೆಂದು ನನಗೆ ಅನಿಸುವದಿಲ್ಲ.' ಎಂದಾಗ, ಭೀಮನ ಹೆಂಡತಿ ತಮಾಲಿನಿ ಶ್ರೀನಿವಾಸನಿಗೆ ಸಾಷ್ಟಾಂಗ ದಂಡಪ್ರಣಾಮ ಮಾಡಿ, ಎದ್ದು 'ಗೋವಿಂದಾ! ಭಕ್ತವತ್ಸಲಾ! ಅನಾಥನಾಥಾ! ವೈಕುಂಠವಾಸಾ! ನಮ್ಮನ್ನು ಅನುಗ್ರಹಿಸಿದಿ. ನಾವು ಪೂಜಾಕರ್ಮವನ್ನು ತಿಳಿಯದ ಅಧಮರು, ಬಡವರು. ನಮ್ಮ ಮನಸ್ಸು ಯಾವಾಗಲೂ ನಿನ್ನಲ್ಲಿಯೇ ಲೀನವಾಗಿದೆ. ನಮ್ಮ ಅಲ್ಪ ಪೂಜೆಗಳಗೆ ಸಂತೋಷಗೊಂಡು ನಮಗೆ ದರ್ಶನಭಾಗ್ಯ ದಯಪಾಲಿಸಿದಿ. ಇಂದು ನಮ್ಮ ಅಡುಗೆಯನ್ನು ತೃಪ್ತಿಯಿಂದ ಸ್ವೀಕರಿಸಿ ನಮ್ಮನ್ನು

ಅನುಗ್ರಹಿಸಬೇಕೆಂದು ಪ್ರಾರ್ಥಿಸುತಿದ್ದೇನೆ' ಎಂದಾಗ ವೆಂಕಟಾಚಲಪತಿಯು 'ಅಮ್ಮಾ! ತಮಾಲಿನಿ! ಇವತ್ತು ನಿನ್ನ ಅಡುಗೆಯು ನನಗೆ ಅಮೃತ. ನೀನು ಬಡಿಸುವ ಆಹಾರವನ್ನು ಸಂತೋಷದಿಂದ ಭುಂಜಿಸುವೆನು.' ಎಂದು ಅವನು ಲಕ್ಷ್ಮೀ ಪದ್ಮಾವತಿ ಯರೊಂದಿಗೆ ಆ ಪವಿತ್ರ ಕುಲಾಲದಂಪತಿಗಳು ಬಡಿಸಿದ ಆಹಾರ ಸೇವಿಸಿದನು. ಅದಕ್ಕಾಗಿ ದೇವತೆಗಳೆಲ್ಲರೂ ಶ್ರೀವೆಂಕಟೇಶನಿಗೆ ಬಹಳಷ್ಟು ವಿಧದಲ್ಲಿ ಸ್ತುತಿಸಿದರು. ದೇವದುಂದುಭಿಗಳು ಮೊಳಗಿದವು. ಪುಷ್ಪವೃಷ್ಟಿಯಾಯಿತು. ಅಷ್ಟರಲ್ಲಿ ಒಂದು ದಿವ್ಯ ವಿಮಾನ ಅಲ್ಲಿಗೆ ಬಂದಿತು. ಶ್ರೀನಿವಾಸನು ತನ್ನ ಆಭರಣಗಳಿಂದ ತಮಾಲಿನಿಗೆ ಅಲಂಕರಿಸಿದನು. ಕುಲಾಲ ದಂಪತಿಗಳು ಶ್ರೀನಿವಾಸನಿಗೆ ನಮಸ್ಕರಿಸಿ ಅಜ್ಞೆ ಪಡೆದು ವಿಮಾನವನ್ನು ಹತ್ತಿ ವೈಕುಂಠಕ್ಕೆ ಹೋದರು.

ಇದೆಲ್ಲ ತಿಳಿದ ತೋಂಡಮಾನನು ಭಗವಂತನ ಸರ್ವೋತ್ತಮೋತ್ತಮವಾದ ದಿವ್ಯಗುಣಗಳು ಹೇಗಿವೆ ಎಂದು ತಿಳಿದುಕೊಂಡು, ತನ್ನ ರಾಜಸ, ತಾಮಸ ಗುಣಗಳ ಪ್ರಭಾವವನ್ನು ಬಿಟ್ಟು 'ಮಾಧವಾ! ಸರ್ವೇಶ್ವರಾ! ಭಕ್ತವತ್ಸಲಾ! ಮೂರುಲೋಕದಲ್ಲಿ ನನ್ನಂಥ ಉತ್ತಮ ಭಕ್ತ ನಿನಗಿಲ್ಲ ಎಂಬ ಅಜ್ಞಾನಾಹಂಕಾರದಲ್ಲಿ ನಾನು ಆಡಿದ ವಾಗ್ದೋಷವನ್ನು ಕ್ಷಮಿಸು. ನನ್ನ ರಾಜ್ಯದಲ್ಲೇ ನನ್ನ ಸಮೀಪದಲ್ಲಿಯೇ ತಮಗೆ ಅತ್ಯಂತ ಪ್ರೀತಿಪಾತ್ರನನ್ನು ನೋಡಿದೆನು. ಆ ಕುಲಾಲ ದಂಪತಿಗಳು ನನಗೆ ಜ್ಞಾನೋದಯ ಮಾಡಿಸಿದರು. ಇನ್ನು ನನಗೆ ಸದ್ಗತಿ ನೀಡಿ ರಕ್ಷಿಸಬೇಕು' ಎಂದು ಪ್ರಾರ್ಥಿಸಿದನು. ತೋಂಡಮಾನನು ಅಜ್ಞಾನಾಹಂಕಾರಗಳ ಮುಕ್ತನಾಗಿದ್ದಾನೆ ಎಂದು ತಿಳಿದು ಶ್ರೀನಿವಾಸನು ಆತನಿಗೆ ಬಂಧುವಾತ್ಸಲ್ಯಗಳಿಗಿಂತ

ಭಕ್ತಶಿಖಾಮಣಿ ಎಂಬ ಭಾವದಲ್ಲಿ ಕಂಡನು. ಅನಂತರದಲ್ಲಿ ತೋಂಡಮಾನನು ಸ್ವಾಮಿಪುಷ್ಕರಿಣಿಯಲ್ಲಿ ಸ್ನಾನ ಮಾಡಿ ಶ್ರೀನಿವಾಸನನ್ನು ಸ್ತುತಿಸಿ, ಕಳೆಬರವನ್ನು ಬಿಟ್ಟು, ಆ ಪರಮಾತ್ಮನ ಅನುಗ್ರಹದಿಂದ ಮುಕ್ತಿ ಹೊಂದಿದನು ಎಂದು ಪುರಾಣವ್ಯಾಖ್ಯಾತ ಸೂತನು ಶೌನಕಾದಿ ಮಹರ್ಷಿಗಳಿಗೆ ವರಾಹ, ಭವಿಷ್ಯೋತ್ತರ, ಸ್ಕಾಂದ ಪುರಾಣಗಳಾಂತರ್ಗತ ಶ್ರೀನಿವಾಸನ ಕಲಿಯುಗ ಲೀಲಾವಿಲಾಸಗಳನ್ನು ವಿವರಿಸಿ ಸಂತೋಷಗೊಳಿಸಿದನು.

**ಏವಂ ಹರಿಸ್ತತ್ರ ಚರಿತ್ರಮದ್ಭುತಂ ।**
**ಕುರ್ವನ್ ಜಗನ್ಮಾತೃ ಸಮನ್ವಿತೋ ಗಿರಾ ।**
**ಅಸ್ತೇ ಜಗತ್ಯಾಂ ಚ ಸುರಾಷು ಪೂಜಿತೋ ।**
**ದದದ್ಯಥೇಷ್ಟಂ ಚ ಮನೋರಥಾನ್ ಸತಾ ಮೇ ॥**

*ಶ್ರೀಕೃಷ್ಣಾರ್ಪಣಮಸ್ತು*

## ಪರ್ಯಾವಲೋಚನ

**ವೆಂಕಟಾದ್ರಿ ಸಮಂ ಸ್ಥಾನಂ । ಬ್ರಹ್ಮಾಂಡೇ ನಾಸ್ತಿ ಕಿಂಚನ ।**
**ವೆಂಕಟೇಶ ಸಮೋ ದೇವೋ । ನ ಭೂತೋ ನ ಭವಿಷ್ಯತಿ ॥**

ಪವಿತ್ರವಾದ ವೆಂಕಟಾಚಲ ಕ್ಷೇತ್ರಕ್ಕೆ ಸಮನಾದ ಕ್ಷೇತ್ರವು ಬ್ರಹ್ಮಾಂಡದಲ್ಲಿ ಎಲ್ಲಿಯೂ ಇಲ್ಲ. ಶ್ರೀವೆಂಕಟಾಚಲಪತಿಗೆ ಸಮನಾದ ದೈವವು ಭೂತಕಾಲದಲ್ಲಿಯೂ ಇಲ್ಲ, ಭವಿಷ್ಯ ಕಾಲದಲ್ಲಿಯೂ ಸಾಧ್ಯವಿಲ್ಲ.

ಕೃತ, ತ್ರೇತಾ, ದ್ವಾಪರ, ಕಲಿಯುಗದಲ್ಲಿ ಪರ್ಯಾಯವಾಗಿ ಬರುವುದು ಹೋಗುವುದು ಇದ್ದರೂ ವೆಂಕಟಾಚಲ ಕ್ಷೇತ್ರಕ್ಕೆ ಮತ್ತು ಶ್ರೀವೆಂಕಟೇಶ್ವರ ಸ್ವಾಮಿಗೆ ಸಮನಾದ ಬೇರೊಂದು ಕಾಣುತ್ತಿಲ್ಲ.

ಮಾನವನ ಸರ್ವಪಾಪಗಳನ್ನು ಹರಣ ಮಾಡಿ ಐಶ್ವರ್ಯಾಮೃತಗಳನ್ನು ಕೊಡುವುದು ಕೇವಲ ವೆಂಕಟಾಚಲವೇ. ಆಗ ಮಹಿಮೋನ್ನತಿ ಪಡೆದ ಎಷ್ಟೋ ಪವಿತ್ರ ಪ್ರಸಿದ್ಧ ತೀರ್ಥಗಳು ಇವೆ. ಅವೆಲ್ಲವೂ ಕಲಿಯುಗದಲ್ಲಿ ಮಾನವ ಪಾಪಗಳನ್ನು ನಾಶ ಮಾಡಿ ಅವರನ್ನು ಪವಿತ್ರರನ್ನಾಗಿ ಮಾಡುವುದಕ್ಕೆ ಇವೆ. ವೆಂಕಟಾಚಲದಲ್ಲಿ ಆನಂದನಿಲಯ, ಆಲಯದಲ್ಲಿನ ಬಂಗಾರವಿಮಾನದ ಕೆಳಗೆ ಲಕ್ಷ್ಮೀಪದ್ಮಾವತಿಯರನ್ನು ವಕ್ಷಸ್ಥಳದಲ್ಲಿ ಧರಿಸಿ ಅರ್ಚಾಮೂರ್ತಿಯಾಗಿ ಭಕ್ತರಿಗೆ ದರ್ಶನ ಕೊಡುತ್ತ ಅವರವರ ಕೋರಿಕೆಗಳನ್ನು ಸಿದ್ಧಿಸಲು ವೆಂಕಟಾಚಲಪತಿಯಂತಹ ದೇವರು ಈ ಜಗದಲ್ಲಿ ಇಲ್ಲವೆಂದು ತಿರುಮಲ ಶ್ರೀನಿವಾಸನ ದರ್ಶನ ಪಡೆದ ಪ್ರತಿಭಕ್ತನಿಗೂ ವಿದಿತ.

ಕಲಿಯುಗದ ಜನರು ಪಾಪಕಾರ್ಯಗಳಿಗೆ ದಾಸರಾಗಿ ಪಾಪದ ಕೆಸರಿನಲ್ಲಿ ಬಿದ್ದು ನಶಿಸಿ ಹೋಗುವದನ್ನು ಮೊದಲು ತಿಳಿದ ವೈಕುಂಠವಾಸನು ವೈಕುಂಠವನ್ನು ಬಿಟ್ಟು ಕ್ರೀಡಾದ್ರಿಯನ್ನು ವೆಂಕಟಾಚಲವಾಗಿ ಸುವರ್ಣಮುಖಿನದಿಗೆ ಉತ್ತರ ದಿಕ್ಕಿನಲ್ಲಿ ಗರುಡನಿಂದ ಸ್ಥಾಪಿಸಲ್ಪಟ್ಟಿದೆ ಎಂಬುದು ಪುರಾಣವಾಕ್ಯವು. ಭೃಗು ಮಹರ್ಷಿ ಕಾರಣದಿಂದ ಲಕ್ಷ್ಮೀಯು ಕೊಲ್ಹಾಪುರಕ್ಕೆ ಹೋಗುವುದಾಯಿತು, ವಿಷ್ಣುವು ವೆಂಕಟಾಚಲದಲ್ಲಿ ಹುತ್ತಿನಲ್ಲಿ ವಾಸವಾಗುವದಾಯಿತು. 'ಅದೆಲ್ಲಾ ನಮ್ಮ ಒಳಿತಿಗಾಗಿಯೇ' ಎಂಬಂತೆ ಅಲ್ಲವೇ! ಕಲಿಯ ಪೀಡೆಯ ಪರಿಹಾರಾರ್ಥವಾಗಿ ಭಗವಂತನು ಹೀಗೆ ಅವತಾರ ಮಾಡುವ ಪ್ರಸಂಗ ಬಂದಿದೆ. ಅದು ಆತನ ಭಕ್ತರ ಮೇಲಿನ ಇರುವ ವಾತ್ಸಲ್ಯವು. ಭಕ್ತರಕ್ಷಣಾಸಕ್ತಿಯುಳ್ಳ ಭಗವಂತನು ಭಕ್ತರಕ್ಷಣಕ್ಕಾಗಿ ಏನು ಬೇಕಾದ್ದು ಮಾಡಬಹುದು. ಉಕ್ಕಿನಸ್ತಂಭದಲ್ಲಿ ನರಸಿಂಹನಾಗಿ ಉದ್ಭವಿಸುವುದು, ಗೋವರ್ಧನ ಗಿರಿಯನ್ನು ಕಿರಿಬೆರಳಿನಿಂದ ಎತ್ತುವುದು ಹೀಗೆ ಎಷ್ಟೋ ಕಾರ್ಯಗಳನ್ನು ನಿರ್ವಹಿಸಿ ಭಕ್ತ ಸಂರಕ್ಷಣ ಮಾಡಿದ್ದು ಇದೆ. ಅದರಂತೆ ಪತಿತರನ್ನು ಪಾವನಗೊಳಿಸುವ ಸಲುವಾಗಿ ವೆಂಕಟಾಚಲ ಕ್ಷೇತ್ರದಲ್ಲಿ ವಿಷ್ಣುವು ಶ್ರೀ ವೆಂಕಟೇಶ್ವರನಾಗಿ ಬಂದು ನಿಂತಿದ್ದಾನೆ ಎಂಬುದು ಸರ್ವಸಮ್ಮತವಾದದ್ದೇ.

ಓಲ್ಗಾ ನದಿ ತೀರದಿಂದ ಬಂದು ಗಂಗಾಸಿಂಧು ನದಿಗಳ ಮೈದಾನದಲ್ಲಿ ನಿವಾಸ ಮಾಡಿಕೊಂಡಿರುವ ಆ ಪುಣ್ಯವಂತರು, ಮಹನೀಯರು, ನಿಸ್ವಾರ್ಥಪರರು. 'ಸರ್ವೇಜನಾಃ ಸುಖಿನೋ ಭವಂತು' ಎಂದು ದೇವರಲ್ಲಿ ಪ್ರಾರ್ಥಿಸುತ್ತಿರುವ ತ್ರಿಕಾಲವೇದಿಗಳು. ಅಂಥವರು ರಚಿಸಿದ ಶಾಸ್ತ್ರಪುರಾಣಾದಿ ಮಹತ್ತರವಾದ ಗ್ರಂಥಗಳೇ ನಮಗೆ ಜ್ಞಾನಜ್ಯೋತಿಗಳು. ಆ ಗ್ರಂಥಗಳು ನಮಗೆ ಅತ್ಯಂತ

ಪ್ರಾಮಾಣಿಕ. ಅವುಗಳನ್ನು ನಾವು ಅನುಸರಿಸಿದರೆ ಮಾತ್ರ ಅವರು ರಚಿಸಿಕೊಟ್ಟ ಸುಧರ್ಮಮಾರ್ಗವು ನಮ್ಮ ಅನುಭೂತಿಯಾಗುವುದು. ಪ್ರಪಂಚದಲ್ಲಿ ಸರ್ವಜನರು ಸಮಾನತೆಯನ್ನು ಹೊಂದಿ ಸೋದರಭಾವ ಏರ್ಪಟ್ಟು ಕಲಿಬಾಧೆಯನ್ನು ಎದುರಿಸುವಂತೆ ಆದರೆ ಮಾನವನ ಜೀವಿತವು ಸಫಲವಾಗುವುದು. ಅಂತಹ ಮಾರ್ಗವನ್ನು ಪ್ರಬೋಧಿಸಿದವರೇ ನಮ್ಮ ಆಚಾರ್ಯತ್ರಯರು. ಶಂಕರರು, ರಾಮಾನುಜರು ಮತ್ತು ಮಧ್ವರು.

ಭಾರತೀಯ ಸಂಸ್ಕೃತಿಯು ಪ್ರಾಚೀನ ಕಾಲದಿಂದ ಕುಲಭೇದಗಳನ್ನು ಆಚರಿಸದೇ ಲೋಕದಲ್ಲಿ ಎಲ್ಲರೂ ಭಗವಂತನ ಮಕ್ಕಳು, ಎಲ್ಲಿಂದಲೇ ಬಂದರೂ, ಯಾವುದೇ ಮೂಲ ಇದ್ದರೂ ಆತನು ಅವರವರ ಅಭೀಷ್ಟಗಳನ್ನು ತೀರಿಸುತ್ತಾ, ಎಲ್ಲರನ್ನು ರಕ್ಷಿಸುತ್ತಾನೆ ಎಂಬುದು ಸತ್ಯಸಮ್ಮತವು. ಲೋಕಸಮ್ಮತವಾದ ಸತ್ಯವನ್ನು ಆಚರಿಸಿ ಅದನ್ನು ಪಸರಿಸುವುದು ಪ್ರಾಜ್ಞರ ಧರ್ಮವು. ಆ ಧರ್ಮವನ್ನು ಆಚರಿಸುವುದೇ ಅತ್ಯುನ್ನತವಾದ ಸಿಂಧುಧರ್ಮವೇ ಹಿಂದೂಧರ್ಮವೂ ಆಗಿರುವ ಆ ಧರ್ಮಾಚರಣೆಯೇ ಪ್ರತಿ ಭಾರತೀಯನ ಬಾಧ್ಯತೆ ಎಂದು ಭಾವಿಸಬೇಕಾಗಿದೆ. ಅವೆಲ್ಲವುಗಳಿಗೆ ಮೊದಲ ಸಾಧನವೆಂದರೆ ತೀರ್ಥಕ್ಷೇತ್ರಯಾತ್ರೆಗಳು. ಪ್ರಪಂಚದಲ್ಲಿ ದಿವ್ಯ ಕ್ಷೇತ್ರಗಳಿಗೆ ಮುಕುಟಪ್ರಾಯವಾದದ್ದು ತಿರುಮಲ ಕ್ಷೇತ್ರವು. ವಿಷ್ಣುವು ವೈಕುಂಠವನ್ನು ಬಿಟ್ಟು ಭೂಲೋಕದಲ್ಲಿನ ವೆಂಕಟಾಚಲಕ್ಕೆ ಬರುವುದಕ್ಕೆ ಭಗವಂತನು ವೇದವತಿಗೆ ತಾನು ಕೊಟ್ಟ ಮಾತು ನೆರವೇರಿಸುವುದು ಮುಖ್ಯವು. ಆಕಾಶರಾಜನಿಗೆ ವೇದವತಿ ಪದ್ಮಾವತಿಯಾಗಿ ಲಭಿಸಿ ಶ್ರೀನಿವಾಸನ ಮದುವೆಯಾದಳು. ಆವತ್ತಿನ ನಾರಾಯಣಪುರವು ಇಂದಿನ ನಾರಾಯಣವನವಾಗಿ ಚಿತ್ತೂರು ಜಿಲ್ಲಾ ಪುತ್ತೂರಿಗೆ ಸಮೀಪದಲ್ಲಿದೆ. ಈ ಗ್ರಾಮವೂ ಇಂದಿಗೂ ಇದೆ.

ಆಕಾಶರಾಜನ ತಮ್ಮನು ತೋಂಡಮಾನನ ತೋಂಡಮನಾಡು ರಾಜ್ಯವು ಶ್ರೀ ಕಾಳಹಸ್ತಿಗೆ ಸಮೀಪದಲ್ಲಿರುವ ತೋಂಡಮನಾಡು ಎಂಬ ಹಳ್ಳಿ ಇದ್ದಂತೆ ಕಾಣುವುದು. ತೋಂಡಮಾನನು ಕಟ್ಟಿಸಿದ ಮಹಲು, ವೆಂಕಟಾಚಲಪತಿಯ ಆಲಯವು ಈಗ ಅಲ್ಲಿ ಇಲ್ಲದಿದ್ದರೂ ಹಿಂದೆ ಒಂದು ಕೋಟೆ ಇತ್ತೆಂದು ಈಗ ಅಲ್ಲಿ ಕಂದಕಗಳು ಸಾಕ್ಷಿಯಾಗುತ್ತಿವೆ.

ತೋಂಡಮಾನನು ಶ್ರೀನಿವಾಸನಿಗೆ ತಕ್ಕ ಆಲಯ ನಿರ್ಮಾಣ ಮಾಡಿಕೊಟ್ಟನು. ಆ ಆಲಯವೇ ಆನಂದನಿಲಯ ಎಂದು ಪ್ರಸಿದ್ಧಿ. ಆ ಆನಂದನಿಲಯದಲ್ಲಿ ಶ್ರೀನಿವಾಸನು ಲಕ್ಷ್ಮೀ ಪದ್ಮಾವತಿಯರನ್ನು ಒಂದು ಕಡೆ ತನ್ನ ವಕ್ಷಸ್ಥಳದಲ್ಲಿ ಧರಿಸಿ ಅರ್ಚಾಮೂರ್ತಿಯಾಗಿ ನಿಂತು, ಇನ್ನೊಂದೆಡೆ ಬಲಗೈಯಿಂದ ತನ್ನನ್ನು ಸೇವಿಸಲು ಬಂದವರಿಗೆ ತನ್ನ ಪಾದಗಳೇ ಆಶ್ರಯವೆಂದು ತೋರಿಸುವುದು, ಎಡಗೈಯನ್ನು ತನ್ನ ಟೊಂಕದ ಹತ್ತಿರ ಇಟ್ಟುಕೊಂಡು ತನ್ನಾಶ್ರಯ ಪಡೆದ ಭಕ್ತರಿಗೆ ಸಂಸಾರಸಾಗರವು ಟೊಂಕದವರೆಗೆ ಮಾತ್ರ ಎಂಬ ಭಾವವನ್ನು ಹಸ್ತವಿನ್ಯಾಸದಿಂದ ತೋರಿಸುವುದು, ಮತ್ತೊಂದು ಯುಗ್ಮವಾದ ಶಂಖಚಕ್ರಗಳಿಂದ ದಿವ್ಯದರ್ಶನ ಕೊಡುತ್ತಿದ್ದಾನೆ. ಆ ದರ್ಶನವು ಒಂದೇ ಕ್ಷಣವಾದರೂ ಭಕ್ತನಿಗೆ ಪೂರ್ತಿ ಸಂತೃಪ್ತಿ, ಪರಮಾನಂದಗಳನ್ನು ಕೊಡುವದು ಎಂಬುದು ಎಲ್ಲರಿಗೆ ಅನುಭವಕ್ಕೆ ಬಂದ ವಿಷಯವೇ.

ಮೊದಲು ಶ್ರೀನಿವಾಸನ ಅನುಮತಿ ಪ್ರಕಾರ ಬ್ರಹ್ಮ ಜರುಗಿಸಿದ ಬ್ರಹ್ಮೋತ್ಸವವು ನಿತ್ಯದ ಕ್ರಮಪದ್ಧತಿ ಪ್ರಕಾರ ಇಂದಿಗೂ ಜರುಗುತ್ತಿದೆ. ಆ ವೆಂಕಟಾಚಲಪತಿ ಆನಂದನಿಲಯವೇ ಭೂಲೋಕ ವೈಕುಂಠವು. ಆಗಿನಿಂದ ಸ್ವಾಮಿವಾರಿಗೆ ಪ್ರತಿದಿನ ಉಷಃಕಾಲದ ಸುಪ್ರಭಾತವು

ಪ್ರಾರಂಭಿಸಿ, ರಾತ್ರಿ ಏಕಾಂತ ಸೇವೆವರೆಗೆ ವೈಖಾನಸ ಆರ್ಚಕರೇ ಪೂಜೆಗಳು ನೆರವೇರಿಸುತ್ತಾರೆ. ಶ್ರೀನಿವಾಸನು ನಿತ್ಯವೂ ಸಾವಿರಾರು ಭಕ್ತರಿಗೆ ದರ್ಶನ ಕೊಟ್ಟು ಆವರ ಮೊರೆ ಕೇಳಿ ಅನುಗ್ರಹಿಸಿ ಕಳಿಸುತ್ತಿದ್ದಾನೆ. ಹಾಗಾಗಿಯೇ ಇಡೀ ಪ್ರಪಂಚದಲ್ಲಿ ತಿರುಮಲ ಕ್ಷೇತ್ರದ ಕುರಿತು ಸಮಸ್ತ ಭಕ್ತರೆಲ್ಲರೂ ಶ್ರದ್ಧಾಭಕ್ತಿಯಿಂದ ತಿಳಿದುಕೊಳ್ಳುತ್ತಾರೆ.

ವೆಂಕಟಾಚಲದಲ್ಲಿ ಶ್ರೀನಿವಾಸನು ಲಕ್ಷ್ಮೀ ಪದ್ಮಾವತಿಯರನ್ನು ತನ್ನ ವಕ್ಷಸ್ಥಳದಲ್ಲಿ ಇಟ್ಟುಕೊಂಡಿದ್ದಾನೆಂದು ಪುರಾಣಗಳಿಂದ ತಿಳಿಯುತ್ತದೆ. ಆದರೆ ಪದ್ಮಾವತಿಯು ತಿರುಪತಿಗೆ ಸಮೀಪದ ತಿರುಚಾನೂರಿನಲ್ಲಿ ದಿವ್ಯ ಆಲಯದಲ್ಲಿ ಇದ್ದಾಳೆಂದು ಪೂರ್ವಿಕರು ಒಂದು ಅನುಶ್ರುತಿ ಹೇಳುತ್ತಿದ್ದರು.

ಶ್ರೀವೆಂಕಟಾಚಲಪತಿಯು ಪದ್ಮಾವತಿಯನ್ನು ವಿವಾಹವಾದ ನಂತರ ನೂತನ ದಂಪತಿಗಳು ಪರ್ವತಾರೋಹಣ ಮಾಡಬಾರದೆಂದು ಅಗಸ್ತ್ಯನು ಹೇಳಿದ ಪ್ರಕಾರ ಶ್ರೀನಿವಾಸನು ಆ ಮಹರ್ಷಿ ಆಶ್ರಮಕ್ಕೆ ಸಮೀಪದಲ್ಲಿ ಒಂದು ಆಶ್ರಮ ನಿರ್ಮಾಣ ಮಾಡಿಕೊಂಡು ಅಲ್ಲಿ ಆರು ತಿಂಗಳು ಇದ್ದನು. ಅದೇ ಇವತ್ತಿನ ಶ್ರೀನಿವಾಸ ಮಂಗಾಪುರವು. ಅಲ್ಲಿಯ ಕಲ್ಯಾಣವೆಂಕಟೇಶ್ವರ ದೇವಾಲಯವು ಪ್ರಸಿದ್ದವಾಗಿದೆ. ಒಂದು ದಿನ ವೆಂಕಟಾಚಲಪತಿಯು ತಾವು ಪದ್ಮಾವತಿಯೊಂದಿಗೆ ವೆಂಕಟಾಚಲಕ್ಕೆ ಹೋಗುತ್ತಿದ್ದೇವೆ ಎಂದು ಮಾವಂದಿರಾದ ಆಕಾಶರಾಜನಿಗೆ ತಿಳಿಸಿದನು. ಆಗ ಆಕಾಶರಾಜನು ತನ್ನ ಮಗಳಿಗೆ ಸಕಲವಿಧವಾದ ವಸ್ತ್ರಾಭರಣಗಳು, ದಾಸದಾಸಿಯರು, ಎಲ್ಲ ಸಂಭಾರ ಪದಾರ್ಥಗಳು, ಹಾಲಿನ ತುಪ್ಪದ ಕುಂಡಗಳು, ಇವೆಲ್ಲವುಗಳನ್ನು ಸಾಗಿಸಲು ಭಾರವಾಹಕಗಳನ್ನು ನಿಯಮಿಸಿ ಪದ್ಮಾವತಿ ಹಿಂದೆ

ವೆಂಕಟಾಚಲಕ್ಕೆ ಒಯ್ಯಲು ಸೇವಕರನ್ನು ಆಜ್ಞೆ ಮಾಡಿದನು. ಹೀಗೆ ಎಲ್ಲರೂ ವೆಂಕಟಾಚಲಪತಿ ಮತ್ತು ಪದ್ಮಾವತಿ ಹಿಂದೆ ಬೆಟ್ಟ ಏರಿ ಹೋಗುವಾಗ ಒಂದು ನಾಲೆ ಬಂದಾಗ ದಾಟುವದಕ್ಕಿಂತ ಮುಂಚೆ ಶ್ರೀನಿವಾಸನು 'ಸಂಭಾರ ವಸ್ತುಗಳ ಜೊತೆಗೆ ಕರೀಬೇವು ತಂದಿದ್ದಿಯಾ' ಎಂದು ಪದ್ಮಾವತಿಗೆ ಕೇಳಿದಾಗ ಅವಳು ಇಲ್ಲವೆಂದು ಹೇಳಿದ್ದು ಕೇಳಿ 'ಕರೀಬೇವು ತಿರುಮಲ ಬೆಟ್ಟದ ಮೇಲೆ ದೊರೆಯುವದಿಲ್ಲ. ನೀನು ಈ ಎಲ್ಲ ಸಾಮಗ್ರಿ ಇಲ್ಲೇ ಇಟ್ಟು ಹೋಗಿ ಕರಿಬೇವು ಕಡಿಸಿ ಮೂಟೆಕಟ್ಟಿಕೊಂಡು ತರುವುದು ಅವಶ್ಯ. ಅದಕ್ಕಾಗಿ ನೀನು ಬೆಟ್ಟ ಇಳಿದು ಹೋಗಿ ಕರೀಬೇವು ತರಬೇಕು.' ಎಂದು ಆಜ್ಞೆ ಮಾಡಿದನು. ಈ ಪ್ರಕಾರ ಪದ್ಮಾವತಿಯು ಕರಿಬೇವಿನ ಸಲುವಾಗಿ ಕೆಲಕಾಲ ತಿರುಚಾನೂರಲ್ಲಿ ಉಳಿದಳು ಎಂದು ಜನಶ್ರುತಿ ಇದೆ.

ಈ ಕಾರಣದಿಂದ ಪದ್ಮಾವತಿ ತಿರುಚಾನೂರಲ್ಲಿ ಪ್ರತ್ಯೇಕವಾಗಿ ಇರುವುದು ಸಂಭವಿಸಿತಂತೆ. ಅವಳಿಗೆ ಪ್ರತಿ ಸಂವತ್ಸರದಲ್ಲಿ ಕಾರ್ತಿಕ ಮಾಸದಲ್ಲಿ ಉತ್ಸವವು ಜರುಗುತ್ತದೆ. ಬಹಳಷ್ಟು ಭಕ್ತರು ಉತ್ಸವಕ್ಕೆ ಬಂದು ಹೋಗುತ್ತಾರೆ. ತಿರುಮಲದಲ್ಲಿ ಶ್ರೀ ವೆಂಕಟೇಶ್ವರನ ದರ್ಶನ ಪಡೆದ ಭಕ್ತರು ತಿರುಚಾನೂರಿಗೆ ಹೋಗಿ ಪದ್ಮಾವತಿಯ ದರ್ಶನ ಪಡೆದು ಹೋಗುತ್ತಾರೆ. ಅಲ್ಲಿರುವ ಪುಷ್ಕರಿಣಿಯಲ್ಲಿ ಪದ್ಮಾವತಿ ಅಮ್ಮನಿಗೆ ಕಾರ್ತಿಕ ಮಾಸದಲ್ಲಿ ಪ್ರತಿ ವರ್ಷ 'ತೆಪ್ಪ ತಿರುವಾಳ್ಕ' ಜರುಗುತ್ತದೆ.

ಪ್ರಪಂಚದ ಎಲ್ಲ ಮೂಲೆಗಳಿಂದ ತಿರುಮಲ ತಿರುಪತಿ ಯಾತ್ರೆ ಬರುವ ಭಕ್ತರಿಗೆ ದೇವಸ್ಥಾನದ ಅಧಿಕಾರಿಗಳು ಅವಶ್ಯವಾದ ಸೌಕರ್ಯಗಳನ್ನು ಒದಗಿಸುತ್ತಾರೆ. ಯಾತ್ರಿಕರು ಚೈತನ್ಯಯುಕ್ತರಾಗಿ, ಉತ್ಸಾಹವಂತರಾಗಿ, ಪ್ರಶಾಂತಚಿತ್ತರಾಗಿ ಇರಲು ವೇದಾಂತ

ಉಪನ್ಯಾಸಗಳು, ಹಿಂದು ಧರ್ಮೋದ್ಧರಣಕ್ಕೆ ಉಪನ್ಯಾಸಗಳು, ಅನ್ನಮಾಚಾರ್ಯ ಸಂಕೀರ್ತನೆಗಳು, ಸಾಂಘಿಕ ತಂಡ ಕಾರ್ಯಕ್ರಮಗಳು ನಿತ್ಯನೂತನ ರೀತಿಯಲ್ಲಿ ಜರುಗುತ್ತವೆ. ಯಾತ್ರಿಕರಿಗಾಗಿ ಎಷ್ಟೋ ಆಧ್ಯಾತ್ಮಿಕ ಗ್ರಂಥಗಳನ್ನು ಪ್ರಕಟಿಸುತ್ತಾರೆ. ದೇವಸ್ಥಾನದ ಮಾಸಪತ್ರಿಕೆ 'ಸಪ್ತಗಿರಿ' ಹಲವುಭಾಷೆಗಳಲ್ಲಿ ಜ್ಞಾನಬೋಧಕವಾಗಿ ಹೊರಬರುತ್ತಿದೆ. ಯಾವುದೇ ರೀತಿಯಲ್ಲಿ ನೋಡಿದರೂ ತಿರುಮಲ ತಿರುಪತಿ ಕ್ಷೇತ್ರವು ಪ್ರಪಂಚದ ಎಲ್ಲ ಪ್ರಜೆಗಳ ಶಾಂತಿ, ಸಹನೆ, ಸೌಜನ್ಯ, ಸೌಂದರ್ಯಗಳಿಗೆ, ಸಾಮಾಜಿಕ ಐಕ್ಯತೆಗೆ, ಆಸ್ತಿಕತ್ವ ಗುಣಗಳಿಗಾಗಿ, ಪರಮಾತ್ಮನಲ್ಲಿ ಭಕ್ತಿಯ ಅನುಗುಣವಾಗಿ ಅನುಭವ ಹೊಂದಲು ಇದು ಬೃಹತ್ಕೇಂದ್ರವಾಗಿದೆ. ಇದು ಪ್ರಪಂಚದಲ್ಲಿ ಎರಡನೆಯ ಸ್ಥಾನವೆಂದು ಪ್ರಸಿದ್ಧವಾಗಿದೆ. ಇಲ್ಲಿ ಕ್ಷೇತ್ರಕಾರ್ಯನಿರ್ವಹಣೆ ಶಾಖೆ, ಪ್ರಜೆಗಳಿಗೆ ಸಾಂಘಿಕ ಸಂಸ್ಕೃತಿಗೆ ಸಂಬಂಧಿಸಿದ ಶಾಖೆ, ಪ್ರಜೆಗಳಿಗೆ ಆಸ್ತಿಕತ್ವ ಹೊಂದಲು ಬೇಕಾದ ವಿಜ್ಞಾನದ ಹೊಂದಾಣಿಕೆಯ ಪ್ರಸಾರದ ಶಾಖೆ, ಪ್ರಬೋಧ ಶಾಖೆಗಳು ಯಾವಾಗಲೂ ತಮ್ಮ ತಮ್ಮ ಕಾರ್ಯಗಳನ್ನು ನೆರವೇರಿಸುತ್ತವೆ. ಈ ಶಾಖೆಗಳು ಯಾತ್ರಿಕರಿಗೆ ಪ್ರೋತ್ಸಾಹಿಸಲು ತಿರುಮಲ ತಿರುಪತಿ ಕ್ಷೇತ್ರವು ಪ್ರಪಂಚದಲ್ಲಿ ಎರಡನೆಯ ಕ್ಷೇತ್ರವೆಂದು ಗುರುತಿಸಿರುವದಕ್ಕೆ ಪ್ರತಿ ಭಾರತೀಯನಿಗೆ ಗರ್ವದ ವಿಷಯ.

ತಿರುಮಲ ತಿರುಪತಿಯ ಯಾತ್ರೆಗೆ ಬರುವ ಭಕ್ತಜನರು ವೆಂಕಟಾಚಲಪತಿಯನ್ನು ವೆಂಕಟೇಶಾ, ಏಡುಕೊಂಡಲವಾಡಾ, ವೆಂಕಟರಮಣ, ಗೋವಿಂದಾ, ಆಪದ್ಬಾಂಧವಾ, ಅನಾಥರಕ್ಷಕಾ, ವಡ್ಡಿಕಾಸುಲವಾಡಾ, ಬಾಲಾಜಿ ಹೀಗೆ ಬಹಳಷ್ಟು ನಾಮಗಳಿಂದ ಕರೆಯುವುದರಿಂದ ಅವರವರ ಪಾಪ ಪರಿಹಾರಕ್ಕೆ

ಕಾರಣವಾಗಿರುವುದು ಸತ್ಯವೇ. ಭಗವಂತನ ನಾಮಸ್ಮರಣೆಯು ಈ ಕಲಿಯುಗದಲ್ಲಿ ಮುಕ್ತಿಗೆ ಸಾಧನ, ಅಹುದಲ್ಲವೇ!

*ಶ್ರೀಯಃಕಾಂತಾಯ ಕಲ್ಯಾಣ ನಿಧಯೇ ನಿಧಯೇಽರ್ಥಿನಾಮ್*
*ಶ್ರೀ ವೆಂಕಟನಿವಾಸಾಯ ಶ್ರೀನಿವಾಸಾಯ ಮಂಗಳಮ್*
*ಶ್ರೀ ವೆಂಕಟಾದ್ರಿ ನಿಲಯಃ ಕಮಲಾಕಾಮುಕಃ ಪುಮಾನ್*
*ಅಭಂಗ ವಿಭೂತಿರ್ನಸ್ತರಂಗಯತು ಮಂಗಳಮ್ ****

*ಗದ್ಯವು :* ಇತಿ ಶ್ರೀ ಶ್ರೀನಿವಾಸ ಪಾದಾರವಿಂದ ಧ್ಯಾನಾಮೃತಾಸ್ವಾದನ ಮತ್ತಚಿತ್ತ, ಶ್ರೀಜ್ಞಾನಪ್ರಸೂನಾಂಬಿಕಾ ಸಹಿತ ಶ್ರೀಕಾಳಹಸ್ತೀಶ್ವರಾಗ್ರಹಲಬ್ಧ ಕವಿತಾ ವಿಶೇಷ, ಶ್ರೀ ಕೈಲಾಸವಾಸ ಚಿಂತನಾಮಾನಸ ಸರೋವರವಿಹಾರ ಮರಾಳ ಮಿಥುನ ಲಕ್ಷ್ಮಾರ್ಯ ಲಕ್ಷ್ಮೀನರಸಾಂಬಾ ದ್ವಿತೀಯ ಪುತ್ರ ಶ್ರೀ ವೆಂಕಟ ಕೃಷ್ಣಾರ್ಯಾನುಜ ಬುಧವಿಧೇಯ ಗುಂಟಕಟ್ಟ ತಿರುವೇಂಗಡ ಸೂರಿ ನಾಮಧೇಯ ಪ್ರಣೀತಂಬೈನ ತಿರುಮಲ ತಿರುಪತಿ ಕ್ಷೇತ್ರಮು ಮಾಹಾತ್ಮ್ಯಮನು ಕಾವ್ಯಮುನ ದ್ವಿತೀಯಾಶ್ವಸಮು ಸಂಪೂರ್ಣಮು.

॥ ಶ್ರೀ ಶ್ರೀನಿವಾಸಾರ್ಪಣಮಸ್ತು ॥

ಇತಿ ಶ್ರೀ ವೆಂಕಟೇಶುನಿಯುದ್ದ ಚರಿತನಿನ್ನಂ ಚದಿವಿನ ವ್ರಾಸಿನ
ವಿಜ್ಞಲಕುನು ತಮ ಮನೋರಥಮು ಫಲವಂತಮುಗುನಿಹಪರಂಬುಲ
ಸುಖಮು ಮುಕ್ತಿಯು ಲಭ್ಯಮುಗುನು

॥ ಮುಗಿಯಿತು ॥